₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | **ಬೆಳಗಾವಿ** ಶುಕ್ರವಾರ 21.02.2025 **ಸಂಪುಟ:** 67 **ಸಂಚಿಕೆ:** 287 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಬಾಂಗ್ಲಾ ವಿರುದ್ಧ ಸವಾರಿ ಗಿಲ್ ಶತಕ, ಶಮಿಗೆ ಐದು ವಿಕೆಟ್

ದುಬೈನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಮೊದಲ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಭಾರತ ಐದು ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ.

ಸೊಂಪಾದ ಪುಟಗಳು

ಇವಳೇಕೆ ಚಂದ, ಅವಳೇಕೆ ಮಂದ- ಏನಿದು ಲೆಕ್ಕಾಚಾರ?

ಶಿಶಿರಕಾಲ ಶಿಶಿರ್ ಹೆಗಡೆ 6



ಮೋದಿಯವರ ಅಶ್ವಮೇಧ ಕುದುರೆಯನ್ನು ಕಟ್ಟುವವರು ಯಾರು?

ಪ್ರಕಾಶಪಥ ಪ್ರಕಾಶ್ ಶೇಷರಾಘವಾಚಾರ್ 7

ದಾರಿದೀಪೋಕ್ತಿ

ಬೆಳಗ್ಗೆ ಎದ್ದ ತಕ್ಷಣ ಯೋಚಿಸುವ ಒಂದು ಸಕಾರಾತ್ಮಕ ಚಿಂತನೆ, ಆ ನಿಟ್ಟಿನಲ್ಲಿ ತೆಗೆದುಕೊಳ್ಳುವ ಒಂದು ನಿರ್ಧಾರ, ಇಡೀ ದಿನವನ್ನು ಅತ್ಯಂತ ಫಲದಾಯಕವಾಗಿ ಪರಿವರ್ತಿಸಬಲ್ಲುದು. ಬೆಳಗಿನ ಉತ್ತಮ ಯೋಚನೆ ಆ ದಿನವನ್ನು ಸಾರ್ಥಕವಾಗಿಸಬಲ್ಲುದು.

ವಕ್ರತುಂಡೋಕ್ತಿ

ಪ್ರಾಣಿ ಮತ್ತು ಮನುಷ್ಯರು ಬೇರೆ ಅಲ್ಲ. ಹುಲಿ ಮತ್ತು ಹೆಂಡತಿಯನ್ನು ಯಾವತ್ತೂ ಕೆಣಕಬಾರದು.

ಭಾರತದಲ್ಲಿ ಟೆಸ್ಲಾ ಟ್ರಂಪ್ ಅಪಸ್ವರ

ವಾಷಿಂಗ್ಟನ್: ಭಾರತ ವಿಧಿಸುವ ಸುಂಕ ತಪ್ಪಿಸಿಕೊಳ್ಳಲು ಇಲಾನ್ ಮಸ್ಕ್ ಅವರು ಅಲ್ಲಿಯೇ ಟೆಸ್ಲಾ ವಿದ್ಯುತ್‌ಚಾಲಿತ ಕಾರು ತಯಾರಿಕಾ ಘಟಕ ಸ್ಥಾಪಿಸಿದರೆ, ಅದು ಅಮೆರಿಕಕ್ಕೆ ಮಾಡುವ ಅನ್ಯಾಯ ವಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ವಿಶ್ವದ ಪ್ರತಿಯೊಂದು ರಾಷ್ಟ್ರವೂ ನಮ್ಮಿಂದ ಪ್ರಯೋಜನ ಪಡೆ ಯುತ್ತಿದೆ. ಹಾಗಿದ್ದರೂ ನಮ್ಮ ಸರಕುಗಳ ಮೇಲೆ ದುಬಾರಿ ಸುಂಕ ವಿಧಿಸಲಾಗುತ್ತಿದೆ. ಭಾರತವೂ ಇದರಿಂದ ಹೊರತಲ್ಲ. ಅತಿ ಹೆಚ್ಚು ಸುಂಕ ವಿಧಿಸುವ ಆ ರಾಷ್ಟ್ರದಲ್ಲಿ ಟೆಸ್ಲಾ ಕಾರುಗಳನ್ನು ಮಾರಾಟ ಮಾಡಲು ಸಾಧ್ಯವೇ? ಅಲ್ಲಿ ಟೆಸ್ಲಾ ಘಟಕ ತೆರೆದರೆ ನಮ್ಮ ಅಭ್ಯಂತರವಿಲ್ಲ, ಆದರೆ, ಅಮೆರಿಕದ ಪಾಲಿಗೆ ಅದು ನ್ಯಾಯೋಚಿತವಲ್ಲ ಎಂದು ಹೇಳಿದ್ದಾರೆ.

4 ಮಹಿಳಾ ನಕ್ಸಲರ ಹತ್ಯೆ

ಜಬಲ್‌ಪುರ: ಮಧ್ಯಪ್ರದೇಶದ ಬಾಲಾಘಾಟ್ ರೋಂಡಾ ಅರಣ್ಯ ಪ್ರದೇಶದಲ್ಲಿ ಬುಧವಾರ ನಡೆಸಲಾದ ಕಾರ್ಯಾಚರಣೆಯಲ್ಲಿ ಕಮಾಂಡರ್ ಮತ್ತು ಏರಿಯಾ ಕಮಿಟಿ ಸದಸ್ಯೆ ಸೇರಿದಂತೆ 4 ನಕ್ಸಲೈಟ್ ಮಹಿಳೆಯರನ್ನು ಕೊಲ್ಲಲಾಗಿದೆ. ಈ ನಾಲ್ವರ ತಲೆಗೆ ಒಟ್ಟು 62 ಲಕ್ಷ ರು. ಬಹುಮಾನ ಘೋಷಿಸಲಾಗಿತ್ತು.

ಮಾತಂದ್ರೆ ಮಾತು

ಸಿದ್ದರಾಮಯ್ಯವರ ಭವಿಷ್ಯ ಮತ್ತು ಅದೃಷ್ಟ ಎರಡೂ ಗಟ್ಟಿಯಾಗಿದೆ. ಅವರಂತಹ ಅದೃಷ್ಟದ ರಾಜಕಾರಣಿ ಇನ್ನೊಬ್ಬರಿಲ್ಲ, ಅವರ ಭವಿಷ್ಯ, ಅದೃಷ್ಟ ಗಟ್ಟಿಯಾಗಿಯೇ ಸಾಗಿದೆ.

- ಜಿ.ಟಿ.ದೇವೇಗೌಡ ಶಾಸಕ

ಫನ್‌ತರಂಗ

- ರಘುಪತಿ ಶೃಂಗೇರಿ -



ಮುಡಾ ಪ್ರಕರಣ: ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ ಲೋಕಾ ಪೊಲೀಸ್ | ಸಿದ್ದು ವಿರುದ್ಧ ಮತ್ತೊಂದು ದೂರು ದಾಖಲು

ಕ್ಲೀನ್‌ಚಿಟ್‌ಗೆ 11,200 ಪುಟಗಳ ಸಮರ್ಥನೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಭಾರಿ ವಿವಾದ ಸೃಷ್ಟಿಸಿದ್ದ ಮುಡಾ ಹಗರಣದಲ್ಲಿ ಲೋಕಾಯುಕ್ತ ಪೊಲೀಸರು ಕ್ಲೀನ್‌ಚಿಟ್ ನೀಡಿರುವುದು ಕಾಂಗ್ರೆಸ್-ಬಿಜೆಪಿ ನಡುವಿನ ವಾಕ್ಸಮರಕ್ಕೆ ಕಾರಣವಾಗಿರುವ ನಡುವೆಯೇ ಲೋಕಾಯುಕ್ತ ಪೊಲೀಸರು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರದಿ ಸಲ್ಲಿಕೆ ಮಾಡಿದ್ದಾರೆ.

ಕ್ಲೀನ್‌ಚಿಟ್ ನೀಡಿರುವ ಬಗ್ಗೆ ದೂರುದಾರ ಸ್ನೇಹಮಯಿ ಕೃಷ್ಣ ಅವರಿಗೆ ಬುಧವಾರವೇ ನೋಟಿಸ್ ಮೂಲಕ ಮಾಹಿತಿ ನೀಡಿದ್ದ ಮೈಸೂರು ಲೋಕಾಯುಕ್ತ ಪೊಲೀಸರು, ಗುರುವಾರ ಬೆಳಗ್ಗೆ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್ ಅವರ ಪೀಠಕ್ಕೆ ವರದಿ ಸಲ್ಲಿಸಿದೆ. ವರದಿ ಸ್ವೀಕರಿಸಿದ ನ್ಯಾಯಪೀಠ ಮುಂದಿನ ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿದೆ.

27 ಸಂಪುಟದಲ್ಲಿ ಸಿದ್ಧಗೊಂಡ ಬರೋಬ್ಬರಿ 11,200 ಪುಟಗಳ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಪ್ರಕರಣದ ತನಿಖಾಧಿಕಾರಿ, ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿದರು. → 4

ಮತ್ತೊಂದು ಮುಡಾ ಸಂಕಷ್ಟ?

ಸ್ನೇಹಮಯಿ ಕೃಷ್ಣ ಅವರು ನೀಡಿದ್ದ ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಕ್ಲೀನ್‌ಚಿಟ್ ನೀಡಿದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಇದೇ ಮುಡಾದ ಮತ್ತೊಂದು ಆರೋಪ ಹೋರಿಸಿ, ಬಿಜೆಪಿ ನಾಯಕ ಎನ್.ಆರ್.ರಮೇಶ್ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದಾರೆ. ಮೂಡಾ ನಿರ್ಮಾಣ ಮಾಡಿದ್ದ ಬಡಾವಣೆಯಲ್ಲಿ ನಿಯಮಾನು ಸಾರ ಎಲ್ಲ ಅರ್ಜಿದಾರರಿಗೆ ನಿವೇಶನ ಗಳನ್ನು ಹಂಚಿಕೆ ಮಾಡಿ ನಕ್ಷೆ ಮಂಜೂ ರಾತಿಗಳನ್ನು ನೀಡಿ ಹಲವಾರು ಮಂದಿ ಮನೆಗಳನ್ನು ನಿರ್ಮಿಸಿಕೊಂಡಿದ್ದರೂ ಸಿದ್ದರಾಮಯ್ಯ ಅವರು ತಮ್ಮ ಸ್ವಾರ್ಥ ಕ್ಕಾಗಿ ಕಾನೂನಿನ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ನಿಯಮ ಬಾಹಿರವಾಗಿ ತಮ್ಮ ಆಪ್ತ ಸ್ನೇಹಿತ ಹಾಗೂ ಮೂಡಾದ ಮಾಜಿ ಅಧ್ಯಕ್ಷ ಸಿ. ಬಸವೇಗೌಡರಿಂದ ಅಕ್ರಮವಾಗಿ ಡಿ ನೋಟಿಫಿಕೇಷನ್ ಮಾಡಿಸಿದ್ದಾರೆ ಎಂದು ಆರೋಪಿಸಿ ದೂರು ನೀಡಿದ್ದಾರೆ.



ಮುಡಾ ಹಗರಣದಲ್ಲಿ ಸಿಎಂ ಪಾತ್ರ ವಿಲ್ಲವೆಂದು ಲೋಕಾ ಯುಕ್ತರು ಹೇಳಿರುವುದನ್ನು ಪ್ರಶ್ನಿಸುವುದು ಸರಿಯಲ್ಲ. ಬಿಜೆಪಿಯವರು ಬೇಕಿದ್ದರೆ ಇದನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗಲಿ. ಅದನ್ನು ಬಿಟ್ಟು ಈ ರೀತಿ ಮಾತನಾಡುವುದು ಸರಿಯಲ್ಲ.

- **ಡಾ.ಜಿ.ಪರಮೇಶ್ವರ** ಗೃಹ ಸಚಿವ

ಲೋಕಾಯುಕ್ತ ಸಂಸ್ಥೆ ತನಿಖೆ ಮಾಡುತ್ತಿರುವಾಗ ರಾತ್ರಿ 8 - 9 ಗಂಟೆಗೆ ಮುಖ್ಯಮಂತ್ರಿಗಳ ಕುಟುಂಬಸ್ಥರು ಮಾವನ ಮನೆಗೆ ಹೋದ ಮಾದರಿಯಲ್ಲಿ ಲೋಕಾಯುಕ್ತ ಸಂಸ್ಥೆ ಕಚೇರಿಗೆ ಭೇಟಿ ಕೊಡುತ್ತಿದ್ದರು. ಆದ್ದರಿಂದ ಮುಡಾ ಹಗರಣದಲ್ಲಿ ಲೋಕಾಯುಕ್ತ ಕೊಟ್ಟ ಬಿ ರಿಪೋರ್ಟ್ ನಮಗೆ ಆಶ್ಚರ್ಯ ಉಂಟು ಮಾಡಿಲ್ಲ. ಹಿಂದೆಯೂ ಇದನ್ನೇ ನಾವು ಹಲವಾರು ಬಾರಿ ಹೇಳಿದ್ದೆವು.

- **ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ಹಣದ ಬದಲಾಗಿ 5 ಕೆಜಿ ಅಕ್ಕಿ ವಿತರಣೆಗೆ ಗ್ರೀನ್ ಸಿಗ್ನಲ್

ಫೈನಾನ್ಸ್ ಕಿರಿಕ್ ತಡೆಗೆ 3 ವಿಧೇಯಕ ಮಂಡನೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಾಖಲೆಯ ಬಜೆಟ್ ಹಾಗೂ 2025ನೇ ಸಾಲಿನ ಮೊದಲ ಅಧಿವೇಶನಕ್ಕೆ ಸಚಿವ ಸಂಪುಟ ಸಭೆ ಅನುಮತಿ ನೀಡಿದ್ದು, ಈ ಹಿಂದೆ ಸಿದ್ದರಾಮಯ್ಯ ಅವರು ಪ್ರಕಟಿಸಿದ ಮಾರ್ಚ್ 7ರಂದೇ ಬಜೆಟ್ ಮಂಡಿಸಲು ತೀರ್ಮಾನಿಸಲಾಗಿದೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಂಟಿ ಅಧಿವೇಶನ ಹಾಗೂ ಬಜೆಟ್ ಅಧಿವೇಶನಕ್ಕೆ ಹೊರಡಿಸಿರುವ ಅಧಿಸೂಚನೆಗೆ ಘಟನೋತ್ತರ ಅನುಮೋದನೆ ನೀಡಲಾಗಿದೆ. ಈ ಮೂಲಕ ಮಾ.3ಕ್ಕೆ ರಾಜ್ಯಪಾಲರ ಭಾಷಣದೊಂದಿಗೆ ಜಂಟಿ ಅಧಿವೇಶನ ಆರಂಭಗೊಳ್ಳಲಿದೆ. ಇದರೊಂದಿಗೆ ಮೈಕ್ರೋ ಫೈನಾನ್ಸ್ ಹಾವಳಿ ತಪ್ಪಿಸಲು ರಾಜ್ಯ ಸರಕಾರ ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಅಧಿವೇಶನದಲ್ಲಿ ಮಂಡಿಸಲು ಸಂಪುಟ ಸಭೆ ಅನುಮತಿ ನೀಡಿದೆ.

ಮಾರ್ಚ್‌ನಲ್ಲಿ ನಡೆಯಲಿರುವ ಅಧಿವೇಶನದಲ್ಲಿ ಪ್ರಮುಖವಾಗಿ ಕರ್ನಾಟಕ ಅಧಿಕ ಬಡ್ಡಿ ನಿಷೇಧ (ತಿದ್ದುಪಡಿ) ವಿಧೇಯಕ-2025, ಕರ್ನಾಟಕ ಗಿರಿವಿದಾರರ (ತಿದ್ದುಪಡಿ) ವಿಧೇಯಕ-2025 ಹಾಗೂ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ-2025 ಮಂಡಿಸಲು ಅನುಮೋದನೆ ನೀಡಲಾಗಿದೆ. ಇದರೊಂದಿಗೆ ಬಿಜೆಪಿ ಸರಕಾರದ ಅವಧಿಯಲ್ಲಿ ಮಂಡಿಸಿದ್ದ ಎಪಿಎಂಸಿ ನಿಯಂತ್ರಣ ಹಾಗೂ ಅಭಿವೃದ್ಧಿ ವಿಧೇಯಕ ಹಾಗೂ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) ನಿಯಮಗಳು (ಸಾಮಾನ್ಯ) (ತಿದ್ದುಪಡಿ) 2024 ಮಂಡಿಸಲು ಅನುಮತಿ ನೀಡಲಾಗಿದೆ.

ರಾಜ್ಯ ಸರಕಾರ ಈಗಾಗಲೇ ಜಾರಿಗೊಳಿಸಿರುವ ಸುಗ್ರೀವಾಜ್ಞೆಯಲ್ಲಿ ಸಾಲಗಾರರಿಗೆ ಅನವಶ್ಯಕ ಕಿರುಕುಳ ನೀಡಿದರೆ ಐದು ವರ್ಷ ಜೈಲು ಹಾಗೂ 10 ಲಕ್ಷದವರೆಗೆ ಶಿಕ್ಷೆ ವಿಧಿಸಲು ಅವಕಾಶ ನೀಡಲಾಗಿದೆ. ಈ ಸುಗ್ರೀವಾಜ್ಞೆಯನ್ನು ಉಭಯ ಸದನದಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಲು ತೀರ್ಮಾನಿಸಲಾಗಿದೆ.

ಭೂ-ದಾಖಲೆಗಳ ಆಧುನೀಕರಣಕ್ಕೆ 175 ಕೋಟಿ: ಕೇಂದ್ರ ಸರಕಾರದ ಡಿಜಿಟಲ್ ಇಂಡಿಯಾ ಭೂದಾಖಲೆಗಳ ಆಧುನೀಕರಣ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆಯ ಅವಶ್ಯಕತೆಗನುಗುಣವಾಗಿ ಹಂತ ಹಂತವಾಗಿ ಸುಮಾರು 175 ಕೋಟಿ ರು. ಅಂದಾಜು ವೆಚ್ಚದಲ್ಲಿ 5,000 ರೋವರ್‌ಗಳನ್ನು ಖರೀದಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಬಗ್ಗೆ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್, ಒಟ್ಟು ಯೋಜನಾ ವೆಚ್ಚ 175.00 ಕೋಟಿ ರು. ರಾಜ್ಯ ಮೂಲಸರ್ವೇ ಕಾರ್ಯವನ್ನು 1863ರಲ್ಲಿ ಸಾಂಪ್ರದಾಯಿಕ ವಿಧಾನವನ್ನು ಬಳಸಿ ನಿರ್ವಹಿಸಲಾಗಿದೆ. ಭೂಕಂದಾಯ ಕಾಯ್ದೆ ಮತ್ತು ನಿಯಮಗಳನ್ವಯ ಪ್ರತಿ 30 ವರ್ಷಕ್ಕೊಮ್ಮೆ ಕಡ್ಡಾಯಗೊಳಿಸಿದೆ. ಸಾಂಪ್ರದಾಯಿಕ ಸರ್ವೇ ವಿಧಾನಗಳ ಮೂಲಕ ಕೇವಲ 90 ಗ್ರಾಮಗಳಲ್ಲಿ ಮಾತ್ರ ಮರು ಭೂಮಾಪನ ಕಾರ್ಯವನ್ನು ಪೂರೈಸಲಾಗಿದೆ. ಇದರಿಂದ ಭೂ ವ್ಯಾಜ್ಯಗಳು ಹೆಚ್ಚಾಗುತ್ತವೆ. ಮೂಲ ಸರ್ವೇ ನಂತರದ ಸರ್ವೇ ಸಮಯದಲ್ಲಿ ಕಾಗದದ ಮೇಲೆ ಸಿದ್ಧಪಡಿಸಲಾದ ಭೂ ದಾಖಲೆಗಳು 150 ವರ್ಷಗಳಿಗಿಂತ ಹಳೆಯದಾಗಿವೆ. ಭೂಮಾಪನ ಕಾರ್ಯದಲ್ಲಿ ನಿಖರತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಪ್ರಸ್ತಾಪಿಸಿದೆ. ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯು ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸಂಬಂಧಿಸಿದ ಭೂದಾಖಲೆಗಳನ್ನು ಸಿದ್ಧಪಡಿಸುವ ಮತ್ತು ನಿರ್ವಹಿಸುವ ಜವಾಬ್ದಾರಿ ಹೊಂದಿದೆ ಎಂದು ವಿವರಿಸಿದರು.

ಹಣದ ಬದಲು ಅಕ್ಕಿಗೆ ಒಪ್ಪಿಗೆ: ಅನ್ನಭಾಗ್ಯ ಯೋಜನೆಯಲ್ಲಿ ಈ ಹಿಂದೆ ನೀಡಲಾಗುತ್ತಿದ್ದ ನಗದು ಬದಲಿಗೆ ಅಕ್ಕಿಯನ್ನೇ ನೀಡುವ ತೀರ್ಮಾನಕ್ಕೆ ಸಚಿವ ಸಂಪುಟದಲ್ಲಿ ಅನುಮೋದನೆ ಸಿಕ್ಕಿದೆ. ಕೇಂದ್ರ ಸರಕಾರ ಪ್ರತಿ ಕೆಜಿ ಅಕ್ಕಿಗೆ 22.50 ರು. ದರದಲ್ಲಿ ಸರಬರಾಜು ಮಾಡಲು ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗೆ ಹಣದ ಬದಲು ಅಕ್ಕಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ವಿತರಿಸಲಾಗುವ 5 ಕೆ.ಜಿ ಆಹಾರ ಧಾನ್ಯದೊಂದಿಗೆ ರಾಜ್ಯ ಸರಕಾರದ ವತಿಯಿಂದ ಹೆಚ್ಚುವರಿಯಾಗಿ ಐದು ಕೆ.ಜಿ ಆಹಾರ ಧಾನ್ಯವನ್ನು ಸೇರಿಸಿ, ಉಚಿತವಾಗಿ ವಿತರಿಸಲು ನಿರ್ಧರಿಸಲಾಗಿದೆ. ಆದ್ದರಿಂದ ಇನ್ಮುಂದೆ ಪ್ರತಿ ವ್ಯಕ್ತಿಗೆ 170 ಹಣ ಜಮೆಯಾಗುವುದಿಲ್ಲ.

ಸಚಿವ ಸಂಪುಟದ ಪ್ರಮುಖಾಂಶ

- ಕನ್ನಡ ಮಾಧ್ಯಮ, ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡ ಪರೀಕ್ಷೆ ಕಡ್ಡಾಯವಿಲ್ಲ
- ಸಮಾಜ ಕಲ್ಯಾಣ ಇಲಾಖೆ ವತಿಯಿಂದ 441 ಕೋಟಿ ವೆಚ್ಚದಲ್ಲಿ 63 ಅಂಬೇಡ್ಕರ್ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಅನುಮತಿ
- ಚಿಂತಾಮಣಿ ತಾ. ಮುರಗಮಲ್ಲ ಗ್ರಾಮದ ದರ್ಗಾ ಅಭಿವೃದ್ಧಿಗೆ 32 ಕೋಟಿ ರು. ನೀಡಲು ಅನುಮತಿ
- ಇನ್ವೆಸ್ಟ್ ಕರ್ನಾಟಕದ ಮಂಡಿಸಿದ್ದ ಕೈಗಾರಿಕಾ ನೀತಿಗೆ ಘಟನೋತ್ತರ ಅನುಮೋದನೆ

ಈ ಹಿಂದೆ ಅಕ್ಕಿ ನೀಡಲು ಕೇಂದ್ರ ಒಪ್ಪದಿದ್ದರಿಂದ ಪ್ರತಿ ತಿಂಗಳು ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥೆ ಖಾತೆಗೆ ಹಣ ವರ್ಗಾಯಿಸಲಾಗುತ್ತಿತ್ತು. ಆದರೀಗ ಅಗತ್ಯ ಅಕ್ಕಿ ಪೂರೈಸುವುದಕ್ಕೆ ಕೇಂದ್ರ ಒಪ್ಪಿರುವುದರಿಂದ ಅರ್ಹ ಫಲಾನುಭವಿಗಳಿಗೆ 5 ಕೆ.ಜಿ. ಅಕ್ಕಿಯನ್ನು ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ವಿತರಿಸಲು ತೀರ್ಮಾನಿಸಲಾಗಿದೆ. ಇದಕ್ಕೆ ಘಟನೋತ್ತರ ಅನುಮೋದನೆ ನೀಡಲಾಗಿದೆ.

- **ಎಚ್.ಕೆ.ಪಾಟೀಲ್** ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ದೆಹಲಿ ಮುಖ್ಯಮಂತ್ರಿ ಗದ್ದುಗೆ ಏರಿದ ನಾಲ್ಕನೇ ಮಹಿಳೆ

ರೇಖಾ ಗುಪ್ತಾ ಪ್ರಮಾಣವಚನ

ದೆಹಲಿ: ಶಾಲಿಮಾರ್ ಬಾಗ್ ಕ್ಷೇತ್ರದ ಬಿಜೆಪಿ ಶಾಸಕಿ ರೇಖಾ ಗುಪ್ತಾ ಅವರು ದೆಹಲಿ ಮುಖ್ಯಮಂತ್ರಿಯಾಗಿ ಗುರುವಾರ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ರಾಮಲೀಲಾ ಮೈದಾನದಲ್ಲಿ ನಡೆದ ಪ್ರಮಾಣವಚನ ಸಮಾರಂಭದಲ್ಲಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಪ್ರಮಾಣವಚನ ಬೋಧಿಸಿದರು. ರೇಖಾ ಗುಪ್ತಾ ಅವರೊಂದಿಗೆ ಕಪಿಲ್ ಮಿಶ್ರಾ, ಪಂಕಜ್ ಕುಮಾರ್ ಸಿಂಗ್, ರವೀಂದರ್ ಸಿಂಗ್, ಪರ್ವೇಶ್ ಸಿಂಗ್, ಆಶಿಸ್ ಸೂದ್, ಮಜಿಂದರ್ ಸಿಂಗ್ ಸಿರ್ಸಾ ಸಚಿವರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಂಪುಟದ ಸಚಿವರು, ಬಿಜೆಪಿಯ ಮುಖ್ಯಮಂತ್ರಿಗಳು, ಎನ್‌ಡಿಎ ಮೈತ್ರಿಕೂಟದ ನಾಯಕರು ಸೇರಿ ಸಾವಿರಾರು ಜನರು ಪ್ರಮಾಣವಚನ ಸಮಾರಂಭದಲ್ಲಿ ಭಾಗಿಯಾಗಿದ್ದರು. 32 ವರ್ಷಗಳ ಇತಿಹಾಸದಲ್ಲಿ ಮುಖ್ಯಮಂತ್ರಿಯಾಗುತ್ತಿರುವ ನಾಲ್ಕನೇ ಮಹಿಳೆ ರೇಖಾ ಗುಪ್ತಾ. ಬಿಜೆಪಿಯ ಸುಷ್ಮಾ ಸ್ವರಾಜ್, ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಹಾಗೂ ಎಎಪಿಯ ಆತಿಶಿ ಅವರು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದರು.

ದೆಹಲಿ ನೂತನ ಮುಖ್ಯಮಂತ್ರಿಯಾಗಿ ರೇಖಾ ಗುಪ್ತಾ ಗುರುವಾರ ಮಧ್ಯಾಹ್ನ ಲೆ.ಗವರ್ನರ್ ವಿ.ಕೆ.ಸಕ್ಸೇನಾ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು.

- ಬರೋಬ್ಬರಿ 27 ವರ್ಷಗಳ ಬಳಿಕ ದೆಹಲಿ ಗದ್ದುಗೆ ಏರಿರುವ ಬಿಜೆಪಿ
- ಮಹಿಳಾ ಸಿಎಂ ನೇತೃತ್ವದಲ್ಲಿ ದೆಹಲಿ ಅಭಿವೃದ್ಧಿಗೆ ಬಿಜೆಪಿ ಮುನ್ನುಡಿ
- ಕೇಜ್ರಿವಾಲ್ ಅವರನ್ನು ಸೋಲಿಸಿದ್ದ ಪರ್ವೇಶ್ ವರ್ಮಾ ಡಿಸಿಎಂ
- ಸಮಾರಂಭದಲ್ಲಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗಿ

ದೆಹಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ರೇಖಾ ಗುಪ್ತಾ ಅವರನ್ನು ಅಭಿನಂದಿಸುವೆ. ಕಾಲೇಜು ಕ್ಯಾಂಪಸ್ ರಾಜಕೀಯ, ಪಕ್ಷದ ರಾಜ್ಯಮಟ್ಟದ ಸಂಘಟನೆ, ಪುರಸಭೆ ಆಡಳಿತದಲ್ಲಿ ಸಕ್ರಿಯರಾಗಿದ್ದವರು, ಈಗ ಶಾಸಕಿ ಹಾಗೂ ಮುಖ್ಯಮಂತ್ರಿಯಾಗಿದ್ದಾರೆ. ಅವರು ತಳಮಟ್ಟದ ಪಕ್ಷದ ಕಾರ್ಯಕರ್ತೆಯಾಗಿ ಶ್ರಮಪಟ್ಟು ಮೇಲೆ ಬಂದಿದ್ದಾರೆ. ದೆಹಲಿ ಅಭಿವೃದ್ಧಿಗೆ ಹೆಚ್ಚು ಹುರುಪಿನಿಂದ, ಉತ್ಸಾಹದಿಂದ ಕೆಲಸ ಮಾಡುತ್ತಾರೆಂಬ ವಿಶ್ವಾಸವಿದೆ ಅಧಿಕಾರಾವಧಿ ಫಲಪ್ರದವಾಗಲಿ ಎಂದು ಹಾರೈಸುವೆ.

- **ನರೇಂದ್ರ ಮೋದಿ** ಪ್ರಧಾನಿ

ಉದಯಗಿರಿ ಗಲಭೆ: ಮೌಲ್ವಿ ಬಂಧನ

ಮೈಸೂರು: ಉದಯಗಿರಿ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ ಸಂಬಂಧ ಗಲಾಟೆಗೆ ಪ್ರಚೋದನೆ ನೀಡಿದ್ದ ಮೌಲ್ವಿ ಮುಫ್ತಿ ಮುಸ್ತಾಕ್‌ನನ್ನು ಸಿಸಿಬಿ ಪೊಲೀ ಸರು ಬಂಧಿಸಿ, ವಿಚಾರಣೆಗೊಳಪಡಿಸಿ ದ್ದಾರೆ. ಆರೋಪಿ ಮೌಲ್ವಿಯನ್ನು ಬಂಧಿ ಸುವ ವಿಚಾರದಲ್ಲಿ ಸಾರ್ವಜನಿಕರ ಹಾಗೂ ಪ್ರತಿಪಕ್ಷಗಳ ಒತ್ತಡ ಹೆಚ್ಚಾಗಿತ್ತು. ಗಲಾಟೆ ನಡೆದ 11 ದಿನಗಳ ಬಳಿಕ ಆತನನ್ನು ಬಂಧಿಸುವಲ್ಲಿ ಸಿಸಿಬಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಹಕ್ಕಿಜ್ವರ ಹೆಚ್ಚಳ: ಗಡಿಯಲ್ಲಿ ಹೈಅಲರ್ಟ್

ಬೀದರ್: ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿದ್ದು ರಾಜ್ಯದ ಗಡಿ ಭಾಗದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಪಶುಸಂಗೋಪನಾ ಇಲಾಖೆಯು ಆಂಧ್ರ, ಮಹಾರಾಷ್ಟ್ರ ರಾಜ್ಯಗಳಿಂದ ಪ್ರವೇಶಿಸುವ ಕೋಳಿಗಳ ಲಾರಿಗಳ ತಪಾಸಣೆಯನ್ನು ಹೆಚ್ಚಿಸಿದೆ. ಮಹಾರಾಷ್ಟ್ರದ ಲಾತೂರ್‌ನಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ಗಡಿಭಾಗದ ತಾಲೂಕುಗಳಲ್ಲಿ ಹೈಅಲರ್ಟ್ ಘೋಷಿಸಲಾಗಿದೆ.

ಗಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕ ಪ್ರಕ್ರಿಯೆಗೆ ಕೆಎಸ್‌ಎಟಿ ತಡೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ 2023-24ನೇ ಸಾಲಿನ 384 ಗಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಡಿ.ಪವಿತ್ರಾ ಸೇರಿದಂತೆ ಇತರೆ 51 ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೆಎಸ್‌ಎಟಿ ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠವು ಆದೇಶ ನೀಡಿದ್ದು, ಇದೇ 25ಕ್ಕೆ ವಿಚಾರಣೆಯನ್ನು ಮುಂದೂಡಿದೆ.

ಪೂರ್ವಭಾವಿ ಪರೀಕ್ಷಾ ಫಲಿತಾಂಶವನ್ನು 2025ರ ಜನವರಿ 30ರಂದು ಪ್ರಕಟಿಸಿ ನೇಮಕ ಪ್ರಕ್ರಿಯೆ ಮುಂದುವರಿಸಲು ಅನುಮತಿ ನೀಡಿದ್ದ ಕೆಎಸ್‌ಎಟಿ ಇದೀಗ ಮುಖ್ಯ ಪರೀಕ್ಷೆ ನಡೆಸಲು, ಆಯೋಗವು ಜನವರಿ 29ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಮುಂದಿನ ವಿಚಾರಣೆವರೆಗೆ ಅಮಾನತ್ತಿನಲ್ಲಿ ಇರಿಸುವಂತೆ ಆದೇಶಿಸಿದೆ.

'ಈ ಹಿಂದಿನ ದೋಷಗಳನ್ನು ಸರಿಪಡಿಸದೆ ಮುಖ್ಯ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ಹೇಗೆ ಅಧಿಸೂಚನೆ ಹೊರಡಿಸಿದೆ?' ಎಂದು ಪ್ರಶ್ನಿಸಿರುವ ಪೀಠವು, ಇಂತಹ ಸನ್ನಿವೇಶದಲ್ಲಿ ಮುಖ್ಯ ಪರೀಕ್ಷೆಗೆ ಕೆಪಿಎಸ್‌ಸಿ ಹೊರಡಿಸಿರುವ ಅಧಿಸೂಚನೆಯನ್ನು ಅಮಾನತಿಯಲ್ಲಿ ಇರಿಸುವುದೇ ಸೂಕ್ತ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಮೇಲ್ನೋಟಕ್ಕೆ ಪ್ರಶ್ನೆಪತ್ರಿಕೆಗಳನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡುವಾಗ ದೋಷಗಳಾಗಿರುವುದು ಕಂಡು ಬಂದಿದೆ. ಆಯೋಗವೂ ಇದನ್ನು ಒಪ್ಪಿಕೊಂಡು ಆ ಬಗ್ಗೆ ಪರಿಶೀಲಿಸಲು ತಜ್ಞರ ಸಮಿತಿ ರಚನೆ ಮಾಡಿತ್ತು. ಅಂತೆಯೇ, ಸಮಿತಿ ನೀಡಿರುವ ವರದಿಯಲ್ಲಿ ಪ್ರಶ್ನೆ ಪತ್ರಿಕೆ ಭಾಷಾಂತರದಲ್ಲಿ ದೋಷಗಳಾಗಿವೆ ಎಂಬುದನ್ನು ದೃಢಪಡಿಸಿದೆ. ಈ ವಿಚಾರವನ್ನು ಬಗೆಹರಿಸುವಂತೆಯೂ ಸಲಹೆ ನೀಡಿದೆ ಎಂಬ ಅಂಶವನ್ನು ಪೀಠವು ಉಲ್ಲೇಖಿಸಿದೆ.

- ಮಾರ್ಚ್‌ನಲ್ಲಿ ಚಹಾ, ಕಾಫಿ, ಮೊಸರು, ಹಾಲಿನ ಉತ್ಪನ್ನಗಳ ಬೆಲೆ ಹೆಚ್ಚಳ
- ಹಾಲಿನ ಬೆಲೆ ಲೀಟರ್‌ಗೆ 5 ರು. ಹೆಚ್ಚಳ, ಪ್ರಮಾಣ ಕೂಡ ಲೀಟರ್‌ಗೆ ಇಳಿಕೆ
- ಒಂದು ಲೀಟರ್ ನಂದಿನಿ ಟೋನ್ಡ್ ಹಾಲಿನ ಬೆಲೆ 47 ರು.ಗೆ ಏರಿಕೆ

ಬದಲಾದ ಹವಾಮಾನ ಚಿತ್ರಣ ನೀಡಿದ ಇಲಾಖೆ | ಎಲ್ಲದ್ದಕ್ಕೂ ಸಜ್ಜಾಗಿರಿ ಎಂದ ಸಚಿವ ಕೃಷ್ಣಭೈರೇಗೌಡ

ಫೆಬ್ರವರಿಯಲ್ಲಿ ರಣಬಿಸಿಲು, ಏಪ್ರಿಲ್‌ನಲ್ಲೇ ಮಳೆ!

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ತೀವ್ರ ಚಳಿಯಿಂದ ಬಳಲಿದ್ದ ಕರ್ನಾಟಕದಲ್ಲಿ ಇದೀಗ ಫೆಬ್ರವರಿಯಲ್ಲಿಯೇ ಬಿಸಿಲಿನ ತಾಪದಲ್ಲಿ ತೀವ್ರ ಏರಿಕೆ ಕಂಡಿದ್ದು, ವಾಡಿಕೆಗಿಂತ 2.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಅಲ್ಲದೇ, ಪೂರ್ವ ಮುಂಗಾರಿನಲ್ಲಿಯೂ ವಾಡಿಕೆಗಿಂತ ಅಧಿಕ ಮಳೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಕಂದಾಯ ಸಚಿವ ಕೃಷ್ಣಭೈರೇಗೌಡ ಅವರ ನೇತೃತ್ವದಲ್ಲಿ ನಡೆದ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಸಭೆಯಲ್ಲಿ, ಪ್ರಸ್ತುತ 2025ನೇ ಸಾಲಿನ ಹಿಂಗಾರು-ಮುಂಗಾರು ಮಳೆ ಸ್ಥಿತಿ, ಕೃಷಿ, ಕುಡಿಯುವ ನೀರು, ಹವಾಮಾನ ಹಾಗೂ ಅಣೆಕಟ್ಟೆಗಳಲ್ಲಿನ ನೀರಿನ ಮಟ್ಟದ ಕುರಿತು ಚರ್ಚಿಸಲಾಯಿತು. ಈ ವೇಳೆ ಮಾಹಿತಿ ನೀಡಿರುವ ಅಧಿಕಾರಿಗಳು, ಪ್ರಸ್ತುತ ವರ್ಷ ಪೂರ್ವ ಮುಂಗಾರಿನಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಲಿದೆ. ಏಪ್ರಿಲ್-ಮೇನಲ್ಲಿ ಉತ್ತಮ ಮಳೆಯಾಗಲಿದೆ. ಫೆಬ್ರವರಿ-ಮಾರ್ಚ್ ತಿಂಗಳ ಕೊನೆಯ ವಾರದಲ್ಲೂ ಹೆಚ್ಚು ಮಳೆ ಸಾಧ್ಯತೆ ಇದೆ. ಆದರೆ, ಹಿಂಗಾರಿನಲ್ಲಿ ಪ್ರಸ್ತುತ ವರ್ಷ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಹೇಳಿದ್ದಾರೆ.

ಫೆಬ್ರವರಿ ತಿಂಗಳಲ್ಲೇ ವಾಡಿಕೆಗಿಂತ 2.5 ಡಿ.ಸೆ. ಅಧಿಕ ಬಿಸಿಲು

ಏಪ್ರಿಲ್-ಮೇ ತಿಂಗಳಲ್ಲೇ ಉತ್ತಮ ಮಳೆ ಸಾಧ್ಯತೆ

14 ಜಲಾಶಯಗಳಲ್ಲಿ 535.21 ಟಿಎಂಸಿ ನೀರಿನ ಸಂಗ್ರಹ

ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ತಹಸೀಲ್ದಾರ್‌ಗಳ ಪಿ.ಡಿ. ಖಾತೆಯಲ್ಲಿ ಪ್ರಸ್ತುತ 488.30 ಕೋಟಿಗಳ ಅನುದಾನ ಲಭ್ಯವಿದ್ದು, ಪರಿಹಾರ ಕ್ರಮಕ್ಕೆ ಯಾವುದೇ ಹಣಕಾಸು ಸಮಸ್ಯೆ ಇಲ್ಲ.

- **ಕೃಷ್ಣಭೈರೇಗೌಡ** ಕಂದಾಯ ಸಚಿವ



ಆದರೆ ಕಳೆದೊಂದು ವಾರದಿಂದ ಬಿಸಿಲಿನ ಝಳಕ್ಕೆ ಕರ್ನಾಟಕ ಸಿಲುಕಿದ್ದು, ಈ ಬಗ್ಗೆ ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಫೆಬ್ರವರಿಯಲ್ಲೇ ಬಿಸಿಲಿನ ತಾಪ ಹೆಚ್ಚಾಗಿದೆ. ಈ ಪ್ರಮಾಣ ವಾಡಿಕೆಗಿಂತ 2.5 ಡಿಗ್ರಿ ಸೆಲ್ಸಿಯಸ್ ಅಧಿಕವಾಗಿದ್ದು, ತಿಂಗಳ ಕೊನೆಯ ವಾರದಲ್ಲಿ ತಾಪಮಾನ ಇಳಿಮುಖವಾಗುವ ಸಾಧ್ಯತೆಯಿದೆ ಎಂದು ವಿವರಿಸಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ ಬಿಸಿಲು ಬೇಗ ಕಾಣಿಸಿಕೊಂಡಿರುವುದರಿಂದ ಬೇಸಿಗೆ ಕಾಲದಲ್ಲಿ ರಾಜ್ಯದ ಕೆಲ ಜಿಲ್ಲೆಗಳಲ್ಲಿ ನೀರಿನ ಅಭಾವ ಉಂಟಾಗುವ ಸಾಧ್ಯತೆಯಿದೆ. ರಾಜ್ಯದಲ್ಲಿನ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ ಒಟ್ಟು 535.21 ಟಿ.ಎಂ.ಸಿ. ನೀರಿನ ಸಂಗ್ರಹಣೆಯಿದೆ. → 4

ಟ್ಯಾಂಕರ್ ನೀರು ಒದಗಿಸಿ

ರಾಜ್ಯದ ಐದು ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಚಿತ್ರದುರ್ಗ, ತುಮಕೂರು, ಬೆಂಗಳೂರು ನಗರ ಮತ್ತು ರಾಮನಗರ ಜಿಲ್ಲೆಗಳ 13 ತಾಲೂಕುಗಳ ವ್ಯಾಪ್ತಿಯ 66 ಗ್ರಾಮಗಳಿಗೆ ದೀರ್ಘಕಾಲೀನ ಸಮಸ್ಯೆ ಹಾಗೂ ನೀರಿನ ಗುಣಮಟ್ಟದ ಸಮಸ್ಯೆಯಿಂದಾಗಿ ಬಾಡಿಗೆ ಟ್ಯಾಂಕರ್ ಮತ್ತು ಬೋರ್‌ವೆಲ್‌ಗಳ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಅದೇ ರೀತಿ ನಗರ ವ್ಯಾಪ್ತಿಗೆ ಸಂಬಂಧಿಸಿದಂತೆ 2 ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಕೋಲಾರ ಜಿಲ್ಲೆಗಳ 5 ನಗರ ಸ್ಥಳೀಯ ಸಂಸ್ಥೆಗಳ 56 ವಾರ್ಡ್‌ಗಳಿಗೆ ಟ್ಯಾಂಕರ್ ಮತ್ತು ಬೋರ್‌ವೆಲ್‌ಗಳ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳ ಪಟ್ಟಿಯನ್ನು ಗುರುತಿಸಲು ಸಭೆಯಲ್ಲಿ ಸೂಚನೆ ನೀಡಲಾಯಿತು ಎಂದು ಸಚಿವ ಕೃಷ್ಣಭೈರೇಗೌಡ ವಿವರಿಸಿದರು.

ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನರಿಗೆ ಮತ್ತೊಂದು ಬರೆ

ಬಜೆಟ್ ಬಳಿಕ ಹಾಲಿನ ದರ ಮತ್ತೊಮ್ಮೆ ಹೆಚ್ಚಳ

ಬೆಂಗಳೂರು: ದಿನಬಳಕೆಯ ವಸ್ತುಗಳು, ಮೆಟ್ರೋ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನತೆಗೆ ಮತ್ತಷ್ಟು ಬೆಲೆ ಏರಿಕೆಯ ಬಿಸಿ ತಟ್ಟಲಿದ್ದು, ಮಾರ್ಚ್‌ನಲ್ಲಿ ಚಹಾ, ಕಾಫಿ, ಮೊಸರು ಹಾಗೂ ಹಾಲಿನ ಉತ್ಪನ್ನಗಳ ಬೆಲೆ ಹೆಚ್ಚಳವಾಗಲಿದೆ.

ರಾಜ್ಯ ಬಜೆಟ್ ಮಂಡನೆಯಾದ ಬಳಿಕ ನಂದಿನಿ ಹಾಲಿನ ಬೆಲೆ ಲೀಟರ್‌ಗೆ 5 ರು. ಹೆಚ್ಚಳವಾಗಲಿದ್ದು, ಹಾಲಿನ ಪ್ರಮಾಣವನ್ನು ಕೂಡ 1.050 ಮಿ.ಲೀಟರ್‌ನಿಂದ ಒಂದು ಲೀಟರ್‌ಗೆ ಇಳಿಸಲಾಗುವುದು. ಇದರೊಂದಿಗೆ ಒಂದು ಲೀಟರ್ ನಂದಿನಿ ಟೋನ್ಡ್ ಹಾಲಿನ ಬೆಲೆ 47 ರು.ಗೆ ಏರಿಕೆಯಾಗಲಿದೆ ಎಂದು ಮೂಲಗಳು ತಿಳಿಸಿದೆ.

ಈ ಹಿಂದೆ 2022ರಲ್ಲಿ ಪ್ರತಿ ಲೀಟರ್ ಹಾಲಿನ ದರವನ್ನು ಲೀಟರ್‌ಗೆ ಮೂರು ರುಪಾಯಿ ಏರಿಸಿದ್ದ ಕೆಎಂಎಫ್, 2024ರಲ್ಲಿ ಪ್ರತಿ ಪ್ಯಾಕೆಟ್‌ಗೆ ಎರಡು ರುಪಾಯಿ ಏರಿಸುವುದರೊಂದಿಗೆ 50 ಎಂಎಲ್ ಹೆಚ್ಚುವರಿ ಹಾಲು ನೀಡುವುದಾಗಿ ಹೇಳಿತ್ತು. ಬಳಿಕ ರೈತರಿಗೆ ಸಿಗುತ್ತಿರುವ ಮೊತ್ತವನ್ನು ಹೆಚ್ಚಿಸಬೇಕು ಎನ್ನುವ ಬೇಡಿಕೆಯಿತ್ತಾದರೂ ಸಾರ್ವಜನಿಕರ ವಿರೋಧ ವ್ಯಕ್ತವಾಗಿದ್ದರಿಂದ ಬೆಲೆ ಏರಿಕೆಯಾಗಿರಲಿಲ್ಲ. ಆದರೀಗ ಐದು ರುಪಾಯಿ ಹೆಚ್ಚಿಸಲು ಸಿದ್ಧತೆ ನಡೆಸಿಕೊಂಡಿದೆ.

ರೈತರು ಲೀಟರ್‌ಗೆ 5 ರು. ಹೆಚ್ಚಿಸುವಂತೆ ಒತ್ತಾಯಿಸಿದ್ದಾರೆ. ಅಂತಿಮ ತೀರ್ಮಾನ ಮುಖ್ಯಮಂತ್ರಿಯವರದಾಗಿದೆ. ರಾಜ್ಯ ಬಜೆಟ್ ಬಳಿಕ ಇದು ಜಾರಿಗೆ ಬರಲಿದೆ. ಈ ಹಿಂದೆ ನಾವು ದಿನಕ್ಕೆ 85-89 ಲಕ್ಷ ಲೀಟರ್ ಹಾಲು ಸಂಗ್ರಹಿಸುತ್ತಿದ್ದೆವು. ಆದರೀಗ ದಿನಕ್ಕೆ 79-81 ಲಕ್ಷ ಲೀಟರ ಪಡೆಯುತ್ತಿದ್ದೇವೆ, ಆದ್ದರಿಂದ ಗ್ರಾಹಕರಿಗೆ ಸರಬರಾಜು ಮಾಡುವ ಹೆಚ್ಚುವರಿ ಹಾಲು ನಿಲ್ಲಿಸಲಾಗುತ್ತದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹಾಲಿನ ದರವು ಕಡಿಮೆ ಇದೆ.

- **ಬಿ.ಶಿವಸ್ವಾಮಿ** ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ

ಸಮಾಚಾರ ಸಣ್ಣದಲ್ಲ

ಶಿವಾಜಿ ಯುವ ಜನಾಂಗಕ್ಕೆ ಪ್ರೇರಣೆ

ಅಥಣಿ: ಛತ್ರಪತಿ ಶಿವಾಜಿ ಮಹಾರಾಜರು ದೇಶ ಕಂಡ ಶ್ರೇಷ್ಠ ಮಹಾಪುರುಷ. ಅವರ ದೇಶಭಕ್ತಿ, ಧರ್ಮನಿಷ್ಠೆ, ಯುದ್ಧ ನೀತಿಯ ಧೈರ್ಯ, ಶೌರ್ಯಗಳು ಇಂದಿನ ಯುವ ಜನಾಂಗಕ್ಕೆ ಪ್ರೇರಣೆಯಾಗಿವೆ ಎಂದು ಮುಖಂಡ ಅಪ್ಪಾಸಾಬ ಪಾಟೀಲ ಹೇಳಿದರು. ಅವರು ತಾಲೂಕಿನ ಐಗಳಿ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಅಂಗವಾಗಿ ಶಿವಾಜಿ ವೃತ್ತದಲ್ಲಿ ಭಾವಚಿತ್ರಕ್ಕೆ ಪೂಜಿಸಿ ಮಾತನಾಡಿದರು. ರಾಷ್ಟ್ರ ಪುರುಷ, ರಾಷ್ಟ್ರವೀರ, ಧರ್ಮನಿರಪೇಕ್ಷ, ಜಾತ್ಯತೀತ ಮಹಾವೀರ, ರೈತ ಅಭಿವೃದ್ಧಿ, ಸ್ವದೇಶ ರಾಜ್ಯಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಆದರ್ಶ ತತ್ವಗಳನ್ನು ಇಂದಿನ ಯುವ ಜನಾಂಗವು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಬಿ ಎಸ್ ಬಿರಾದಾರ, ಶಿವಾನಂದ ಸಿಂಧೂರ, ಶ್ರೀಶೈಲ ಮಿರ್ಜಿ, ರವಿ ಹಾಲಳ್ಳಿ, ದುಂಡಪ್ಪ ದೊಡಮನಿ, ಚಂದ್ರಕಾಂತ ಪಾಟೀಲ, ಪಿಡಿಓ ರಾಜೇಂದ್ರ ಪಾಠಕ, ಅಮಿತ ಜಾಧವ, ಅಪ್ಪಾಸಾಬ ಮದಭಾವಿ, ರಾಜು ವಾಘಮೋರೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ದತ್ತಿನಿಧಿ ಕಾರ್ಯಕ್ರಮ

ಬೆಳಗಾವಿ: ಜಿಲ್ಲಾ ಲೇಖಕಿಯರ ಸಂಘದ ವತಿಯಿಂದ 2025ರ ಫೆ.22ರಂದು ಶನಿವಾರ ಮಧ್ಯಾಹ್ನ 3.30ಕ್ಕೆ ಚೆನ್ನಮ್ಮ ವೃತ್ತದ ಬಳಿಯ ಕನ್ನಡ ಸಾಹಿತ್ಯ ಭವನದಲ್ಲಿ ದತ್ತಿ ಕಾರ್ಯಕ್ರಮ ಹಾಗೂ ಕಥಾಸ್ಪರ್ಧೆ ಏರ್ಪಡಿಸಲಾಗಿದೆ. ದಿ.ಎಚ್.ಬಿ.ಕುಲಕರ್ಣಿ, ಶ್ರೀಮತಿ ಸಾವಿತ್ರಿ ಬಾಬುರಾವ ಶಿವಪೂಜಿ, ದಿ. ಶಂಕರ ಸ ಪಾನಶೆಟ್ಟಿ , ಡಾ.ಮಂದಾಕಿನಿ ಈಶ್ವರ ಪಟ್ಟಣ ದತ್ತಿನಿಧಿ ಅಧ್ಯಕ್ಷರಾಗಿ ಸುಮಾ ಕಿತ್ತೂರ, ಉಪನ್ಯಾಸಕರಾಗಿ ಗೋಕಾಕದ ಸಾಹಿತಿ ಪುಷ್ಪಾ ಮುರಗೋಡ ದಾನಿಗಳಾದ ದೀಪಿಕಾ ಚಾಟೆ, ಸಂಗೀತಾ ಮುರುಗೇಶ ಶಿವಪೂಜಿ, ಪ್ರೇಮಾ ಪಾನಶೆಟ್ಟಿ,ಕಲ್ಪನಾ ಪಟ್ಟಣ ಉಪಸ್ಥಿತರಿರುತ್ತಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಆಶಾ ಎಸ್ ಯಮಕನಮರಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಮೋಳೆ ಓಘ ಸಿದ್ದೇಶ್ವರ ಜಾತ್ರೆ

ಕಾಗವಾಡ: ತಾಲೂಕಿನ ಮೋಳೆ ಗ್ರಾಮದ ಶ್ರೀಓಘ ಸಿದ್ದೇಶ್ವರ ದೇವರ 10ನೇ ಬೃಹತ್ ದನಗಳ ಜಾತ್ರೆ ಇಂದಿನಿಂದ ನಾಲ್ಕು ದಿನಗಳ ವರಗೆ ನಡೆಯಲಿದೆ.

ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ವಿವಿಧ ಗ್ರಾಮಗಳ 5 ಪಲ್ಲಕ್ಕಿ ಕೂಡುತ್ತವೆ ನಂತರ ವೈಭವದ ದೇವರುಗಳ ಭೇಟಿ ಕಾರ್ಯಕ್ರಮ ನಡೆಯಲಿದೆ ರಾತ್ರಿ 9 ಗಂಟೆಗೆ ವಿವಿಧ ಡೊಳ್ಳಿನ ಗಾಯನ ಸಂಘಗಳಿಂದ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯಲಿದೆ, ಶನಿವಾರ ಫೆ.22 ರಂದು ಮುಂಜಾನೆ 6 ಗಂಟೆಗೆ ಶ್ರೀಓಘ ಸಿದ್ದೇಶ್ವರ ದೇವರ ಮಹಾಪೂಜೆ ಹಾಗೂ ನೈವೇದ್ಯ ನಡೆಯಲಿದೆ. ರಾತ್ರಿ 9 ಗಂಟೆಗೆ ಮಲ್ಲಿಕಾರ್ಜುನ ಹವ್ಯಾಸಿ ನಾಟ್ಯ ಸಂಘದಿಂದ ಪತಿವೃತೆಯ ಪರೀಕ್ಷೆ ನಾಟಕ ನಡೆಯಲಿದೆ. ರವಿವಾರ ಮುಂಜಾನೆ 9 ಗಂಟೆಗೆ ಒಂದು ಕುದುರೆ ಓಡಿಸುವ ಶರ್ಯತ್ತು, ಮಧ್ಯಾಹ್ನ 2 ಗಂಟೆಗೆ ವಿವಿಧ ಗ್ರಾಮಗಳಿಂದ ಆಗಮಿಸಿರುವ ದೇವರ ಪಲ್ಲಕ್ಕಿಗಳ ಬಿಳ್ಕೊಡುವ ಸಮಾರಂಭ ನಡೆಯಲಿದೆ. ಸೋಮವಾರ ಮುಂಜಾನೆ 9 ಗಂಟೆಗೆ ಜೋಡು ಕುದುರೆ ಗಾಡಿ ಶರ್ಯತ್ತು ನಡೆಯಲಿದೆ. ಮಂಗಳವಾರ ಮುಂಜಾನೆ 9 ಗಂಟೆಗೆ ಜೋಡೆತ್ತಿನ ಗಾಡಿ ಶರ್ಯತ್ತು ನಡೆಯಲಿದೆ ಎಂದು ಜಾತ್ರಾ ಕಮಿಟಿ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗಲಿದ ಜೀವ

ರಾಚಯ್ಯ ಹಿರೇಮಠ

ಯರಗಟ್ಟಿ: ಸ್ಥಳೀಯ ನಿವಾಸಿ ವೀರಶೈವ ಲಿಂಗಾಯತ ಸಮಾಜದ ಹಿರಿಯರಿಯ ಜೀವಿ,

ರಾಚಯ್ಯ ಗುರುಬಸಯ್ಯ ಹಿರೇಮಠ (80)ಲಿಂಗೈಕ್ಯರಾದರೆಂದು ತಿಳಿಸಲು ವಿಷಾದನೀಯ ಎನಿಸುತ್ತದೆ. ಮೃತರಿಗೆ ಪತ್ನಿ, ಒಬ್ಬ ಪುತ್ರ, ಮೂರು ಸುಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

{ಮಧು ಬಂಗಾರಪ್ಪ } ಸಚಿವ

ದ್ವಿತೀಯ ಪಿಯು ಪರೀಕ್ಷೆ ಮಾರ್ಚ್ 1ರಿಂದ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮಾರ್ಚ್ 21ರಿಂದ ಆರಂಭವಾಗಲಿದ್ದು, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.



ವಿಶೇಷ ಜಾಗೃತಿ, ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮ | ಸಂಸದ ಜಗದೀಶ ಶೆಟ್ಟರ್

ಕೇಂದ್ರ ಯೋಜನೆ ಜಾಗೃತಿ ಅಗತ್ಯ

ಸವದತ್ತಿ: ಕೇಂದ್ರ ಸರಕಾರ ಆಯುಷ್ಮಾನ್ ಭಾರತ, ಆರೋಗ್ಯ, ಶಿಕ್ಷಣ, ಸ್ವಯಂ ಉದ್ಯೋಗ ಸೇರಿದಂತೆ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದು ಜಾಗೃತಿಯ ಅಗತ್ಯವಿದೆ ಎಂದು ಸಂಸದ ಜಗದೀಶ ಶೆಟ್ಟರ್ ಹೇಳಿದರು.

ಇಲ್ಲಿನ ಕೆ ಎಲ್ ಇ ಸಂಸ್ಥೆಯ ಎಸ್ ವಿ ಎಸ್ ಬೆಳ್ಳುಬ್ಬಿ ಕಾಲೇಜಿನ ಸಭಾಂಗಣದಲ್ಲಿ ಕೇಂದ್ರ ಸಂವಹನ ಇಲಾಖೆ, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ತಾಲೂಕಾಡಳಿತ, ತಾಲೂಕ ಪಂಚಾಯತ್, ಶಿಶು ಅಭಿವೃದ್ಧಿ ಯೋಜನೆ, ಆರೋಗ್ಯ ಇಲಾಖೆ, ಹೆಸ್ಕಾಂ, ಪುರಸಭೆ, ಶಿಕ್ಷಣ ಇಲಾಖೆ, ಎಸ್ ವಿ ಎಸ್ ಬೆಳ್ಳುಬ್ಬಿ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಗುರುವಾರ ಏರ್ಪಡಿಸಲಾದ ವಿಶೇಷ ಜಾಗೃತಿ, ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,

ಇಡೀ ವಿಶ್ವ ಭಾರತದ ಕಡೆಗೆ ಗಮನ ಹರಿಸುವತ್ತ ದೇಶ ಬೆಳೆದು ನಿಂತಿದ್ದು ಮೋದಿ ಅವರ ನಾಯಕತ್ವಕ್ಕೆ ಸಾಕ್ಷಿಯಾಗಿದೆ. ಗರೀಬ್ ಕಲ್ಯಾಣ ಯೋಜನೆ, ಪಿ.ಎಮ್ ಪ್ರಣಾಮ್ ಯೋಜನೆ, ಕೃಷಿ, ಉಜ್ವಲ, ಕಿಸಾನ್ ಸಮ್ಮಾನ್, ಪೋಷಣ ಅಭಿಯಾನ್ ಸೇರಿದಂತೆ ಕಳೆದ 9 ವರ್ಷಗಳಲ್ಲಿ ಜಾರಿಯಾದ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳನ್ನು ಈಗಾಗಲೇ ಫಲಾನುಭವಿಗಳು ಪಡೆದುಕೊಂಡಿದ್ದಾರೆ. ಕೇಂದ್ರ ಸರಕಾರದ ಯೋಜನೆಗಳ ಅನುಷ್ಠಾನದಿಂದ ಎಲ್ಲ ಕ್ಷೇತ್ರಗಳಲ್ಲೂ ದೇಶ ಮುಂಚೂಣಿಯಲ್ಲಿದೆ. ಜನರಿಗೆ ಯೋಜನೆಗಳ ಕುರಿತು ಹೆಚ್ಚಿನ ಮಾಹಿತಿ ತಲುಪಬೇಕಿದೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಗರೀಬ್ ಕಲ್ಯಾಣ್ ಯೋಜನೆಯಡಿ ಪ್ರತಿ ಕುಟುಂಬದ ಸದಸ್ಯರಿಗೆ 5 ಕೆಜಿ ಉಚಿತ ಅಕ್ಕಿ ನೀಡಲಾಗುತ್ತದೆ. ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಲಾಗುತ್ತಿದೆ. ಉಜ್ವಲ ಯೋಜನೆಯಡಿ ಫಲಾನುಭವಿಗಳಿಗೆ ಉಚಿತ ಸಿಲೆಂಡರ್ ಸಂಪರ್ಕ ನೀಡಲಾಗಿದೆ ಎಂದರು.

ಈ ವೇಳೆ ತಹಸೀಲ್ದಾರ್ ಮಲ್ಲಿಕಾರ್ಜುನ ಹೆಗ್ಗಣ್ಣವರ, ಪುರಸಭೆ ಅಧ್ಯಕ್ಷೆ ಚಿನ್ನವ್ವ ಹುಚ್ಚಣ್ಣವರ, ಉಪಾಧ್ಯಕ್ಷೆ ದಾವಲಬಿ ಸನದಿ, ಆರೋಗ್ಯಾಧಿಕಾರಿ ಶ್ರೀಪಾದ್ ಸಬನಿಸ್, ಸಿಡಿಪಿಒ ಸುನೀತಾ ಪಾಟೀಲ್, ಪಂಚನಗೌಡ ದ್ಯಾಮನಗೌಡರ, ಸೌರಭ್ ಚೋಪ್ರಾ ಸೇರಿ ಇತರರು ಇದ್ದರು.

ಕೇಂದ್ರ ಯೋಜನೆಗಳ ವಿಶೇಷ ಜಾಗೃತಿ, ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಸಂಸದ ಜಗದೀಶ್ ಶೆಟ್ಟರ್ ಉದ್ಘಾಟಿಸಿದರು.

> ಜನ ಧನ್ ಖಾತೆಯಿಂದ ಸರಕಾರದ ಯಾವುದೇ ಹಣ ನೇರವಾಗಿ ಫಲಾನುಭವಿಗೆ ಜಮೆಯಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಬ್ರಷ್ಟಾಚಾರ ನಿವಾರಣೆಯಾಗಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ, ಜಲ ಜೀವನ ಮಿಷನ್, ಮಾತೃ ವಂದನಾ ಸೇರಿದಂತೆ ವಿವಿಧ ಯೋಜನೆಗಳ ಸದುಪಯೋಗ ಈಗಾಗಲೇ ಫಲಾನುಭವಿಗಳು ಪಡೆದುಕೊಂಡಿದ್ದಾರೆ. ಸಾರ್ವಜನಿಕರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಯೋಜನೆಗಳ ಸದುಪಯೋಗ ಪಡೆದುಕೊಳ್ಳಲಿ.
>
> ಜಗದೀಶ ಶೆಟ್ಟರ್, ಸಂಸದ

ನಾನು ಆರಾಮಾಗಿದ್ದೇನೆ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ: ಕಳೆದ ತಿಂಗಳು ರಸ್ತೆ ಅಪಘಾತದಿಂದಾಗಿ ಗಾಯಗೊಂಡು ವಿಶ್ರಾಂತಿಯಲ್ಲಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಅವರು ಬುಧವಾರ ಛತ್ರಪತಿ ಶಿವಾಜಿ ಜಯಂತಿ ಹಿನ್ನೆಲೆಯಲ್ಲಿ ತುರಮರಿ ಗ್ರಾಮದಲ್ಲಿ ನಡೆದ ಛತ್ರಪತಿ ಶಿವಾಜಿ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ನಿಮ್ಮೆಲ್ಲರ ಸಹಕಾರ, ಪ್ರಾರ್ಥನೆಯ ಫಲವಾಗಿ ಇಂದು ಸಂಪೂರ್ಣ ಗುಣ ಮುಖನಾಗಿದ್ದೇನೆ ಎಂದು ಸಚಿವರು ಹೇಳಿದರು. ನಮ್ಮ ಸಂಸ್ಕೃತಿಯ ಪ್ರತೀಕವಾಗಿ ರಾಜಹಂಸಗಡದಲ್ಲಿ ಶಿವಾಜಿ ಮಹಾರಾಜರ ಮೂರ್ತಿ ಪ್ರತಿಷ್ಠಾಪಿಸಲಾಗಿದ್ದು, ಅಲ್ಲಿ ಈಗ ದೇಶವಷ್ಟೆ ಅಲ್ಲ, ವಿದೇಶದಿಂದಲೂ ಪ್ರವಾಸಿಗರು ಬರುತ್ತಿದ್ದಾರೆ. ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು ಸಾರ್ಥಕವಾಗಿದೆ ಎಂದರು.

ಇಲ್ಲಿ ನಿಮ್ಮೆಲ್ಲರ ಉತ್ಸಾಹ, ಭಕ್ತಿ ನೋಡಿ ಖುಷಿಯಾಗಿದೆ. ಶಿವಾಜಿ ಮಹಾರಾಜರ ಜಯಂತಿಯ ಪ್ರಯುಕ್ತವಾಗಿ ಮೂರ್ತಿಯನ್ನು ಅನಾವರಣಗೊಳಿಸಲಾಗಿದೆ. ಕ್ಷೇತ್ರದ ಎಲ್ಲ ಗ್ರಾಮಗಳ, ಸರ್ವ ಜನಾಂಗಗಳ ಹಿತ ದೃಷ್ಟಿಯಿಂದ ಎಲ್ಲ ಮಹನೀಯರ ಮೂರ್ತಿಗಳ ಪ್ರತಿಷ್ಠಾಪನೆಗೆ ಮಹತ್ವ ನೀಡಲಾಗುತ್ತಿದೆ ಎಂದು ಸಚಿವರು ಹೇಳಿದರು.

ಯುವರಾಜ್ ಕದಂ, ಜಯವಂತ ಬಾಳೇಕುಂದ್ರಿ, ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್, ಸಿದ್ದಪ್ಪ ಕಾಂಬಳೆ, ಅಶೋಕ ಚೌಗುಲೆ, ವೈಶಾಲಿ ಖಂಡೇಕರ್, ನಾಗರಾಜ ಜಾಧವ್, ಆರ್.ಎಂ.ಚೌಗುಲೆ, ರವಿ ಕೋಕಿತಕರ್, ಚಂದ್ರಕಾಂತ ಜಾಧವ್, ರಾಜು ಜಾಧವ್, ಎನ್.ಬಿ.ಖಂಡೇಕರ್, ಚಾಂಗದೇವ್ ಬೆಳಗಾಂವ್ಕರ್, ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

ಶಿವಾಜಿ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಅವರನ್ನು ಸನ್ಮಾನಿಸಿದರು.

ಮೂಳೆ ಸಾಂದ್ರತೆ ತಪಾಸಣೆ ಅಗತ್ಯ

ಸವದತ್ತಿ: ತಾಲೂಕಿನ ಶಿರಸಂಗಿ ಗ್ರಾಮದಲ್ಲಿ ಶ್ರೀಅರ್ಥೋಪೆಡಿಕ್ ಆಸ್ಪತ್ರೆ ವತಿಯಿಂದ ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರವನ್ನು ನಡೆಸಲಾಯಿತು. ರೋಗಿಗಳಿಗೆ ಬಿಪಿ ಹಾಗೂ ಶುಗರ್ ತಪಾಸಣೆಯು ಹಾಗೂ ಔಷಧಿಗಳನ್ನು ಉಚಿತವಾಗಿ ನೀಡಲಾಯಿತು.

ವೈದ್ಯೆ ನಯನಾ ಭಸ್ಮೆ, ವೈದ್ಯ ಹೇಮಂತ್ ಭಸ್ಮೆ ಜನರಿಗೆ ಮೂಳೆ ಸಾಂದ್ರತೆ ಹಾಗೂ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದರ ಉದ್ದೇಶವಾಗಿ ಮಾತನಾಡಿದರು. 230 ಕ್ಕಿಂತ ಹೆಚ್ಚು ಜನರು ಉಚಿತ ಮೂಳೆ ಸಾಂದ್ರತೆ ತಪಾಸಣೆ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು.

ಈ ವೇಳೆ ಗ್ರಾಮದ ಮುಖಂಡ ಪಕ್ಕೀರಪ್ಪ ಓಗಳಾಪುರ, ಗದಿಗೆಪ್ಪ ಕುಂಬಾರ, ಮಹದೇವ್ ಮೆಣಸಿನಕಾಯಿ, ಯಲ್ಲಪ್ಪ ಅಳಗೋಡಿ, ಈರಯ್ಯ ಹಿರೇಮಠ್ ಹಾಗೂ ಗ್ರಾಮಸ್ಥರು ಇದ್ದರು.

ತಾಲೂಕಿನ ಶಿರಸಂಗಿ ಗ್ರಾಮದಲ್ಲಿ ಶ್ರೀಅರ್ಥೋಪೆಡಿಕ್ ಆಸ್ಪತ್ರೆ ವತಿಯಿಂದ ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರವನ್ನು ನಡೆಸಲಾಯಿತು.

ಯರಗಟ್ಟಿ-ಕಟಕೋಳ ಮುಖ್ಯ ರಸ್ತೆ ದುರಸ್ತಿ ಯಾವಾಗ?

ಈರಣ್ಣಾ ಎಚ್. ಹುಲ್ಲೂರ ಯರಗಟ್ಟಿ

ಕಳೆದ ಹತ್ತು ವರ್ಷಗಳಿಂದ ರಸ್ತೆ ಹದಗೆಟ್ಟಿದ್ದು ಸವದತ್ತಿ ತಾಲೂಕು ಮುಕ್ತಾಯದವರೆಗೆ ಸುಮಾರು 13 ಕಿ.ಮಿ. ಸಂಪೂರ್ಣ ರಸ್ತೆ ಉದ್ದ ಅಗಲಕ್ಕೂ ಮಾರುದ್ದ ತೆಗ್ಗು ಗುಂಡಿಗಳು ತುಂಬಿಕೊಂಡಿದ್ದು ಹಾಳಾಗಿದೆ ಕಟಕೋಳ ಮತ್ತು ತೋರಣಗಟ್ಟಿ ಮಾರ್ಗವಾಗಿ ರಾಮದುರ್ಗ, ಶ್ರೀಕ್ಷೇತ್ರ ಗೊಡಚಿ ಸೇರಿದಂತೆ ಇತ್ಯಾದಿ ಗ್ರಾಮಗಳಿಗೆ ಸಂಚರಿಸಲು ಇದೆ ಮುಖ್ಯ ರಸ್ತೆಯಿಂದ ಸಂಚಾರ ಮಾಡಬೇಕಾಗುತ್ತದೆ.

ರಸ್ತೆ ಸಂಪೂರ್ಣ ಹದಗೆಟ್ಟು ಜನಪ್ರತಿನಿಧಿಗಳು ರಸ್ತೆ ಹದಗೆಟ್ಟ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳಿಗೆ ಹಿಡಿಶ್ಯಾಪ ಹಾಕುತ್ತ ಗೋಳಾಡುತ್ತಿರುವ ದೃಷ್ಯ ಇದು ಕಂಡು ಬರುವುದು ಯರಗಟ್ಟಿಯಿಂದ, ಕಟಕೋಳ, ತೋರಣಗಟ್ಟಿ, ರಾಮದುರ್ಗ ಮಾರ್ಗವಾಗಿ, ತೋರಣಗಟ್ಟಿಯವರಗೆ ಸಂಪರ್ಕಿಸುವ ಮುಖ್ಯ ರಸ್ತೆ ಹಣೆಬರಹ ಇದಾಗಿದ್ದು ಜನಪ್ರತಿನಿಗಳು, ಅಧಿಕಾರಿಗಳು ಗ್ರಾಮದಲ್ಲಿನ ಕಾರ್ಯಕ್ರಮಗಳಿಗೆ ಇದೆ ರಸ್ತೆಯನ್ನು ಸಂಪರ್ಕಿಸುತ್ತಾರೆ ಕಂಡ್ರಿ. ನೋಡಿಯೂ ನೋಡದ ಹಾಗೆ ಕಣ್ಣು ಮುಚ್ಚಿ ಕುಳಿತಂತೆ ಕಾಣುತ್ತದೆ ಇದಕ್ಕೆ ಬೇಸತ್ತು ಇಲ್ಲಿನ ಸಾರ್ವಜನಿಕರು ಯಾವಾಗ ರಸ್ತೆ ದುರಸ್ತಿ ಮಾಡಿಸುತ್ತಾರೆಂದು ಕಾದು ಕುಳತಿದ್ದಾರೆ.

ಹದಗೆಟ್ಟ ಯರಗಟ್ಟಿ ಕಟಕೋಳ, ತೋರಣಗಟ್ಟಿ ಮುಖ್ಯ ರಸ್ತೆ ಚಿತ್ರ

ಈ ರಸ್ತೆಯ ಬದಿಯಲ್ಲಿ ನಿರ್ಮಿಸಿದ ಗಟಾರು ಮುಚ್ಚಿ ರಸ್ತೆಯ ಮೇಲೆ ನೀರು ನಿಂತು, ಬೃಹತ್ತಾಕಾರ ದೊಡ್ಡ ದೊಡ್ಡ ತೆಗ್ಗು ಗುಂಡಿಗಳಲ್ಲಿ ನೀರು ನಿಂತು ವಾಹನ ಸಂಚಾರ ಮಾಡದಂತೆ ಅಡಚಣೆ ಉಂಟಾಗಿದೆ. ಈ ರಸ್ತೆ ಕಾಲುವೆ ತರಹ ಉದ್ದು ಅಗಲ ಕೊರೆತ ಬಿದ್ದು ಬೈಕ್ ಸವಾರರು ಸ್ಕಿಡ್ ಆಗಿ ಆಸ್ಪತ್ರೆಗೆ ದಾಖಲಾದ ಉದಾಹರಣೆಗಳು ಸಾಕಷ್ಟು ಇವೆ. ಡಾಂಬರೀಕರಣ ಮಾಡಿದ ರಸ್ತೆ ಸಂಪೂರ್ಣ ಕಿತ್ತು ತೆಗ್ಗು ಗುಂಡಿಗಳು ಬಿದ್ದು ಹಾಳಾಗಿದೆ.

ವಾಹನಗಳ ಸವಾರರು ಅಂಗೈಯಲ್ಲಿ ಜೀವ ಹಿಡಿದುಕೊಂಡು ಸಂಚಾರ ಮಾಡುವಂತಾ ಸನ್ನಿವೇಶ ಉದ್ಭವಿಸಿದೆ. ಕೂಡಲೆ ಅಧಿಕಾರಿಗಳು ಪಶೀಲಿಸಿ ಜನಪ್ರತಿನಿಧಿಗಳು ರಸ್ತೆ ಪರಸ್ಥಿತಿ ನೋಡಿ ದುರಸ್ತಿ ಮಾಡಬೇಕು.

> ರಸ್ತೆಯಲ್ಲಿ ಶಾಲಾಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರ ಓಡಾಟವೂ ಸಾಧ್ಯವಾಗುತ್ತಿಲ್ಲ. ಇಲ್ಲಿನ ನಿವಾಸಿಗಳು ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ರಸ್ತೆ ಅಭಿವೃದ್ಧಿ ಕಾರ್ಯ ವೇಗ ಪಡೆದುಕೊಳ್ಳುತ್ತಿಲ್ಲ. ಇದೇ ರಸ್ತೆಯಲ್ಲಿರುವ ಉತ್ತರ ಕರ್ನಾಟಕದ ಆರಾಧ್ಯ ದೇವರಾದ ಗೊಡಚಿ ವಿರಭದ್ರೇಶ್ವರ ದೇವಸ್ಥಾನ ತಲುಪಲು ಜನ ಹೈರಾಣಾಗುತ್ತಿದ್ದಾರೆ. ಜೀವ ಕೈಯಲ್ಲಿ ಇಟ್ಟು ರಸ್ತೆ ದಾಟುತ್ತಿದ್ದ ಸ್ಥಿತಿ ನಿರ್ಮಾಣವಾಗಿದೆ.
>
> ಶಿವಪುತ್ರ ತ್ಯಾವಟಗಿ, ವಾಹನ ಚಾಲಕ

ಶೀಘ್ರ ಕಾಮಗಾರಿಗೆ ಚಾಲನೆ

ಯರಗಟ್ಟಿ ಕಟಕೋಳ ರಸ್ತೆ ಡಾಂಬರೀಕರಣ ಕಾಮಗಾರಿಗೆ 7 ಕೋಟಿ 75 ಲಕ್ಷ ರು.ಗಳು ಮಂಜೂರು ಆಗಿದ್ದು, ಈಗ ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಅತೀ ಶೀಘ್ರದಲ್ಲೇ ಈ ಕಾಮಗಾರಿ ಭೂಮಿ ಪೂಜೆ ನೆರವೇರಿಸಿ. ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ವಿಶ್ವಾಸ ವಸಂತ ವೈದ್ಯ ತಿಳಿಸಿದರು.

ಸಿಂಪಿ ಸಮಾಜದ ವಧು-ವರರ ಸಮಾವೇಶ ಶೀಘ್ರ

ಮೂಡಲಗಿ: ರಾಜ್ಯದಲ್ಲಿ ಕಡಿಮೆ ಜನಸಂಖ್ಯೆ ಹೊಂದಿರುವ ನಾಮದೇವ ಶಿಂಪಿ ಸಮಾಜದ ವಧು-ವರರ ಹಿತಕ್ಕಾಗಿ ಶೀಘ್ರದಲ್ಲಿಯೇ ಉತ್ತರ ಕರ್ನಾಟಕದ ಭಾಗದಲ್ಲಿ ರಾಜ್ಯ ಮಟ್ಟದ ವಧು-ವರರ ಸಮಾವೇಶವನ್ನು ವೈಶಿಷ್ಟ್ಯವಾಗಿ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ನಾಮದೇವ ಸಿಂಪಿ ಸಮಾಜ ವಧು-ವರರ ವೇದಿಕೆಯ ರಾಜ್ಯಾಧ್ಯಕ್ಷ ಸತೀಶಕುಮಾರ ಪಿಸೆ ಹೇಳಿದರು.

ಅವರು ಗುರುವಾರದಂದು ಪಟ್ಟಣದಲ್ಲಿ ಜರುಗಿದ ನಾಮದೇವ ಶಿಂಪಿ ಸಮಾಜದ ಸಭೆಯಲ್ಲಿ ಮಾತನಾಡಿ, ವೇದಿಕೆಯು ಈಗಾಗಲೆ ಸುಮಾರು 1500 ಸದಸ್ಯರು ಹೊಂದಿರುವ ನಾಮದೇವ ಶಿಂಪಿ ಸಮಾಜದ ಭಾಂದವರು ಯುವ ಸಮುದಾಯದ ಕಲ್ಯಾಣ ಕಾರ್ಯಕ್ಕಾಗಿ ವೇದಿಕೆಯಲ್ಲಿ ಸದಸ್ಯತ್ವ ಪಡೆದು ತಮ್ಮ ತಮ್ಮ ಮಕ್ಕಳ ಕಲ್ಯಾಣ ಕಾರ್ಯಕ್ಕೆ ವಧು-ವರರಿಗೆ ಸಂಪರ್ಕಕೊಂಡಿಯಾಗುವುದಕ್ಕೆ ಸಹಕರಿಸಬೇಕು ಎಂದರು.

ವಧು-ವರರಿಗೆ ಸಂಪರ್ಕ ಕಲ್ಪಿಸಲು ವೇದಿಕೆಯ ಪಾತ್ರ ಬಹಳ ಮುಖ್ಯವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಸುಮಾರು 50 ಜೋಡಿಗಳಿಗೆ ಕಲ್ಯಾಣ ಕಾರ್ಯ ಮಾಡಿದು. ನಾಮದೇವ ಸಿಂಪಿ ಸಮಾಜ ಭಾಂದವರು ವೇದಿಕೆಯ ವಿಚಾರವನ್ನು ರಾಜ್ಯಾಂದ್ಯಂತ ಪಸರಿಸಿ ವಧು-ವರರ ಸಮಾವೇಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಮಹಾಲಿಂಗಪೂರ ಸಮಾಜದ ಮುಖಂಡ ಹಾಗೂ ಉದ್ಯಮಿ ಬಾಲಕೃಷ್ಣ ಮಾಳೋದೆ ಮಾತನಾಡಿ, ವಧು-ವರರ ಸಮಾವೇಶವನ್ನು ಉತ್ತರ ಕರ್ನಾಕ ಭಾಗದಲ್ಲಿ ಹಮ್ಮಿಕೊಳ್ಳುವುದಾರೆ ಬಾಗಲಕೋಟಿ ಜಿಲ್ಲೆಯ ಮಹಾಲಿಂಗಪೂರದಲ್ಲಿ ಹಮ್ಮಿಕೊಂಡರೆ ಎಲ್ಲ ರೀತಿ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವುದಾಗಿ ಭರವಸೆ ನೀಡಿದರು.

ವೇದಿಕೆಯ ಸಂಘಟನಾ ಕಾರ್ಯದರ್ಶಿ ರವೀಂದ್ರ ಬೊಂಗಾಳೆ ಮಾತನಾಡಿ, ಯಾವುದೇ ಒಂದು ಕೆಲಸಕ್ಕೆ ಒಗ್ಗಟ್ಟು ಬಹಳ ಮುಖ್ಯ, ನಾಮದೇವ ಸಿಂಪಿ ಸಮಾಜ ಒಗ್ಗಟ್ಟಿನ ಕೊರತೆಯಿಂದ ಇಂದು ಎಷ್ಟು ಯುವಕ-ಯುವತಿಯರ ಸುಮಾರು 30 ಕ್ಕಿಂತ ಹೆಚ್ಚು ವಯಸ್ಸಾದರು ಕಲ್ಯಾಣ ಕಾರ್ಯ ನಡೆಯುವುದಕ್ಕೆ ಬಹಳ ತೊಂದರೆಯಾಗುತ್ತಿದೆ ಎಂದರು.

ಈ ಸಮಯದಲ್ಲಿ ವೇದಿಕೆಯ ಸಹ ಕಾರ್ಯದರ್ಶಿ ಮಂಜುನಾಥ ರೇಳೆಕರ, ಮೂಡಲಗಿ ನಾಮದೇವ ಸಿಂಪಿ ಸಮಾಜ ಸಂಘದ ಅಧ್ಯಕ್ಷ ಶ್ರೀರಂಗ ಮಂದ್ರೋಳಿ, ಉಪಾಧ್ಯಕ್ಷ ಗಂಗಾರಾಮ ರೇಳೆಕರ, ಮುಖಂಡರಾದ ಜಗದೀಶ ಮಂದ್ರೋಳಿ, ಪಾಂಡು ಮಹೇಂದ್ರಕರ, ಪಾಂಡುರಂಗ ಮಂದ್ರೋಳಿ, ಸಚೀನ ಅಂಬೇಕರ, ಗಜಾನನ ರೇಳೆಕರ, ಚಂದ್ರಕಾಂತ ಕಾಕಡೆ, ಶಂಕರ ಕೊಂಕಣಿ, ಪ್ರಕಾಶ ಮಂದ್ರೋಳಿ, ಅಶೋಕ ಇತಾಪಿ, ಶ್ರೀಪಂತ ಹಾವಳ, ನಾರಾಯಣ ರೇಳೆಕರ ಮತ್ತಿತರರು ಇದ್ದರು.

ನಾಮದೇವ ಶಿಂಪಿ ಸಮಾಜದ ಸಭೆಯಲ್ಲಿ ರಾಜ್ಯ ನಾಮದೇವ ಸಿಂಪಿ ಸಮಾಜ ವಧು-ವರರ ವೇದಿಕೆಯ ರಾಜ್ಯಾಧ್ಯಕ್ಷ ಸತೀಶಕುಮಾರ ಪಿಸೆ ಮಾತನಾಡಿದರು.

> ನಾಮದೇವ ಶಿಂಪಿ ಸಮಾಜದ ಭಾಂದವರು ವಧು-ವರರ ಏಜೆಂಟರಿಂದ ಭಾರಿ ಪ್ರಮಾಣದಲ್ಲಿ ಮೋಸವಾಗುತ್ತಿರುವುದನ್ನು ತಪ್ಪಿಸಲು ರಾಜ್ಯ ಮಟ್ಟದ ಸಮಾವೇಶವನ್ನು ಹಮ್ಮಿಕೊಳ್ಳುವದಕ್ಕೆ ಸಮಾಜ ಭಾಂದವರು ಸ್ಪಂದಿಸಬೇಕೆಂದರು.
>
> ಸದಾನಂದ ಅತಡ್ಕರ,
> ವೇದಿಕೆಯ ಪ್ರಧಾನ ಕಾರ್ಯದರ್ಶಿ

ಸಚೀನ ಆಸ್ಪತ್ರೆ: ಬಂಜೆತನ ನಿವಾರಣೆ ಶಿಬಿರ

ಕಾಗವಾಡ: ಮಹಾರಾಷ್ಟ್ರದ ಮಿರಜ ಪಟ್ಟಣದ ಸಚೀನ ಆಸ್ಪತ್ರೆಯಲ್ಲಿ ರವಿವಾರ ದಿ. 23 ರಂದು ಉಚಿತ ಮಹಿಳೆಯರ ಲೈಂಗಿಕ ರೋಗಗಳು, ಬಂಜೆತನ ನಿವಾರಣೆ ಹಾಗೂ ಉಪಚಾರ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಇದರ ಲಾಭವನ್ನು ಸಾರ್ವಜನಿಕರು ಪಡೆದುಕೊಳ್ಳುವಂತೆ ಖ್ಯಾತ ಸ್ತ್ರೀರೋಗ ತಜ್ಞ ಡಾ.ಸಚೀನ ಸುಗಣ್ಣವರ ತಿಳಿಸಿದ್ದಾರೆ.

ಮಿರಜದಲ್ಲಿನ ಸಚೀನ ಆಸ್ಪತ್ರೆಯು ಬಂಜೆತನ ನಿವಾರಣೆ ಹಾಗೂ ಮಹಿಳೆಯರ ಲೈಂಗಿಕ ರೋಗಗಳ ನಿವಾರಣೆ ಕುರಿತು ಕಳೆದ ಹಲವಾರು ವರ್ಷಗಳಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಿ, ತನ್ನದೇ ಆದ ರೀತಿಯಲ್ಲಿ ಸಾಮಾಜಿಕ ಕಾರ್ಯವನ್ನು ಕೈಗೊಳ್ಳುತ್ತಿದೆ.

ಈ ಆಸ್ಪತ್ರೆಯಲ್ಲಿ ನುರಿತ ವೈದ್ಯರ ತಂಡ, ಅತ್ಯಾಧುನಿಕ ಯಂತ್ರೋಪಕರಣಗಳು ಜೊತೆಗೆ ಆಸ್ಪತ್ರೆಯು ಹೈಟೆಕ್ ಸೌಲಭ್ಯವನ್ನು ಹೊಂದಿದೆ. ಪ್ರತಿ ತಿಂಗಳು ಮಹಿಳೆಯರ ಎಲ್ಲ ಲೈಂಗಿಕ ರೋಗಗಳ ಮತ್ತು ಬಂಜೆತನ ನಿವಾರಣೆ ಹಾಗೂ ಉಪಚಾರ ಶಿಬಿರವನ್ನು ಉಚಿತವಾಗಿ ಹಮ್ಮಿಕೊಳ್ಳುತ್ತಿದೆ. ಈಗಾಗಲೇ ಶಿಬಿರದ ಲಾಭವನ್ನು ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಿಂದ ಅನೇಕ ರೋಗಿಗಳು ಪಡೆದುಕೊಂಡಿದ್ದಾರೆ.

ಡಾ. ಸಚೀನ ಸುಗನ್ನವರ ಮತ್ತು ಡಾ. ನೇಹಾ ಸುಗನ್ನವರ ದಂಪತಿ

ಲೈಂಗಿಕ ರೋಗಗಳಿಂದ ಬಳಲುವ ಹಾಗೂ ಮಕ್ಕಳಾಗದೇ ಇರುವ ದಂಪತಿಗಳು ರವಿವಾರ ದಿ. 23 ರಂದು ಬೆಳಗ್ಗೆ 9 ರಿಂದ ಸಂಜೆ 4 ರ ವರೆಗೆ ಜರುಗುವ ಶಿಬಿರದಲ್ಲಿ ಉಚಿತ ಆರೋಗ್ಯ ತಪಾಸಣೆ, ಉಪಚಾರ ಮತ್ತು ಕಡಿಮೆ ಖರ್ಚಿನಲ್ಲಿ ಶಸ್ತ್ರಕ್ರೀಯೆ ಮಾಡಲಾಗುವುದು. ಇದರ ಲಾಭವನ್ನು ಪಡೆದುಕೊಳ್ಳುವಂತೆ ಡಾ. ಸಚಿನ ಸುಗಣ್ಣವರ ಕರೆ ನೀಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ. 9765010834 ಸಂಪರ್ಕಿಸಬಹುದು.

ಸಂಘಗಳು ಸಮಾಜಮುಖಿ ಆಗಿರಲಿ

ಬೈಲಹೊಂಗಲ: ಸಂಘ-ಸಂಸ್ಥೆಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಬೇಕು. ಶಿಕ್ಷಣ ನೀಡಲು ಹಾಗೂ ನಿರ್ಗತಿಕರ ಒಳತಿಗಾಗಿ ಶ್ರಮಿಸುವಂತಿರಬೇಕು ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ಅವರು ತಾಲೂಕಿನ ಮಲ್ಲಮ್ಮನ ಬೆಳವಡಿ ಗ್ರಾಮದ ಮಲ್ಲಮ್ಮ ಶ್ರೇಷ್ಠ ಭವನದಲ್ಲಿ ನಡೆದ ಬೆಳಕು ಗ್ರಾಮಾಭಿವೃದ್ಧಿ ಸಂಘ ಉದ್ಘಾಟಿಸಿ ಮಾತನಾಡಿ, ಸಂಘ ಸಂಸ್ಥೆಗಳು ಸಮಾಜದಲ್ಲಿ ಅಶಕ್ತರು, ಆರ್ಥಿಕ ದುರ್ಬಲರ ಏಳ್ಗೆಗೆ ಸದಾ ಶ್ರಮಿಸಲಿ. ಸಮಾಜದ ಹಿತದೃಷ್ಟಿಯಿಂದ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಬೇಕೆಂದರು. ಏಣಗಿ ಬಂಗಾರಜ್ಜನಮಠದ ವಿರುಪಾಕ್ಷಯ್ಯ ಅಜ್ಜನವರು ಸಾನಿಧ್ಯ ವಹಿಸಿದ್ದರು.

ಬೆಳಕು ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ಡಾ. ದೇವೇಂದ್ರ ಗರಗದ ಅಧ್ಯಕ್ಷತೆ ವಹಿಸಿದ್ದರು. ತಾಲೂಕ ಕಸಾಪ ಅಧ್ಯಕ್ಷ ಎನ್. ಆರ್. ಠಕಾಯಿ, ಕ್ಷೇತ್ರ ಧರ್ಮಸ್ಥಳ ಸಂಘದ ಯೋಜನಾಧಿಕಾರಿ ವಿಜಯಕುಮಾರ, ಗ್ರಾಂ ಪಂ ಅಧ್ಯಕ್ಷ ಚಂದ್ರಶೇಖರ ಕಾರಿಮನಿ, ಪ್ರಾಚಾರ್ಯರಾದ ಮಹಾಂತೇಶ ಉಪ್ಪಿನ ಇದ್ದರು.

ಶಿವಾಜಿ ಆದರ್ಶವನ್ನು ಯುವ ಪೀಳಿಗೆ ಅರಿಯಲಿ

ರಾಮದುರ್ಗ: ದೇಶದ ನೆಲ ಜಲ ಸಂಸ್ಕೃತಿ ಉಳಿಸಲು ಅವಿರತವಾಗಿ ಹೋರಾಟ ನಡೆಸಿದ ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಮಯ ಜೀವನ ಚರಿತ್ರೆ ಮತ್ತು ದೇಶಭಕ್ತಿ ಕುರಿತು ಇಂದಿನ ಯುವ ಪಿಳಿಗೆ ತಿಳಿದುಕೊಳ್ಳಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಟಿ. ಬಳಿಗಾರ ಹೇಳಿದರು. ಪಟ್ಟಣದಲ್ಲಿ ತಾಲೂಕು ಆಡಳಿತ ಹಾಗೂ ಮರಾಠಾ ಸಮುದಾಯದ ಸಂಯುಕ್ತ ಆಶ್ರಯದಲ್ಲಿ ಬುಧವಾರ ಮಿನಿ ವಿಧಾನಸೌಧದಲ್ಲಿ ಜರುಗಿದ ಛತ್ರಪತಿ ಶಿವಾಜಿ ಮಹಾರಾಜರ 395ನೇ ಜಯಂತ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಹಿಂದವಿ ಸ್ವರಾಜ್ಯದ ಸಂಸ್ಥಾಪಕ ಶಿವಾಜಿ ಮಹಾರಾಜ ಅವರು ಚಿಕ್ಕ ವಯಸ್ಸಿನಲ್ಲಿ ಮೊಘಲರ ವಿರುದ್ಧ ಹೋರಾಟ ಮಾಡಿ ಛತ್ರಪತಿ ಎಂಬ ಬಿರುದನ್ನು ಪಡೆದ ಜಗತ್ತಿನ ಏಕೈಕ ಶ್ರೇಷ್ಠ ಮಹಾರಾಜ ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗ್ರೇಡ್ 2 ತಹಶೀಲ್ದಾರ್ ಸಿದ್ಧಾರೂಢ ಬನ್ನಿಕೊಪ್ಪ ಮಾತನಾಡಿದರು. ಇದೇ ಸಂದರ್ಭದಲ್ಲಿ ಮರಾಠ ಸಮಾಜದ ಮುಖಂಡರಾದ ಪ್ರಕಾಶ್ ಬರಗೆ, ಸದಾನಂದ ಮುರಾರಿ, ಸದಾನಂದ ಕರಾಂಡೆ, ಸಂಜೀವ್ ನಲವಡೆ, ಗಂಗಾಧರ ಭೋಸಲೆ, ರಾಜು ಮಾನೆ, ಮಹಾದೇವ್ ಕೊಡಗ ಸೇರಿದಂತೆ ಇತರರಿದ್ದರು. ಸ್ಥಳೀಯ ಮರಾಠ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಹಾಗೂ ಛತ್ರಪತಿ ಶಿವಾಜಿ ವೃತ್ತದಲ್ಲಿ ವಿಜೃಂಭಣೆಯಿಂದ ಶಿವಾಜಿ ಮಹಾರಾಜರ ಜಯಂತ್ಯೋತ್ಸವವನ್ನು ಆಚರಿಸಲಾಯಿತು.

ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಮಹತ್ತರ

ಗೋಕಾಕ: ಸಮಾಜದ ಸುಧಾರಣೆಯಲ್ಲಿ ಶಿಕ್ಷಣವು ಮಹತ್ತರ ಪಾತ್ರ ವಹಿಸುತ್ತದೆ. ನಮ್ಮ ಮೂಡಲಗಿ ವಲಯವು ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸುವ ಮೂಲಕ ಪ್ರತಿ ವರ್ಷವೂ ಉತ್ತಮವಾದ ಫಲಿತಾಂಶವನ್ನು ನೀಡುತ್ತ ಬರುತ್ತಿದ್ದು, ಕೊರತೆಯಿರುವ ಕಡೆಗಳಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುವ ಮೂಲಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದೇನೆ. ಸ್ವಂತ ಹಣದಿಂದ ಅತಿಥಿ ಶಿಕ್ಷಕರಿಗೆ ಪ್ರತಿ ತಿಂಗಳೂ ವೇತನ ನೀಡುತ್ತ ಬರುತ್ತಿರುವುದಾಗಿ ಅರಭಾವಿ ಶಾಸಕ ಮತ್ತು ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ಹೇಳಿದರು.

ಬುಧವಾರದಂದು ಸಂಜೆ ನಗರದ ತಮ್ಮ ಎನ್‌ಎಸ್‌ಎಫ್ ಕಚೇರಿಯಲ್ಲಿ ಮೂಡಲಗಿ ಶೈಕ್ಷಣಿಕ ವಲಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರಿಗೆ ತಮ್ಮ ವೈಯಕ್ತಿಕವಾದ 25.15 ಲಕ್ಷ ರೂಪಾಯಿಗಳನ್ನು ವಿತರಿಸಿ ಮಾತನಾಡಿದ ಅವರು,. 1993 ರಿಂದಲೂ ನಾನು ಈ ಭಾಗದ ಶಾಸಕನಾಗುವ ಮೊದಲೇ ಶಿಕ್ಷಕರಿಗೆ ಗೌರವ ಧನವನ್ನು ನೀಡುವ ಶೈಕ್ಷಣಿಕ ಕಾಳಜಿಯ ಪರಿಪಾಠವನ್ನು ಈಗಲೂ ಮುಂದುವರೆಸಿಕೊಂಡು ಹೋಗುತ್ತಿರುವುದಾಗಿ ಅವರು ತಿಳಿಸಿದರು.

ಚಿಕ್ಕೋಡಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೀತಾರಾಮು ಆರ್.ಎಸ್., ಮೂಡಲಗಿ ವಲಯದ ಬಿಇಓ ಅಜೀತ ಮನ್ನಿಕೇರಿ ಮಾತನಾಡಿದರು.

ವೇದಿಕೆಯಲ್ಲಿ ಗೋಕಾಕ ತಹಶೀಲ್ದಾರ ಡಾ. ಮೋಹನ ಭಸ್ಮೇ, ಮೂಡಲಗಿ ತಹಶೀಲ್ದಾರ ಶಿವಾನಂದ ಬಬಲಿ, ಗೋಕಾಕ ಬಿಇಓ ಜಿ.ಬಿ.ಬಳಗಾರ, ಮೂಡಲಗಿ ಶಿಶು ಅಭಿವೃದ್ಧಿ ಅಧಿಕಾರಿ ಯಲ್ಲಪ್ಪ ಗದಾಡಿ, ಮಧ್ಯಾಹ್ನ ಉಪಹಾರ ಯೋಜನೆಯ ಸಹಾಯಕ ನಿರ್ದೇಶಕ ಎ.ಬಿ.ಮಲಬನ್ನವರ, ಸಮನ್ವಯಾಧಿಕಾರಿ ರೇಣುಕಾ ಆನಿ ಉಪಸ್ಥಿತರಿದ್ದರು.

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಶಿಕ್ಷಕರಿಗೆ ಗೌರವಧನ ವಿತರಣೆ ಮಾಡಿದರು.

ಶಾಸಕರಿಂದ ಗೌರವಧನ ವಿತರಣೆ

ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ತಮ್ಮ ಸ್ವಂತ ನಿಧಿಯಿಂದ ಮೂಡಲಗಿ ವಲಯದ 79 ಅತಿಥಿ ಶಿಕ್ಷಕರಿಗೆ ಮಾಸಿಕ ರು. 7 ಸಾವಿರದಂತೆ 10 ತಿಂಗಳ ವೇತನ 25,15,300 ರೂಪಾಯಿಗಳನ್ನು ವಿತರಿಸಿದರು. ಉಳಿದಂತೆ ರಾಷ್ಟ್ರೀಯ ಗ್ರಾಮೀಣ ಸಾಕ್ಷರತಾ ಮಿಷನ್ ವತಿಯಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳ ಸುಮಾರು 30 ಸಾವಿರ ವಿದ್ಯಾರ್ಥಿಗಳಿಗೆ 1.55 ಕೋಟಿ ರೂಪಾಯಿ ಮೊತ್ತದ ಶಾಲಾ ಬ್ಯಾಗ್, ಸಮವಸ್ತ್ರ ಮತ್ತು ಶ್ವೇಟರ್‌ಗಳನ್ನು ವಿತರಣೆ ಮಾಡಿದರು.

ಗ್ರಾಪಂ ಸದಸ್ಯತ್ವ ಸ್ಥಾನ ಸೇವೆಗೆ ಬಳಸಿಕೊಳ್ಳಿ

ಚನ್ನಮ್ಮನ ಕಿತ್ತೂರು: ಗ್ರಾಮ ಪಂಚಾಯಿತಿ ಸದಸ್ಯತ್ವ ಸ್ಥಾನವನ್ನು ಸಾರ್ವಜನಿಕ ಸೇವೆಗಾಗಿ ಬಳಸಿಕೊಳ್ಳುವುದು ಆದ್ಯತೆಯಾಗಬೇಕು ಎಂದು 5ನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರು ಡಾ. ಸಿ. ನಾರಾಯಣಸ್ವಾಮಿ ಹೇಳಿದರು. ತಾಲೂಕಿನ ಉಗರಖೋಡ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ 5ನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರ ಉಪಸ್ಥಿತಿಯಲ್ಲಿ ನಡೆದ ಪಂಚಾಯತ್ ರಾಜ್ ವಿಷಯಗಳ ಕುರಿತಾದ ಗ್ರಾ.ಪಂ. ಯ ಆರ್ಥಿಕ ಸ್ಥಿತಿಗತಿ ಕುರಿತು ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, 29 ಪ್ರಕಾರ್ಯಗಳನ್ನು ನಿರ್ವಹಿಸಲು ಸಿಕ್ಕ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. 5 ನೇ ರಾಜ್ಯ ಹಣಕಾಸು ಆಯೋಗದ ಸದಸ್ಯರಾದ ಮೊಹಮದ್ ಸನಾವುಲ್ಲಾ, ಆರ್.ಎಸ್. ಪೋಂಡೆ, ಸಮಾಲೋಚಕ ಎಂ.ಕೆ. ಕೆಂಪೇಗೌಡ, ಸಿ.ಜಿ. ಸುಪ್ರಸನ್ನ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಕೆ. ಯಾಲಕ್ಕಿಗೌಡ, ವಿಶೇಷಾಧಿಕಾರಿ ಇ.ಎಂ. ವಹಾಬ್ ಖಾನ್, ಅಧ್ಯಕ್ಷರ ಆಪ್ತ ಸಹಾಯಕ ರವಿ, ಜಿಪಂ. ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ, ತಾ.ಪಂ ಇಒ ಕಿರಣ್ ಘೋರ್ಪಡೆ, ಸಹಾಯಕ ನಿರ್ದೇಶಕ ಸುರೇಶ ನಗೋಜಿ, ಪಿಡಿಓ ಜಗದೀಶ್ ಗೌಡರ , ಅಧ್ಯಕ್ಷ ಶಫೀಕ್ ಹವಾಲ್ದಾರ, ಉಪಾಧ್ಯಕ್ಷ ಶಿಲ್ಪಾ ನಾಡಗೌಡ್ರ, ಸದಸ್ಯರಾದ ಆನಂದ ಚಕಡಿ, ರಮೇಶ ಹುರಕನ್ನವರ, ಸಲೀಮ ಮೊಖಾಶಿ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಶ್ವಾನಗಳ ಪ್ರದರ್ಶನ ಕಾರ್ಯಕ್ರಮ ಫೆ.23ಕ್ಕೆ

ವಿಜಯಪುರ: ಜಿಲ್ಲಾಡಳಿತ, ಜಿ.ಪಂ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಫೆ.23ರ ಬೆಳಿಗ್ಗೆ 9ಕ್ಕೆ ಜಿಲ್ಲಾ ಪೋಲಿಸ್ ಪರೇಡ ಮೈದಾನದಲ್ಲಿ ಶ್ವಾನ ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಲ್ಲ ಶ್ವಾನ ಮಾಲೀಕರು ತಮ್ಮ ಎಲ್ಲ ವಿವಿಧ ತಳಿಗಳ ಶ್ವಾನಗಳ ಹೆಸರನ್ನು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಪಶು ಆಸ್ಪತ್ರೆ, ವಿಜಯಪುರ ಇವರಲ್ಲಿ ಹೆಸರು ನೋದಾಯಿಸುವಂತೆಯೂ ಹೆಚ್ಚಿನ ಮಾಹಿತಿಗಾಗಿ ಡಾ.ಬಿ.ಎಸ್.ಕನಮಡಿ, ಮುಖ್ಯ ಪಶುವೈದ್ಯಾಧಿಕಾರಿಗಳು ಮೊ:6361307916, ಡಾ. ಸುಜಾತ ಎಸ್.ಎಂ, ಮುಖ್ಯ ಪಶುವೈದ್ಯಾಧಿಕಾರಿಗಳ ಮೊ: 9845873701, ಡಾ. ರಮೇಶ ರಾಠೋಡ ಹಿರಿಯ ಪಶುವೈದ್ಯಾಧಿಕಾರಿಗಳು ಪಶು ಚಿಕಿತ್ಸಾಲಯ ತಿಡಗುಂದಿ ವಿಜಯಪುರ ಮೊಬೈಲ್ ಸಂಖ್ಯೆ:9480358435, ಡಾ. ಸತೀಶ ಪಾಟೀಲ್ ಹಿರಿಯ ಪಶುವೈದ್ಯಾಧಿಕಾರಿ ಮೊ.7349442318 ಸಂಪರ್ಕಿಸಲು ಕೋರಲಾಗಿದೆ. ಈ ಶ್ವಾನ ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಉತ್ತಮ ಶ್ವಾನಗಳಿಗೆ ಬಹುಮಾನ ನೀಡಲಾಗುವುದು. ಶ್ವಾನಗಳ ಮಾಲೀಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಉಪನಿರ್ದೇಶಕರು ಹಾಗೂ ಮುಖ್ಯ ಪಶುವೈದ್ಯಾಧಿಕಾರಿಗಳು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರು ಪತ್ರಿಕಾ ಪ್ರಕಟಣೆ ಮೂಲಕ ಕೋರಿರುತ್ತಾರೆ.

ಅಪ್ರೆಂಟೀಸ್ ಕ್ಯಾಂಪಸ್ ಸಂದರ್ಶನ ಫೆ.27ರಂದು

ವಿಜಯಪುರ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಆದರ್ಶ ಐಟಿಐ ಶಿವಣಗಿ ಇವರ ಸಹಯೋಗದಲ್ಲಿ ಶಿವಣಗಿಯ ಆದರ್ಶ ಐಟಿಐ ಕಾಲೇಜಿನ ಆವರಣದಲ್ಲಿ ಹೊಸಪೇಟೆಯ ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಜ್ ಕಂಪನಿ ಇವರ ವತಿಯಿಂದ ಅಪ್ರೆಂಟೀಶಿಪ್ ಗಾಗಿ ಕ್ಯಾಂಪಸ್ ಸಂದರ್ಶನ ಫೆ.27ರ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಐಟಿಐ ಪಾಸಾದ 25 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು 4 ಫೋಟೊ,ಆಧಾರ ಕಾರ್ಡ್, ಸಹಿತ ಸ್ವ-ವಿವರದೊಂದಿಗೆ ಶಾಲಾ ಶೈಕ್ಷಣಿಕ ಅಗತ್ಯ ದಾಖಲೆಗಳೊಂದಿಗೆ ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.8867848581 ಹಾಗೂ 9945000793 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟ್ಟಣದಲ್ಲಿ ಶಿವಾಜಿ ಜಯಂತಿ ಆಚರಣೆ

ಬಸವನಬಾಗೇವಾಡಿ: ಪಟ್ಟಣದಲ್ಲಿ ಮರಾಠಾ ಸಮಾಜದ ವತಿಯಿಂದ ಬುಧವಾರ ಛತ್ರಪತಿ ಶಿವಾಜಿ ಜಯಂತಿ ಆಚರಿಸಲಾಯಿತು. ಬೆಳಗ್ಗೆ ವಿಠ್ಠಲ ಮಂದಿರದಲ್ಲಿ ಮಹಿಳೆಯರು ಶಿವಾಜಿ ಮಹಾರಾಜರ ತೊಟ್ಟಿಲೋತ್ಸವ ಕಾರ್ಯಕ್ರಮ ನೆರವೇರಿಸಿದರು. ಶಿವಾಜಿ ಮಹಾರಾಜರ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮುರ್ತಿಯ ಮೆರವಣಿಗೆಗೆ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಚಿಕ್ಕೊಂಡ ಮುಖಂಡ ಸಂಗಮೇಶ ಓಲೇಕಾರ ಚಾಲನೆ ನೀಡಿದರು. ನಂತರ ಮೂರ್ತಿಯ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಅಮರ ಗಾಯಕವಾಡ, ಅನಿಲ ಪವಾರ, ಜೋತಿಬಾ ಪವಾರ, ತಾನಾಜಿ ಸೂರ್ಯವಂಶಿ, ಪ್ರದೀಪ ಸಾಳುಂಕೆ, ರವಿ ಖಾಡೆ, ಬಸವರಾಜ ಬಿಜಾಪುರ, ಶಿವಾಜಿ ಜಗತಾಪ, ಬಾಬು ನಿಕಂ, ವೆಂಕಟೇಶ ಕರಾಡೆ, ಮಾರುತಿ ಗಾಯಕವಾಡ, ಸುಜಾತಾ ಬಂಡಾರಿ, ಸುನಂದಾ ಗಾಯಕವಾಡ, ಪ್ರೀಯಾ ರಜಪುತ, ನಾಣಿಬಾಯಿ ನಿಕಂ, ತೇಜಸ್ವಿನಿ ಗಾಯಕವಾಡ, ಪೂಜಾ ಗಾಯಕವಾಡ, ರೂಪಾ ಜಾದವ ಇದ್ದರು.

ಕವಿ ಸರ್ವಜ್ಞನಂತೆ ಲೋಕಜ್ಞಾನ ಅರಿಯಿರಿ

ಮುದ್ದೇಬಿಹಾಳ: ಕೃಷಿಕ ಸಮಾಜದಷ್ಟೇ ಕುಂಬಾರಿಕೆ ಬಹಳ ಪವಿತ್ರವಾದ ಕೆಲಸ, ಸಮಾಜದ ಜನ ಸರ್ವಜ್ಞನಂತೆ ಲೋಕಜ್ಞಾನ ತಿಳಿಯಬೇಕು. ಆಧುನಿಕತೆಗಿಂತ ಭಕ್ತಿ, ಜ್ಞಾನ ಮಾಡಿದ ಸರ್ವಜ್ಞನ ವಚನಗಳನ್ನು ಕಲಿತು, ಶಿಕ್ಷಣವಂತರಾಗಿ ಬಾಳಬೇಕು ಎಂದು ತಾಲೂಕು ದಂಡಾಧಿಕಾರಿ ಬಲರಾಮ್ ಕಟ್ಟಿಮನಿ ಹೇಳಿದರು. ಸ್ಥಳೀಯ ಆಡಳಿತ ಸೌಧ ಕಚೇರಿಯಲ್ಲಿ ನಡೆದ ಸರ್ವಜ್ಞನ 505ನೇ ಜಯಂತಿ ಕಾರ್ಯಕ್ರಮದಲ್ಲಿ ಸರ್ವಜ್ಞನ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಮಾತನಾಡಿದ ಅವರು, ಸರ್ವಜ್ಞನಂತೆ ಯಾವುದೇ ಜಾತಿ, ಕೀಳರಿಮೆಗೆ ಒಳಗಾಗದೆ ಬದುಕಬೇಕು ಎಂದು ಮಾತನಾಡಿದರು. ತಾಳಿಕೋಟೆ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ ಲಿಂಗಪ್ಪ ಸರ್ವಜ್ಞನ ಕುರಿತು ಉಪನ್ಯಾಸದಲ್ಲಿ ಮಾತನಾಡಿದರು. ಸಭೆಯಲ್ಲಿ ತಾಲೂಕ ಅಧಿಕಾರಿಗಳು, ಮುಖಂಡರು ಹಾಗೂ ಕುಂಬಾರ ಸಮಾಜದ ಬಸಣ್ಣ ಕುಂಬಾರ ನಂದಪ್ಪ ಕುಂಬಾರ ಸುರೇಶ್ ಸುಗಂಧಿ ಉಪಸ್ಥಿತರಿದ್ದರು.

{ಬಸವರಾಜ ಬೊಮ್ಮಾಯಿ } ಸಂಸದ

ಬಜೆಟ್ ಮಂಡನೆಗೂ ಮುಂಚೆ ಸಿಎಂ ಸಿದ್ದರಾಮಯ್ಯ ಅವರು ಕಳೆದ ವರ್ಷದ ಬಜೆಟ್ನಲ್ಲಿ ಮೀಸಲಿಟ್ಟ ಹಣವೆಷ್ಟು, ಖರ್ಚಾಗಿರುವ ಹಣವೆಷ್ಟು ಎನ್ನುವುದನ್ನು ಶ್ವೇತಪತ್ರ ಹೊರಡಿಸಬೇಕು. ರಾಜ್ಯ ಸರಕಾರ ಎಲ್ಲಿ ವಿಫಲವಾಗಿದೆ ಎನ್ನುವುದನ್ನು ಬ್ಲ್ಯಾಕ್ ಪೇಪರ್ ಬಿಡುಗಡೆ ಮಾಡಲು ರಾಜ್ಯ ಬಿಜೆಪಿ ಘಟಕ ಸಿದ್ಧರಾಗಬೇಕು.



ಶರಣ ನಾಡಲ್ಲೊಂದು ಪ್ರಪ್ರಥಮ ವೈದ್ಯ ಸಂಗಮ | ಡಾ.ಸಿ.ಎಂ.ತಾಳಿಕೋಟಿ

ಸರಕಾರಿ ವೈದ್ಯಾಧಿಕಾರಿಗಳ ಸಮ್ಮೇಳನ ಫೆ.22ರಿಂದ

ವಿಜಯಪುರ: ಕರ್ನಾಟಕ ರಾಜ್ಯ ಸರಕಾರಿ ವೈದ್ಯಾಧಿಕಾರಿಗಳ 31ನೇ ರಾಜ್ಯಮಟ್ಟದ ಸಮ್ಮೇಳನವನ್ನು ಈ ಬಾರಿ ಶರಣ ನಾಡು ವಿಜಯಪುರ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಫೆಬ್ರುವರಿ 22 ಮತ್ತು 23 ಎರಡು ದಿನಗಳ ಕಾಲ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಬೆಳಗ್ಗೆ 11.30 ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಸರಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಎಂ. ತಾಳಿಕೋಟಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ 30 ವರ್ಷಗಳ ಇತಿಹಾಸದಲ್ಲಿ ಇದೇ ಪ್ರಪ್ರಥಮ ಬಾರಿಗೆ ವಿಜಯಪುರದಲ್ಲಿ ಸರಕಾರಿ ವೈದ್ಯಾಧಿಕಾರಿಗಳ ರಾಜ್ಯಮಟ್ಟದ ಸಮ್ಮೇಳನ ಹಮ್ಮಿಕೊಳ್ಳಲು ಕೇಂದ್ರ ಸಮಿತಿ ಸಮ್ಮತಿಸಿದೆ. ರಾಜ್ಯದ ಯಾವುದೇ ವೈದ್ಯಾಧಿಕಾರಿಗೆ ತೊಂದರೆಯಾದರೆ ಅವರ ಬೆನ್ನಿಗೆ ನಿಂತು ಸಹಕಾರ ನೀಡಿ ಸಮಸ್ಯೆ ಬಗೆಹರಿಸುವ ಹಾಗೂ ವೈದ್ಯಾಧಿಕಾರಿಗಳ ಹಿತಪರ ಸಂಘಟನಾತ್ಮಕವಾಗಿ ಧ್ವನಿಯಾಗಲು ಸಂಘ ರಚಿಸಿಕೊಂಡಿದ್ದೇವೆ ಎಂದರು.

ಪ್ರತಿ ಎರಡು ವರ್ಷಗಳಿಗೊಮ್ಮೆ ಒಂದೊಂದು ಜಿಲ್ಲೆ ಆಯ್ಕೆ ಮಾಡಿ ಸರ್ಕಾರಿ ವೈದ್ಯಾಧಿಕಾರಿಗಳ ರಾಜ್ಯ ಸಮ್ಮೇಳನ ನಡೆಸಲಾಗುವುದು. ಕಳೆದ 2022 ರ ರಾಜ್ಯ ಸಮ್ಮೇಳನ ತುಮಕೂರಿನಲ್ಲಿ ಹಾಗೂ 2018 ರ ಸಮ್ಮೇಳನ ದಾವಣಗೆರೆಯಲ್ಲಿ ಆಗಿತ್ತು. ಕೋವಿಡ್ ಹಿನ್ನೆಲೆ ನಾಲ್ಕು ವರ್ಷ ಸಮ್ಮೇಳನ ಮಾಡಿರಲಿಲ್ಲ. ಈ ಬಾರಿ ವಿಜಯಪುರದಲ್ಲಿ ಹಮ್ಮಿಕೊಂಡಿರುವ ವೈದ್ಯಾಧಿಕಾರಿಗಳ ರಾಜ್ಯ ಸಮ್ಮೇಳನಕ್ಕೆ ಆರೋಗ್ಯ ಸಚಿವ ದಿನೇಶ ಗುಂಡುರಾವ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ, ಜವಳಿ, ಸಕ್ಕರೆ ಹಾಗೂ ಎಪಿಎಂಸಿ ಸಚಿವ ಶಿವಾನಂದ ಪಾಟೀಲ, ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೇರಿದಂತೆ ಸಂಸದರು, ಎಲ್ಲಾ ಶಾಸಕರು, ಆರೋಗ್ಯ ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ ಎಂದರು.

ಫೆ. 22 ಶನಿವಾರ ಬೆಳಿಗ್ಗೆ ಸಮ್ಮೇಳನ ಉದ್ಘಾಟನೆ ನಡೆಯಲಿದೆ. ನಂತರ ಇತ್ತೀಚಿನ ವೈದ್ಯಕೀಯ ಬೆಳವಣಿಗೆಗಳು, ವಿಚಾರಗಳ ಬಗ್ಗೆ ತಜ್ಞ ವೈದ್ಯರುಗಳಿಂದ ಎರಡೂ ದಿನ ಒಟ್ಟು 12 ವೈದ್ಯಕೀಯ ಶಿಕ್ಷಣ ಕಾರ್ಯಾಗಾರಗಳು ಜರುಗಲಿವೆ. ಫೆ.23 ರಂದು ರಂಗಮಂದಿರ ಎದುರಿನ ದರ್ಬಾರ್ ಹೈಸ್ಕೂಲ್ ಮೈದಾನದಲ್ಲಿ ನಮ್ಮ ಸರಕಾರಿ ವೈದ್ಯಾಧಿಕಾರಿಗಳ ಸಂಘದ 2027 ನೇ ಸಾಲಿನ ಎರಡು ವರ್ಷಗಳ ಅವಧಿಗೆ ಚುನಾವಣೆ ನಡೆಯಲಿದೆ. 2022 ರ ತುಮಕೂರ ಚುನಾವಣೆಯಲ್ಲಿ ನೇಮಕವಾದ ಡಾ.ರವಿಂದ್ರನಾಥ್ ಮೇಟಿಯವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಡಾ. ತಾಳಿಕೋಟಿ ತಿಳಿಸಿದರು.

ಕಾರ್ಯಾಗಾರಗಳಲ್ಲಿ ನಮ್ಮ ವೈದ್ಯಾಧಿಕಾರಿಗಳ ಸಮಸ್ಯೆಗಳಿಗೆ ಪರಿಹಾರಾತ್ಮಕ ಚಿಂತನೆಗಳ ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಅಧುನಿಕ ತಂತ್ರಜ್ಞಾನಾಧಾರಿತ ಅತ್ಯುತ್ತಮ ಆರೋಗ್ಯ ಸೇವೆ ಒದಗಿಸುವ ಹಾಗೂ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿ ಅನುಷ್ಠಾನಗೊಳಿಸುವ ಬಗ್ಗೆಯೂ ಚಿಂತನೆಗಳು ನಡೆಯುತ್ತವೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ ತಿಳಿಸಿದರು.

ಈ ವೇಳೆ ವೈದ್ಯಾಧಿಕಾರಿಗಳ ಸಮ್ಮೇಳನ ಸಮಿತಿಯ ಛೇರ್ಮನ್, ಡಿಎಚ್ಒ ಡಾ.ಸಂಪತ್ ಗುಣಾರಿ, ಸಹ ಛೇರ್ಮನ್ ಡಾ.ಶಿವಾನಂದ ಮಾಸ್ತಿಹೊಳಿ, ಖಜಾಂಜಿ ಡಾ. ಸಂತೋಷ ಶೆಟ್ಟಿ, ಮಾಜಿ ಜಿಲ್ಲಾಧ್ಯಕ್ಷ ಡಾ.ಕೇಸರಸಿಂಗ್ ಗುಂಡಬಾವಡಿ, ಡಿಟಿಒ ಡಾ.ಮಲ್ಲನಗೌಡ ಬಿರಾದಾರ, ಸಂಘಟನಾ ಕಾರ್ಯದರ್ಶಿ ಡಾ.ಕೃಷ್ಣಕುಮಾರ ಜಾಧವ, ಪದಾಧಿಕಾರಿ ಡಾ.ಅನಿಲ ರಾಠೋಡ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಸರಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಎಂ.ತಾಳಿಕೋಟಿ ಅವರು ಆಮಂತ್ರಣ ಪತ್ರಗಳನ್ನು ಬಿಡುಗಡೆಗೊಳಿಸಿದರು.

ಪ್ರಥಮ ಬಾರಿಗೆ ವಿಜಯಪುರದಲ್ಲಿ ಹಮ್ಮಿಕೊಂಡಿರುವ ಸರಕಾರಿ ವೈದ್ಯಾಧಿಕಾರಿಗಳ ರಾಜ್ಯ ಸಮ್ಮೇಳನಕ್ಕೆ ರಾಜ್ಯಾದ್ಯಂತ ಕನಿಷ್ಠ ಮೂರು ಸಾವಿರ ವೈದ್ಯಾಧಿಕಾರಿಗಳು ಕುಟುಂಬ ಸಮೇತರಾಗಿ ಈ ಸಮ್ಮೇಳನಕ್ಕೆ ಆಗಮಿಸಲಿದ್ದಾರೆ. ಸಮ್ಮೇಳನದಲ್ಲಿ ವಿವಿಧ ವಿಭಾಗಗಳಲ್ಲಿ ಸಾಧಕ ವೈದ್ಯರುಗಳಿಗೆ ಒಂದು ವೈದ್ಯರತ್ನ, 2 ವೈದ್ಯವಿಭೂಷಣ ಹಾಗೂ ಪ್ರತಿ ಜಿಲ್ಲೆಗೊಂದರಂತೆ ವೈದ್ಯಶ್ರೀ ಪ್ರಶಸ್ತಿಗಳನ್ನು ನೀಡಲಾಗುವುದು. ಜೊತೆಗೆ ಉತ್ತಮ ಅಧ್ಯಕ್ಷ, ಉತ್ತಮ ಕಾರ್ಯದರ್ಶಿ ಹಾಗೂ ಉತ್ತಮ ಶಾಖೆ ಪ್ರಶಸ್ತಿಗಳನ್ನು ಸಹ ನೀಡಿ ಪ್ರೋತ್ಸಾಹಿಸಲಾಗುವುದು. ಈ ಎಲ್ಲಾ ಪ್ರಶಸ್ತಿಗಳಿಗಾಗಿ ಕೇಂದ್ರ ಸಮಿತಿಯ ಸಾಧಕ ವೈದ್ಯರನ್ನು ಗುರುತಿಸಿ ಪ್ರಶಸ್ತಿಗೆ ನೇಮಕ ಮಾಡುತ್ತದೆ.

-ಡಾ.ಸಂಪತ್ ಗುಣಾರಿ, ಡಿಎಚ್ಒ

ಆರೋಗ್ಯಕ್ಕೆ ಯೋಗ, ಪ್ರಾಣಾಯಾಮ ಅಗತ್ಯ

ಬಸವನಬಾಗೇವಾಡಿ: ಪ್ರತಿಯೊಬ್ಬರೂ ಸಮಾಜಕ್ಕಾಗಿ ಒಳ್ಳೆಯ ಕೆಲಸ ಮಾಡುವುದನ್ನು ರೂಢಿಸಿಕೊಳ್ಳಬೇಕು. ಕೆಟ್ಟದರ ಬಗ್ಗೆ ಚಿಂತೆ ಮಾಡಬಾರದು ಎಂದು ಯೋಗ ಗುರು ನಿರಂಜನ ಸ್ವಾಮೀಜಿ ಹೇಳಿದರು.

ಪಟ್ಟಣದ ವೀರಭದ್ರೇಶ್ವರ ನಗರದ ಉದ್ಯಾನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಆಧ್ಯಾತ್ಮಿಕ ಪ್ರವಚನ ಹಾಗೂ ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಸಂತರು, ಮಹಾತ್ಮರು ದೇಶ, ಸಮಾಜಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ನಾವು ಸಂಕಲ್ಪ ಮಾಡಿದಂತೆ ಮನಸ್ಸು ಕೆಲಸ ಮಾಡುತ್ತದೆ. ಮಾಡುವ ಕೆಲಸದ ಬಗ್ಗೆ ಶ್ರದ್ಧೆ ಇರಬೇಕು. ಯೋಗ, ಪ್ರಾಣಾಯಾಮ, ಪುಸ್ತಕ ಓದುವುದನ್ನು ರೂಢಿಸಿಕೊಳ್ಳಬೇಕು. ಸತ್ಸಂಗದಲ್ಲಿ ಪಾಲ್ಗೊಳ್ಳಬೇಕು. ಎಲ್ಲರಿಗೂ ಒಳ್ಳೆಯದನ್ನು ಬಯಸುವ ಭಾವ ಬರಬೇಕು. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಎಂದು ಹೇಳಿದರು.

ಶಿಕ್ಷಕಿ ಸುಮಂಗಲಾ ಕಡಿವಾಲ ಮಾತನಾಡಿ, ಈ ಉದ್ಯಾನದಲ್ಲಿ 11 ದಿನಗಳವರೆಗೆ ನಡೆದ ಯೋಗಾಸನ, ಭಜನೆ, ಪ್ರವಚನದಿಂದ ಆರೋಗ್ಯದ ಮಹತ್ವ, ಜೀವನದ ಮೌಲ್ಯ ಸೇರಿದಂತೆ ವಿವಿಧ ವಿಚಾರಗಳನ್ನು ತಿಳಿದುಕೊಂಡಿದ್ದೇವೆ. ಪ್ರತಿದಿನ ಬೆಳಿಗ್ಗೆ ಉದ್ಯಾನದಲ್ಲಿ ಯೋಗಾಭ್ಯಾಸ ಮುಂದುವರೆಯಲಿದೆ ಎಂದು ಹೇಳಿದರು.

ನಿವೃತ್ತ ಉಪನ್ಯಾಸಕ ಎಲ್.ಎನ್.ಇಟಗಿ, ಬಿ.ಎಸ್.ಅವಟಿ, ಶಿವರುದ್ರಯ್ಯ ಹಿರೇಮಠ, ಪ್ರಭಾಕರ ಖೇಡದ ಇತರರು ಮಾತನಾಡಿದರು. ರವಿಗೌಡ ಚಿಕ್ಕೊಂಡ, ವಿನೂತ ಕಲ್ಲೂರ, ಶಿವಾನಂದ ತೊಳನೂರ, ಎಸ್.ಎಸ್.ಝಳಕಿ, ಎಚ್.ಎಸ್.ಬಿರಾದಾರ, ವೀರೇಶ ಕುಂಟೋಜಿ, ವಿವೇಕಾನಂದ ಕಲ್ಯಾಣಶೆಟ್ಟಿ, ವಿ.ಬಿ.ಮರ್ತುರ, ಕಾಶೀನಾಥ ಅವಟಿ, ಎಚ್.ಬಿ.ಬಾರಿಕಾಯಿ, ಎಸ್.ಬಿ.ನಡಕಟ್ಟಿ, ಸಿದ್ದನಗೌಡ ಚಿಕ್ಕೊಂಡ, ಕೊಟ್ರೇಶ ಹೇಗಡ್ಯಾಳ, ಶರಣು ಬಸ್ತಾಳ ಇದ್ದರು. ಕಾರ್ಯಕ್ರಮದಲ್ಲಿ ನಿರಂಜನ ಶ್ರೀಗಳಿಗೆ ಬಸವೇಶ್ವರ ಭಾವಚಿತ್ರ ನೀಡಿ ಗೌರವಿಸಲಾಯಿತು.

ಬಸವನಬಾಗೇವಾಡಿಯ ವೀರಭದ್ರೇಶ್ವರ ನಗರದ ಉದ್ಯಾನ ದಲ್ಲಿ ಹಮ್ಮಿಕೊಂಡಿದ್ದ ಆಧ್ಯಾತ್ಮ ಪ್ರವಚನ, ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳು ನಿರಂಜನ ಶ್ರೀಗಳಿಗೆ ಬಸವೇಶ್ವರರ ಭಾವಚಿತ್ರ ನೀಡಿ ಗೌರವಿಸಿದರು.

ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಯೋಗ ಗುರು ನಿರಂಜನ ಸ್ವಾಮೀಜಿ ಅವರಿಗೆ ಬಸವಣ್ಣನವರ ಭಾವಚಿತ್ರವನ್ನು ನೀಡಿ ಗೌರವಿಸಿದರು.

ತೆಲಂಗಾಣಕ್ಕೆ 5 ಟಿಎಂಸಿ ನೀರು ಹರಿಸದಿರಲು ರೈತ ಸಂಘ ಪ್ರತಿಭಟನೆ



ತೆಲಂಗಾಣಕ್ಕೆ ನೀರು ಹರಿಸದಂತೆ ಮುಖ್ಯ ಎಂಜಿನಿಯರ್ ಡಿ. ಬಸವರಾಜ ಅವರಿಗೆ ರೈತರು ಮನವಿ ಸಲ್ಲಿಸಿದರು.

ಆಲಮಟ್ಟಿ: ತೆಲಂಗಾಣ ರಾಜ್ಯಕ್ಕೆ 5 ಟಿಎಂಸಿ ಅಡಿ ನೀರನ್ನು ಯಾವುದೇ ಕಾರಣಕ್ಕೂ ಹರಿಸಬಾರದು ಎಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದ ಕಾರ್ಯಕರ್ತರು ಗುರುವಾರ ಆಲಮಟ್ಟಿಯಲ್ಲಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಖಂಡ ಕರ್ನಾಟಕ ರೈತ ಸಂಘದ ವಿಜಯಪುರ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ತೆಲಂಗಾಣ ಸರಕಾರ 5 ಟಿಎಂಸಿ ಅಡಿ ನೀರನ್ನು ಹರಿಸಿ ಎಂದು ರಾಜ್ಯ ಸರಕಾರಕ್ಕೆ ಪತ್ರಬರೆದಿದೆ. ಎರಡೂ ರಾಜ್ಯಗಳಲ್ಲಿ ಒಂದೇ ಪಕ್ಷದ ಅಧಿಕಾರ ಇದೆ. ರಾಜಕೀಯ ಹಿತದೃಷ್ಟಿಯಿಂದ ರಾಜ್ಯದ ರೈತರ ಹಿತಾಸಕ್ತಿ ಕಡೆಗಣಿಸಿ ನೀರು ಹರಿಸಿದರೇ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಆಲಮಟ್ಟಿ, ನಾರಾಯಣಪುರ ಎರಡೂ ಜಲಾಶಯಗಳಲ್ಲಿ ಕುಡಿಯುವ ನೀರು, ಜಲಚರ, ನೀರು ಆವಿ ಆಗುವಿಕೆ, ಕೈಗಾರಿಕೆ, ವಿದ್ಯುತ್ ಸ್ಥಾವರಗಳು ಮತ್ತೀತರ ಬಳಕೆಗೆ ಕನಿಷ್ಠ 35 ಟಿಎಂಸಿ ಅಡಿ ನೀರು ಕಾಯ್ದಿರಿಸಬೇಕಾಗುತ್ತದೆ. ಬೇಸಿಗೆಯಲ್ಲಿ ಜಿಲ್ಲೆಯ ಎಲ್ಲಾ ಕೆರೆಗಳನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಬೇಕಾಗುತ್ತದೆ. ಆದರೆ ಸದ್ಯ ಸಂಗ್ರಹವಿರುವ ನೀರಿನಲ್ಲಿ ಹಿಂಗಾರು ಹಂಗಾಮಿಗೆ ನೀರು ಪೂರೈಸಿ ಅಷ್ಟು ಪ್ರಮಾಣದಲ್ಲಿ ನೀರು ಉಳಿಯುವುದೇ ಅನುಮಾನ. ಹೀಗಾಗಿ ಯಾವುದೇ ಕಾರಣಕ್ಕೂ ತೆಲಂಗಾಣಕ್ಕೆ ನೀರು ಹರಿಸಬಾರದು ಎಂದು ಅವರು ಆಗ್ರಹಿಸಿದರು.

ಒಂದು ವೇಳೆ ನೀರು ಹರಿಸಿದರೇ ಜಿಲ್ಲೆಯ ಜನ, ಜಾನುವಾರುಗಳು ಬೇಸಿಗೆಯಲ್ಲಿ ಕುಡಿಯುವ ನೀರಿಲ್ಲದೇ ಪರದಾಡಬೇಕಾಗುತ್ತದೆ ಎಂದರು. ಬೇಸಿಗೆ ಬಂತೆಂದರೇ ತೆಲಂಗಾಣ ಹಾಗೂ ಆಂಧ್ರ ರಾಜ್ಯಗಳಿಗೆ ಆಲಮಟ್ಟಿ ಅಣೆಕಟ್ಟಿನ ನೀರಿನ ನೆನಪಾಗುತ್ತದೆ. ಆದರೆ ಆಲಮಟ್ಟಿ ಜಲಾಶಯ ಎತ್ತರಕ್ಕೆ ಎರಡೂ ರಾಜ್ಯಗಳು ವಿರೋಧ ವ್ಯಕ್ತಪಡಿಸುತ್ತವೆ. ಮೊದಲು ಸುಪ್ರಿಂಕೋರ್ಟ್ ನಲ್ಲಿ ಆಲಮಟ್ಟಿ ಜಲಾಶಯ ಎತ್ತರವಾಗದಂತೆ ಹಾಕಿರುವ ವಿವಿಧ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆದು ಜಲಾಶಯದ ಎತ್ತರಕ್ಕೆ ಸಮ್ಮತಿ ನೀಡಲಿ ಎಂದು ಅವರು ಆಗ್ರಹಿಸಿದರು.

ಒಂದು ವೇಳೆ ಯಾರಿಗೂ ಗೊತ್ತಾಗದಂತೆ ನೀರು ಹರಿಸದರೇ ಮುಖ್ಯ ಎಂಜಿನಿಯರ್ ಕಚೇರಿ ಎದುರು ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು, ಆಲಮಟ್ಟಿ ಜಲಾಶಯದ ಹೊರಹರಿವಿನ ಮೇಲೆ ನಿರಂತರ ನಿಗಾ ಇಡಲಾಗುವುದು ಎಂದರು. ಸಂಘದ ಬಸವನಬಾಗೇವಾಡಿ ತಾಲ್ಲೂಕು ಘಟಕದ ಅಧ್ಯಕ್ಷ ಉಮೇಶ ವಾಲಿಕಾರ, ಹೊನಕೇರೆಪ್ಪ ತೆಲಗಿ, ಪ್ರಹ್ಲಾದ ನಾಗರಾಳ, ವಿಠ್ಠಲ ಬಿರಾದಾರ, ಲಾಲಸಾಬ್ ಹಳ್ಳೂರ, ಶೆಟ್ಟೆಪ್ಪ ಲಮಾಣಿ, ಹಣಮಂತ ಕಲಬುರ್ಕಿ, ರಾಮನಗೌಡ ಹಾದಿಮನಿ, ಯಮನಪ್ಪ ಸರೂತ , ಸಾಹೇಬಗೌಡ ಹೊಸೂರ ಇದ್ದರು. ಮುಖ್ಯ ಎಂಜಿನಿಯರ್ ಡಿ. ಬಸವರಾಜ ಮನವಿ ಸ್ವೀಕರಿಸಿದರು.

ಒಂದು ವೇಳೆ ಯಾರಿಗೂ ಗೊತ್ತಾಗದಂತೆ ನೀರು ಹರಿಸದರೇ ಮುಖ್ಯ ಎಂಜಿನಿಯರ್ ಕಚೇರಿ ಎದುರು ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು, ಆಲಮಟ್ಟಿ ಜಲಾಶಯದ ಹೊರಹರಿವಿನ ಮೇಲೆ ನಿರಂತರ ನಿಗಾ ಇಡಲಾಗುವುದು.

ಅರವಿಂದ ಕುಲಕರ್ಣಿ, ರೈತ ಸಂಘದ ಪ್ರಧಾನ ಕಾರ್ಯದರ್ಶಿ

ಅಕ್ರಮ ಬಡ್ಡಿ ದಂಧೆ: ಪೊಲೀಸರ ದಾಳಿ, ದಾಖಲೆಗಳ ವಶ

ವಿಜಯಪುರ: ಜಿಲ್ಲೆಯಾದ್ಯಂತ ಕಿರುಸಾಲ, ಬಡ್ಡಿ ವ್ಯವಹಾರ ನಡೆಸುವ 104 ಜನರ ಮನೆ,ಕಚೇರಿ ಹಾಗೂ ಸಂಸ್ಥೆಗಳ ಮೇಲೆ ವಿಜಯಪುರ ಪೊಲೀಸರು ದಾಳಿ ಮಾಡಿ ಚಳಿ ಬಿಡಿಸಿದ್ದಾರೆ. ಶೋಧನೆ ವೇಳೆ 37 ಜನರ ಬಳಿ ಖಾಲಿ ಬಾಂಡ್, ಚೆಕ್, ಪಾಸ್ ಬುಕ್ ಹೀಗೆ ಅನೇಕ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವಿಜಯಪುರ ಎಸ್ಪಿ ಲಕ್ಷ್ಮಣ ನಿಂಬರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಗಾಗಲೇ ಜಾರಿಯಲ್ಲಿರುವ ಕಾನೂನುಗಳ ಅಡಿ ಮತ್ತು ಮೈಕ್ರೋ ಫೈನಾನ್ಸ್ ಗಳಿಗೆ ಸಂಬಂಧಿಸಿದಂತೆ, ಇತ್ತೀಚೆಗೆ ಜಾರಿಗೆ ಬಂದಿರುವ ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಅಧ್ಯಾದೇಶ, 2025 ರ ಅಧಿಸೂಚನೆಯ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಿರುಸಾಲ, ಬಡ್ಡಿ ವ್ಯವಹಾರ (ಲೇವಾದೇವಿ) ನಡೆಸುತ್ತಿದ್ದ ವ್ಯಕ್ತಿಗಳ ಮನೆ,ಕಚೇರಿ ಹಾಗೂ ಸಂಸ್ಥೆಗಳ ಮೇಲೆ ಪೊಲೀಸ್ ದಾಳಿಯಾಗಿದೆ. ಬಡ್ಡಿ ವ್ಯವಹಾರದಲ್ಲಿ ಬಲವಂತದಿಂದ, ನಿಯಮ ಬಾಹಿರವಾಗಿ ವ್ಯವಹಾರ ನಡೆಸುತ್ತಿರುವ ಬಗ್ಗೆ ಪರಿಶೀಲಿಸಲು ಡಿಸಿ ಅವರಿಂದ ಅನುಮತಿ ಪಡೆದು ವಿಜಯಪುರ ಜಿಲ್ಲೆಯ 25 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಒಟ್ಟು 104 ಜನರ ಮೇಲೆ ಬಂದಂತಹ ಮಾಹಿತಿ ಆಧರಿಸಿ, ದಾಳಿ ನಡೆಸಲಾಗಿದೆ. ಈ ಪೈಕಿ 37 ಜನರ ಹತ್ತಿರ ಅನಧೀಕೃತ ಲೇವಾದೇವಿಗೆ ಸಂಬಂಧಿಸಿದ ನಗದು ಹಣ, ಖಾಲಿ ಬಾಂಡ್, ಚೆಕ್, ಕೈಗಡ ಪತ್ರ, ಪಹಣಿ ಪತ್ರಗಳು, ಬ್ಯಾಂಕ್ ಪಾಸ್‌ಬುಕ್‌ಗಳು ಸೇರಿದಂತೆ ಇತರೆ ದಾಖಲಾತಿಗಳು ದೊರೆತಿರುತ್ತಿವೆ. ದಾಳಿ ವೇಳೆ ಖಾಲಿ ಬಾಂಡ್‌ಗಳು, ಖಾಲಿ ಚೆಕ್, ಪಾಸ್ ಬುಕ್, ಕರಾರು ಪತ್ರ, ಪಹಣಿ ಉತಾರೆ, ಹಕ್ಕು ಪತ್ರ ಸೇರಿ ರು. 62.29 ಲಕ್ಷ ನಗದು, 55 ಗ್ರಾಂ ಬಂಗಾರದ ಆಭರಣಗಳು ಹಾಗೂ 154 ಇತರೆ ವಸ್ತುಗಳು ದೊರೆತಿವೆ. ಇದರಲ್ಲಿ ಒಟ್ಟು ರು. 62.29 ಲಕ್ಷ ನಗದು ಹಣ, 55 ಗ್ರಾಂ. ಬಂಗಾರದ ಆಭರಣಗಳು, 489 ಖಾಲಿ ಬಾಂಡ್, 285 ಖಾಲಿ ಚೆಕ್, 95 ಪಾಸ್‌ಬುಕ್, 26 ಕರಾರು ಪತ್ರಗಳು ಹಾಗೂ 245 ಇತರೆ ದಾಖಲಾತಿಗಳು ಸೇರಿದಂತೆ ಸೂಕ್ತ ದಾಖಲೆಗಳಿಲ್ಲದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದ್ದು, ವಶಪಡಿಸಿಕೊಂಡ ದಾಖಲಾತಿಗಳ ಮುಂದಿನ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ವರದಿ ಸಲ್ಲಿಸಲಾಗುವುದು ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಬಡ್ಡಿ ದಂಧೆಕೋರರ ಮನೆ, ಕಚೇರಿಗಳ ಮೇಲೆ ಪೊಲೀಸರು ದಾಳಿ ನಡೆಸಿ ಅನಧಿಕೃತವಾಗಿ ಶೇಖರಿಸಿ ಇಟ್ಟಿದ್ದ ದಾಖಲೆಗಳನ್ನು ವಶಪಡಿಸಿಕೊಂಡರು.

ಸಚಿವ ಜಮೀರ್ ವರ್ತನೆ ವಿರುದ್ಧ ಅಸಮಾಧಾನ

ವಿಜಯಪುರ: ವಕ್ಫ್ ಮಂಡಳಿ ಅಧ್ಯಕ್ಷ ಸ್ಥಾನ ಆಯ್ಕೆಗೆ ಸಂಬಂಧಿಸಿದಂತೆ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಮನಸ್ಸಿಗೆ ಬಂದಂತೆ ವರ್ತಿಸುತ್ತಿರುವುದು ಸರಿಯಲ್ಲ ಎಂದು ಅಲ್ಪಸಂಖ್ಯಾತ ಸಮುದಾಯದ ಅನೇಕ ಮುಖಂಡರು ಅಸಮಾಧಾನ ಹೊರಹಾಕಿದ್ದಾರೆ.

ಅಲ್ಪಸಂಖ್ಯಾತ ಮುಖಂಡರಾದ ಎಲ್.ಎಲ್. ಉಸ್ತಾದ, ಬಿ.ಎಚ್. ಮಹಾಬರಿ, ಜೈನುಲ್ಲಾಬುದ್ದೀನ್ ಹಾಶ್ಮೀ, ಇರ್ಫಾನ್ ಶೇಖ್ ಸೇರಿದಂತೆ ಅನೇಕ ಅಲ್ಪಸಂಖ್ಯಾತ ಮುಖಂಡರು ಸಚಿವ ಜಮೀರ್ ಅವರ ನಡೆಗೆ ಸುದ್ದಿಗೋಷ್ಠಿ ನಡೆಸಿ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದಾರೆ.

ನ್ಯಾಯವಾದಿ ಹಾಗೂ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಲ್.ಎಲ್. ಉಸ್ತಾದ ಮಾತನಾಡಿ, ವಕ್ಫ್ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಇಂತಹ ವ್ಯಕ್ತಿಯನ್ನು ಆಯ್ಕೆ ಮಾಡುವೆ ಎಂದು ವಾಗ್ದಾನ ಮಾಡಿರುವೆ ಎಂಬ ಸಚಿವ ಜಮೀರ್ ಅಹ್ಮದ್ ಅವರ ಹೇಳಿಕೆ ಸರಿಯಲ್ಲ, ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಿಯಾದ ಕ್ರಮವಲ್ಲ, ವಕ್ಫ್ ಮಂಡಳಿ ವಿಷಯವಾಗಿ ಸಚಿವ ಜಮೀರ್ ಅಹ್ಮದ್ ಮನಸ್ಸಿಗೆ ಬಂದಂತೆ ವರ್ತನೆ ಮಾಡುತ್ತಿರುವುದು ಸರಿಯಲ್ಲ, ಇದು ನಮ್ಮ ಮನೆಯ ವಿಷಯವಲ್ಲ, ಇದು ಸಮಾಜದ ಏಳ್ಗೆಗಾಗಿ ಇರುವ ವಿಷಯ. ಈ ವಿಷಯದಲ್ಲಿ ಸಮಗ್ರವಾಗಿ ಚರ್ಚಿಸಿ ನಿರ್ಣಯ ಮಾಡಬೇಕಿದೆ. ಅನೇಕ ಅಲ್ಪಸಂಖ್ಯಾತ ಸಮುದಾಯದ ಶಾಸಕರು, ಸಂಸದರು, ಚುನಾಯಿತ ಪ್ರತಿನಿಧಿಗಳಿದ್ದಾರೆ, ಅವರೆಲ್ಲರ ಜೊತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕಿದೆ ಎಂದರು. ಈ ವೇಳೆ ಅಲ್ಪಸಂಖ್ಯಾತ ಮುಖಂಡರಾದ ಬಂದೇನವಾಜ್ ಮಹಾಬರಿ, ಇರ್ಫಾನ್ ಶೇಖ್, ಹಾಫೀಜ್ ಸಿದ್ದಿಕಿ ಮೊದಲಾದವರು ಉಪಸ್ಥಿತರಿದ್ದರು.

ಮುದ್ದೇಬಿಹಾಳ ಅಕ್ರಮ ಮರಳುಗಾರಿಕೆ: 2 ಟ್ರ್ಯಾಕ್ಟರ್ ವಶ, ದೂರು ದಾಖಲು

ಮುದ್ದೇಬಿಹಾಳ: ಸರಕಾರದ ರಾಯಲ್ಟಿ ಪತ್ರ ಅಥವಾ ಸೂಕ್ತ ದಾಖಲೆಗಳಿಲ್ಲದೆ ಕಳ್ಳತನದಿಂದ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ನಂಬರ್ ಪ್ಲೇಟ್ ಇಲ್ಲದ ಎರಡು ಟ್ರ್ಯಾಕ್ಟರ್‌ಗಳನ್ನು ಮರಳು ತುಂಬಿದ ಟ್ರ್ಯಾಲಿ ಸಮೇತ ವಶಪಡಿಸಿಕೊಂಡಿರುವ ಮುದ್ದೇಬಿಹಾಳ ಪೊಲೀಸರು ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಫೆ.18, 19ರ ನಡುವಿನ ಮಧ್ಯರಾತ್ರಿ ತಂಗಡಗಿ ರಸ್ತೆಯ ಶಿವಶರಣ ನೂಲಿ ಚಂದಯ್ಯ ವೃತ್ತದ ಹತ್ತಿರ ಇವುಗಳನ್ನು ತಡೆದು ತಪಾಸಣೆ ನಡೆಸಿದಾಗ ಮರಳು ಸಾಗಿಸಲು ಸರಕಾರದಿಂದ ರಾಯಲ್ಟಿ ಅನುಮತಿ ಪತ್ರ ಅಥವಾ ಯಾವುದೇ ದಾಖಲೆ ಇಲ್ಲದಿರುವುದು ಕಂಡು ಬಂದ ಹಿನ್ನೆಲೆ ಪಿಎಸೈ ಸಂಜಯ್ ತಿಪ್ಪರಡ್ಡಿ ಅವರು ನೀಡಿದ ದೂರಿನ ಮೇರೆಗೆ ಚಾಲಕ ಬನೋಶಿ ಗ್ರಾಮದ ಮಾಳಿಂಗರಾಯ ದ್ಯಾಮಣ್ಣ ದಂಡೋಜಿ ಮತ್ತು ಅಕ್ರಮ ಮರಳು ದಂಧೆಯಲ್ಲಿ ತೊಡಗಿರುವ ಲಥೀಪ್ ಸೌದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ವಿಚಾರಣೆ ಸಂದರ್ಭ ಲಥೀಪ್ ಸೌದಿ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ. ಎರಡೂ ಟ್ರ್ಯಾಕ್ಟರುಗಳನ್ನು ಮರಳು ಸಮೇತ ಪೊಲೀಸ್ ಠಾಣೆ ಆವರಣದಲ್ಲಿ ನಿಲ್ಲಿಸಲಾಗಿದೆ. ಇಷ್ಟು ದಿನ ಬಂದ್ ಆಗಿದ್ದ ಅಕ್ರಮ ಮರಳು ದಂಧೆ ಮತ್ತೇ ಪ್ರಾರಂಭಗೊಂಡಿರುವುದು ಇದರಿಂದ ಖಚಿತವಾಗಿದ್ದು ಪೊಲೀಸರು ತಮಗೆ ಬೇಕಾದವರ ಟ್ರ್ಯಾಕ್ಟರ್ ಬಿಟ್ಟು ಬೇಡವಾದವರ ಟ್ರ್ಯಾಕ್ಟರ್ ಹಿಡಿದು ಕೇಸ್ ಹಾಕದೆ ಎಲ್ಲರಿಗೂ ಒಂದೇ ಕಾನೂನು ಅನ್ವಯಿಸಬೇಕು ಎನ್ನುವ ಒತ್ತಾಯ ಸಾರ್ವಜನಿಕರಿಂದ ಕೇಳಿಬಂದಿದೆ. ಇದಲ್ಲದೆ ಬನೋಶಿ ಭಾಗದ ಕೃಷ್ಣಾ ನದಿ ತೀರದಲ್ಲಿ ಯಥೇಚ್ಛವಾಗಿ ನಡೆಯುತ್ತಿರುವ ಈ ದಂಧೆ ತಡೆಯಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎನ್ನುವ ಆಗ್ರಹ ಕೇಳಿಬಂದಿದೆ.

ಸಮಾಚಾರ ಸಣ್ಣದಲ್ಲ

ಉದ್ಯಮಿ ಅಪಹರಣ: ನಾಲ್ವರ ಬಂಧನ

ಬೆಳಗಾವಿ: ಉದ್ಯಮಿಯನ್ನು ಅಪಹರಿಸಿ 5 ಕೋಟಿ ರು. ಗೆ ಬೇಡಿಕೆ ಇಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬುಧವಾರ ತಡರಾತ್ರಿ ನಿಪ್ಪಾಣಿ ಹೊರವಲಯದಲ್ಲಿ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಈಶ್ವರ ರಾಮಗನಟ್ಟಿ (20), ಸಚಿನ್ ಕಾಂಬಳೆ (32), ರಮೇಶ್ ಕಾಂಬಳೆ (38), ರಾಘವೇಂದ್ರ ಬಾಣಪ್ಪಗೋಳ (28) ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿ ಅಪಹರಣಕ್ಕೆ ಒಳಗಾದ ಉದ್ಯಮಿ ಬಸವರಾಜ ಅಂಬಿ ಯನ್ನು ರಕ್ಷಿಸಲಾಗಿದೆ. ಕಳೆದ ಫೆ. 14 ರಂದು ಮೂಡಲಗಿ ತಾಲೂಕಿನ ರಾಜಾಪುರ ಗ್ರಾಮದ ಬಸವರಾಜ್ ಅಂಬಿ (48) ಅಪಹರಣ ಮಾಡಲಾಗಿತ್ತು. ಈ ಕುರಿತು ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಆಧರಿಸಿ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದು, ತನಿಖೆ ಮುಂದುವರಿಸಿದ್ದಾರೆ.

ಜಮೀನಿಗೆ ಬಂದ ಜೀವಂತ ಮೊಸಳೆ ಸೆರೆ

ಕಲಬುರಗಿ: ಜಮೀನಿಗೆ ಬಂದ ಮೊಸಳೆಯನ್ನು ಜೀವಂತವಾಗಿ ಹಿಡಿದು ಜೆಸ್ಕಾಂ ಕಚೇರಿ ಬಳಿ ತಂದು ರೈತರು ಪ್ರತಿಭಟನೆ ನಡೆಸಿರುವ ಘಟನೆ ಅಫಜಲಪುರ ತಾಲೂಕಿನ ಗೊಬ್ಬುರ(ಬಿ) ಜೆಸ್ಕಾಂ ಕಚೇರಿ ಬಳಿ ನಡೆದಿದೆ. ಗುರುವಾರ ನಸು ಕಿನ ಜಾವ ಲಕ್ಷ್ಮಣ ಪೂಜಾರಿ ಎಂಬ ರೈತ ತಮ್ಮ ಜಮೀನಿಗೆ ನೀರು ಬಿಡಲು ಹೋದಾಗ ಮೊಸಳೆ ದಾಳಿ ನಡೆಸಲು ಯತ್ನಿಸಿದೆ. ಇದರಿಂದ ಕೆರಳಿದ ಲಕ್ಷ್ಮಣ ಅವರು ಸುತ್ತಮುತ್ತಲಿನ ರೈತರಿಗೆ ವಿಷಯ ತಿಳಿಸಿದ್ದಾರೆ. ಆಗ ಸ್ಥಳಕ್ಕೆ ಬಂದ ರೈತರು ಮೊಸಳೆಯನ್ನು ಜೀವಂತವಾಗಿ ಸೆರೆ ಹಿಡಿದಿದ್ದಾರೆ. ಸೆರೆ ಹಿಡಿದ ಮೊಸಳೆಯನ್ನು ಎತ್ತಿನಬಂಡಿ ಯಲ್ಲಿ ಕಟ್ಟಿದ್ದು, ಮೊಸಳೆಯಿದ್ದ ಎತ್ತಿನ ಬಂಡಿ ಯನ್ನು ನೇರವಾಗಿ ಗೊಬ್ಬೂರ(ಬಿ) ಗ್ರಾಮದ ಲ್ಲಿರುವ ಜೆಸ್ಕಾಂ ಕಚೇರಿ ಮುಂಭಾಗಕ್ಕೆ ತಂದು ರೈತರು ಪ್ರತಿಭಟನೆ ನಡೆಸಿದ್ದಾರೆ. ಪದೇ ಪದೇ ಮೊಸಳೆಗಳು ದಾಳಿ ನಡೆಸುತ್ತಿವೆ, ಹೀಗಾಗಿ ಬೆಳಗ್ಗೆ 6 ಗಂಟೆ ನಂತರ ತ್ರೀಫೇಸ್ ಕರೆಂಟ್ ಸೌಲಭ್ಯ ನೀಡುವಂತೆ ರೈತರು ಒತ್ತಾಯಿಸಿದ್ದಾರೆ. ಸದ್ಯ ಮೊಸಳೆ ಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದು, ಪ್ರಾಣಿ ಸಂಗ್ರಹಾಲಯಕ್ಕೆ ಬಿಡಲಾಗಿದೆ.

ಪರೀಕ್ಷೆಗೆ ಸಜ್ಜಾದ ಶಿಕ್ಷಣ ಇಲಾಖೆ

ಮಾರ್ಚ್ 1ರಿಂದ ಪಿಯು, ಮಾ.21ರಿಂದ ಏ. 4ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಬೆಂಗಳೂರು: 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗೆ ಸಿದ್ಧತೆ ಆರಂಭಗೊಂಡಿದ್ದು, ಮಾರ್ಚ್ 1ರಿಂದ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭವಾಗಲಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ಪರೀಕ್ಷೆ ನಡೆಸಲು ಎಲ್ಲಾ ರೀತಿಯ ತಯಾರಿ ನಡೆಸಲಾಗಿದೆ. ದ್ವಿತೀಯ ಪಿಯುಸಿ ಮಾರ್ಚ್ 1ರಿಂದ 20ರವರೆಗೆ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 21 ರಿಂದ ಏಪ್ರಿಲ್ 4ರವರೆಗೆ ನಡೆಯಲಿದೆ ಎಂದು ಹೇಳಿದರು.

ಪಿಯುಸಿಗೆ 7,13,862 ವಿದ್ಯಾರ್ಥಿಗಳು ಹಾಗೂ ಎಸ್‌ಎಸ್‌ಎಲ್‌ಸಿಗೆ 8,96,447 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಗೆ 5,050 ಕಾಲೇಜುಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 15,881 ಶಾಲೆಗಳು ನೋಂದಾಯಿಸಿಕೊಂಡಿವೆ. ದ್ವಿತೀಯ ಪಿಯುಸಿ ಪರೀಕ್ಷೆಗೆ 1171 ಪರೀಕ್ಷಾ ಕೇಂದ್ರಗಳು, 2,342 ಸ್ಥಾನಿಕ ಜಾಗೃತ ದಳಗಳು, 504 ವಿಚಕ್ಷಣ ಜಾಗೃತ ದಳಗಳು, 365 ಪ್ರಶ್ನೆಪತ್ರಿಕಾ ವಿತರಣಾ ಮಾರ್ಗಗಳು, 1,171 ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ/ಜಂಟಿ ಅಧೀಕ್ಷಕರು, ಉತ್ತರ ಪತ್ರಿಕೆಗಳ/ಪ್ರಶ್ನೆ ಪತ್ರಿಕೆಗಳ ಪಾಲಕರನ್ನು ನೇಮಿಸಲಾಗುತ್ತದೆ ಎಂದು ವಿವರಿಸಿದರು.

ಉತ್ತರ ಪತ್ರಿಕೆಗಳ ಮೌಲ್ಯಮಾಪನ 76 ಕೇಂದ್ರಗಳಲ್ಲಿ ನಡೆಯಲಿದ್ದು, 31000 ಮೌಲ್ಯಮಾಪಕರು ಭಾಗವಹಿಸಲಿದ್ದಾರೆ. 10ನೇ ತರಗತಿ ಪರೀಕ್ಷೆಗೆ ಸಂಬಂಧಪಟ್ಟಂತೆ 2,818 ಪರೀಕ್ಷಾ ಕೇಂದ್ರಗಳು, ಸ್ಥಾನಿಕ ಜಾಗೃತ ಸ್ಥಳಗಳು ಇರಲಿವೆ. ಜಿಲ್ಲಾ ಹಂತದಲ್ಲಿ 410, ತಾಲೂಕು ಹಂತದಲ್ಲಿ 1,662, ವಿಚಕ್ಷಣ ಜಾಗೃತ ದಳಗಳಿರಲಿವೆ. 1,117 ಪ್ರಶ್ನೆ ಪತ್ರಿಕಾ ವಿತರಣಾ ಮಾರ್ಗಗಳ ಸಂಖ್ಯೆಯಿದ್ದು, 2,818 ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿರುತ್ತಾರೆ. ಉಪ/ಜಂಟಿ ಅಧೀಕ್ಷಕರ ಸಂಖ್ಯೆ 958 ಆಗಿದ್ದು 2818 ಉತ್ತರ ಪತ್ರಿಕೆಗಳ/ಪ್ರಶ್ನೆ ಪತ್ರಿಕೆಗಳ ಪಾಲಕರಿರುತ್ತಾರೆ. 240 ಕೇಂದ್ರದಲ್ಲಿ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು 65 ಸಾವಿರ ಮೌಲ್ಯಮಾಪಕರು ಮಾಡಲಿದ್ದಾರೆಂದರು.

- ಹಿಜಾಬ್ ವಿಷಯ ನ್ಯಾಯಾಲಯದಲ್ಲಿರುವುದರಿಂದ ಈ ಯಾವುದೇ ನಿರ್ಧಾರ ಮಾಡಿಲ್ಲ.
- ಎಲ್ಲ ವಿಷಯದಲ್ಲಿ ಉತ್ತೀರ್ಣಕ್ಕೆ ಕನಿಷ್ಠ ಅಂಕಗಳು 35 ಅಗತ್ಯ.
- ಅನುದಾನಿತ ಶಿಕ್ಷಕರ ನೇಮಕಕ್ಕೆ, ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಕರ ನೇಮಕಕ್ಕೆ ಕ್ರಮ ವಹಿಸಲಾಗಿದೆ.
- 15 ಸಾವಿರ ಶಿಕ್ಷಕರ ನೇಮಕ ಪ್ರಕ್ರಿಯೆ ಚಾಲನೆಯಲ್ಲಿದೆ.
- 2025-26ನೇ ಸಾಲಿನ ಬಜೆಟ್‌ನಲ್ಲಿ ಐದು ಸಾವಿರ ಕೊಠಡಿಗೆ ಅನುದಾನ ನೀಡುವಂತೆ ಮನವಿ.

ಪರೀಕ್ಷೆ ನಡೆಯುವ ಸಂದರ್ಭದಲ್ಲಿ ವೆಬ್ ಕಾಸ್ಟಿಂಗ್ ಮಾಡಲಾಗುವುದು. ವಿದ್ಯಾರ್ಥಿಗಳು ಯಾವುದೇ ಭಯ, ಆತಂಕವಿಲ್ಲದೆ ಧೈರ್ಯದಿಂದ ಸಂತೋಷದಿಂದ ಪರೀಕ್ಷೆ ಬರೆಯಬಹುದು. ಕಲಿಕೆಯಲ್ಲಿ ಹಿಂದುಳಿದಿದ್ದ ವಿದ್ಯಾರ್ಥಿಗಳನ್ನು ವಿಶೇಷ ತರಗತಿಗಳ ಮೂಲಕ ಸಜ್ಜುಗೊಳಿಸಲಾಗಿದೆ. ಈ ಬಾರಿಯೂ 3 ಪರೀಕ್ಷೆಗಳಿರುತ್ತವೆ. ಯಾವುದೇ ಗ್ರೇಸ್ ಮಾರ್ಕ್ಸ್ ಇರುವುದಿಲ್ಲ. ಕೋವಿಡ್ ಪೂರ್ವದಲ್ಲಿ ಇದ್ದ ನಿಯಮವೇ ಜಾರಿಯಲ್ಲಿರುತ್ತದೆ.

-ಮಧು ಬಂಗಾರಪ್ಪ ಶಿಕ್ಷಣ ಸಚಿವ

ಎಸ್‌ಎಸ್‌ಎಲ್‌ಸಿ	
ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳು	896447
ಬಾಲಕರು	461563
ಬಾಲಕಿಯರು	434884
ದ್ವಿತೀಯ ಪಿಯುಸಿ	
ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳು	713862
ಬಾಲಕರು	335468
ಬಾಲಕಿಯರು	378389
ತೃತೀಯ ಲಿಂಗಿ	05

ಫೆಬ್ರವರಿಯಲ್ಲಿ ರಣಬಿಸಿಲು, ಏಪ್ರಿಲ್‌ನಲ್ಲೇ ಮಳೆ

← ಮೊದಲಪುಟದಿಂದ

ಸರಾಸರಿ ನೀರಿನ ಸಂಗ್ರಹಣೆಯ ಶೇ.60ರಷ್ಟು ಇದೆ. ಕಳೆದ ವರ್ಷ ಇದೇ ಸಮಯದಲ್ಲಿ 332.52 ಟಿ.ಎಂ.ಸಿ. ನೀರಿನ ಸಂಗ್ರಹಣೆ ಇತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ, ಸರಾಸರಿ ನೀರಿನಲ್ಲಿ ಏರಿಕೆಯಿದ್ದರೂ ಹಲವು ಜಿಲ್ಲೆಗಳಲ್ಲಿ ನೀರಿನ ಅಭಾವ ಕಾಡುವ ಸಾಧ್ಯತೆಯಿದೆ. ಆದ್ದರಿಂದ ಈ ಬಗ್ಗೆ ಎಚ್ಚರವಹಿಸುವಂತೆ ಸಚಿವರು ಸೂಚನೆ ನೀಡಿದ್ದಾರೆ.

ರಾಜ್ಯದ ಕೆಲ ಜಲಾಶಯಗಳಲ್ಲಿ ನೀರಿನ ಮಟ್ಟ ತೃಪ್ತಿಕರವಾಗಿಲ್ಲ. ಆದ್ದರಿಂದ ಜಲಾನಯನ ಪ್ರದೇಶಗಳಲ್ಲಿನ ಬೆಳೆಗಳಿಗೆ ಅವಶ್ಯವಿರುವ ನೀರಿನ ಪ್ರಮಾಣದ ಬಗ್ಗೆ ಗಮನದಲ್ಲಿರಿಸಿಕೊಂಡು ಮುಂಬರುವ ದಿನಗಳಲ್ಲಿ ಜಲಾಶಯಗಳ ನೀರಿನ ಮಟ್ಟ ಯಾವ ಮಟ್ಟ ತಲುಪಲಿದೆ? ಅದರಿಂದಾಗಿ ಕುಡಿಯುವ ನೀರಿಗಾಗಿ ಲಭ್ಯವಾಗಲಿರುವ ನೀರಿನ ಪ್ರಮಾಣವೆಷ್ಟು? ಈ ಕುರಿತು ಮುಂದಿನ ಸಭೆಗಳಲ್ಲಿ ಸ್ಪಷ್ಟ ಮಾಹಿತಿ ನೀಡುವಂತೆ ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಕುಡಿಯುವ ನೀರಿಗೆ ಅವಶ್ಯವಿರುವ ನೀರನ್ನು ಕಾಯ್ದಿರಿಸಿದ ನಂತರವೇ ನೀರಾವರಿಗಾಗಿ ನೀರನ್ನು ಬಿಡುಗಡೆಗೊಳಿಸುವ ಕುರಿತು ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೃಷಿ ಸಚಿವರಾದ ಎನ್.ಚೆಲುವರಾಯಸ್ವಾಮಿ ಉಪಸ್ಥಿತರಿದ್ದರು.

ಕ್ಲೀನ್‌ಚಿಟ್‌ಗೆ 11,200 ಪುಟಗಳ ಸಮರ್ಥನೆ

← ಮೊದಲಪುಟದಿಂದ

ಈ ವರದಿಯಲ್ಲಿ 50 ಜನರ ಹೇಳಿಕೆ ದಾಖಲು ಮಾಡಲಾಗಿದೆ. ನಿವೇಶನ ಹಂಚಿಕೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲ ಎಂಬುದು ತನಿಖೆಯಲ್ಲಿ ಕಂಡು ಬಂದಿದೆ. ಅಲ್ಲದೆ, ಆರೋಪಕ್ಕೆ ಪೂರಕವಾಗಿ ಸಾಕ್ಷ್ಯಾಧಾರ ಕೊರತೆ ಹಿನ್ನೆಲೆಯಲ್ಲಿ ಬಿ-ರಿಪೋರ್ಟ್ ಸಿದ್ಧಪಡಿಸಿದ್ದಾರೆ ಎನ್ನಲಾಗಿದೆ. ಕಾಂಗ್ರೆಸ್‌ನ ಹಿರಿಯ ನಾಯಕರು ಲೋಕಾಯುಕ್ತ ವರದಿಯನ್ನು ಸ್ವಾಗತಿಸಿದ್ದರೆ, ಬಿಜೆಪಿಗರು ಒತ್ತಡಕ್ಕೆ ಮಣಿದು ಸಿದ್ಧಪಡಿಸಿರುವ ವರದಿ ಎಂದು ಆರೋಪಿಸಿದ್ದಾರೆ.

ತಡೆಯಾಜ್ಞೆ ವಿಸ್ತರಿಸಿದ ಹೈಕೋರ್ಟ್: ಸಿಎಂ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಹಾಗೂ ಭೈರತಿ ಸುರೇಶ್‌ಗೆ ಇಡಿ (ಜಾರಿ ನಿರ್ದೇಶನಾಲಯ) ಸಮನ್ಸ್‌ಗೆ ನೀಡಲಾಗಿದ್ದ ತಡೆಯನ್ನು ಹೈಕೋರ್ಟ್ ವಿಸ್ತರಿಸಿದೆ.

ಮುಡಾ ಪ್ರಕರಣದಲ್ಲಿ ಲೋಕಾಯುಕ್ತ ಸಂಸ್ಥೆ ಬಿ ರಿಪೋರ್ಟ್ ಸಲ್ಲಿಕೆ ಮಾಡಿ ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ನೀಡಿದೆ. ಈ ಪ್ರಕರಣದ ಪ್ರಾರಂಭದಲ್ಲೇ ನಾನು ಹೇಳಿದ್ದೆ. ಬಿಜೆಪಿ ಹಾಗೂ ಜೆಡಿಎಸ್‌ನವರು ಬೆಂಗಳೂರಿನಿಂದ ಮೈಸೂರುವರೆಗೆ ಪಾದಯಾತ್ರೆ ಮಾಡಿದಾಗಲೇ ಇದು ರಾಜಕೀಯ ಪ್ರೇರಿತ ಆರೋಪ ಎಂದು ಹೇಳಿದ್ದೆ. ಇದು ಈಗ ನಿಜವಾಗಿದೆ.

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಮಹಿಳೆಯನ್ನು ಕಿಡ್ನ್ಯಾಪ್ ಮಾಡಿ ಚಿತ್ರಹಿಂಸೆ

ಚಿಕ್ಕಬಳ್ಳಾಪುರ: ಮಹಿಳೆಯನ್ನು ಕೋಣೆಯಲ್ಲಿ ಕೂಡಿಹಾಕಿ ರಾತ್ರಿಯಿಡೀ ಚಿತ್ರಹಿಂಸೆ ನೀಡಿ, ಕಣ್ಣುಗುಡ್ಡೆ ಕಿತ್ತು ಭೀಕರವಾಗಿ ಹಲ್ಲೆ ನಡೆಸಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲೂಕಿನ ಜಗನಹಳ್ಳಿಯಲ್ಲಿ ನಡೆದಿದೆ. ಮಹಿಳೆಯನ್ನು ಕಿಡ್ನ್ಯಾಪ್ ಮಾಡಿ ತೋಟದ ಮನೆಯಲ್ಲಿ ಕೂಡಿಹಾಕಿ ಬ್ಯಾಟ್, ರಾಡ್‌ಗಳಿಂದ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಮುಖದಲ್ಲಿ ರಕ್ತ ಸುರಿಯುವಂತೆ ದುಷ್ಕರ್ಮಿಗಳು ಮನ ಬಂದಂತೆ ಥಳಿಸಿದ್ದಾರೆ. ವ್ಯಕ್ತಿಯೊಬ್ಬ ಮೊದಲ ಹೆಂಡತಿ ಇದ್ದರೂ, ಮತ್ತೊಂದು ಮದುವೆ ಮಾಡಿಕೊಂಡಿದ್ದ. ಹೀಗಾಗಿ ಮೊದಲ ಹೆಂಡತಿ ಕಡೆಯವರು 2ನೇ ಹೆಂಡತಿಯನ್ನು ಕಿಡ್ನ್ಯಾಪ್ ಮಾಡಿಸಿ ಹಲ್ಲೆ ಮಾಡಿಸಿದ್ದಾರೆ ಎಂದು ತಿಳಿದು ಬಂದಿದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಜಗನಹಳ್ಳಿ ಗ್ರಾಮದ ಗಂಗರಾಜು ಎಂಬುವವರ 2ನೇ ಪತ್ನಿ ಸಂಗೀತ ಮೇಲೆ ಭೀಕರ ಹಲ್ಲೆ ನಡೆಸಲಾಗಿದೆ. ಮೊದಲ ಪತ್ನಿಯ ಕಡೆಯವರೇ ಹಲ್ಲೆ ನಡೆಸಿದ್ದಾರೆ ಎಂದು ಗಾಯಾಳು ಸಹೋದರಿ ಆರೋಪಿಸಿದ್ದಾರೆ.

ಕೊಚ್ಚಿಹೋಗಿದ್ದ ವೈದ್ಯೆಯ ಮೃತದೇಹ ಪತ್ತೆ

ಗಂಗಾವತಿ: ರಜೆ ಕಳೆಯಲು ಸ್ನೇಹಿತರೊಂದಿಗೆ ಬಂದು, ಈಜಾಡಲು ಹೋಗಿದ್ದ ಸಂದರ್ಭದಲ್ಲಿ ತುಂಗಭದ್ರಾ ನದಿಯಲ್ಲಿ ಕೊಚ್ಚಿಹೋಗಿದ್ದ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯ ವೈದ್ಯೆ ಅನನ್ಯ ಮೋಹನ್ ರಾವ್ ಅವರ ಮೃತದೇಹ ಗುರುವಾರ ಪತ್ತೆಯಾಗಿದೆ. ಅನನ್ಯ ಮೋಹನ್ ರಾವ್ ಅವರು ತಾಲೂಕಿನ ಸಣಾಪುರದ ಸಮೀಪ ತುಂಗಭದ್ರಾ ನದಿಯಲ್ಲಿ ಕೊಚ್ಚಿ ಹೋಗಿದ್ದರು. ಸುಮಾರು 16 ಗಂಟೆಗಳ ಶೋಧ ಕಾರ್ಯಾಚರಣೆ ಬಳಿಕ ಮೃತದೇಹವನ್ನು ನದಿಯಿಂದ ಮೇಲೆತ್ತಲಾಗಿದೆ. ನದಿಯಲ್ಲಿನ ಕಲ್ಲು ಬಂಡೆಗಳ ಕೊರಕಲು ಸಂದಿಯಲ್ಲಿ ಮೃತದೇಹ ಸಿಲುಕಿಕೊಂಡಿತ್ತು. ಇದನ್ನು ಸ್ಥಳೀಯ ಈಜುಗಾರರು ಗಮನಿಸಿದ್ದಾರೆ. ಅಲ್ಲಿಗೆ ತೆರಳಿ ಪ್ರಯಾಸಪಟ್ಟು ಕೊರಕಲುಗಳ ಮಧ್ಯೆ ಸಿಲುಕಿದ್ದ ಶವವನ್ನು ಹರಸಾಹಸಪಟ್ಟು ಹೊರತಂದಿದ್ದಾರೆ. ಮೃತದೇಹ ಹೊರಬರುತ್ತಿದ್ದಂತೆ ವೈದ್ಯೆಯ ಕುಟುಂಬಸ್ಥರ ರೋದನ ಮುಗಿಲು ಮುಟ್ಟಿತ್ತು.

ಬಡ್ಡಿ ದಂಧೆಕೋರರ ಮನೆ ಮೇಲೆ ದಾಳಿ

ವಿಜಯಪುರ: ಜಿಲ್ಲೆಯಲ್ಲಿ ಮೈಕ್ರೋಫೈನಾನ್ಸ್ ಹಾವಳಿ ಹೆಚ್ಚಾಗಿದ್ದು, ಗುರುವಾರ ಬೆಳ್ಳಂಬೆಳಗ್ಗೆ ಮೈಕ್ರೋ ಫೈನಾನ್ಸ್, ಅಕ್ರಮ ಬಡ್ಡಿ ದಂಧೆಕೋರರ ಮನೆ ಮೇಲೆ ವಿಜಯಪುರ ಪೊಲೀಸರು ದಾಳಿ ನಡೆಸಿ, ಬಿಸಿ ಮುಟ್ಟಿಸಿದ್ದಾರೆ. ವಿಜಯಪುರದಲ್ಲಿ ಕಳೆದ ಕೆಲವು ವಾರಗಳಿಂದ ಬಡ್ಡಿ, ಮೀಟರ್ ಬಡ್ಡಿ ದಂಧೆಕೋರರ ಕಿರುಕುಳ ಹೆಚ್ಚಾಗಿದೆ. ಹೀಗಾಗಿ ಎಸ್ಪಿ ಲಕ್ಷ್ಮಣ ನಿಂಬರಗಿ ಆದೇಶದ ಮೇರೆಗೆ ಗುರುವಾರ ಬೆಳ್ಳಂಬೆಳಗ್ಗೆ ಮನೆಗಳ ಮೇಲೆ ದಾಳಿ ನಡೆಸಿ, ಶಾಕ್ ನೀಡಿದ್ದಾರೆ. ಜಿಲ್ಲೆಯ ಹಲ ವೆಡೆ ಪೊಲೀಸರು ದಾಳಿ ನಡೆ ಸಿದ್ದು, ದಾಳಿ ಮಾಡಿ ಅಕ್ರಮ ಹಣ, ದಾಖಲಾತಿಗಳ ಪರಿಶೀಲನೆ ನಡೆಸಿದ್ದಾರೆ.

ಕರ್ನಾಟಕ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಹೊಸದುರ್ಗ.
Email Id: eo.hosadurga@gmail.com Mob No: 9480861120
ಸಂ.ತಾ.ಪಂ.ಹೊ/ಇ-ಟೆಂಡರ್/ಸಿಆರ್-11/2024-25 ದಿನಾಂಕ: 20.02.2025
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಮೂಲಕ ನೊಂದಾಯಿತ ಅಧಿಕೃತ ಗುತ್ತಿಗೆದಾರರು/ ಏಜೆನ್ಸಿಗಳಿಂದ ಹೊಸದುರ್ಗ ತಾಲ್ಲೂಕು ಪಂಚಾಯಿತಿ 2024-25ನೇ ಸಾಲಿನ ನಿಧಿ-3 ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ-ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ನಿಗಧಿತ ಸಮಯದ ಒಳಗಾಗಿ ಟೆಂಡರ್ ಫಾರಂಗಳನ್ನು ಪಡೆದು ಅರ್ಜಿ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ರಲ್ಲಿ ನೋಡಬಹುದಾಗಿದೆ.
ಕಾಮಗಾರಿ ಹೆಸರು (1) ತಾಲ್ಲೂಕು ಪಂಚಾಯಿತಿ ಹೊಸದುರ್ಗ ಸುಪರ್ದಿಯಲ್ಲಿರುವ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಎರಡು ಹೊಸ ಕೊಠಡಿ ನಿರ್ಮಾಣ.
ಟೆಂಡರ್ ಸಂಖ್ಯೆ:-RDPR/2024-25/WORK_INDENT12561/CALL-2
DIPR/CTA/KSMCA/625/2024-25
ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಸದುರ್ಗ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ
ಟೆಂಡರ್ ಪ್ರಕಟಣೆ ಸಂಖ್ಯೆ : 36/2024-25/ ದಿನಾಂಕ: 18-02-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3,4ರನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 5054-ರಾಜ್ಯ ಹೆದ್ದಾರಿ ಸುಧಾರಣೆ, ಜಿಲ್ಲಾ ಮತ್ತು ಇತರ ರಸ್ತೆಗಳ ಸುಧಾರಣೆ ಮತ್ತು ನವೀಕರಣ (ಅಪೆಂಡಿಕ್ಸ್-ಇ) ಯಡಿಯ 3-ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ: 19433, 19480, 18167) ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.83.85 ಲಕ್ಷ ಮತ್ತು ಗರಿಷ್ಟ ರೂ. 166.52 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27-02-2025 ಸಂಜೆ 4.00 ಗಂಟೆಯಾಗಿರುತ್ತದೆ.
ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್. ಲೋಕೋಪಯೋಗಿ ಇಲಾಖೆ ಕೊಡಗು ವಿಭಾಗ, ಮಡಿಕೇರಿ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಚೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಬೆಂಗಳೂರು
ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/2024-25/2783 ದಿನಾಂಕ:17-02-2025
ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಯನ್ನು KW-3 STD ಷರತ್ತುಗಳ್ಳಪಟ್ಟಂತೆ ಅಲ್ಪಾವಧಿ ಟೆಂಡರ್‌ನ ಮೊದಲನೆ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

SL NO	Name of Work	Work Value (Rs.in Lakhs)
1	Replacement of Existing 2 Nos of 13 Passengers and 1 No. of 8 Passengers old lifts Situated at Lift No.2 Near Electrical Power Room and Lift No.5 Near Railway Counter Office and Lift No.7 Near Reception Counter and in place of Providing 3 Nos New Lifts at LH-2 Building at Legislator Home, Banglore. PWD/2024-25/EL/WORK INDENT18132	72.89

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಚಿಸುವರು ವೆಬ್‌ಸೈಟ್ ಸಂ:https://kppp.karnataka.gov.in ನಲ್ಲಿ ಟೆಂಡರ್ ಡಾಕ್ಯುಮೆಂಟಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: 17-02-2025 ರಿಂದ 28-02-2025 16:00 ಗಂಟೆಯವರೆಗೆ ನಿಗದಿಪಡಿಲಾಗಿದೆ. ಟೆಂಡರ್ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಗಳ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು (ವಿ)., ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು.
ವಾಸಸಂಇ/ಸಿಪಿ/ಎಎವಿ/5212/2024-25

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ
ದೂರವಾಣಿ: 08182-271101/221010/222082; ಫ್ಯಾಕ್ಸ್ - 277082;
ಇ-ಮೇಲ್ deo.shimoga@gmail.com
ELN3/BILL/181/2022 (98450) ದಿನಾಂಕ: 19.02.2025
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್ಮೆಂಟ್ ಮುಖಾಂತರ)
ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಕಾರ್ಯನಿರ್ವಹಿಸಲು Technical Programmer, ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು Data Entry Operator ರವರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅಧಿಕೃತ ಮಾನ್ಯತೆ ಪಡೆದ ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.
*) Tender Reference Number: RD/2024-25/SE0414 *) Commencement of issue of Bid document through E-Procurement Portal of Government of Karnataka : 19.02.2025 *) Last date for submitting clarification if any: 28.02.2025 17:30 *) Last date and time for uploading of tender in e-Procurement platform: 05.03.2025 17.30 *) Time and date of opening of tenders Technical Bid: 07.03.2025 11.00 *) Time and date of opening of tenders Commercial Bid: After Technical bid approval *) Place of Opening of Tenders and Address for communication : Deputy Commissioner's Office, Shivamogga District. *) EMD Amount: Rs.1,85,000/-
ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ಅಧಿಕೃತ ವೆಬ್‌ಸೈಟ್ https://kppp.Karnataka. gov.in ಅಥವಾ ಚುನಾವಣಾ ವಿಭಾಗ, ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
ಸಹಿ/- ಜಿಲ್ಲಾಧಿಕಾರಿ, ಹಾಗೂ ಜಿಲ್ಲಾ ಚುನಾವಣಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/24-25/144/02/1696

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ-590018, ಕರ್ನಾಟಕ, ಭಾರತ
ಕ್ರಮ ಸಂಖ್ಯೆ: ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2024-25/ಐ.ಎಫ್.ಟಿ.ನಂ.89/6026
ದಿನಾಂಕ: 19/02/2025
ಟೆಂಡರ ಪ್ರಕಟಣೆ-ದ್ವಿಲಕೋಟಿ ಪದ್ಧತಿ (ಇ-ಪ್ರೊಕ್ಯೂರಮೆಂಟ್ ಮೂಲಕ)
ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ ಕೆ.ಡಬ್ಲ್ಯೂ.೪ ಪ್ರಕಾರ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರನ್ನು ದ್ವಿಲಕೋಟಿ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ. **ಕಾಮಗಾರಿ ಹೆಸರು:** ವಿತಾವಿಯ VIAT ಮುದ್ದೆನಹಳ್ಳಿ ಕ್ಯಾಂಪಸ್‌ನಲ್ಲಿಯ D-3 ಬ್ಲಾಕ್‌ಗೆ ತರಗತಿಯ ಡೆಸ್ಕಗಳು, ಲೆಕ್ಚರ್ನ ರೈಟಿಂಗ್ ಬೋರ್ಡಗಳು, ಟೇಬಲ್, ಕುರ್ಚಿಗಳು, ಕ್ಯಾಮೆರಾಗಳು ಮತ್ತು ಪ್ರೊಜೆಕ್ಟರ್‌ಗಳನ್ನು ಪೂರೈಸಿ ಒದಗಿಸಿ ಸ್ಥಾಪಿಸುವ **ಕಾಮಗಾರಿ ಮೊತ್ತ ರೂ. 87,03,562/ (ತೆರಿಗೆ ರಹಿತ)** ಈ ಕಾಮಗಾರಿಗೆ ಇದೇ ತರನಾದ 50% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ **ದಿನಾಂಕ: 24-02-2025** ರಿಂದ ಪಡೆದುಕೊಳ್ಳಬಹುದು.
ಸಹಿ/- ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
ಡಿಐಪಿಆರ್/ಬೆಳಗಾವಿ/1737/ಅಡ್ವರ್ಟೋರ್/2024-25

"KRISHNA BHAGYA JALA NIGAM LIMITED" (A GOVT.OF KARNATAKA UNDERTAKING)
ಕಾರ್ಯಾಲಯ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ-587 118.
Telephone NO. 08351-261110 e-mail : eearbcdivn@gmail.com
ಸಂ:ಕೃಭಾಜನಿ(ನಿ)/ಆಬದಂಕಾ/ವಿಹು/ಡಿಬಿ/2024-25/1299 ದಿನಾಂಕ:20/02/2025
ಅಲ್ಪಾವಧಿ ಕೋಟೇಶನ್
ಈ ಕಛೇರಿಯ ಅಧೀನದಲ್ಲಿ ಬರುವ ರಾಮಥಾಳ ಮರೋಳ ಏತ ನೀರಾವರಿ ಯೋಜನೆಯ ಮೊದಲನೇ ಮತ್ತು 2ನೇ ಹಂತದ ಪಂಪ್ ಹೌಸ್ ಅಡಿಯಲ್ಲಿ ಬರುವ ಸಬ್ ಸ್ಟೇಶನ್, ಪಂಪ್ ಮತ್ತು ಮೋಟರ್ ರಿಪೇರಿ ಮಾಡಿಸುವ ಕುರಿತು ಅಂದಾಜು ಪತ್ರಿಕೆ ತಯಾರಿಸಬೇಕಾಗಿದ್ದು, ಸ್ಥಳ ಪರಿಶೀಲನೆ ಮಾಡಿ ಈಗಿರುವ ಮಾರುಕಟ್ಟೆ ದರ (ಜಿ.ಎಸ್.ಟಿ. ಸಹಿತ)ಗಳನ್ನು ನೀಡಲು ಅಲ್ಪಾವಧಿ ಕೊಟೇಶನ್ ಅಹ್ವಾನಿಸಲಾಗಿದೆ. ಈ ಕಚೇರಿಗೆ ದಿನಾಂಕ: 03.03.2025ರ ಸಾಯಂಕಾಲ 05.00 ಘಂಟೆಯೊಳಗೆ ಸಲ್ಲಿಸಬಹುದಾಗಿದೆ.
ಐಟಂಗಳ ಮಾಹಿತಿಗಾಗಿ ಹಾಗೂ ಹೆಚ್ಚಿನ ತಾಂತ್ರಿಕ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿ(ನಿ), ಆ.ಬ.ದಂ.ಕಾ. ವಿಭಾಗ ಹುನಗುಂದ ಇವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಸದರಿ ಕೊಟೇಶನ್‌ಗಳನ್ನು ದಿನಾಂಕ:05.03.2025ರ ಬೆಳಿಗ್ಗೆ 11.45 ಘಂಟೆಗೆ ಕಾರ್ಯಪಾಲಕ ಅಭಿಯಂತರರು, ಕೃಬಾಜನಿ(ನಿ), ಆ.ಬ.ದಂ. ಕಾಲುವೆ ವಿಭಾಗ, ಹುನಗುಂದ ಕಛೇರಿಯಲ್ಲಿ ತೆರೆಯಲಾಗುವುದು.
ಸಂಪರ್ಕಿಸುವ ಈ-ಮೇಲ್ ವಿಳಾಸ. :eearbcdivn@gmail.com.
ಸಂಪರ್ಕಿಸುವ ದೂರವಾಣಿ ಸಂಖ್ಯೆ:.,M. No.
ಸಹಿ/-ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ.
DIPR/BGK/RO-NO-510/KSMCA/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಪತ್ರಿಕಾ ಪ್ರಕಟಣೆ
ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಓಡಾಡುವ ವಾಹನಗಳ ಸಂಚಾರದ ಗಣತಿಯನ್ನು ನಡೆಸಲಾಗುತ್ತಿದ್ದು, 2025 ನೇ ಸಾಲಿನ ರಸ್ತೆ ಸಂಚಾರ ಗಣತಿಯನ್ನು ದಿನಾಂಕ: 17.02.2025 ರ ಬೆಳಿಗ್ಗೆ 6.00 ಗಂಟೆಯಿಂದ 24.02.2025 ರ ಬೆಳಿಗ್ಗೆ 6.00 ಗಂಟೆಯವರೆಗೆ 7 ದಿನಗಳ ಕಾಲ ನಡೆಸಲಾಗುವುದು. ಈ ಗಣತಿಗೆ ಸುಮಾರು 166 ಗಣತಿ ಕೇಂದ್ರಗಳನ್ನು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಆಯ್ಕೆ ಮಾಡಲಾಗಿದೆ.
ಈ ಗಣತಿಯ ಮುಖ್ಯ ಉದ್ದೇಶವೇನೆಂದರೆ, ವಾಹನ ಸಂಚಾರದ ಬೆಳವಣಿಗೆ ತ್ರೀವ್ರತೆಯನ್ನು ಗಮನಿಸಿ ರಸ್ತೆಗಳ ಮೇಲ್ಮೈಯನ್ನು ಅಭಿವೃದ್ಧಿ ಪಡಿಸುವುದು, ರಸ್ತೆಗಳನ್ನು ಅಗಲಪಡಿಸುವುದು ಹಾಗೂ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು ಇದೇ ಮೊದಲಾದ ಹಲವಾರು ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸಲು ಮತ್ತು ಕೈಗೆತ್ತಿಗೊಳ್ಳಲು ಅನುಕೂಲವಾಗುವುದು.
ವಾಹನ ಸಂಚಾರ ವಿವರಗಳನ್ನು ಸಂಗ್ರಹಿಸಲು ಜಿಲ್ಲೆಯಲ್ಲಿ ಒಟ್ಟು 166 ಗಣತಿ ಕೇಂದ್ರಗಳಲ್ಲಿ ಸಹಾಯಕ ಇಂಜನೀಯರ್/ಕಿರಿಯ ಇಂಜನೀಯರ್‌ಗಳನ್ನು ನೇಮಿಸಲಾಗಿದೆ. ಹಾಗೂ ಎಲ್ಲ ಕೇಂದ್ರಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲಾಗಿದೆ. ದಿನಾಂಕ: 17.02.2025 ರಿಂದ 24.02.2025 ರ ವರೆಗೆ ನಡೆಸಲಾಗುವ ಈ ವಾಹನ ಸಂಚಾರದ ಗಣತಿಯನ್ನು ಯಶಸಿಯಾಗಿ ನಡೆಸಲು ವಾಹನ ಚಾಲಕರು ಮತ್ತು ಸಾರ್ವಜನಿಕರು ಸಹಕರಿಸಲು ಕೋರಲಾಗಿದೆ.
ವಾಸಾಸಂಇ/ವಿಜಯಪುರ/704/ಕೆಎಸ್‌ಎಂಸಿಎ/2024-25
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ವಿ.ಲೆ.ಶಿ /ಟೆಂಡರು/2024-25/1828
ದಿನಾಂಕ 19/02/2025.
ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **2024-25 ನೇ ಕೆ.ಕೆ.ಆರ್.ಡಿ.ಬಿ ಯೋಜನೆ, ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ, 5054 ಎಸ್.ಸಿ.ಪಿ/ಟಿ.ಎಸ್.ಪಿ ರಸ್ತೆ ಮತ್ತು 2024-25 ನೇ ಸಾಲಿನ 3054 ಸಿ.ಎಮ್.ಜಿ.ಎಸ್.ವಯ್ ಯೋಜನೆ ಅಡಿಯಲ್ಲಿ** ಅನುಮೋದನೆಗೊಂಡ ಬಳ್ಳಾರಿ ತಾಲೂಕಿನ ಒಟ್ಟು **10** ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಕೆ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಹಾಗೂ ಸಾಮಾಗ್ರಿಗಳ ಟೆಂಡರು ಅಹ್ವಾನಿಸಿದೆ. **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 01** ಕಾಮಗಾರಿಯನ್ನು ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 19-02-2025 ರಿಂದ ದಿನಾಂಕ 28-02-2025 ರಂದು ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 28-02-2025 ರ 16.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ಆನ್ ಲೈನ್‌ನಲ್ಲಿ **ದಿನಾಂಕ: 01-03-2025 ರಂದು 17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/948/ಕೆಎಸ್ಎಂಸಿಎ/2024-25

ಕರ್ನಾಟಕ ಸರ್ಕಾರ
ಸಮಗ್ರ ಶಿಕ್ಷಣ ಕರ್ನಾಟಕ
ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತಜಿಲ್ಲಾಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಶಾ.ಶಿ.ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ-571401,
ಫೋನ್/ಫ್ಯಾಕ್ಸ್: 08232-297199 e-mail: sskmandya@gmail.com
ಸಂಖ್ಯೆ:ಸ.ಶಿ.ಕ/ಸಿ2/ಟೆಂಡರ್ ಪ್ರಕಟಣೆ/01/2024-25 ದಿ:18.02.2025
ಪ್ರಕಟಣೆ ಕೃಪೆಗಾಗಿ
2023-24 ಮತ್ತು 2024-25 ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರಗಳಾದ ಮದ್ದೂರು, ಪಾಂಡವಪುರ, ಶ್ರೀರಂಗಪಟ್ಟಣ ಮತ್ತು ಮಳವಳ್ಳಿ ತಾಲ್ಲೂಕಿನ ಶಾಲಾ ಸಿದ್ಧತಾ ಕೇಂದ್ರಗಳ ಬಲವರ್ಧನೆಗಾಗಿ ಸಾಧನ ಸಲಕರಣೆ ಪೂರೈಸಲು ಹಾಗೂ ಕೆ.ಪಿ.ಎಸ್.ಸಿ ಶಾಲೆಗಳಿಗೆ ಸೃಷ್ಟಿ ಟಿಂಕರಿಂಗ್ ಲ್ಯಾಬ್, ಕಲಿಕೋಪಕರಣ ಪೂರೈಸಲು ಅರ್ಹ ಸಂಸ್ಥೆಯಿಂದ ಇ-ಟೆಂಡರ್ ಪ್ರಕಟಿಸುವ ಬಗ್ಗೆ. ಆಸಕ್ತ ಸಂಸ್ಥೆ/ಏಜೆನ್ಸಿಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವದಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ

Sl.No	Tender Reference No	Name of the Supplied	Tender Amount
01	DPI/2024-25/IND0490	Lab Equipment & Material	Rs. 3200000=00
02	DPI/2024-25/IND0491	CWSN Material	Rs.0800000=00
03	DPI/2024-25/IND0492	Laptop & Printer	Rs.1185000=00

ಹೆಚ್ಚಿನ ವಿವರಗಳಿಗೆ ಈ ಕಛೇರಿಯ ನೋಡಲ್ ಅಧಿಕಾರಿರವರ ಮೊಬೈಲ್ ಸಂಖ್ಯೆ: 9448999403/9743183660 ಅನ್ನು ಸಂಪರ್ಕಿಸಲು ಕೋರಿದೆ.
ಸಹಿ/-ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್ಎಂಸಿ&ಎ/679/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಕ:ಟೆಂ:2024-25:4077 ದಿನಾಂಕ:17-02-2025.
ಅಲ್ಪಾವಧಿ ಟೆಂಡರ್ ಪ್ರಕಟಣೆ
2023-24ನೇ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮೈಕ್ರೋ ಸಾಮಾಜಿಕ ಅಕ್ಷರ ಅವಿಷ್ಕಾರ ಎಸ್‌ಸಿಪಿ, 2024-25ನೇ ಮತ್ತು 2025-26ನೇ ಸಾಲಿನ ಮೈಕ್ರೋ ಸಾಂಸ್ಥಿಕ ಅಕ್ಷರ ಅವಿಷ್ಕಾರ ಎಸ್‌ಸಿಪಿ, 2023-24ನೇ ಮತ್ತು 2024-25ನೇ ಸಾಲಿನ ಮೈಕ್ರೋ ಸಾಮಾಜಿಕ ಅಕ್ಷರ ಅವಿಷ್ಕಾರ ಟಿಎಸ್‌ಪಿ, 2024-25ನೇ ಸಾಲಿನ ಸಿಎಂಡಿಕ್ಯೂ ಸಾಂಸ್ಥಿಕ-ಸಾಮಾನ್ಯ, ಸಿಎಂಡಿಕ್ಯೂ-ಸಾಮಾನ್ಯ, ಮೈಕ್ರೋ ಸಾಮಾಜಿಕ ಅಕ್ಷರ ಅವಿಷ್ಕಾರ ಎಸ್‌ಸಿಪಿ, ಲೆಕ್ಕ ಶೀರ್ಷಿಕೆ: ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ (ಠೇವಣಿ ವಂತಿಕೆ) ಮತ್ತು 2024-25ನೇ ಸಾಲಿನ ಲೆಕ್ಕ ಶೀರ್ಷಿಕೆ: 2059-80-053-00-200 (ಯೋಜನೇತರ) ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 09 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ **ಸಂಖ್ಯೆ: 18146, 17796, 17773, 17767, 17768, 0066, 17764, 18040 & 18552**) ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 03-03-2025** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04-03-2025** ಸಮಯ 16.30 ಗಂಟೆ, ಆರ್ಥಿಕ ಬಿಡ್ ತೆರೆಯುವ **ದಿನಾಂಕ: 06-03-2025** ಸಮಯ 11.00 ಗಂಟೆ, ಕನಿಷ್ಟ ಅಂದಾಜು ಮೊತ್ತ ರೂ. 105.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 860.00 ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು **http://kppp.karnataka.gov.in** ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/769/ಕೆಎಸ್ಎಂಸಿಎ/2024-25

ಟ್ವೀಟೂ-ಖಾರಾ

ಆರ್. ಅಶೋಕ್, ಪ್ರತಿಪಕ್ಷ ನಾಯಕ

ಕಾಂಗ್ರೆಸ್ ಸರಕಾರದಿಂದ ಕನ್ನಡದ ಕಗ್ಗೊಲೆ. ನಾಡದ್ರೋಹಿ INCKarnataka ಸರಕಾರ ಕನ್ನಡದ ಅಸ್ಮಿತೆಗೆ ಕೊಳ್ಳಿ ಇಟ್ಟಿದೆ.
ಕೆಪಿಎಸ್‌ಸಿ ಪ್ರಶ್ನೆ ಪತ್ರಿಗಳಲ್ಲಿ ಪದೇ ಪದೆ ಕನ್ನಡ ವ್ಯಾಕರಣ ತಪ್ಪಾಗಿ ಮುದ್ರಿಸಿ ಕನ್ನಡದ ಕಗ್ಗೊಲೆ ಮಾಡಿದ್ದಾಯ್ತು, ಕನ್ನಡ ಶಾಲೆಗಳನ್ನು ಮುಚ್ಚಿಸಿ ಕನ್ನಡ ಕಲಿಕೆಗೆ ಎಳ್ಳು ನೀರು ಬಿಟ್ಟಿದ್ದಾಯ್ತು, ಈಗ ಬಿಬಿಎಂಪಿ ಕೇಂದ್ರ ಕಚೇರಿಯ ಡಾ.ರಾಜ್ ಕುಮಾರ್ ಗಾಜಿನ ಮನೆಯಲ್ಲಿ ನಡೆಯುತ್ತಿರುವ 'ನಮ್ಮ ರಸ್ತೆ, ನಮ್ಮ ಹೆಮ್ಮೆ' ಕಾರ್ಯಕ್ರಮದಲ್ಲಿ ಕನ್ನಡವೇ ಮಾಯವಾಗಿದೆ. ಹೀಗೆ ಮುಂದುವರಿದರೆ ಈ ನಾಡದ್ರೋಹಿ ಕಾಂಗ್ರೆಸ್ ಸರಕಾರ ಕರುನಾಡಲ್ಲಿ ಕನ್ನಡವನ್ನ ಶಾಶ್ವತವಾಗಿ ಅಳಿಸಿ ಹಾಕುವುದು ಮಾತ್ರ ಗ್ಯಾರಂಟಿ.

ರೋಷನ್

ಎಲ್ಲವೂ ಹೊಂದಾಣಿಕೆ ರಾಜಕೀಯ ಸಾಕು ಹೋಗಪ್ಪಾ ಎಲ್ಲಾ ಕಟ್ಟು ಪುರಾಣ, ನೀನು ಜನರನ್ನು ಮರುಳು ಮಾಡುವುದನ್ನು ನಿಲ್ಲಿಸು.

ವಿಶ್ವವಾಣಿ ಕ್ಲಬ್ ಹೌಸ್
21.02.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಕುವೆಂಪು ರಾಮಾಯಣ ದರ್ಶನಂ - 33
vishwavani.news

ರಾಜ್ಯ ಬಿಜೆಪಿಯಲ್ಲಿನ ಮುಂದುವರಿದ ಬಣ ಬಡಿದಾಟ | ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದು ಭಿನ್ನರ ಬಣ

ರಾಜ್ಯ ಬಿಜೆಪಿಯಲ್ಲಿ ಹಾರಾಟ, ಕೂಗಾಟ: ವರಿಷ್ಠರ ಮೌನದಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆರೋಪಗಳಿಗೆ ಒಂದೇ ಸಲ ಉತ್ತರ ಕೊಡಲಿದ್ದೇನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳುತ್ತಿದ್ದರೆ, ಇನ್ನೊಂದೆಡೆ ಭಿನ್ನರ ಬಣ ಪ್ರತ್ಯೇಕ ಸಭೆ ನಡೆಸಿ ಶೋಕಾಸ್ ನೋಟಿಸ್ ಕಾಪಿ ಮಾಧ್ಯಮಗಳಿಗೆ ಕೊಟ್ಟಿರುವುದು ವಿಜಯೇಂದ್ರ ಎಂದು ಯತ್ನಾಳ್ ಹೂಂಕರಿಸಿದ್ದಾರೆ. ಇಷ್ಟೆಲ್ಲ ರಾದ್ಧಾಂತ ನಡೆಯುತ್ತಿದ್ದರೂ ವರಿಷ್ಠರ ಅಸಡ್ಡೆಯಿಂದಾಗಿ ರಾಜ್ಯ ಬಿಜೆಪಿಯಲ್ಲಿನ ಬಣ ಬಡಿದಾಟ ಯಥಾಸ್ಥಿತಿ ಮುಂದುವರಿದಿದೆ.

ಬೆಂಗಳೂರಿನ ಸದಾಶಿವ ನಗರದಲ್ಲಿರುವ ಕುಮಾರ್ ಬಂಗಾರಪ್ಪನವರ ಮನೆಯಲ್ಲಿ ಬಿಜೆಪಿ ಭಿನ್ನರ ಬಣ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ತಂಡ ಸಭೆ ನಡೆಸಿದೆ. ಬಿ.ಎಸ್.ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ ಅವರ ಬಗ್ಗೆ ಕೆಲ ವಿಚಾರ ಆರೋಪಿಸಿದ್ದ ಸಂಬಂಧ ಕೇಂದ್ರೀಯ ಶಿಸ್ತು ಸಮಿತಿ ನೀಡಿದ್ದ ಶೋಕಾಸ್ ನೋಟಿಸ್‌ಗೆ ಎರಡನೇ ಬಾರಿ ಯತ್ನಾಳ್ ದೂರು ಸಹಿತ ಉತ್ತರ ನೀಡಿದ್ದರು. ಇದೇ ವೇಳೆಯಲ್ಲಿ ಕೇಂದ್ರದ ವರಿಷ್ಠರು ಫೆ.20ರೊಳಗೆ ಸಮಸ್ಯೆ ಬಗೆಹರಿಸುತ್ತಾರೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಸೇರಿದಂತೆ ಹಿರಿಯ ಮುಖಂಡರು ಹೇಳಿದ್ದರೂ ಯಾವುದೇ ಬೆಳವಣಿಗೆ ನಡೆದಿಲ್ಲ.

ಪಕ್ಷದ ಕೇಂದ್ರೀಯ ವರಿಷ್ಠರು ರಾಜ್ಯದಲ್ಲಿನ ಬಣ ಬಡಿದಾಟದ ಸಮಸ್ಯೆ ಬಗೆಹರಿಸುವ ಗೋಜಿಗೂ ಹೋಗುತ್ತಿಲ್ಲ. ಹೀಗಾಗಿ ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದು ಕೂತಿರುವ ಭಿನ್ನರ ಬಣ ಮತ್ತೊಮ್ಮೆ ಸಭೆ ಸೇರಿದೆ. ಪಕ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆ ಹಾಗೂ ವಕ್ಫ್ ವಿಚಾರಕ್ಕೆ ಸಂಬಂಧಿಸಿದಂತೆ ಭಿನ್ನರು ಸಭೆಯಲ್ಲಿ ಚರ್ಚಿಸಿದ್ದಾರೆ. ಶಾಸಕ ಬಸನಗೌಡ ಯತ್ನಾಳ್, ಮಾಜಿ ಸಂಸದ ಪ್ರತಾಪ್ ಸಿಂಹ, ಕೇಂದ್ರದ ಮಾಜಿ ಸಚಿವ ಜಿ. ಎಂ.ಸಿದ್ದೇಶ್ವರ, ಶಾಸಕ ರಮೇಶ್ ಜಾರಕಿಹೊಳಿ ಸೇರಿದಂತೆ ಹಲವರು ಒಂದಾಗಿ ಗಂಭೀರ ಚರ್ಚೆ ನಡೆಸಿದ್ದಾರೆ. ಅಂತಿಮವಾಗಿ ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದಿದ್ದು, ಮತ್ತೊಮ್ಮೆ ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡಲು ದಿನ ನಿಗದಿ ಮಾಡಿದ್ದಾರೆ ಎನ್ನಲಾಗಿದೆ.

ಸಭೆಯ ನಂತರ ಮಾತನಾಡಿರುವ ಯತ್ನಾಳ್, ಶೋಕಾಸ್ ನೋಟಿಸ್ ಕಾಪಿ ಮಾಧ್ಯಮಗಳಿಗೆ ಕೊಟ್ಟಿರುವುದು ವಿಜಯೇಂದ್ರ. ನಾನು ಉತ್ತರ ಕೊಟ್ಟಿದ್ದೇನಾ, ಬಿಟ್ಟಿದ್ದಿನಾ ಎಂಬುದನ್ನು ವಿಜಯೇಂದ್ರ ಬಳಿಯೇ ಕೇಳಿ. ನನಗೆ ಮೇಲ್‌ಗೆ ನೋಟಿಸ್ ಬರುವುದು, ಅದು ಬಿಡುಗಡೆ ಆಗುತ್ತದೆ ಎಂದರೆ ಅದನ್ನು ವಿಜಯೇಂದ್ರ ಅವರೇ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಈ ನೋಟಿಸ್‌ಗೆ ಉತ್ತರನೂ ಅವರೇ (ವಿಜಯೇಂದ್ರ) ಕೊಟ್ಟಿರಬೇಕಲ್ವಾ. ಅದನ್ನು ನೋಡಿ ಮಾಧ್ಯಮಗಳು ಯತ್ನಾಳ್‌ಗೆ ನೋಟಿಸ್ ಎಂದು ಸುದ್ದಿ ಹೊಡೆದೇ ಹೊಡಿದ್ರಿ. ನನಗೆ ಬರುವ ಮೊದಲೇ ನೋಟಿಸ್ ಲೀಕ್ ಆಯ್ತು, ಅದನ್ನು ಯಾರು ಮಾಡಿದರು? ನನಗೆ ಹೈಕಮಾಂಡ್ ಕ್ಯಾಕರಿಸಿ ಉಗಿದಿದೆ ಎಂದು ಸುದ್ದಿ ಆಗಿದೆ. ನಾನೇನು ಟ್ವೀಟ್ ಮಾಡಿದ್ದೆ, ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬ ಬಗ್ಗೆ ಹೇಳಿದ್ದೆ. ಆದರೆ, ಯತ್ನಾಳ್‌ಗೆ ನೋಟಿಸ್ ಬಂದಿದೆ ಎಂಬ ಸುದ್ದಿಗಳು ಬರುತ್ತಿವೆ. ಯಾವ ಮಾಧ್ಯಮದಲ್ಲಿ ನೋಟಿಸ್ ಕಾಪಿ ಇದೆ ಎಂಬುದನ್ನು ತೋರಿಸಿ. ನನಗೆ ಹೈಕಮಾಂಡ್ ಕ್ಯಾಕರಿಸಿ ಉಗಿದಿದೆ ಎಂದು ಒಂದು ಮಾಧ್ಯಮದಲ್ಲಿ ಸುದ್ದಿ ಆಯ್ತು. ಯಾವುದಾದರೂ ಶಿಸ್ತು ಸಮಿತಿ ಉಗಿಯುವ ರೀತಿಯಲ್ಲಿ ನೋಟಿಸ್ ಬಂದಿದೆಯಾ? ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಯತ್ನಾಳ್ ಅವರ ಆರೋಪಗಳ ಕುರಿತು ಒಂದೇ ಸಲ ಉತ್ತರ ಕೊಡಲಿದ್ದೇನೆ. ನಿತ್ಯ ಉತ್ತರಿಸಲು ಸಾಧ್ಯವಿಲ್ಲ. ನಾನು ರಾಜ್ಯಾಧ್ಯಕ್ಷನಾಗಿ ಪಕ್ಷ ಸಂಘಟನೆಯಲ್ಲಿ ನಿರತನಾಗಿದ್ದೇನೆ.
-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ನಾವು ಬಡ ರಾಜಕಾರಣಿಗಳು, ವಿಜಯೇಂದ್ರ ತರ ಅಲ್ಲ. ನೋಟಿಸ್ ಬಗ್ಗೆ ದಾಖಲೆ ಇದೆಯಾ? ಇದೆಲ್ಲಾ ನಕಲಿ ನಾಟಕಗಳು, ಫೇಕ್ ನೋಟಿಸ್ ನಾಟಕ.
-ಬಸನಗೌಡ ಪಾಟೀಲ್ ಯತ್ನಾಳ್, ಬಿಜೆಪಿ ಶಾಸಕ

ದಿನಾಂಕ ಮುಂದೂಡಿಕೆ; ಕಾರ್ಯಕರ್ತರಲ್ಲಿ ಗೊಂದಲ

ಕಳೆದ ಎರಡು ಮೂರು ತಿಂಗಳಿಂದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಬಸನಗೌಡ ಪಾಟೀಲ್ ಯತ್ನಾಳ್ ನಡುವಿನ ಬಹಿರಂಗ ಗುದ್ದಾಟದ ವಿಷಯ ಬಂದಾಗಲೆಲ್ಲ, 'ಶೀಘ್ರವೇ ಕಠಿಣ ಕ್ರಮ' ಎನ್ನುವ ಮಾತುಗಳನ್ನು ವಿಜಯೇಂದ್ರ ಹೇಳುತ್ತಿದ್ದರು. ಕಳೆದ ಎರಡು ತಿಂಗಳ ಅವಧಿಯಲ್ಲಿ 'ಕಠಿಣ ಕ್ರಮ' ತೆಗೆದುಕೊಳ್ಳಲು ಎಂಟು ದಿನಾಂಕ ನಿಗದಿಪಡಿಸಿ, ಎಂಟರಲ್ಲಿಯೂ ಯಾವುದೇ ಬದಲಾವಣೆಯಾಗದಿರುವುದು ಕಾರ್ಯಕರ್ತರಲ್ಲಿ ಗೊಂದಲಕ್ಕೆ ಕಾರಣವಾಗಿದೆ. ಯತ್ನಾಳ್ ವಿರುದ್ಧ ಪಕ್ಷದ ವರಿಷ್ಠರು ಕ್ರಮ ಕೈಗೊಳ್ಳುವ ದಿನಾಂಕವನ್ನು ವಿಜಯೇಂದ್ರ ನೀಡುತ್ತಿದ್ದರೂ, ಯಾವುದೇ ಕ್ರಮವಾಗದಿರುವುದರಿಂದ ಪಕ್ಷದ ಕಾರ್ಯಕರ್ತರಲ್ಲಿ ಮುಂದೇನಾಗಲಿದೆ ಎನ್ನುವ ಗೊಂದಲ ಮುಂದುವರಿದಿದೆ.

ಅಪಾರ ಮೆಚ್ಚುಗೆ: ಪ್ರತಾಪ್ ಸಿಂಹ

ಸಭೆಯ ಬಳಿಕ ಮಾತನಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಕಳೆದ 6 ತಿಂಗಳಿಂದ ಯತ್ನಾಳ್ ಅವರ ನಾಯಕತ್ವದಲ್ಲಿ ವಕ್ಫ್ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ ಮತ್ತು ಅದರಲ್ಲಿ ಸಾಕಷ್ಟು ಯಶಸ್ಸು ಕೂಡ ಸಿಕ್ಕಿದೆ. ಸಚಿವ ಜಮೀರ್ ಅಹ್ಮದ್, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಶ್ರೀರಕ್ಷೆಯೊಂದಿಗೆ ಬಡರೈತರ ಭೂಮಿ, ಮಠಮಾನ್ಯಗಳ ಆಸ್ತಿ ಕಬಳಿಸುವ ಕೆಲಸ ಮಾಡುತ್ತಿದ್ದಾರೆ. ವಕ್ಫ್ ವಿರುದ್ಧ ನಡೆಸುತ್ತಿರುವ ಹೋರಾಟಕ್ಕೆ ಕಿಚ್ಚು ಹಚ್ಚಿದವರು ಯತ್ನಾಳ್ ಅವರು. ಹಿಂದೆ ಸಚಿವರಾಗಿದ್ದಾಗ ಕುಮಾರ್ ಬಂಗಾರಪ್ಪ ಅವರು ಕಮಿಟಿಯ ಸದಸ್ಯ ಕೂಡ ಆಗಿದ್ದರು. ಅವರ ಮಾರ್ಗದರ್ಶನದಲ್ಲಿ ಅಭಿಯಾನ ನಡೆಸಿ ಹೋರಾಟದ ವರದಿಯನ್ನು ಜಂಟಿ ಸಂಸದೀಯ ಸಮಿತಿಗೆ ಸಲ್ಲಿಸಿದ್ದೇವೆ. ತಮ್ಮ ತಂಡ ಮಾಡಿದ ಕೆಲಸಕ್ಕೆ ಜೆಪಿಸಿಯಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ ಎಂದರು.



ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ ಸೇರಿದಂತೆ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ಸಿಎಂ ವಿರುದ್ಧ ಎನ್.ಆರ್. ರಮೇಶ್ ದೂರು ದಾಖಲು

ಬೆಂಗಳೂರು: ಸ್ನೇಹಮಯಿ ಕೃಷ್ಣ ಅವರು ನೀಡಿದ್ದ ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಕ್ಲೀನ್‌ಚಿಟ್ ನೀಡಿದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಇದೇ ಮುಡಾದ ಮತ್ತೊಂದು ಆರೋಪ ಹೊರಿಸಿ, ಬಿಜೆಪಿ ನಾಯಕ ಎನ್. ಆರ್.ರಮೇಶ್ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದಾರೆ.

ಮುಡಾ ನಿರ್ಮಾಣ ಮಾಡಿದ್ದ ಬಡಾವಣೆಯಲ್ಲಿ ನಿಯಮಾನುಸಾರ ಎಲ್ಲ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ನಕ್ಷೆ ಮಂಜೂರಾತಿಗಳನ್ನು ನೀಡಿ ಹಲವಾರು ಮಂದಿ ಮನೆಗಳನ್ನು ನಿರ್ಮಿಸಿಕೊಂಡಿದ್ದರೂ ಸಿದ್ದರಾಮಯ್ಯ ಅವರು ತಮ್ಮ ಸ್ವಾರ್ಥಕ್ಕಾಗಿ ಕಾನೂನಿನ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ನಿಯಮ ಬಾಹಿರವಾಗಿ ತಮ್ಮ ಆಪ್ತ ಸ್ನೇಹಿತ ಹಾಗೂ ಮುಡಾದ ಮಾಜಿ ಅಧ್ಯಕ್ಷ ಸಿ.ಬಸವೇಗೌಡರಿಂದ ಅಕ್ರಮವಾಗಿ ಡಿ ನೋಟಿಫಿಕೇಷನ್ ಮಾಡಿಸಿದ್ದಾರೆ ಎಂದು ಆರೋಪಿಸಿ ದೂರು ನೀಡಿದ್ದಾರೆ.

ವಿಜಯನಗರ 2ನೇ ಹಂತದ ಬಡಾವಣೆ ನಿರ್ಮಾಣಕ್ಕೆಂದು ಕಾನೂನು ರೀತ್ಯಾ ಭೂಸ್ವಾಧೀನಪಡಿಸಿಕೊಂಡಿದ್ದ ಸದರಿ ಸರ್ವೇ ನಂ: 70/4 ಜಮೀನಿನಲ್ಲಿ ನಿವೇಶನಗಳ ಸಂಖ್ಯೆ 3160, 3161, 3162 ಮತ್ತು 3163 ಗಳನ್ನಾಗಿ ವಿಂಗಡಿಸಿ ನಿಯಮಾನುಸಾರ ಅರ್ಜಿದಾರರಿಗೆ ಸದರಿ ನಿವೇಶನಗಳನ್ನು ಹಂಚಿಕೆ ಮಾಡಿತ್ತು. ಈ ಪೈಕಿ, 3161 ರ ಸಂಖ್ಯೆಯ ನಿವೇಶನವನ್ನು ಸುಂದರ್ ರಾಜ್ ಎಂಬುವವರಿಗೆ ಹಂಚಿಕೆ ಮಾಡಿತ್ತು ಹಾಗೂ ತಮಗೆ ದಿಂದ ಹಂಚಿಕೆಯಾಗಿದ್ದ 3161 ಸಂಖ್ಯೆಯ ನಿವೇಶನದಲ್ಲಿ ದಿಂದಲೇ ನಕ್ಷೆ ಮಂಜೂರಾತಿ ಪಡೆದುಕೊಂಡು ಮನೆಯನ್ನು ನಿರ್ಮಿಸಿಕೊಂಡಿದ್ದರು. ಸಿದ್ದರಾಮಯ್ಯನವರು ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ನಿವೇಶನವನ್ನು ಖರೀದಿ ಮಾಡುವ 27 ದಿನಗಳ ಮುಂಚೆಯಷ್ಟೇ ಆಗಿನ ಮುಡಾ ಅಧ್ಯಕ್ಷರಾಗಿದ್ದ ಸಿ. ಬಸವೇಗೌಡರು ಕಾನೂನಿನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಸರ್ವೇ ನಂ: 70/4 ಜಮೀನನ್ನು ಡಿನೋಟಿಫಿಕೇಷನ್ ಮಾಡಿ ಆದೇಶಿಸಿದ್ದರು. ಸಿದ್ದರಾಮಯ್ಯ ನವರ ವಿರುದ್ಧ ಮತ್ತು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಕಾನೂನು ಬಾಹಿರವಾಗಿ ಮಾಡಿರುವ ಅಂದಿನ ಮುಡಾದ ಮಾಜಿ ಅಧ್ಯಕ್ಷ ಸಿ. ಬಸವೇಗೌಡ ಸೇರಿದಂತೆ ಈ ಹಗರಣದಲ್ಲಿ ಭಾಗಿಯಾಗಿ ರುವ ಎಲ್ಲ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮವಹಿಸಬೇಕು ಎಂದು ದೂರಿದ್ದಾರೆ.

ಇಡಿ ತನಿಖೆಯ ತಡೆಯಾಜ್ಞೆ ವಿಸ್ತರಿಸಿದ ಹೈ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಹಾಗೂ ಭೈರತಿ ಸುರೇಶ್‌ಗೆ ಇಡಿ (ಜಾರಿ ನಿರ್ದೇಶನಾಲಯ) ಸಮನ್ಸ್‌ಗೆ ನೀಡಲಾಗಿದ್ದ ತಡೆಯನ್ನು ಹೈಕೋರ್ಟ್ ವಿಸ್ತರಿಸಿದೆ. ಮುಡಾ ಪ್ರಕರಣದಲ್ಲಿ ಸಿಎಂ ಪತ್ನಿ ಪಾರ್ವತಿ ಅವರಿಗೆ ಇಡಿ ಸಮನ್ಸ್ ನೀಡಿದ್ದ ಹಿನ್ನೆಲೆಯಲ್ಲಿ ಸಮನ್ಸ್ ರದ್ದು ಕೋರಿ ಪಾರ್ವತಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಲಾಗಿದೆ. ಜಾರಿ ನಿರ್ದೇಶನಾಲಯದಿಂದ ಸಿಎಂ ಪತ್ನಿ ಅರ್ಜಿಗೆ ಆಕ್ಷೇಪಣೆ ಸಲ್ಲಿಕೆ ಮಾಡಲಾಗಿತ್ತು. ಸಿಎಂ ಪತ್ನಿ ಪಾರ್ವತಿ ಪರ ಹಿರಿಯ ವಕೀಲ ಸಂದೇಶ್ ಚೌಟ ವಾದ ಮಂಡಿಸಿದ್ದು, ಮುಡಾದ 14 ಸೈಟ್ ಗಳನ್ನು ಈಗಾಗಲೇ ಮರಳಿಸಲಾಗಿದೆ. ಸೈಟ್‌ಗಳನ್ನು ಮರಳಿಸಿರುವುದರಿಂದ ಇಡಿಗೆ ತನಿಖೆ ವ್ಯಾಪ್ತಿ ಇಲ್ಲ. ಅಪರಾಧದಿಂದ ಗಳಿಸಿದ ಸಂಪತ್ತಿದ್ದರೆ ಮಾತ್ರ ಇಡಿ ತನಿಖೆ ನಡೆಸಬಹುದು. ಆದರೆ ಸೈಟ್‌ಗಳನ್ನು ಮರಳಿಸಿದ ನಂತರ ಇಡಿ ತನಿಖೆ ಆರಂಭಿಸಿದೆ. ಅಪರಾಧದಿಂದ ಗಳಿಸಿದ ಹಣ ಚಟುವಟಿಕೆಗೆ ಬಳಕೆಯಾಗಬೇಕು. ಇಲ್ಲವಾದರೆ ಪಿಎಂಎಲ್‌ಎ ಕಾಯ್ದೆಯ ಅಂಶಗಳು ಅನ್ವಯವಾಗುವುದಿಲ್ಲವೆಂದು ವಾದಿಸಿದ್ದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ರಾಮಮೂರ್ತಿನಗರ ಮುಖ್ಯರಸ್ತೆ, ರಾಷ್ಟ್ರೋತ್ಥಾನ ಶಾಲೆ ಎದುರು ಸಾರ್ವಜನಿಕರಿಗೆ ತೊಂದರೆಯಾಗುವಂತೆ ಬೃಹತ್ ನಿರ್ಮಾಣ ಸಾಮಗ್ರಿಗಳನ್ನು ಅಡ್ಡಾದಿಡ್ಡಿಯಾಗಿ ಸುರಿಯಲಾಗಿರುವುದು.
- **ಪರಿಹಾರ:** ರಾಮಮೂರ್ತಿನಗರ ಮುಖ್ಯರಸ್ತೆ, ರಾಷ್ಟ್ರೋತ್ಥಾನ ಶಾಲೆ ಎದುರು ಸುರಿಯಲಾಗಿರುವ ಬೃಹತ್ ನಿರ್ಮಾಣ ಸಾಮಗ್ರಿಗಳನ್ನು ತೆರವುಗೊಳಿಸಲಾಗಿದ್ದು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

ಸಮಾಚಾರ ಸಣ್ಣದಲ್ಲ

ವಾಹನಕ್ಕೆ ಬೈಕ್ ಡಿಕ್ಕಿ ಮೂವರು ಸಾವು

ಧಾರವಾಡ: ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ವಾಹನಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಮೂವರು ಯುವಕರು ಸ್ಥಳದಲ್ಲಿಯೇ ಸಾವಿಗೀಡಾದ ಘಟನೆ ತಾಲೂಕಿನ ಬೇಲೂರ ಬಳಿ ರಾಷ್ಟ್ರೀಯ ಹೆದ್ದಾರಿ-48 ರಲ್ಲಿ ಗುರುವಾರ ನಡೆದಿದೆ. ಬೈಲಹೊಂಗಲ ಮೂಲದ ಧಾರವಾಡ ತಾಲೂಕಿನ ಕೋಟೂರು ಗ್ರಾಮದ ನಿವಾಸಿ ಮಹ್ಮದ್ ಜುಬೇರ ಜಮೀರ ಅಹ್ಮದ್ ಬಾಗೇವಾಡಿ (18), ಗದಗ ತಾಲೂಕಿನ ಜಗಾಪೂರ ಗ್ರಾಮದ, ಧಾರವಾಡ ತಾಲೂಕಿನ ಹೆಗ್ಗೇರಿ ನಿವಾಸಿ ಶಿವರಾಜ ಹನಮಪ್ಪ ಮುದಕಣ್ಣವರ (23) ಮತ್ತು ಧಾರವಾಡ ತಾಲೂಕಿನ ಕೋಟೂರು ಗ್ರಾಮದ ಇರ್ಫಾನ್ ಹುಸೇನಸಾಬ ಸಂಗೊಳ್ಳಿ (18) ಮೃತಪಟ್ಟ ಯುವಕರು. ಮೃತ ಮಹಮದ್ ಜುಬೇರನು ಬೈಕ್‌ನಲ್ಲಿ ಶಿವರಾಜ ಹಾಗೂ ಇರ್ಫಾನ್ ನೊಂದಿಗೆ ಬೆಳಗಾವಿ ಕಡೆಯಿಂದ ಧಾರವಾಡ ಕಡೆಗೆ ಅತಿ ವೇಗದಿಂದ ಬರುತ್ತಿದ್ದನು. ಈ ಸಮಯದಲ್ಲಿ ಭಾರತ ಪೆಟ್ರೋಲ್ ಪಂಪ್ ಬಳಿ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ವಾಹನಕ್ಕೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯ ಗೊಂಡ ಮೂವರೂ ಸ್ಥಳದಲ್ಲಿಯೇ ಅಸುನೀಗಿದ್ದಾರೆ. ಘಟನಾ ಸ್ಥಳಕ್ಕೆ ಸಿಪಿಐ ಶಮೀರ್ ಮುಲ್ಲಾ ಮತ್ತು ಪಿಎಸ್ ಐ ಸಿದ್ರಾಮಪ್ಪ ಉನ್ನದ ಭೇಟಿ ನೀಡಿದ್ದಾರೆ. ಈ ಕುರಿತು ಗರಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ಸಿಎಂ ಸಿದ್ದರಾಮಯ್ಯ ಪರ ಜಿ.ಟಿ.ದೇವೇಗೌಡ ಬ್ಯಾಟಿಂಗ್

ಸಿಎಂ ಭವಿಷ್ಯ, ಅದೃಷ್ಟ ಎರಡೂ ಗಟ್ಟಿಯಾಗಿದೆ

ಮೈಸೂರು: ಸಿದ್ದರಾಮಯ್ಯನವರ ಭವಿಷ್ಯ ಮತ್ತು ಅದೃಷ್ಟ ಎರಡು ಕೂಡ ಗಟ್ಟಿಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಸೂಚ್ಯವಾಗಿ ತಿಳಿಸಿದರು. ಮುಡಾ ಹಗರಣ ವಿಚಾರದಲ್ಲಿ ಲೋಕಾಯುಕ್ತ ರಿಂದ ಸಿಎಂಗೆ ಕ್ಲೀನ್ ಚೀಟ್ ವಿಚಾರ ಕುರಿತು ಸಿಎಂ ಸಿದ್ದರಾ ಮಯ್ಯಪರ ಬ್ಯಾಟಿಂಗ್ ಮಾಡಿದ ಶಾಸಕ ಜಿ. ಟಿ. ದೇವೇಗೌಡ, ಎಫ್ ಐಆರ್ ಆದ ಕೂಡಲೇ ಸಿದ್ದರಾಮಯ್ಯ ರಾಜೀನಾಮೆ ಕೇಳುತ್ತಿದ್ದರು. ಈಗ ನೋಡಿ ಅವರ ಮೇಲಿನ ಆರೋಪಕ್ಕೆ ಸೂಕ್ತ ಸಾಕ್ಷಿಯೇ ಇಲ್ಲ, ಈಗ ಏನು ಹೇಳುತ್ತಾರೆ ಎಂದು ಪ್ರಶ್ನಿಸಿದರು.

ಸಿಎಂ ಭವಿಷ್ಯ ಮತ್ತು ಅದೃಷ್ಟ ಎರಡು ಗಟ್ಟಿಯಾಗಿದೆ. ಅವರಂತಹ ಅದೃಷ್ಟ ದ ರಾಜಕಾರಣಿ ಇನ್ನೊಬ್ಬರಿಲ್ಲ. ಸಿದ್ದರಾಮಯ್ಯ 1983ರಲ್ಲಿ ಅದೃಷ್ಟದಿಂದ ಶಾಸಕರಾದರು. ಅವರ ಅದೃಷ್ಟ ಗಟ್ಟಿಯಾ ಗಿಯೇ ಸಾಗಿದೆ. ಸಿದ್ದರಾಮಯ್ಯ ರಿಗೆ ಇರುವಂ ತಹ ಅದೃಷ್ಟ ಬೇರೆ ಯಾರಿಗೂ ಇಲ್ಲ ಎಂದರು.

ಡಿಕೆಶಿ ಮುಂದೊಂದು ದಿನ ಮುಖ್ಯಮಂತ್ರಿ

ಡಿ.ಕೆ.ಶಿವಕುಮಾರ್ ಅವರು ಮುಂದೊಂದು ದಿನ ಸಿಎಂ ಆಗುತ್ತಾರೆ. ಆದರೆ, ಅದು ಯಾವಾಗ ಅಂತಾ ಗೊತ್ತಿಲ್ಲ. ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕಾದರೆ ಸಿದ್ದರಾಮಯ್ಯ ಬೆಂಬಲ ಬೇಕು. 10 ಶಾಸಕರನ್ನು ಇಟ್ಟುಕೊಂಡು ಯಾರೂ ಕೂಡ ಸಿಎಂ ಆಗಲು ಸಾಧ್ಯವಿಲ್ಲ. ಸಿದ್ದರಾಮಯ್ಯ ರಾಜೀನಾಮೆ ಕೊಡುತ್ತಾರೆ ಎಂದು ಕೇಳಿ ಕೇಳಿ ಜನಕ್ಕೂ ಸಾಕಾಗಿದೆ ಬಿಡಿ. ನನ್ನ ಅಕ್ಕನ ಮಗ ಪಡೆದಿರುವ ನಿವೇಶಗಳಿಗೂ ನನಗೂ ಯಾವುದೇ ಸಂಬಂಧವಿಲ್ಲ. ಪ್ರತಿಯೊಬ್ಬರೂ ರಾಜೀನಾಮೆ ಕೇಳುವಾಗ ಅದರ ಅಗತ್ಯ ಇಲ್ಲ ಎಂದು ನಾನು ಹೇಳಿದ್ದೆ. ಎಲ್ಲ ಪಕ್ಷದವರ ಮೇಲೂ ಎಫ್ ಐಆರ್ ಇದೆ, ಎಲ್ಲರೂ ರಾಜೀನಾಮೆ ಕೊಡಬೇಕಾಗುತ್ತೇ ಎಂದಿದ್ದೆ. ಅದಕ್ಕೆ ಎಲ್ಲರೂ ನಾನು ಸಿದ್ದರಾಮಯ್ಯನವರ ಪರ ಎಂದು ಹೇಳಿದ್ದರು ಎಂದು ತಿಳಿಸಿದರು.

ಸಿಎಂ ತಮ್ಮ ಸ್ಥಾನದಲ್ಲಿ ಗಟ್ಟಿಯಾಗಿ ಇದ್ದಾರೆ: ಮಹದೇವಪ್ಪ

ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ

ಮೈಸೂರು: ರಾಜ್ಯದಲ್ಲಿ ಸಿಎಂ ಬದಲಾವಣೆ ಪ್ರಶ್ನೆಯೇ ಬಂದಿಲ್ಲ, ಪ್ರಶ್ನೆಯೇ ಇಲ್ಲದ ಮೇಲೆ ಬದಲಾವಣೆ ಎಲ್ಲಿಂದ ಬಂತು ಎಂದು ಸಚಿವ ಡಾ.ಎಚ್.ಸಿ ಮಹದೇವಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಸಿಎಂ ಆಗಬೇಕು ಎಂದು ಶಾಸ ಕರು ಮುದ್ರೆ ಹೊತ್ತಿ ದ್ದಾರೆ. ಹೈಕಮಾಂಡ್ ಅದನ್ನು ನಿರ್ದೇಶಿಸಿದೆ. ಹೀಗಾಗಿ ಸಿಎಂ ತಮ್ಮ ಸ್ಥಾನದಲ್ಲಿ ಗಟ್ಟಿಯಾಗಿಯೇ ಇದ್ದಾರೆ ಎಂದರು.

ಸಿಎಂ ಬದಲಾಗುತ್ತಾರೆ ಎಂದು ಬಿಜೆಪಿ ಹೇಳುತ್ತಿದೆ. ಬಿಜೆಪಿ ಕಥೆ ಹೇಗಿದೆ ಅಂದರೆ ಆನೆ ಹೋಗುತ್ತಿತ್ತು, ನರಿ ನೋಡ್ತಾ ಇತ್ತು. ಆನೇದು ಬೀಳಲಿಲ್ಲ. ನರಿ ತಿನ್ನಲಿಲ್ಲ. ಇದು ಬಿಜೆಪಿ ಪರಿಸ್ಥಿತಿ ಎಂದು ಕುಟುಕಿದರು.

ದಲಿತ ಸಮಾವೇಶ ವಿಚಾರದಲ್ಲಿ ಸಭೆ ಸೇರಬಾರದು ಮಾತಡಬಾ ರದು ಅಂತ ಎಲ್ಲಿದೆ ಹೇಳಿ. ಸಮಾವೇಶ ಮಾಡುವುದಾದರೆ ಬಹಳ ಚೆನ್ನಾಗಿ ದೊಡ್ಡ ಮಟ್ಟದಲ್ಲಿ ಮಾಡಲು ಸಭೆ ಮಾಡುತ್ತೇವೆ ಅಷ್ಟೇ ಎಂದರು.

ಸಿಎಂ ಹೆಸರಿಗೆ ಕಳಂಕ ತರಲು ರಾಜಕೀಯ ಪಿತೂರಿ

ಮುಡಾ ಹಗರಣದಲ್ಲಿ ಲೋಕಾಯುಕ್ತದಿಂದ ಸಿಎಂ ಸಿದ್ದರಾಮಯ್ಯಗೆ ಕ್ಲೀನ್ ಚೀಟ್ ವಿಚಾರ ಕುರಿತು ಮಾತನಾಡಿದ ಅವರು, ಸಿದ್ದರಾಮಯ್ಯನವರ ಹೆಸರಿಗೆ ಕಳಂಕ ತರಲು ರಾಜಕೀಯ ಪಿತೂರಿಯ ಕೇಸ್ ಇದು. ಕ್ಲೀನ್ ಚೀಟ್ ಸಿಕ್ಕ ಕಾರಣ ಸಂತೋಷವಾಗಿದೆ. ಕೇಸ್ ಅನ್ನು ರಾಜಕೀಯವಾಗಿ ವಿಪಕ್ಷಗಳು ಬಳಸಿಕೊಂಡಿದ್ದವು. ಸಿದ್ದರಾಮಯ್ಯ ದೋಷಿನೇ ಆಗಿರಲಿಲ್ಲ. ಹೀಗಾಗಿ ನಿರ್ದೋಷಿ ಎಂಬ ಪ್ರಶ್ನೆಯೇ ಇಲ್ಲ. ಸಿದ್ದರಾಮಯ್ಯ ಮೊದಲಿಂದಲೂ ಗಟ್ಟಿಯಾಗಿದ್ದರು. ಈಗ ಕ್ಲೀನ್ ಚೀಟ್ ನಿಂದ ಅವರು ಗಟ್ಟಿ ಆಗುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಸಿದ್ದರಾಮಯ್ಯನವರ ಆತ್ಮಸಾಕ್ಷಿ ಮೊದಲಿಂದಲೂ ತಾವು ತಪ್ಪು ಮಾಡಿಲ್ಲ ಎಂದು ಹೇಳುತ್ತಿತ್ತು. ನಮಗೂ ಸಿದ್ದರಾಮಯ್ಯ ಅವರು ತಪ್ಪು ಮಾಡಿಲ್ಲ ಎಂದು ಗೊತ್ತಿತ್ತು ಎಂದು ಸಮರ್ಥಿಸಿಕೊಂಡರು.

ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ನಡೆಸಲಾಗಿದೆ: ಡಿಸಿಎಂ

ಮುಡಾ ಪ್ರಕರಣ ರಾಜಕೀಯ ಪ್ರೇರಿತ

ಬೆಂಗಳೂರು: ಮುಡಾ ಪ್ರಕರಣ ಬಿಜೆಪಿ ಹಾಗೂ ಜೆಡಿಎಸ್ ಕುತಂತ್ರ, ಇದು ಹೆಚ್ಚಿನ ದಿನ ನಡೆಯುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ ಪ್ರಕರಣದಲ್ಲಿ ಲೋಕಾಯುಕ್ತ ಸಂಸ್ಥೆ ಬಿ ರಿಪೋರ್ಟ್ ಸಲ್ಲಿಕೆ ಮಾಡಿ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ನೀಡಿದೆ. ಈ ಪ್ರಕರಣದ ಪ್ರಾರಂಭದಲ್ಲೇ ನಾನು ಹೇಳಿದ್ದೆ. ಬಿಜೆಪಿ ಹಾಗೂ ಜೆಡಿಎಸ್‌ನವರು ಬೆಂಗಳೂರಿನಿಂದ ಮೈಸೂರುವರೆಗೆ ಪಾದಯಾತ್ರೆ ಮಾಡಿದಾಗಲೇ, ನಾನು ಏನು ಹೇಳಬೇಕೋ ಹೇಳಿದ್ದೆ. ಇದು ರಾಜಕೀಯ ಪ್ರೇರಿತ ಆರೋಪ ಎಂದು ಟೀಕಿಸಿದರು.

ಯಾವ ದಾಖಲೆಯಲ್ಲಿಯೂ ಸಿದ್ದರಾಮಯ್ಯ ಅವರ ಸಹಿ ಇಲ್ಲದಿರುವಾಗ, ಸಂಬಂಧವೇ ಇಲ್ಲದಿರುವಾಗ ಅವರ ಪಾತ್ರ ಹೇಗೆ ಬರುತ್ತದೆ? ಆಸ್ತಿ ಕಳೆದುಕೊಂಡವರು ಪರಿಹಾರ ಕೇಳುವುದು ಸಹಜ. ನಾವು ನೀವು ಕೂಡ ಕೇಳುತ್ತೇವೆ ಎಂದು ಹೇಳಿದರು.

ಇಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪವಿಲ್ಲ

ಲೋಕಾಯುಕ್ತ ಸಂಸ್ಥೆ ಸರಕಾರದ ತಾಳಕ್ಕೆ ಕುಣಿದಿದೆ ಎಂಬ ಬಿಜೆಪಿ ಆರೋಪದ ಬಗ್ಗೆ ಕೇಳಿದಾಗ, ಸುಪ್ರೀಂ ಕೋರ್ಟ್ ತೀರ್ಪು ಏನಿದೆ ಗೊತ್ತಿದೆಯೇ? ಸ್ಥಳೀಯ ಮಟ್ಟದ ಯಾವುದೇ ಸಂಸ್ಥೆಗಳನ್ನು ದುರ್ಬಲಗೊಳಿಸಬಾರದು ಎಂಬ ನಿರ್ದೇಶನವಿದೆ. ಇನ್ನು ಹೈಕೋರ್ಟ್ ಕೂಡ ಲೋಕಾಯುಕ್ತ ಸ್ವಾಯತ್ತ ಸಂಸ್ಥೆ ಎಂದು ಹೇಳಿದೆ. ಅವರವರು ಅವರ ಕೆಲಸ ಮಾಡುತ್ತಿದ್ದಾರೆ. ಯಾರೇ ಸಿಎಂ ಆಗಿರಲಿ, ಬೊಮ್ಮಾಯಿ ಸಿಎಂ ಆಗಿರಲಿ, ಮುಖ್ಯಮಂತ್ರಿ ಹೇಳಿದಂತೆ ಲೋಕಾಯುಕ್ತ ಪೊಲೀಸರು ಕೇಳುತ್ತಾರಾ? ಇಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪವಿಲ್ಲ. ಇಲ್ಲಿ ಯಾವುದೇ ಅಧಿಕಾರಿ ನೇಮಿಸಬೇಕಾದರೂ ಲೋಕಾಯುಕ್ತರ ಅನುಮತಿ ಮೇರೆಗೆ ಕೆಲಸ ಮಾಡಲಾಗುವುದು. ಇಲ್ಲಿ ಕರ್ನಾಟಕದ ಅಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತೆ ಹೊರತು, ಹೊರ ರಾಜ್ಯದವರಲ್ಲ ಎಂದರು.

ಭಾರತೀಯ ಚಿತ್ರರಂಗದ ಪ್ರಖ್ಯಾತ ಹಿನ್ನೆಲೆ ಗಾಯಕಿ ಎಸ್.ಜಾನಕಿ ಅವರು ಗುರುವಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಹಾಗೂ ಸುಬ್ರಹ್ಮಣ್ಯ ಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಅವರನ್ನು ಸುಬ್ರಹ್ಮಣ್ಯ ದೇವಸ್ಥಾನದ ವತಿಯಿಂದ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಯೇಸುರಾಜ್ ಹಾಗೂ ಸುಬ್ರಹ್ಮಣ್ಯದ ನಾಗರಿಕರ ಪರವಾಗಿ ಗ್ರಾಪಂ ಸದಸ್ಯ ಹರೀಶ ಇಂಜಾಡಿ ಅವರು ಶಾಲು ಹೊದಿಸಿ, ಪ್ರಸಾದ, ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಬಾಲಿಶ ಹೇಳಿಕೆಯನ್ನು ನೀಡಬಾರದು: ಶಾಸಕ ಬಾಲಕೃಷ್ಣ ಎಚ್ಚರಿಕೆ

ರಾಜಣ್ಣ ಬಾಯಿ ಚಪಲಕ್ಕೆ ಮಾತನಾಡಬಾರದು

ರಾಮನಗರ: ರಾಜಣ್ಣ ಬಾಯಿ ಚಪಲಕ್ಕೆ, ತಮ್ಮ ತೆವಲು ತೀರಿಸಿಕೊಳ್ಳಲು ಈ ರೀತಿ ಹೇಳಿಕೆ ಕೊಡಬಾರದು ಎಂದು ಮಾಗಡಿ ಶಾಸಕ ಬಾಲಕೃಷ್ಣ ಎಚ್ಚರಿಕೆ ನೀಡಿದ್ದಾರೆ.

ಮಾಗಡಿಗೆ ಹೇಮಾವತಿ ನೀರು ಕೊಡಲ್ಲ ಎಂಬ ಸಚಿವ ರಾಜಣ್ಣ ಹೇಳಿಕೆಗೆ ಬಾಲಕೃಷ್ಣ ಕೆಂಡಾಮಂಡಲವಾಗಿದ್ದಾರೆ. ತುಮಕೂರಿನಲ್ಲಿ ಹೈನುಗಾರಿಕೆ ಮಾಡುವ ಜನ ನಮ್ಮ ಕುದೂರಿನಲ್ಲಿ ಹಾಲು ಮಾರಾಟ ಮಾಡುತ್ತಿದ್ದಾರೆ. ತುಮಕೂರು ಹಾಲು ಉತ್ಪನ್ನ ಬೆಂಗಳೂರಿನಲ್ಲಿ ಅರ್ಧ ಭಾಗ, ನಮ್ಮ ಕುದೂರಿನಲ್ಲಿ ಅರ್ಧ ಭಾಗ ಮಾರಾಟ ಆಗುತ್ತಿದೆ. ನಾವು ಅದನ್ನು ಏನಾದರೂ ತಡೆದು ನಿಲ್ಲಿಸಿದ್ರೆ, ಹೇಗೆ? ನಿಮ್ಮ ಹಾಲು ಬೇಡ, ನಿಮ್ಮ ನೀರು ಬೇಡ ಅಂತಾ ತಡೆದು ನಿಲ್ಲಿಸಿದ್ರೆ ಅದರಿಂದ ಹಾನಿ ಆಗೋದು ತುಮಕೂರಿನ ರೈತರಿಗೆ. ಅದನ್ನು ನಾವು ಮಾಡಬೇಕಾ ಎಂದು ಕಿಡಿಕಾರಿದರು.

ರಾಜಣ್ಣ ಅವರು ವಿವೇಚನೆಯಿಂದ ಮಾತನಾಡಬೇಕು. ಅವರು ಹಿರಿಯ ಮಂತ್ರಿಗಳು, ಈ ರೀತಿ ಬಾಲಿಶ ಹೇಳಿಕೆಯನ್ನು ನೀಡಬಾರದು. ಅದೇನೇ ಹೇಳೋದು ಇದ್ದರೂ ಸರಕಾರದ ಹಂತದಲ್ಲಿ ಹೇಳಬೇಕು. ಕೊಡೋದೆ ಇಲ್ಲ, ಬಿಡೋದೆ ಇಲ್ಲ ಅಂದರೆ ಹೇಗೆ? ತುಮಕೂರಿನಿಂದ ಬರುವ ಹಾಲು ನಾವು ನಿಲ್ಲಿಸಿದ್ರೆ ಹೇಗೆ? ಇದು ಒಕ್ಕೂಟದ ವ್ಯವಸ್ಥೆ, ಒಂದೇ ದೇಶ, ಒಂದೇ ರಾಜ್ಯದಲ್ಲಿ ಬದುಕುತ್ತಿದ್ದೇವೆ. ಒಬ್ಬ ಹಿರಿಯ ಸಚಿವರಾಗಿ ಈ ರೀತಿ ಚಿಲ್ಲರೆ ಹೇಳಿಕೆ ಕೊಡಬಾರದು. ತೆವಲು ತೀರಿಸಿಕೊಳ್ಳಲು ಈ ರೀತಿ ಮಾತನಾಡಬಾರದು ಎಂದು ವಾಗ್ದಾಳಿ ನಡೆಸಿದರು.

ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷರಾಗಿ ಮಂಜುನಾಥ್: ಅಧಿಕೃತ ಘೋಷಣೆ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿ ಎಚ್.ಎಸ್. ಮಂಜುನಾಥ್ ಅವರನ್ನು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ.

ಗುರುವಾರ ಎಐಸಿಸಿ ಮಂಜುನಾಥ್ ಅವರ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದೆ. 2024ರ ಸೆಪ್ಟೆಂಬರ್ -ಅಕ್ಟೋಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಮಂಜುನಾಥ್ 5,67,343 ಮತ ಪಡೆದು ಮೊದಲ ಸಾಲಿನಲ್ಲಿದ್ದರು. ಪಕ್ಷದ ನಿಯಮಾವಳಿ ಪ್ರಕಾರ ಅತಿ ಹೆಚ್ಚು ಮತ ಪಡೆದ ಮೂವರನ್ನು ಸಂದರ್ಶನ ನಡೆಸಿ ಒಬ್ಬರನ್ನು ಸ್ಥಾನಕ್ಕೆ ಆಯ್ಕೆ ಮಾಡುವ ನಿಯಮಾವಳಿ ರೂಪಿಸಿಕೊಳ್ಳಲಾಗಿತ್ತು. ಮೂಲತಃ ಮಂಡ್ಯ ಜಿಲ್ಲೆ ನಾಗಮಂಗಲದವರಾದ ಮಂಜುನಾಥ್, ಎರಡು ಅವಧಿಗೆ ಎನ್‌ಎಸ್‌ಯುಐ ಅಧ್ಯಕ್ಷರಾಗಿದ್ದರು. 2018ರ ವಿಧಾನಸಭೆ ಚುನಾವಣೆಯಲ್ಲಿ ಮಹಾಲಕ್ಷ್ಮೀ ಬಡಾವಣೆ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.

ಈ ವೇಳೆ ಎಚ್.ಎಸ್. ಮಂಜುನಾಥ್ ಮಾತನಾಡಿ, ಕೆಪಿಸಿಸಿ ಯುವ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿದ ರಾಹುಲ್ ಗಾಂಧಿಯವರಿಗೆ ನಾನು ಅಭಾರಿಯಾಗಿದ್ದೇನೆ. ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನನ್ನ ರಾಜಕೀಯ ಗುರು ಡಿ.ಕೆ.ಶಿವಕುಮಾರ್ ಅವರು ನನ್ನನ್ನು ರೂಪಿಸುವಲ್ಲಿ ಮುಖ್ಯಪಾತ್ರ ವಹಿಸಿದ್ದಾರೆಂದರು. ಮುಂದೆ ರಾಜ್ಯದುದ್ದಗಲಕ್ಕೂ ಓಡಾಡಿ ಪಕ್ಷ ಸಂಘಟಿಸುವ ಕೆಲಸ ಮಾಡುತ್ತೇವೆ. ಮುಖ್ಯವಾಗಿ ಯುವಕರನ್ನು ಸಂಘಟಿಸುವುದು ಪ್ರಮುಖ ಗುರಿ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು, ಹಣ ದುಬ್ಬರದ ಪರಿಣಾಮ ಜನ ಸಾಮಾನ್ಯರ ಮೇಲಾಗುತ್ತಿದೆ. ಈ ಸಂದರ್ಭದಲ್ಲಿ ಸಮಾಜದ ದನಿಯಾಗಿ ಹೋರಾಟ ಮಾಡುತ್ತೇನೆ ಎಂದರು.

ಯುವ ಕಾಂಗ್ರೆಸ್ ರಾಷ್ಟ್ರೀಯಾಧ್ಯಕ್ಷ ಉದಯ್ ಬಾನು ಚಿಬ್ಬು ಅವರು ರಾಜ್ಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ಅವರಿಗೆ ನೇಮಕ ಪತ್ರ ವಿತರಿಸಿದರು.

ಇಂದಿನ ಕಾಲಘಟ್ಟದಲ್ಲಿ ಗಾಂಧಿ ತತ್ವದ ಅನಿವಾರ್ಯತೆ ಕುರಿತು ಯುವಕರಿಗೆ ಕಾರ್ಯಾಗಾರ ಮಾಡುವ ಉದ್ದೇಶವಿದೆ. ಪಕ್ಷದ ನಾಯಕರೊಂದಿಗೆ ಸಮಾಲೋಚನೆ ನಡೆಸಿ ಈ ವಿಚಾರದಲ್ಲಿ ಕಾರ್ಯಕ್ರಮ ರೂಪಿಸಲಾಗುತ್ತದೆ ಎಂದ ಅವರು, ನನ್ನದು ಯಾವುದೆ ವ್ಯಕ್ತಿ ವಿರುದ್ಧ ವೈಯಕ್ತಿಕ ಹೋರಾಟ ಮಾಡುವುದಿಲ್ಲ, ಸೈದ್ಧಾಂತಿಕ ವಿಚಾರ ಧಾರೆ ಮೇಲೆಯೇ ಸಾಗುತ್ತೇವೆ. ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಜತೆಗೆ ಕಾಂಗ್ರೆಸ್‌ಗೆ ಯುವಕರನ್ನು ಸೆಳೆಯಲು ವಿಶೇಷ ಪ್ರಯತ್ನ ಮಾಡಲಾಗುತ್ತದೆ.
-ಎಚ್.ಎಸ್. ಮಂಜುನಾಥ್, ರಾಜ್ಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ

ವಿಶ್ವವಾಣಿ

ಸಂಪಾದಕೀಯ

ಕಾಡ್ಗಿಚ್ಚಿನ ಬಗ್ಗೆ ನಿರ್ಲಕ್ಷ್ಯ ಸಲ್ಲ

ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಗಿಂತ ಕಾಡಂಚಿನ ಜನರನ್ನು ಒಕ್ಕಲೆಬ್ಬಿಸಲು ಹೆಚ್ಚು ಶ್ರಮ ವಹಿಸುತ್ತಿರುವ ರಾಜ್ಯ ಅರಣ್ಯ ಇಲಾಖೆ ಬೇಸಿಗೆಯಲ್ಲಿ ಎದುರಾಗುವ ಕಾಡ್ಗಿಚ್ಚಿನ ಬಗ್ಗೆ ನಿರ್ಲಕ್ಷ್ಯ ವಹಿಸಿರುವುದು ಆತಂಕದ ವಿದ್ಯಮಾನ. ಪಶ್ಚಿಮ ಘಟ್ಟದ ಚಾರ್ಮಾಡಿ ಘಾಟ್‌ನಲ್ಲಿ ಇತ್ತೀಚೆಗೆ ಕಾಣಿಸಿಕೊಂಡ ಕಾಡ್ಗಿಚ್ಚು ಎಕರೆಗಟ್ಟಲೆ ಪ್ರಮಾಣದ ಅರಣ್ಯ ಸಂಪತ್ತನ್ನು ಬಲಿ ತೆಗೆದುಕೊಂಡಿದೆ. ಇದನ್ನು ನಿಯಂತ್ರಿಸಲು ಇಲಾಖೆಗೆ ಎರಡು, ಮೂರು ದಿನಗಳೇ ಬೇಕಾದವು. ಇದರ ಬೆನ್ನಿಗೇ ಮುಳ್ಳಯ್ಯನ ಗಿರಿ ಮತ್ತು ಕಲ್ಲತ್ತಗಿರಿ ಪ್ರದೇಶದಲ್ಲಿ ಕಾಡ್ಗಿಚ್ಚು ಅಮೂಲ್ಯ ವನಸಂಪತ್ತನ್ನು ದಹಿಸಿರುವ ವರದಿಗಳು ಬಂದಿವೆ. ಬೇಸಿಗೆಯಲ್ಲಿ ಕಾಡ್ಗಿಚ್ಚು ಕಾಣಿಸಿಕೊಳ್ಳುವುದು ಹೊಸ ವಿದ್ಯಮಾನ ವೇನಲ್ಲ. ಪ್ರತೀ ವರ್ಷ ಇದನ್ನು ಎದುರಿಸಲು ಅಧಿಕಾರಿಗಳು ಸಾಕಷ್ಟು ಮುಂಜಾಗ್ರತೆ ಕ್ರಮ ವಹಿಸಿರುತ್ತಾರೆ. ಆದರೆ ಈ ಬಾರಿ ಬೇಸಿಗೆಯ ಆರಂಭ'ದಲ್ಲಿಯೇ ಕಾಡಿಗೆ ಬೆಂಕಿ ಬಿದ್ದಿರುವುದು, ಈ ಸಿದ್ಧತೆಯ ಬಗ್ಗೆ ಸಂದೇಹ ಮೂಡುವಂತೆ ಮಾಡಿದೆ. ಕಾಫಿನಾಡು ಚಿಕ್ಕಮಗಳೂರು ಪಶ್ಚಿಮಘಟ್ಟದ ಅಮೂಲ್ಯ ವನಸಿರಿ ಹೊಂದಿರುವ ಪ್ರದೇಶ. ಇಲ್ಲಿ ಕಾಫಿ ತೋಟಗಳೂ ಅರಣ್ಯದ ನಡುವೆಯೇ ಇದೆ. ಆದರೆ ಇಲ್ಲಿನ ಜಿಲ್ಲಾ ಕೇಂದ್ರದಲ್ಲಿ ಕೇವಲ ಒಂದು ಅಗ್ನಿಶಾಮಕ ವಾಹನವಿದೆ. ಇನ್ನೊಂದು ವಾಹನ ಇದ್ದರೂ 15 ವರ್ಷ ದಾಟಿರುವ ಕಾರಣ ಆರ್.ಸಿ ರದ್ದಾಗಿದೆ ಎಂದು ಹೇಳಲಾಗಿದೆ. ಸರಕಾರದ ನಿಯಮದ ಪ್ರಕಾರ ಜಿಲ್ಲಾ ಕೇಂದ್ರದಲ್ಲಿ 3, ತಾಲೂಕು ಕೇಂದ್ರದಲ್ಲಿ 2 ಅಗ್ನಿಶಾಮಕ ವಾಹನಗಳಿರಬೇಕು. ಆದರೆ ಇಲ್ಲಿನ 9 ತಾಲೂಕುಗಳಲ್ಲಿ ಒಟ್ಟು 7 ಅಗ್ನಿಶಾಮಕ ವಾಹನಗಳಷ್ಟೇ ಇವೆ. ಕಳಸ, ಅಜ್ಜಂಪುರದಲ್ಲಿ ಅಗ್ನಿಶಾಮಕ ಠಾಣೆಯೇ ಇಲ್ಲ. ಬಂಡೀಪುರ, ನಾಗರ ಹೊಳೆ ಮತ್ತಿತರ ಸಂರಕ್ಷಿತ ಅರಣ್ಯಗಳಲ್ಲಿ ಸಂಭಾವ್ಯ ಅಗ್ನಿ ಅನಾಹುತಗಳನ್ನು ಎದುರಿಸುವುದಕ್ಕಾಗಿ ಬೇಸಿಗೆ ಆರಂಭದಲ್ಲಿಯೇ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ. ಕೆಲ ವರ್ಷಗಳ ಹಿಂದಿನ ತನಕ ಬೇಸಿಗೆಯಲ್ಲಿ ಸ್ಥಳೀಯರನ್ನೂ ಗುತ್ತಿಗೆ ಆಧಾರದಲ್ಲಿ ಕಾಡ್ಗಿಚ್ಚು ನಿಯಂತ್ರಣ ತಂಡಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ಇತ್ತೀಚೆಗೆ ಸಿಬ್ಬಂದಿಗಳನ್ನಷ್ಟೇ ಬಳಸಿಕೊಳ್ಳಲಾಗುತ್ತಿದೆ. ಸಾಕಷ್ಟು ಸಂಪನ್ಮೂಲ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಹೊರತಾಗಿಯೂ ಕ್ಯಾಲಿಫೋರ್ನಿಯಾ ಮತ್ತು ಲಾಸ್ ಎಂಜಲಿಸ್ ರಾಜ್ಯಗಳಲ್ಲಿ ಇತ್ತೀಚೆಗೆ ಕಾಣಿಸಿಕೊಂಡ ಭೀಕರ ಕಾಡ್ಗಿಚ್ಚನ್ನು ನಿಯಂತ್ರಣಕ್ಕೆ ತರಲಾಗದೇ ಅಮೆರಿಕ ವಿಶ್ವದೆದುರು ಅಮೆರಿಕ ಬೆತ್ತಲಾಗಿತ್ತು. ನುರಿತ ಸಿಬ್ಬಂದಿ, ಅಗ್ನಿಶಾಮಕ ವಾಹನ, ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳ ಕೊರತೆ ಹೊಂದಿರುವ ಅರಣ್ಯ ಇಲಾಖೆ ಕನಿಷ್ಠ ಪಕ್ಷ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಮ್ಮ ಅರಣ್ಯ ಮತ್ತು ವನ್ಯ ಸಂಪತ್ತನ್ನು ರಕ್ಷಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲ.

ಸೊಂಪಾದಕೀಯ

ಹುಂಜ ಜಾ.. ಜಾ.. ಜಾ...

ಮೈನೆ ಪ್ಯಾರ್ ಕಿಯಾ ಚಿತ್ರದ ಹಿಟ್ ಹಾಡು 'ಕಬೂತರ್ ಜಾ ಜಾ' ಸಿನಿರಸಿಕರಿಗೆ ಇಷ್ಟ ಆಗಿದ್ರೆ, ಇಲ್ಲೊಬ್ಬ ವೃದ್ಧರು ಪಾರಿವಾಳದ ಬದಲು 'ಹುಂಜ ಜಾ.. ಜಾ..' ಎನ್ನುತ್ತಿದ್ದಾರೆ. ಪಾಪ ಹೇಳಿ ಕೇಳಿ ಬೆಳಗ್ಗೆದ್ದು ಕೂಗೋದು, ಜನರನ್ನು ಎಚ್ಚರಿಸೋದು ಹುಂಜದ ಕೆಲಸ. ಆದರೆ ಅದನ್ನು ನಿಯತ್ತಾಗಿ ಮಾಡಿದ್ದಕ್ಕೆ ಈಗ ವಿಷಯ ಅದರ ಕುತ್ತಿಗೆಗೆ ಬಂದಿದೆ. 'ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ' ಎನ್ನುವಂತೆ, ಎಲ್ಲರನ್ನೂ ಎಚ್ಚರಿಸೋದು ಬ್ಯಾಡ, ನಿನ್ ಕೆಲಸ ನೀನು ನೋಡ್ಕೋ ಅಂತ ಹುಂಜದ ಮೇಲೆ ಗರಂ ಆಗಿದ್ದಾರೆ ಈ ಸೀನಿಯರ್ ಸಿಟಿಜನ್. ಪಾಪ, ಈ ಪಾಪದ ಹುಂಜದ ಮೇಲೆ ನಿದ್ದೆಗೆಡಿಸುತ್ತಿರುವ ಆಪಾದನೆ ಹಾಕಿದ್ದಾರೆ. ಆದರೆ ಈ ಹುಂಜದ್ದೂ ಸ್ವಲ್ಪ ತಪ್ಪಿದೆ. ಬೆಳಗಿನ ಜಾವದಲ್ಲಿ ಕೂಗಿ ಎಲ್ಲರನ್ನೂ ಎಚ್ಚರಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲವೇನೋ. ತೀರಾ ಮೂರು ಗಂಟೆಯ ನಸುಕಿನಲ್ಲೇ ಎದ್ದು ಕೂಗಿದರೆ ಪಾಪ ಡಿಸ್ಟರ್ಬ್ ಆಗದೇ ಇರುತ್ತದೆಯೇ? 'ಈ ಹುಂಜ ಪ್ರತಿದಿನ 3ಕ್ಕೆ ಎದ್ದು ವರಾತ ತೆಗೆಯುತ್ತದೆ. ಇದು ಅಷ್ಟು ಬೆಳಗ್ಗೆ ಎದ್ದು ಕೂಗೋದ್ರಿಂದ ನನಗೆ ನಿದ್ದೆ ಬರುತ್ತಿಲ್ಲ, ಅದರ ವಿರುದ್ಧ ಕ್ರಮ ಕೈಗೊಳ್ಳಿ' ಅಂತ ಕೇರಳದ ಪತ್ತನಂತಿಟ್ಟ ಜಿಲ್ಲೆಯ ಪಳ್ಳಿಕಲ್ ಗ್ರಾಮದ ವೃದ್ಧರು ದೂರು ದಾಖಲಿಸಿದ್ದಾರೆ. 'ಈ ಹುಂಜ 3 ಗಂಟೆಗೆ ಒಂದೇ ಸಮನೆ ಕೂಗಲು ಆರಂಭಿಸುತ್ತದೆ. ಇದರಿಂದ ನೆಮ್ಮದಿಯ ನಿದ್ದೆ ಅನ್ನೋದು ದುಸ್ತರವಾಗಿದೆ, ಮನಸ್ಸಿಗೆ ಕಿರಿಕಿರಿ ಆಗುತ್ತಿದೆ' ಎಂದು ಹುಂಜ ಸಂತ್ರಸ್ತ ರಾಧಾಕೃಷ್ಣ ಕುರುಪ್ ಅವರು ಅಡೂರು ಕಂದಾಯ ವಿಭಾಗೀಯ ಕಚೇರಿಯಲ್ಲಿ ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳಲು ಆಗ್ರಹ ಮಾಡಿದ್ದಾರೆ. ನೆರೆಮನೆಯ ನಿವಾಸಿ ಅನಿಲ್ ಕುಮಾರ್ ಅವರಿಗೆ ಈಗ ಅಧಿಕಾರಿಗಳು ಹುಂಜವನ್ನು ಹದ್ದುಬಸ್ತಿನಲ್ಲಿಡಲು ಆದೇಶ ಮಾಡಿದ್ದಾರೆ. ಅದು ಆಗದಿದ್ದರೆ ಅವರ ಪೌಲ್ಟ್ರಿ ಫಾರ್ಮ್ ಅನ್ನು ಬೇರೆ ಕಡೆ ಸ್ಥಳಾಂತರ ಮಾಡಲು ಹೇಳಿದ್ದಾರೆ. ಒಟ್ಟಿನಲ್ಲಿ ಲೋಕದ ಜನರನ್ನು ಎಚ್ಚರಿಸುವ ಕೆಲಸ ಮಾಡಿದರೆ ನಿಮಗೆ ಕುತ್ತು ಬಂದು ಅದು ನಿಮ್ಮ ಕುತ್ತಿಗೆಗೇ ಬರುತ್ತದೆ ಅನ್ನೋ ಮಾತು ಮತ್ತೆ ಪ್ರೂವ್ ಆಗಿದೆ.

ಸಂಪಾದಕರ ಸದ್ಯಶೋಧನೆ

ಕೊರಿಯನ್ ಮನೆಯಲ್ಲಿ ಕಂಡಿದ್ದು

ನಾನು ವಾಸಿಸುವ ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿ ದಕ್ಷಿಣ ಕೊರಿಯಾ ಮೂಲದ ದಂಪತಿಗಳು ದೊಡ್ಡ (ಬಾಡಿಗೆ) ಮನೆಯೊಂದರಲ್ಲಿ ವಾಸವಾಗಿದ್ದಾರೆ. ಅವರು ಸಿಯೋಲ್ ಮೂಲದ ಖಾಸಗಿ ಕಂಪನಿಯೊಂದರ ಬೆಂಗಳೂರು ಶಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಕೆಲ ತಿಂಗಳ ಹಿಂದೆ ನಾನು ಅವರ ಮನೆಗೆ ಹೋದಾಗ, ನಮ್ಮ ಮತ್ತು ಅವರ ಸಂಸ್ಕೃತಿ, ಸಂಪ್ರದಾಯಗಳಿಗೆ ಕೆಲವು ಸಾಮ್ಯವಿರುವುದು ಅರಿವಿಗೆ ಬಂತು. ಅಷ್ಟು ದೊಡ್ಡ ಮನೆಯಿದ್ದರೂ ಅವರ ಮನೆಯಲ್ಲಿ ಹೆಚ್ಚು ಫರ್ನಿಚರುಗಳು ಇರಲಿಲ್ಲ. ಅಲ್ಲಲ್ಲಿ ಚಾಪೆ, ದಿಂಬು, ಜಮಖಾನ, ಗಾಶಿಗಳನ್ನು ಹಾಸಿದ್ದರು. 'ನಾವು ಫರ್ನಿಚರ್‌ಗಿಂತ ನೆಲದ ಮೇಲೆ ಕುಳಿತುಕೊಳ್ಳುವುದನ್ನು ಇಷ್ಟಪಡುತ್ತೇವೆ' ಎಂದು ನನ್ನ ಪರಿಚಿತರ ಪತ್ನಿ ಹೇಳಿದರು. 'ನೆಲದ ಮೇಲೆ ಕುಳಿತುಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡರೆ ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು' ಎಂದು ಹೇಳಿ ನಕ್ಕರು. ಅಲ್ಲಿದ್ದ ಮುಕ್ಕಾಲು ಗಂಟೆ ಅವಧಿಯಲ್ಲಿ ಅವರು ಹೇಳಿದ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ... ● ಮನೆಯಲ್ಲಿದ್ದಾಗ ಚಪ್ಪಲಿಯನ್ನು ಧರಿಸಬಾರದು. ಬೇರೆಯವರ ಮನೆಗೆ ಹೋದಾಗಲೂ ಚಪ್ಪಲಿ ಧರಿಸಿ ಒಳಗೆ ಹೋಗಬಾರದು. ನಮ್ಮ ಚಪ್ಪಲಿ ಎಷ್ಟೇ ಸ್ವಚ್ಛವಾಗಿದ್ದರೂ, ಹೊರಗಿನ ನೆಲ ಗಲೀಜಾಗಿರುತ್ತದೆ. ನಮ್ಮ ಕಾಲನ್ನು ಸ್ವಚ್ಛವಾಗಿಟ್ಟುಕೊಳ್ಳಲು, ನಮ್ಮ ಮನೆಯನ್ನು ಕೊಳೆ ಮಾಡಿಕೊಳ್ಳಬಾರದು. ● ಮನೆಯಲ್ಲಿ ಎಷ್ಟು ಕಡಿಮೆ ಸಾಮಾನು ಇರುತ್ತದೋ, ಅಷ್ಟು ಹೆಚ್ಚು ಸ್ವಾತಂತ್ರ್ಯವನ್ನು ಅನುಭವಿಸುತ್ತೀರಿ. ಮನೆಯಲ್ಲಿ ಹೆಚ್ಚು ಸಾಮಾನುಗಳು ತುಂಬಿಕೊಂಡರೆ, ಅವು ನಿಮ್ಮ ಚಲನೆಯ ಮೇಲೆ ಕಡಿವಾಣ ಹೇರುತ್ತವೆ. ಮನೆಯಲ್ಲಿ ಪೀಠೋಪಕರಣಗಳಿಲ್ಲದೇ ಬದುಕಬಹುದು. ನಾವು ಮನೆಗೆ ಬರುವ ಅತಿಥಿಗಳಿಗಾಗಿ ಫರ್ನಿಚರ್ ಇಟ್ಟಿದ್ದೇವೆ. ನಾವು ಫರ್ನಿಚರ್ ಬಳಸುವುದಿಲ್ಲ. ● ಮನೆಯ ಕಿಟಕಿಗಳನ್ನು ಯಾವತ್ತೂ ತೆರೆದಿಡಬೇಕು. ಯಾವತ್ತೂ ತಾಜಾಗಾಳಿ ಮನೆಯೊಳಗೆ ಬರುತ್ತಿರಬೇಕು. ಹೊರಗಿನ ಗಾಳಿ ಮನೆಯೊಳಗೆ ಬರುವಾಗ ತಾಜಾತನವನ್ನು ತರುತ್ತದೆ. ● ಯಾವತ್ತೂ ಮನೆಯಲ್ಲಿ ಒಂದು ಪಾತ್ರೆಯಲ್ಲಿ ಹೂವಿನ ಪಕಳೆಗಳನ್ನು ಹಾಕಿಡಬೇಕು ಅಥವಾ ತಾಜಾ ಹೂವನ್ನು ಹೂಜಿಯಲ್ಲಿ ಇಟ್ಟಿರಬೇಕು. ಮನೆಯಲ್ಲಿಟ್ಟ ಹೂವು ಯಾವತ್ತೂ ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ● ಪ್ರತಿ ಗೋಡೆಯನ್ನು ಬೋಳಾಗಿ ಬಿಡಬಾರದು. ಒಂದು ಗೋಡೆಗೆ ಅರ್ಥ ಬರಬೇಕೆಂದರೆ, ಅದಕ್ಕೊಂದು ಪೇಂಟಿಂಗ್ ನೇತುಹಾಕಬೇಕು. ಸಾಧ್ಯವಾದಷ್ಟು ನಿಸರ್ಗದ ಫೋಟೋಗಳು ಮನೆಯಲ್ಲಿ ಶಾಂತತೆಯನ್ನು ತಮ್ಮಷ್ಟಕ್ಕೆ ಮೂಡಿಸುತ್ತವೆ. ● ಸಾಧ್ಯವಾದಷ್ಟು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು. ಮರದಿಂದ ಮಾಡಿದ ಸಾಮಾನುಗಳನ್ನು ಬಳಸಬೇಕು. ● ಮನೆಯಲ್ಲಿರುವ ಎಲ್ಲರಿಗೂ ಟೀ, ಕಾಫಿ ಮಾಡುವುದನ್ನು ಕಲಿಸಬೇಕು. ಮನೆಯಲ್ಲಿ ಅಮ್ಮ ಇಲ್ಲದಿದ್ದರೂ ಅಡುಗೆ ಮಾಡುವುದನ್ನು ಗಂಡಸರು ಕಲಿತಿರಬೇಕು. ● ಮನೆ ಎಷ್ಟೇ ಸ್ವಚ್ಛವಾಗಿದ್ದರೂ ಧೂಳಿನ ಕಣಗಳು ಬಂದು ಕುಳಿತುಕೊಳ್ಳುತ್ತವೆ. ಪ್ರತಿದಿನವೂ ಮನೆಯನ್ನು ಸ್ವಚ್ಛಗೊಳಿಸಲೇಬೇಕು. ಹೆಚ್ಚು ಕೊಳೆಯಾಗುವುದು ಮನೆಯಲ್ಲಿರುವ ಬಾತ್‌ರೂಮ್. ಅದನ್ನು ನಿತ್ಯವೂ ಕ್ಲೀನ್ ಮಾಡಬೇಕು.● ಮನೆಯಲ್ಲಿ ನಾಯಿ, ಬೆಕ್ಕು ಸಾಕುವುದು ಒಳ್ಳೆಯದೇ. ಆದರೆ ಅವುಗಳಿಗೆ ಸಮಯ ಕೊಡಬೇಕು. ಹೇಗಿದ್ದರೂ ಬಿದ್ದಿರುತ್ತವೆ ಎಂದು ಭಾವಿಸಿ ಅವುಗಳನ್ನು ಸಾಕಬಾರದು. ●ಒಮ್ಮೆ ಮನೆಯಿಂದ ಹೊರಗೆ ಹಾಕಿಕೊಂಡು ಬಂದ ಶರ್ಟು, ಪ್ಯಾಂಟನ್ನು ಮತ್ತೊಮ್ಮೆ ಧರಿಸಬಾರದು. ಹೊರಗಿನ ಧೂಳುಗಳು ನಮ್ಮ ಬಟ್ಟೆಯ ಮೇಲೆ ಬಿದ್ದಿರುತ್ತವೆ. ಮೇಲ್ನೋಟಕ್ಕೆ ಸ್ವಚ್ಛವಾಗಿದ್ದರೂ ಅವು ನಮ್ಮ ಬೆವರಿನಿಂದ ಮಲಿನವಾಗಿರುತ್ತವೆ. ನಮ್ಮ ಬೆವರೂ ಸಹ್ಯವಲ್ಲ. ನಾನು ಆ ದಂಪತಿಗಳ ಮಾತುಗಳನ್ನು ಧ್ಯಾನಾಸಕ್ತನಾಗಿ ಕೇಳುತ್ತಿದ್ದೆ. ಅವರ ಮಾತುಗಳು, ಮನೆಯ ವಾತಾವರಣ ಇಷ್ಟವಾದವು.

ಇವಳೇಕೆ ಚಂದ, ಅವಳೇಕೆ ಮಂದ- ಏನಿದು ಲೆಕ್ಕಾಚಾರ?

ಸೌಂದರ್ಯವನ್ನು ನಿರ್ದೇಶಿಸುವ ಒಂದು ಗುಣವೆಂದರೆ ಬಣ್ಣ. ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಸಿಗುವ ಹಣ್ಣು ಮತ್ತಿತರ ಆಹಾರವಸ್ತುಗಳು ತಿನ್ನಲು ಯೋಗ್ಯ ಎಂದು ನಾವು ಗುರುತಿಸುವುದು ಅವುಗಳು ಕೆಲವೊಂದು ಬಣ್ಣವನ್ನು ಪಡೆದಾಗ. ಆ ಕಾರಣಕ್ಕೆ ಕೆಂಪು, ಹಳದಿ ಮತ್ತು ಅಚ್ಚ ಹಸಿರು ನಮಗೆ ಎಲ್ಲಿಲ್ಲದ ಆಕರ್ಷಣೆ. ಆ ಬಣ್ಣಗಳು ತಕ್ಷಣ ನಮ್ಮ ಗಮನ ಸೆಳೆಯಬಲ್ಲವು.

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಎರಡನೇ ವಿಶ್ವಯುದ್ಧ ತುರುಸಿನಲ್ಲಿ ನಡೆಯುತ್ತಿತ್ತು. ಅಮೆರಿಕ ಆಗ ತಾನೆ ಅಣುಬಾಂಬ್ ಪರೀಕ್ಷೆ ನಡೆಸಿತ್ತು. ಈಗ ಜಪಾನಿನ ಯಾವ ನಗರಗಳ ಮೇಲೆ ಮೊದಲ ಅಣುಬಾಂಬ್ ಪ್ರಯೋಗಿಸಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅಮೆರಿಕದ ಬೇಹುಗಾರಿಕಾ ಸಂಸ್ಥೆಗಳು ಅದಾಗಲೇ ದಾಳಿಗೆ ಜಪಾನಿನ ಐದು ನಗರಗಳ ಪಟ್ಟಿ ತಯಾರಿಸಿ ಅಮೆರಿಕನ್ ಮಿಲಿಟರಿ ಜನರಲ್ ಮೇಜಿನ ಮೇಲಿಟ್ಟಿದ್ದವು. ಕ್ಯೋಟೋ, ಹಿರೋಷಿಮಾ, ನಾಗಸಾಕಿ, ಯೋಕೋಹಾಮ ಮತ್ತು ಕೊಕುರಾ ಈ ನಗರಗಳಲ್ಲಿ ಎರಡನ್ನು ಆರಿಸಬೇಕಿತ್ತು. ಅತ್ಯಂತ ಹೆಚ್ಚಿನ ಹಾನಿ ಮಾಡಬೇಕೆನ್ನುವುದು ಅಮೆರಿಕನ್ನರ ಉದ್ದೇಶ. ಅದರ ಪ್ರಕಾರ ಪ್ರಶಸ್ತವಾಗಿದ್ದ ನಗರಗಳೆಂದರೆ ಹಿರೋಷಿಮಾ ಮತ್ತು ಕ್ಯೋಟೋ. ಹಿರೋಷಿಮಾ ಜಪಾನಿನ ಎರಡನೇ ಮುಖ್ಯ ನಗರ. ಯುದ್ಧಕ್ಕೆ ಮಿಲಿಟರಿ ಸರಬರಾಜು ನೆರವೇರುತ್ತಿದ್ದುದು ಈ ನಗರದಿಂದ. ಹಾಗಾಗಿ ಅದೊಂದು ಆಯ್ಕೆಯಾಯಿತು. ಎರಡನೆಯದು ಕ್ಯೋಟೋ. ಅದು ಜಪಾನಿನ ಸಾಂಸ್ಕೃತಿಕ, ಅತ್ಯಂತ ಸುಂದರ ನಗರ. ಆಗ ಹೆನ್ರಿ ಸ್ಟಿಮ್ಸನ್ ಅಮೆರಿಕದ ಯುದ್ಧ ಕಾರ್ಯಾಚರಣೆಯ ಕಾರ್ಯದರ್ಶಿಯಾಗಿದ್ದವನು. ಹೆನ್ರಿ ಸ್ಟಿಮ್ಸನ್ ಕೆಲವು ಸಮಯದ ಹಿಂದೆ ತನ್ನ ಹೆಂಡತಿಯ ಜತೆ ಜಪಾನಿಗೆ ಪ್ರವಾಸಕ್ಕೆಂದು ಹೋಗಿ ಬಂದಿದ್ದ. ಅವನು ಜಪಾನಿನ ಸಂಸ್ಕೃತಿಗೆ, ಸೌಂದರ್ಯಕ್ಕೆ ಮಾರುಹೋಗಿದ್ದ. ಅಂಥ ಸಾಂಸ್ಕೃತಿಕ ಸೌಂದರ್ಯದ ರಾಜಧಾನಿ ಕ್ಯೋಟೋ ಮೇಲೆ ಬಾಂಬ್ ಹಾಕಿದರೆ ಜಪಾನಿಯರ ಸಂಸ್ಕೃತಿಯನ್ನು ಸರ್ವನಾಶಮಾಡಿದಂತಾಗುತ್ತಿತ್ತು. ಜಪಾನ್ ಅನ್ನು ಕಣ್ಣಾರೆ ಕಂಡು ಅಲ್ಲಿನ ಸೌಂದರ್ಯವನ್ನು ಸವಿದು ಬಂದ ಸ್ಟಿಮ್ಸನ್‌ಗೆ ಕ್ಯೋಟೋ ನಗರದ ಮೇಲೆ ದಾಳಿ ಮಾಡುವುದು ಸುತರಾಂ ಒಪ್ಪಿಗೆಯಿರಲಿಲ್ಲ. ಅಷ್ಟು ಸುಂದರ ನಗರವನ್ನು ರಕ್ಷಿಸಬೇಕು ಎಂಬ ಬಯಕೆ ಸ್ಟಿಮ್ಸನ್‌ಗೆ. ಅವನಿಗೆ ಜಪಾನ್ ಕಂಡುಬಂದದ್ದರಿಂದ ಅದೊಂದು ವೈಯಕ್ತಿಕ ವಿಚಾರವಾಗಿತ್ತು. ಆತ ಅಮೆರಿಕ ಅಧ್ಯಕ್ಷ ಟ್ರೂಮನ್‌ರನ್ನು ಒಪ್ಪಿಸಿ ಕ್ಯೋಟೋ ನಗರವನ್ನು ಪಟ್ಟಿಯಿಂದ ಹೊರತೆಗೆಸಿದ. ಹೀಗೆ ಒಂದು ನಗರದ ಸೌಂದರ್ಯವೇ ಅಲ್ಲಿನ ನಿವಾಸಿಗಳ ಸರ್ವನಾಶವನ್ನು ತಡೆಯಿತು.

ಸುಂದರ ಹುಡುಗಿ/ ಹುಡುಗ, ಸುಂದರ ಸಂಜೆ, ಸುಂದರ ಕಟ್ಟಡ, ಸುಂದರ ಸಂಗೀತ, ಸುಂದರ ಪ್ರಕೃತಿ, ಸುಂದರ ಜಲಪಾತ, ಹೂವು, ಸ್ಟೇಡಿಯಂ, ಪಾರ್ಕ್, ಚಿಟ್ಟೆ, ಊರು, ಚಂದಿರ ಇತ್ಯಾದಿ ಇತ್ಯಾದಿ. ನಾವೆಲ್ಲ ನಿತ್ಯ ಅದೆಷ್ಟೋ ಇಂಥ 'ಸುಂದರ'ಗಳನ್ನು ನೋಡುತ್ತೇವೆ. ಅಷ್ಟಕ್ಕೂ ಸೌಂದರ್ಯ ಎಂದರೇನು ಎಂದು ಯಾವತ್ತಾದರೂ ಯೋಚಿಸಿದ್ದೀರಾ? ವಸ್ತು, ಜಾಗ, ವ್ಯಕ್ತಿ ಇದೆಲ್ಲ ಸುಂದರ ಎಂದೆನಿಸಿಕೊಳ್ಳುವುದು ಹೇಗೆ? ನೋಡಿದಾಕ್ಷಣ ನಮ್ಮ ಮನಸ್ಸಿಗೆ ಆಹ್ಲಾದ ಕೊಡುವುದೇ ಸೌಂದರ್ಯ ಎನ್ನುವುದಾದರೆ ಆ ಖುಷಿ ಹುಟ್ಟುವುದಾದರೂ ಏಕೆ? ಚಂದ ಎನ್ನುವುದು ನೋಡುವವರ ಕಣ್ಣಿನಲ್ಲಿದೆ ಎಂದು ಹೇಳುವುದಿದೆ. ಆದರೆ ಜಲಪಾತವನ್ನು, ಹೂವನ್ನು, ರವಿವರ್ಮ ಬಿಡಿಸಿದ ಚಿತ್ರವನ್ನು, ಐಶ್ವರ್ಯ ರೈ ಅನ್ನು ನೋಡಿದಾಕ್ಷಣ ಎಲ್ಲರಿಗೂ ಸುಂದರವೆಂದೇ ಅನಿಸುತ್ತದೆ. ಬೆಂಗಳೂರಿನ ವೃಷಭಾವತಿ, ಇನ್ಯಾವುದೋ ಹೊಲಸು ಕೊಳಕಾಗಿಯೇ ಕಾಣಿಸುತ್ತವೆ. ಕೆಲವು ಎಲ್ಲರಿಗೂ ಸುಂದರ ಅಥವಾ ಕೊಳಕು. ಇನ್ನು ಕೆಲವು ಕೆಲವರಿಗಷ್ಟೇ ರೂಪ ಯಾ ಕುರೂಪ. ಹಾಗಾದರೆ ಸೌಂದರ್ಯದ ಬಗೆಗಿನ ನಮ್ಮ ಲೆಕ್ಕಾಚಾರಗಳೇನು?

ನಮ್ಮ ಸುತ್ತಲಿನವರಲ್ಲಿ ಕೆಲವರು ಚಂದ, ಇನ್ನು ಕೆಲವರು ಚಂದವಲ್ಲ, ಇದು ನಮ್ಮೆಲ್ಲರೊಳಗಿನ ನಿರಂತರ ಲೆಕ್ಕಾಚಾರ. ಹಾಗೆಲ್ಲ ಬಾಹ್ಯ ಸೌಂದರ್ಯವನ್ನು ನೋಡುವುದು ಸರಿಯಲ್ಲ, ಆಂತರ್ಯದ ಸೌಂದರ್ಯ ಕಾಣಬೇಕು ಎಂಬುದೆಲ್ಲ ಸರಿ. Don't judge the book by it's cover– ಅದೂ ಸರಿ. ಆದರೆ ಪುಸ್ತಕದ ಮುಖಪುಟ ಚಂದವಿಲ್ಲದಿದ್ದಲ್ಲಿ ಅದನ್ನು ಖರೀದಿಸಲು ಹೇಗೆ ಮನಸ್ಸಾಗುವುದಿಲ್ಲವೋ ಹಾಗೆಯೇ ನಮ್ಮ ದಿನನಿತ್ಯದ ಅದೆಷ್ಟೋ ನಿರ್ಧಾರಗಳನ್ನು ನಮ್ಮೊಳಗಿನ ಸೌಂದರ್ಯಮಾಪಕ ನಿರ್ದೇಶಿಸುತ್ತದೆ ಎನ್ನುವುದು ಕೂಡ ಸತ್ಯ. ಈ ಸೌಂದರ್ಯಪರ ಒಲವು ಅತ್ಯಂತ ಸಹಜ, ಸಾಮಾನ್ಯ. ಕೆಲವು ಅರಿವಿಗೆ ಬರುವಂಥವು, ಕೆಲವು ನಮಗೆ ತಿಳಿಯದೇ ನಡೆಯುವಂಥವು.

ಯಾವುದು ಸುಂದರವೋ, ಅದು ಒಳ್ಳೆಯದು. ಯಾರು ಸುಂದರವಾಗಿರುತ್ತಾರೋ, ಅವರು ಬುದ್ಧಿವಂತರು, ಗಟ್ಟಿಮನಸ್ಸಿನವರು, ಬಲಾಢ್ಯರು, ಸುಖಿ, ಭಾಗ್ಯವಂತರು ಇತ್ಯಾದಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸುಂದರವಾಗಿದ್ದಾರೆ ಎಂದರೆ ಆ ವ್ಯಕ್ತಿಗೆ ಬಹಳಷ್ಟು ಸ್ನೇಹಿತರಿದ್ದಾರೆ, ಅವರದು ಖುಷಿಯ ಬದುಕು, ಅವರು ಒಳ್ಳೆಯ ಅಮ್ಮ/ಅಪ್ಪ, ಅವರು ಒಳ್ಳೆಯ ಮಕ್ಕಳು. ಅವರು ಪ್ರವಾಸಕ್ಕೆಂದು ಹೋದಾಗ ಬಹಳ ಮಜ ಮಾಡುತ್ತಾರೆ, ಅವರದು ಮೋಜಿನ ಬದುಕು, ಆದರ್ಶ ಸಂಸಾರ, ಕೆಲಸ, ಬದುಕು. ಹೀಗೆ ಕೇವಲ ದೈಹಿಕ ಸೌಂದರ್ಯವನ್ನು ಕಂಡು ನಾವು ಏನೇನನ್ನೋ ಕಲ್ಪಿಸಿಕೊಳ್ಳುತ್ತೇವೆ. ಸೋಷಿಯಲ್ ಮೀಡಿಯಾದಲ್ಲಿ ಈ ಅನುಭವ ಸಾಮಾನ್ಯ. ಚಂದವಿಲ್ಲದವರ ಬಗ್ಗೆ ಏನೋ ಒಂದು ತಿರಸ್ಕಾರ, ಅಸಡ್ಡೆ ಇಲ್ಲವೇ ಒಂದಿಷ್ಟು ಸಹಾನುಭೂತಿ. ಇದು ಸಾಮಾನ್ಯ ಮತ್ತು ಎಲ್ಲರೂ ತಿಳಿದೋ, ತಿಳಿಯದೆಯೋ ಮಾಡುವ ಲೆಕ್ಕಾಚಾರ, ನಡೆ, ಕೆಲಸ. ಸರಿ–ತಪ್ಪು ಅದೆಲ್ಲ ಪಕ್ಕಕ್ಕಿಡಿ. ಇಂಥ ಒಲವುಗಳಿಗೆ ಮೂಲ ಕಾರಣವೇನು? ಚಿಕ್ಕ ಮಕ್ಕಳು ತಮ್ಮೆದುರಿನವರ ಸೌಂದರ್ಯ ನೋಡುವುದಿಲ್ಲ ಎನ್ನುವ ನಂಬಿಕೆಯೊಂದಿದೆ. ಆದರೆ ಇತ್ತೀಚೆಗೆ ತಿಳಿದುಬಂದಿರುವುದೇನೆಂದರೆ ಹುಟ್ಟಿದ ಮಗು ಮೂರು ಅಥವಾ ನಾಲ್ಕನೇ ತಿಂಗಳಿಗೆ ಇದು ಸುಂದರ, ಇದು ಸುಂದರವಲ್ಲ ಎನ್ನುವ ವಿಂಗಡಣೆಯನ್ನು ಆರಂಭಿಸಿಬಿಡುತ್ತದಂತೆ. ಅಷ್ಟು ಚಿಕ್ಕ ಮಗು ಎದುರಿಗಿಟ್ಟ ಚಾಕೊಲೇಟ್‌ಗಳಲ್ಲಿ ಸುಂದರವಾಗಿರುವುದನ್ನೇ ಆಯ್ಕೆ ಮಾಡಿಕೊಳ್ಳುತ್ತದೆ. ಅಷ್ಟೇ ಅಲ್ಲ, ಅದೇ ಸಮಯದಲ್ಲಿ ಎದುರಿಗಿರುವ ವ್ಯಕ್ತಿಯ ಸೌಂದರ್ಯವನ್ನೂ ನೋಡಿ ವ್ಯವಹರಿಸುತ್ತದಂತೆ. ದೊಡ್ಡವರಿಗೆ ಏನೆಲ್ಲ ಗುಣಲಕ್ಷಣವಿದ್ದರೆ ಒಬ್ಬ ವ್ಯಕ್ತಿ ಸುಂದರವೋ ಅದೇ ಗುಣಲಕ್ಷಣವನ್ನು ಆರು ತಿಂಗಳ ಮಗು ಕೂಡ ಗ್ರಹಿಸುತ್ತದಂತೆ. ಒಂದು ಗುಣವನ್ನು ಮಗು ಅಷ್ಟು ಬೇಗ ಹೊಂದುತ್ತದೆ ಎಂದರೆ ಇದು ಕೇವಲ ಸಾಮಾಜಿಕ ಸೃಷ್ಟಿಯಷ್ಟೇ ಅಲ್ಲ ಎಂದಾಯಿತಲ್ಲ. ಹಾಗಾದರೆ ನಮ್ಮೆಲ್ಲರಲ್ಲಿ ಸೌಂದರ್ಯಪರತೆ ರಕ್ತಗತ ಹೇಗೆ? ಪಕ್ಷಪಾತ ಸ್ವಾಭಾವಿಕ ಹೇಗೆ?

ಯಾವುದೇ ಗುಣವಿರಲಿ, ಅದು ಹುಟ್ಟುಗುಣವಾಗಬೇಕೆಂದರೆ ಬಹುದೀರ್ಘ ಕಾಲ ಮನುಷ್ಯನ ಅವಶ್ಯಕತೆಯೇ ಆಗಿರಬೇಕಾಯಿತು. ಹಾಗಾಗಿ ವಿಕಸನದ ಹಿನ್ನೆಲೆಯಲ್ಲಿಯೇ ಇದನ್ನು ನೋಡಬೇಕು. ಮನುಷ್ಯನದು ಅದೆಷ್ಟೋ ಲಕ್ಷ ವರ್ಷದ ವಿಕಸನದ ಕಥೆ. ಈ ದಾರಿಯಲ್ಲಿ ಮನುಷ್ಯನಿಗಿದ್ದುದು ಪ್ರಾಣಿಗಳಂತೆ ಕೆಲವೇ ಆದ್ಯತೆಗಳು. ಅದರಲ್ಲಿ ಮೊದಲನೆಯದು ತಾನು ಬದುಕಬೇಕು, ಎರಡನೆಯದು ತನ್ನ ವಂಶ ವೃದ್ಧಿಯಾಗಬೇಕು. ಹಾಗಾಗಿ ಆಕರ್ಷಣೆಯ ವಿಷಯ ಬಂದಾಗ ಸೌಂದರ್ಯ ಎಂದರೆ ಅದು ಮೂಲದಲ್ಲಿ ಆರೋಗ್ಯ. ಒಬ್ಬ ವ್ಯಕ್ತಿ ಸುಂದರವಾಗಿರುವುದೆಂದರೆ ನಮ್ಮ ಅಂತರ್‌ದೃಷ್ಟಿ ಅಲ್ಲಿ ನೋಡುವುದು ಅವರ ದೈಹಿಕ ಆರೋಗ್ಯವನ್ನು. ಏನೋ ಒಂದು ಊನವಿದೆ ಎಂದರೆ ಆ ವ್ಯಕ್ತಿಯತ್ತ ಆಕರ್ಷಣೆ ಕಡಿಮೆ. ತನ್ನ ವಂಶ ಮುಂದುವರಿಯಬೇಕೆಂದರೆ ಸಂಗಾತಿಯ ಆರೋಗ್ಯ ಲಕ್ಷಣಗಳೇ ಮುಖ್ಯ– ಅದುವೇ ಸೌಂದರ್ಯವೆಂದು ಪರಿಭಾವಿಸಲ್ಪಡುವುದು. ಈ ವಂಶಾಭಿವೃದ್ಧಿ ಅಷ್ಟು ಮುಖ್ಯವಾಗಿರುವುದರಿಂದ ಸಂಗಾತಿಯು ಸರಿಯಾದ ದೇಹವನ್ನು ಹೊಂದುವುದೂ ಮುಖ್ಯವಾಗುತ್ತದೆ. ಈ ಅವಶ್ಯಕತೆಯೇ ದೈಹಿಕ ಸೌಂದರ್ಯದ ಗ್ರಹಿಕೆಯ ಮೂಲ ಪರಿಮಾಣವಾಗಿರುವುದು. ಈ ಮೂಲಗುಣವೇ ವಿಸ್ತೃತಗೊಂಡ ಉಳಿದವರ ದೈಹಿಕ ಸೌಂದರ್ಯದೆಡೆಗಿನ ಗುಣಮಾಪಕವಾಗಿರುವುದು. ದೈಹಿಕ ಸೌಂದರ್ಯ ಎಂದರೆ ಅದು ಸಮ್ಮಿತೀಯವಾಗಿರಬೇಕು (symmetrical). ಅಂದರೆ, ಸಮಪಾರ್ಶ್ವತೆ ಅಥವಾ ಸಮರೂಪತೆ ಅಲ್ಲಿ ಕಾಣಬರಬೇಕು. ಮೂಗು, ಕಣ್ಣು, ಕೈ, ಮುಖ ಹೀಗೆ ದೇಹದ ಭಾಗಗಳೆಲ್ಲ ಸರಿಯಾದ ಅಳತೆಯಲ್ಲಿರುವುದು. ಅದರಲ್ಲಿ ಯಾವುದೇ ಒಂದು ಹೆಚ್ಚೂಕಮ್ಮಿಯಿದ್ದರೂ ಅದು ನಮಗೆ ಆಕರ್ಷಕವಲ್ಲ. ನಾವು ನೋಡುವ ಎಲ್ಲರೆಡೆಗೂ ಅನ್ಯ ಅನಿಸಿಕೆಯಿಲ್ಲದಿದ್ದರೂ ಸೌಂದರ್ಯವನ್ನು ನಿರ್ದೇಶಿಸುವುದು ಮಾತ್ರ ಇದೇ ಗುಣ.

ನೀವಿದನ್ನು ಗ್ರಹಿಸಿರುತ್ತೀರಿ. ನಾವು ಸುಂದರವೆನ್ನುವ ಬಹುತೇಕ ವಿಷಯಗಳು ಸಮ್ಮಿತಿ (symmetry)ಯನ್ನು ಹೊಂದಿರುತ್ತವೆ. ಮುಖ, ಕಟ್ಟಡಗಳು, ಕಾರು, ಮೊಬೈಲ್, ಮನೆಯ ವಾಸ್ತು ಹೀಗೆ ನಮ್ಮ ಬಹುತೇಕ ರಚನೆಗಳು ಸಮ್ಮಿತಿಯನ್ನು ಹೊಂದಿರಬೇಕು. ದೇಹದ ಎಡಭಾಗದಂತೆ ಬಲಭಾಗ ಇರಬೇಕು. ವಸ್ತುವಾಗಿದ್ದರೆ ಯಾವುದೋ ಒಂದು ಕೋನದಲ್ಲಿ ಕತ್ತರಿಸಿದರೆ ಇಬ್ಭಾಗ ಹೋಲುವಂತಿರಬೇಕು. ಇದರಲ್ಲಿ ಸ್ವಲ್ಪವೇ ವ್ಯತ್ಯಾಸವಿದ್ದರೂ ನಮ್ಮ ಮಿದುಳು ಅದನ್ನು ಗ್ರಹಿಸಿ ಅದು ಸುಂದರವಲ್ಲ ಎಂದು ಷರಾ ಬರೆದುಬಿಡುತ್ತದೆ. ಇದಕ್ಕೂ ನಮ್ಮ ಮನುಷ್ಯ ಸಹಜ ಸ್ವಭಾವವೇ ಕಾರಣ. ಪ್ರಕೃತಿಯಲ್ಲಿ ಸಮ್ಮಿತಿ ಎಂದರೆ ಅದು ಭದ್ರತೆ. ಒಂದು ಹಣ್ಣು ಅಥವಾ ತರಕಾರಿ ಚೆನ್ನಾಗಿದೆಯೇ ಎಂದು ಆರಿಸಿ ಚೀಲಕ್ಕೆ ಹಾಕಿಕೊಳ್ಳುವಾಗ ಕೈಯಲ್ಲಿ ಅದನ್ನು ಹಿಡಿದು ಒಂದು ಸುತ್ತು ಸುತ್ತುವುದಿದೆ. ಆ ಪರೀಕ್ಷೆಯಲ್ಲಿ ಆ ಹಣ್ಣನ್ನು ಕೀಟ ತಿಂದಿದೆಯೇ, ಸರಿಯಾಗಿ ಅದು ಪಕ್ವವಾಗಿಲ್ಲವೇ ಇತ್ಯಾದಿ ನೋಡುತ್ತೇವೆ. ಇದು ವಿಕಸನದುದ್ದಕ್ಕೂ ಮುಖ್ಯವಾಗಿತ್ತು. ಸೇವಿಸುವ ಆಹಾರ ವಾಸ್ತು ಸಮ್ಮಿತಿಯಲ್ಲಿದೆ ಎಂದಾದರೆ ಅದು ಸುರಕ್ಷಿತ. ಅದೇ ರೀತಿ ಕಟ್ಟಡಗಳು, ಸೇತುವೆ ಮೊದಲಾದವುಗಳಿಂದ ಹಿಡಿದು ವಾಹನ, ಮನೆ ಎಲ್ಲದರಲ್ಲೂ ಸಮ್ಮಿತಿ ಎಂದರೆ ಅದು ಕೂಡ ಸುರಕ್ಷಿತ, ಗಟ್ಟಿ ಎನ್ನುವ ಮಿದುಳಿನ ಲೆಕ್ಕಾಚಾರ.

ಸೌಂದರ್ಯವನ್ನು ನಿರ್ದೇಶಿಸುವ ಇನ್ನೊಂದು ಗುಣವೆಂದರೆ ಬಣ್ಣ. ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಸಿಗುವ ಹಣ್ಣು ಮತ್ತಿತರ ಆಹಾರವಸ್ತುಗಳು ತಿನ್ನಲು ಯೋಗ್ಯ ಎಂದು ನಾವು ಗುರುತಿಸುವುದು ಅವುಗಳು ಕೆಲವೊಂದು ಬಣ್ಣವನ್ನು ಪಡೆದಾಗ. ಆ ಕಾರಣಕ್ಕೆ ಕೆಂಪು, ಹಳದಿ ಮತ್ತು ಅಚ್ಚ ಹಸಿರು ನಮಗೆ ಎಲ್ಲಿಲ್ಲದ ಆಕರ್ಷಣೆ. ಆ ಬಣ್ಣಗಳು ತಕ್ಷಣ ನಮ್ಮ ಗಮನ ಸೆಳೆಯಬಲ್ಲವು. ಅದೇ ಕಾರಣಕ್ಕೆ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಈ ಮೂರು ಬಣ್ಣದ ಲೈಟ್‌ಗಳನ್ನು ಬಳಸುವುದು. ಕೆಂಪು ಎಂದರೆ ಅದು ಬಲಿತ ಹಣ್ಣು. ಆ ಕಾರಣಕ್ಕೆ, ಬಣ್ಣವಿಲ್ಲದ ಗೋಬಿಮಂಚೂರಿಗಿಂತ ಕೆಂಪಗಿನ ಗೋಬಿ ಮಂಚೂರಿಯಿಂದ ಹೆಚ್ಚಿನ ರುಚಿಯ ಅನುಭವವಾಗುತ್ತದೆ. ರುಚಿ ಒಂದೇ ಇದ್ದರೂ ಕೆಂಪಗಿನದರೆಡೆಗೆ ಸಹಜ ಆಕರ್ಷಣೆ. ಬಣ್ಣಗಳೆಡೆಗೆ ನಮಗಿರುವ ಈ ಆಕರ್ಷಣೆಯನ್ನೇ ಬೇಕರಿಗಳು, ಆಹಾರ ತಯಾರಿಸಿ ಮಾರಾಟ ಮಾಡುವ ಕಂಪನಿಗಳು ಬಳಸಿಕೊಳ್ಳುವುದು. ಹೋಟೆಲ್ಲಿನ ಮಸಾಲೆ ದೋಸೆಗೆ ಬಣ್ಣ ಬರಲಿ ಎಂದು ಸಕ್ಕರೆ ಬೆರೆಸುವುದು ಇತ್ಯಾದಿ. ಚಿಕ್ಕ ಮಕ್ಕಳೆದುರು ಬಣ್ಣಬಣ್ಣದ ಚಾಕೊಲೇಟ್ ಇಟ್ಟರೆ ಮಗು ಮೊದಲಿಗೆ ಆಯ್ಕೆ ಮಾಡಿಕೊಳ್ಳುವುದು ಹಣ್ಣಿನ ಬಣ್ಣಗಳಾದ ಹಳದಿ, ಕೆಂಪನ್ನು. ಮೇಲಿಂದ ಚಾಕೊಲೇಟ್ ಹಣ್ಣಿನ ಆಕಾರದ್ದಿದ್ದರೆ ಅದನ್ನು ಮಗು ಮೊದಲು ಆಯ್ಕೆಮಾಡಿಕೊಳ್ಳುವುದು ಈ ಕಾರಣಕ್ಕೆ. ಮಂದ ಬಣ್ಣಕ್ಕಿಂತ ಗಾಢ ಬಣ್ಣ ಹೆಚ್ಚು ಆಕರ್ಷಣೀಯ.

ಸೌಂದರ್ಯ ಗ್ರಹಿಕೆಯ ಈ ಲೆಕ್ಕಾಚಾರಕ್ಕೆ ಗಣಿತದಲ್ಲೊಂದು ಸೂತ್ರವೂ ಇದೆ. ನೀವು ಗೋಲ್ಡನ್ ರೇಷಿಯೋ ಬಗ್ಗೆ ಕೇಳಿರಬಹುದು. ಥೀಟಾ = 1.618 ಇದು ಮನುಷ್ಯ ಕುಲದ ಸೌಂದರ್ಯ ಗ್ರಹಿಕೆಯ ಸೂತ್ರ. ಅದರ ಬಗ್ಗೆ ವಿವರಿಸಲಿಕ್ಕೆ ಹೋಗುವುದಿಲ್ಲ, ಆದರೆ ವಿಷಯ ಇಷ್ಟೆ, ವ್ಯಕ್ತಿ, ವಸ್ತು ಏನೇ ಇರಲಿ, ಈ ಒಂದು ಅನುಪಾತದಲ್ಲಿದ್ದರೆ ನಮಗೆಲ್ಲರಿಗೂ ಚಂದವೆನಿಸುತ್ತದೆ. ಈ ಥೀಟಾ ಅನುಪಾತವನ್ನು ಬಹಳ ಹಿಂದೆಯೇ ಭಾರತೀಯರು ಗ್ರಹಿಸಿದ್ದರು. ಏಕೆಂದರೆ ಭಾರತೀಯ ವಾಸ್ತುಶಾಸ್ತ್ರದಲ್ಲಿ ಈ ಗೋಲ್ಡನ್ ಅನುಪಾತ ಇರುವುದನ್ನು ಎಲ್ಲೆಡೆಯೂ ಕಾಣಬಹುದು. ತಮಿಳುನಾಡಿನ ಬೃಹದೀಶ್ವರ ದೇವಸ್ಥಾನ, ಕೋನಾರ್ಕ್‌ನ ಸೂರ್ಯ ದೇವಾಲಯ, ಮಧುರೈ ಮೀನಾಕ್ಷಿ ದೇಗುಲ ಇವೆಲ್ಲವೂ ಇದೇ ಅನುಪಾತದಲ್ಲಿರುವವು. ಅಷ್ಟೇ ಅಲ್ಲ, ನಟರಾಜನ ವಿಗ್ರಹ, ಶ್ರೀ ಯಂತ್ರ, ಇತರ ಯಂತ್ರಗಳು, ದೇವರ ವಿಗ್ರಹ, ಈಶ್ವರ ಲಿಂಗ ಎಲ್ಲವೂ ಏಕ್‌ದಂ ಇದೇ ಅನುಪಾತದಲ್ಲಿವೆ. ಅಷ್ಟೇ ಏಕೆ, ಇಡೀ ಕಾಶಿ (ವಾರಾಣಸಿ) ನಗರವೇ ಇರುವುದು ಈ ಚಿನ್ನದ ಅನುಪಾತದಲ್ಲಿ. ವಿಕ್ರಂ ಸಂಪತ್ ಅವರ Waiting For Shiva ಪುಸ್ತಕದ ಮುನ್ನುಡಿಯಲ್ಲಿಯೇ ಈ ಬಗ್ಗೆ ವಿವರವಿದೆ.

ಈ ಅನುಪಾತದಲ್ಲಿರುವವನ್ನು ನಾವು ಚಂದವೆಂದು ಗ್ರಹಿಸುವುದು. ಹಾಗಂತ ಚಂದವೆನಿಸುವವೆಲ್ಲವೂ ಈ ಅನುಪಾತದಲ್ಲಿಯೇ ಇರಬೇಕೆಂಬ ನಿಯಮವೇನಿಲ್ಲ. ಉದಾಹರಣೆಗೆ ಐಶ್ವರ್ಯ ರೈ ಚಂದವೆಂದು ಕಾಣಿಸಲಿಕ್ಕೆ ಅವಳ ಮುಖ–ದೇಹ ಈ ಅನುಪಾತದಲ್ಲಿರುವುದು ಕಾರಣ. ಆದರೆ ಅವರವರ ಹೆಂಡತಿ ಅವರಿಗೆ ಐಶ್ವರ್ಯ ರೈಗಿಂತಲೂ ಚಂದ ಎಂದೆನಿಸಿದರೆ ಅದು ಅಳತೆಯ ಅಳತೆ ಮೀರಿದ ಭಾವನಾತ್ಮಕ ಲೆಕ್ಕಾಚಾರ. ಹಾಗಾಗಿ ಈ ಅನುಪಾತದ ಲೆಕ್ಕಾಚಾರಕ್ಕೆ ಹೊರತಾದದ್ದು ನಮಗೆ ಸುಂದರವೆನಿಸುತ್ತಿದೆ ಎಂದರೆ ಒಂದೋ ಸಾಂಸ್ಕೃತಿಕವಾಗಿ ನಮ್ಮ ಹಿನ್ನೆಲೆ ಕಾರಣವಿರಬೇಕು ಅಥವಾ ಭಾವನಾತ್ಮಕ ಕಾರಣವಿರಬೇಕು. ಮಾಡರ್ನ್ ಆರ್ಟ್ ಸುಂದರವೆನಿಸುವುದು ಏಕೆಂದರೆ ಅವು ಅಕರಾಳ ವಿಕರಾಳವಿದ್ದರೂ ನಮ್ಮೊಳಗಿನ ಕೆಲವು ಸುಪ್ತ ಭಾವನೆಗಳನ್ನು ಜಾಗೃತಗೊಳಿಸಬಲ್ಲವು. ಇದೆಲ್ಲ ವೈಯಕ್ತಿಕ.

ಈ ಸೌಂದರ್ಯ ಪಕ್ಷಪಾತವೇ ಮನುಷ್ಯನನ್ನು ಮನುಷ್ಯನನ್ನಾಗಿಸಿರುವುದು. ಮನುಷ್ಯ ಸಂತತಿ ಇಂದಿಗೂ ಉಳಿದಿದೆ ಎಂದರೆ ಈ ಪಕ್ಷಪಾತದಿಂದ ಮಾಡಿಕೊಂಡ ನಿರಂತರ ಆಯ್ಕೆಗಳೇ ಕಾರಣ ಎನ್ನುವುದು ನಿರ್ವಿವಾದ. ಜೀವಜಗತ್ತಿನ ಎಲ್ಲವೂ ಸೌಂದರ್ಯವನ್ನು ಗ್ರಹಿಸಬಲ್ಲವು. ಅವುಗಳ ಲೆಕ್ಕಾಚಾರ ನಮಗಿಂತ ಭಿನ್ನವಿರಬಹುದು. ದುಂಬಿಗೆ ಹೂವು ಚಂದವಾಗಿಯೇ ಕಾಣಿಸಬೇಕು. ಅಂತೆಯೇ ನೊಣಕ್ಕೆ ಹೊಲಸು. ಇವೆಲ್ಲವೂ ಪ್ರತಿಯೊಂದು ಜೀವಿಯಲ್ಲಿಯೂ ಅಚ್ಚೊತ್ತಿದ ಗುಣ. ಹಾಗಾಗಿ ಅವನ್ನು ಬದಲಾಯಿಸಲಿಕ್ಕಾಗುವುದಿಲ್ಲ, ಮನುಷ್ಯನದೂ ಅದೇ ಕಥೆ. ಆದರೆ ನಮಗೆ ಮಾತ್ರ ನಮ್ಮ ಸೌಂದರ್ಯಪ್ರಜ್ಞೆಯ ಒಲವಿನ ಬಗ್ಗೆ ವಿಚಾರ ಮಾಡುವ ಶಕ್ತಿಯಿದೆ. ಹಾಗಂತ ಇಂಥದ್ದನ್ನೆಲ್ಲ ನಾವು ಯೋಚನೆ ಮಾಡುವುದು ಕಡಿಮೆ. ಏಕೆಂದರೆ ನಮ್ಮೆಲ್ಲರ ಬೇಸಿಕ್ ಇನ್‌ಸ್ಟಿಂಕ್ಟ್ – ಮೂಲಗುಣ ಅದೆಲ್ಲವನ್ನೂ ನೇಪಥ್ಯದಲ್ಲಿಟ್ಟಿರುತ್ತದೆ.

ತಂದೆ ತಾಯಿಗೆ ತಮ್ಮ ಮಕ್ಕಳಲ್ಲಿ ಸುಂದರವಾಗಿರುವ ಮಗುವಿನ ಬಗ್ಗೆ ಜಾಸ್ತಿ ಒಲವು, ಕಾಳಜಿ ಇರುತ್ತದೆ. ಏಕೆಂದರೆ ಮೂಲದಲ್ಲಿ ಆ ಮಗುವಿನಿಂದ ಮುಂದಾಗುವ ಸಂತಾನೋತ್ಪತ್ತಿ ಸುಂದರವಾಗಿ– ಅನುಪಾತದಲ್ಲಿ, ಆರೋಗ್ಯಕರವಾಗಿ ಇರಬಹುದೆಂಬ ಸುಪ್ತ ನಂಬಿಕೆ. ಒಂದು ಮಗುವಿನಲ್ಲಿ ಏನೋ ಒಂದು ವಿರೂಪವಿದ್ದರೆ, ಗ್ರಹಿಕೆಯಂತೆ ಕುರೂಪವೆನಿಸಿದರೆ ಆ ಮಗುವಿನ ಬಗ್ಗೆ ಅಕ್ಕರೆಗಿಂತ ಹೆಚ್ಚಾಗಿ ಅಲ್ಲಿರುವುದು ಅನುಕಂಪ. ಸಮತೂಕದ ಪ್ರೀತಿ ಕೊಡಬೇಕೆಂಬ ಒತ್ತಡ. ಒಂದಕ್ಕಿಂತ ಹೆಚ್ಚಿನ ಮಕ್ಕಳಿದ್ದಲ್ಲಿ ಈ ಅನುಕಂಪ ಮತ್ತು ಸಹಜ ಒಲವಿನ ನಡುವೆ ಪಾಲಕರ ಮನಸ್ಸು ಹೊಯ್ದಾಡುತ್ತಿರುತ್ತದೆ. ಅಂತೆಯೇ ಶಾಲೆಯಲ್ಲಿ ಶಿಕ್ಷಕರಿಗೆ, ಆಫೀಸಿನಲ್ಲಿ ಹೀಗೆ ಎಲ್ಲೆಂದರಲ್ಲಿ ಸೌಂದರ್ಯ ಪಕ್ಷಪಾತ ನಮ್ಮೆಲ್ಲರ ನಡೆಯನ್ನು ನಿರ್ದೇಶಿಸುತ್ತದೆ.

ಈಗ ಕಾಲ, ಜಗತ್ತು ಎಲ್ಲವೂ ಬದಲಾಗಿದೆ. ಹಾಗಾಗಿ ನಮ್ಮ ಮೂಲಗುಣವು ತಪ್ಪುನಿರ್ಧಾರಕ್ಕೆ ಕಾರಣವಾಗುತ್ತದೆ. ಉದಾಹರಣೆಗೆ ಆಫೀಸಿನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವಾಗ ಮಾಡುವ ಸಂದರ್ಶನ ಇತ್ಯಾದಿ ಸಂದರ್ಭಗಳಲ್ಲಿ ನಮ್ಮೊಳಗಿನ ಸೌಂದರ್ಯ ಪಕ್ಷಪಾತವನ್ನು ಮೀರಿ ನಡೆದರಷ್ಟೇ ಸರಿ, ಲಾಭದಾಯಕ. ಇದೆಲ್ಲ ಹೇಳಿದಷ್ಟು, ಕೇಳಿದಷ್ಟು ಸುಲಭವಲ್ಲ, ಏಕೆಂದರೆ ನಮ್ಮ ಮನಸ್ಸು ಅದನ್ನು ಅಷ್ಟು ಸುಲಭಕ್ಕೆ ಒಪ್ಪುವುದಿಲ್ಲ, ಅದರದೂ ತಪ್ಪಲ್ಲ, ಏಕೆಂದರೆ ಇದೆಲ್ಲ ವಂಶವಾಹಿನಿಯಿಂದ ಪ್ರಾಪ್ತವಾದಂಥವು. ಯಾವುದೇ ಮೂಲಗುಣವನ್ನು ಮೀರಿ ನಡೆಯುವುದನ್ನು ಮನಸ್ಸು ಅಪಾಯವೆಂದೇ ಗ್ರಹಿಸುತ್ತದೆ. ಇಂಥ ಅದೆಷ್ಟೋ ನಿತ್ಯಕರ್ಮಗಳಲ್ಲಿ ಈ ನಮ್ಮ ಬೇಸಿಕ್ ಇನ್‌ಸ್ಟಿಂಕ್ಟ್ – ಮನುಷ್ಯನ ಮೂಲ, ಪ್ರಾಣಿಸಹಜ ಗುಣವನ್ನು ಮೀರಲೇಬೇಕಾಗುತ್ತದೆ. ಅದು ಅನಿವಾರ್ಯ. ಹಾಗಾಗಿ ಯಾವ ಸಮಯ–ಸಂದರ್ಭದಲ್ಲಿ ಈ ಮೂಲಗುಣವನ್ನು ಬಳಸಿಕೊಳ್ಳಬೇಕು ಮತ್ತು ಯಾವಾಗ ಅದನ್ನು ಅದುಮಿಡಬೇಕು ಎನ್ನುವ ನಿರಂತರ ಜಾಗ್ರತೆ ನಮಗಿದ್ದರೆ ಅದರಿಂದ ಬಹಳಷ್ಟು ಲಾಭವಿದೆ. ಆಧುನಿಕ ಬದುಕಿನಲ್ಲಿ ನಮ್ಮ ಹತ್ತು ಹಲವು ಮನುಷ್ಯ ಮೂಲ ಗುಣವನ್ನು ಮೀರುವುದೇ ಅವಶ್ಯಕತೆ ಮತ್ತು ಸವಾಲಿನ ಕೆಲಸ. ಅದರಲ್ಲಿ ಸೌಂದರ್ಯಪ್ರಜ್ಞೆ– ಒಲವು ಕೂಡ ಒಂದು.

ಉಚಿತ ಯೋಜನೆಗಳ ಬಗ್ಗೆ ಮರುಚಿಂತನೆಯಾಗಬಹುದೇ?

ತಮಿಳುನಾಡಿನಲ್ಲಿ ದಶಕಗಳ ಹಿಂದೆ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷಗಳು ಪೈಪೋಟಿಯ ಮೇಲೆ ಉಚಿತ ಯೋಜನೆಗಳನ್ನು ಘೋಷಿಸಿದ ಮೇಲೆ, ಕರ್ನಾಟಕದಲ್ಲಿ ಅದರಲ್ಲೂ ಮುಖ್ಯವಾಗಿ ಬೆಂಗಳೂರಿನಲ್ಲಿ ತಮಿಳು ಕಾರ್ಮಿಕರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿ, ಅವರ ಸ್ಥಾನವನ್ನು ಉತ್ತರ ಭಾರತದ ಕಾರ್ಮಿಕರು ತುಂಬುತ್ತಿದ್ದಾರೆ ಎನ್ನುವ ಮಾತು ಕೇಳಿಬರುತ್ತಿದೆ. ಇದರಲ್ಲಿ ಸತ್ಯವಿಲ್ಲದಿಲ್ಲ.

ವಿಶ್ಲೇಷಣೆ
ರಮಾನಂದ ಶರ್ಮಾ
vveditoped@gmail.com

ಹೀಗೊಂದು ಅಭಿಪ್ರಾಯವು ಕಳೆದ ಕೆಲವು ದಿನಗಳಿಂದ ರಾಜಕೀಯದ ಪಡಸಾಲೆ ಯಲ್ಲಿ ಹಾಗೂ ಸಾರ್ವಜನಿಕ ವಲಯದಲ್ಲಿ ತೀವ್ರವಾಗಿ ಕೇಳಿಬರುತ್ತಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು, ತಾನು ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದರೆ ಐದು ಉಚಿತ ಗ್ಯಾರಂಟಿ ಯೋಜನೆಗಳನ್ನು ನೀಡುವುದಾಗಿ ಮತದಾರರಿಗೆ ಭರವಸೆ ನೀಡಿ, ರಾಜಕೀಯ ವಿಶ್ಲೇಷಕರ ಮತ್ತು ಜನಸಾಮಾನ್ಯರ ಲೆಕ್ಕಾಚಾರವನ್ನು ಬುಡಮೇಲು ಮಾಡಿ, ಅಧಿಕಾರದ ಗದ್ದುಗೆ ಹಿಡಿದಿತ್ತು. ಈ ಗೆಲುವಿನ ಹಿಂದೆ, ಅಂದಿನ ಬಿಜೆಪಿ ಸರಕಾರದ ವಿರುದ್ಧದ 'ಆಡಳಿತ–ವಿರೋಧಿ' ಅಲೆಗಿಂತ, ಗ್ಯಾರಂಟಿಗಳ ಪರಿಣಾಮವೇ ಹೆಚ್ಚಾಗಿತ್ತು ಎಂಬುದು ಸರ್ವೇಸಾಮಾನ್ಯ ಅಭಿಪ್ರಾಯವಾಗಿತ್ತು. ಇಂಥ ಗ್ಯಾರಂಟಿಗಳು ಇಲ್ಲದಿದ್ದರೆ, ಅಧಿಕಾರವೆಂಬುದು ಕಾಂಗ್ರೆಸ್‌ಗೆ ಕನಸಾಗೇ ಉಳಿಯುತ್ತಿತ್ತು ಎಂಬ ಮಾತು ದೊಡ್ಡದಾಗಿ ಕೇಳುತ್ತಿತ್ತು.

ಕರ್ನಾಟಕದಲ್ಲಿನ ಉಚಿತ ಗ್ಯಾರಂಟಿಗಳ ಪ್ರಯೋಗ ಯಶಸ್ವಿಯಾಗಿದ್ದೇ ಆಗಿದ್ದು, ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳಲ್ಲಿ ಅಭಿವೃದ್ಧಿ ಯೋಜನೆಗಳು ಹಿಂದಿನ ಸಾಲಿಗೆ ಸರಿದು, ಗ್ಯಾರಂಟಿಗಳು ಮುನ್ನೆಲೆಗೆ ಬಂದಿವೆ. ತೀರಾ ಇತ್ತೀಚಿನವರೆಗೆ ರಾಜಕೀಯ ಪಕ್ಷಗಳ ಪ್ರಣಾಳಿಕೆಯಲ್ಲಿ ರಸ್ತೆ, ನೀರು, ಹೆದ್ದಾರಿ, ಹೊಸ ರೈಲು/ರೈಲುಮಾರ್ಗ, ವಿಮಾನ ನಿಲ್ದಾಣ, ಆಸ್ಪತ್ರೆ, ಮೆಡಿಕಲ್–ಎಂಜಿನಿಯರಿಂಗ್ ಕಾಲೇಜುಗಳು, ಹೊಸ ಉದ್ಯಮಗಳು, ನೌಕರರಿಗೆ ವೇತನ ಪರಿಷ್ಕರಣೆಗಳು, ರೈತರ ಸಾಲ/ಬಡ್ಡಿ ಮನ್ನಾ ಮುಂತಾದ ಪ್ರಸ್ತಾವಗಳು ಮುನ್ನೆಲೆಯಲ್ಲಿ ಇರುತ್ತಿದ್ದವು. ಕ್ರಮೇಣ ಇವು ನೇಪಥ್ಯಕ್ಕೆ ಜಾರಿದ್ದು, ಮತದಾರರನ್ನು ಸೆಳೆಯಬೇಕೆಂಬ ಏಕೈಕ ಉದ್ದೇಶದಿಂದ ರಾಜಕೀಯ ಪಕ್ಷಗಳು ಅವುಗಳ ಸ್ಥಾನಗಳನ್ನು 'ಗ್ಯಾರಂಟಿ ಯೋಜನೆ'ಗಳಿಗೆ ನೀಡಿವೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಆರಂಭಿಸಿದ್ದ (ಇದಕ್ಕೂ ಮುನ್ನ ಅರವಿಂದ ಕೇಜ್ರಿವಾಲರು ದೆಹಲಿಯಲ್ಲಿ ಇದಕ್ಕೆ ಒಂದು ರೀತಿಯಲ್ಲಿ ಅಡಿಪಾಯ ಹಾಕಿದ್ದುಂಟು ಎನ್ನಿ!) ಈ ಉಚಿತ ಭಾಗ್ಯಗಳನ್ನು ಮಿಕ್ಕ ಕೆಲವು ಪಕ್ಷಗಳು ಲೇವಡಿ ಮಾಡಿದ್ದವು. 'ಇಂಥ ಗ್ಯಾರಂಟಿಗಳು ದೇಶದ ಅಭಿವೃದ್ಧಿಗೆ ಮಾರಕ, ಇದರಿಂದ ದೇಶವು ದಿವಾಳಿಯಾಗುತ್ತದೆ, ಪಾಕಿಸ್ತಾನ–ಶ್ರೀಲಂಕಾ–ಅಫ್ಘಾನಿಸ್ತಾನ ದೇಶಗಳಂತೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಿಕ್ಷಾಟನೆ ಮಾಡಬೇಕಾಗುತ್ತದೆ' ಎಂದೆಲ್ಲಾ ಅವು ಟೀಕಿಸಿದ್ದವು, ಇವನ್ನು 'ಬಿಟ್ಟಿಭಾಗ್ಯಗಳು' ಎಂದು ಅಪಹಾಸ್ಯಗೈದಿದ್ದವು. ಆದರೆ ಇಂಥ ಪಕ್ಷಗಳೇ, ಈ ಸೂತ್ರವನ್ನು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅಳವಡಿಸಿಕೊಂಡು 'ಡಿವಿಡೆಂಡ್' ಪಡೆದಿದ್ದನ್ನು ಜನಸಾಮಾನ್ಯರು ಈಗಾಗಲೇ ನೋಡಿದ್ದಾರೆ.

ಕರ್ನಾಟಕದ ನಂತರ ರಾಜಸ್ಥಾನ, ಹಿಮಾಚಲ ಪ್ರದೇಶ, ಜಾರ್ಖಂಡ್ ಮತ್ತು ಮಹಾರಾಷ್ಟ್ರಗಳಲ್ಲಿನ ರಾಜಕೀಯ ಪಕ್ಷಗಳು ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಂಡವು. ಇತ್ತೀಚಿನ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಇದು ಅತಿರೇಕಕ್ಕೆ ಹೋಗಿ, ಸ್ಪರ್ಧೆಯೆಂಬುದು ರಾಜಕೀಯ ಪಕ್ಷಗಳು/ವ್ಯಕ್ತಿಗಳ ಮಧ್ಯೆ ನಡೆಯದೆ ಉಚಿತ ಗ್ಯಾರಂಟಿಗಳ ನಡುವೆ ನಡೆಯಿತು ಎನ್ನಲಾಗುತ್ತದೆ. ಯಾರು ಹೆಚ್ಚು ಸಂಖ್ಯೆಯಲ್ಲಿ ಮತ್ತು ಮೊತ್ತದಲ್ಲಿ ಭಾಗ್ಯಗಳ ಭರವಸೆಯನ್ನು ನೀಡಿದ್ದಾರೆ? ಯಾರ ಗ್ಯಾರಂಟಿ ಹೆಚ್ಚು ಪಕ್ಕಾ ಮತ್ತು ನಂಬಲರ್ಹ? ಎನ್ನುವುದು ಅಂತಿಮ ಹಂತದಲ್ಲಿ ನಿರ್ಣಾಯಕವಾಗಿತ್ತಂತೆ. ಅಲ್ಲಿನ ಭಾಗ್ಯಗಳ ಭರಾಟೆಯನ್ನು ಕಂಡ ಅನ್ಯರಾಜ್ಯದವರು, 'ದೆಹಲಿಯ ಜನರು ಪುಣ್ಯವಂತರು, ನಮ್ಮಲ್ಲೂ ಹೀಗೆ ಚುನಾವಣೆ ನಡೆದಿದ್ದರೆ ಎಷ್ಟು ಚೆನ್ನಾಗಿತ್ತು?!' ಎಂದು ಅಂದುಕೊಂಡಿದ್ದರೆ ಅದೇನೂ ಅತಿಶಯವಲ್ಲ. ಮಾತ್ರವಲ್ಲ, 'ಈ ಭಾಗ್ಯಗಳನ್ನು ಕಂಡು ದೆಹಲಿಗೆ ವಲಸಿಗರ ದಂಡು ಹೆಚ್ಚಿದರೆ ಗತಿಯೇನು?' ಎಂದು ಕೆಲ ಪ್ರಜ್ಞಾವಂತರು ಮುಂದಿನ ದಿನಗಳ ಬಗ್ಗೆ ಚಿಂತಿತರಾಗಿದ್ದರೆ ಅದೇನೂ ಅಚ್ಚರಿಯಲ್ಲ.

ಕರ್ನಾಟಕದಲ್ಲಿ ಈ ಭಾಗ್ಯಗಳ ಭರವಸೆ ನೀಡುವ ಮೂಲಕ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೇರಿದಾಗ, ಜನಸಾಮಾನ್ಯರು, ಬುದ್ಧಿಜೀವಿಗಳು, ಆರ್ಥಿಕ ತಜ್ಞರು ಮತ್ತು ದೇಶದ ಆರ್ಥಿಕ ಪ್ರಗತಿಯ ಚಿಂತಕರು ಭಾರಿ ಆಕ್ರೋಶವನ್ನು ವ್ಯಕ್ತಪಡಿಸಿದ್ದರು. ಇದು ನಿರಂತರವಾಗಿ ವ್ಯಕ್ತವಾಗುತ್ತಲೇ ಇದೆ. ಇನ್ನು, 'ಗ್ಯಾರಂಟಿಗಳಿಂದಾಗಿ ದೇಶದ ಅಭಿವೃದ್ಧಿಗೆ ತಡೆಯಾಗುತ್ತಿದ್ದು, ತೆರಿಗೆದಾರರ ಹಣವು ವೋಟ್‌ಬ್ಯಾಂಕ್ ಸೃಷ್ಟಿಯಲ್ಲಿ ಮತ್ತು ಅದನ್ನು ಉಳಿಸಿಕೊಳ್ಳುವಲ್ಲಿ ವಿನಿಯೋಗವಾಗುತ್ತದೆ' ಎಂಬ ಅಭಿಪ್ರಾಯ ಎಲ್ಲೆಲ್ಲೂ ಕೇಳುತ್ತಿದೆ. 'ಸರಕಾರಕ್ಕೆ ಸದಾ ತೆರಿಗೆ ನೀಡುತ್ತಿರುವ ಜನರಿಗೆ, ಅದರಲ್ಲಿ ಕಿಂಚಿತ್ತಾದರೂ ಹಿಂದಿರುಗಿ ಬರಲಿ' ಎಂಬ ವಾದವನ್ನು ಈ ಗ್ಯಾರಂಟಿಗಳ ಸಮರ್ಥಕರು ಮಂಡಿಸುತ್ತಿದ್ದಾರೆ. ತೆರಿಗೆ ಹಣದ ದುರುಪಯೋಗವನ್ನು ತಡೆಯಲು ರಾಜಕೀಯ ಪಕ್ಷಗಳ ವಿರುದ್ಧ ಸಂಘರ್ಷ/ಕಾನೂನು ಹೋರಾಟ ನಡೆಸುವ ಮಾತುಗಳೂ ಸಾರ್ವಜನಿಕವಾಗಿ ಚರ್ಚೆಯಾಗುತ್ತಿವೆ.

ನ್ಯಾಯಾಧೀಶರ ನಿವೃತ್ತಿ ವೇತನಕ್ಕೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆಯ ವೇಳೆ, 'ಸರಕಾರದ ಬಳಿ ಉಚಿತ ಕೊಡುಗೆಗಳನ್ನು ನೀಡಲು ಹಣವಿದೆ, ಆದರೆ ನಿವೃತ್ತ ನ್ಯಾಯಾಧೀಶರ ಪಿಂಚಣಿಗೆ ಹಣವಿಲ್ಲ' ಎಂಬ ವ್ಯಾಕುಲದ ಮಾತುಗಳು ಕೇಳಿಬಂದಿದ್ದವಂತೆ. ಸುಪ್ರೀಂಕೋರ್ಟ್‌ನ ನ್ಯಾಯಪೀಠವೊಂದು ಇನ್ನೊಂದು ಪ್ರಕರಣದಲ್ಲಿ, ಚುನಾವಣೆಗಳಲ್ಲಿ ಮತದಾರರನ್ನು ಸೆಳೆಯಲು ಪೈಪೋಟಿಯಲ್ಲಿ ಉಚಿತ ಯೋಜನೆಗಳನ್ನು ಘೋಷಿಸುತ್ತಿರುವ ಬಗ್ಗೆ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದೆ. ಇಂಥ ಯೋಜನೆಗಳನ್ನು ಘೋಷಿಸುವ ಬದಲು, ದೇಶದ ಅಭಿವೃದ್ಧಿಗೆ ದುಡಿಯುವ ಮನಸ್ಥಿತಿಯನ್ನು ಜನರಲ್ಲಿ ಮೂಡಿಸಬೇಕು ಎಂದೂ ಅದು ಸಲಹೆ ನೀಡಿದೆ. ಇಂಥ ಯೋಜನೆಗಳಿಂದ ಜನರು ದುಡಿಮೆಯ ಮನಸ್ಥಿತಿಯನ್ನೇ ಕಳೆದುಕೊಂಡು ಪರಾವಲಂಬಿಗಳಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿರುವ ನ್ಯಾಯಪೀಠ, 'ಉಚಿತ ಪಡಿತರ ಮತ್ತು ಹಣ ನೀಡಿದರೆ ಜನರು ಯಾವುದೇ ಕೆಲಸ ಮಾಡಲು ಮುಂದಾಗುವುದಿಲ್ಲ; ಅದರ ಬದಲಿಗೆ ಅವರನ್ನು ಮುಖ್ಯವಾಹಿನಿಗೆ ತಂದು ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಮಾಡಬಹುದಲ್ಲವೇ?' ಎಂದೂ ಪ್ರಶ್ನಿಸಿದೆ.

ತಮಿಳುನಾಡಿನಲ್ಲಿ ದಶಕಗಳ ಹಿಂದೆ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷಗಳು ಪೈಪೋಟಿಯ ಮೇಲೆ ಉಚಿತಗಳನ್ನು ಘೋಷಿಸಿದ ಮೇಲೆ, ಕರ್ನಾಟಕದಲ್ಲಿ ಅದರಲ್ಲೂ ಮುಖ್ಯವಾಗಿ ಬೆಂಗಳೂರಿನಲ್ಲಿ ತಮಿಳು ಕಾರ್ಮಿಕರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿ, ಅವರ ಸ್ಥಾನವನ್ನು ಉತ್ತರ ಭಾರತದ ಕಾರ್ಮಿಕರು ತುಂಬುತ್ತಿದ್ದಾರೆ ಎನ್ನುವ ಮಾತು ಕೇಳಿಬರುತ್ತಿದೆ. ಇದರಲ್ಲಿ ಸತ್ಯವಿಲ್ಲದಿಲ್ಲ. ನ್ಯಾಯಮೂರ್ತಿ ಗವಾಯಿಯವರು, ''ಕೆಲವು ರಾಜ್ಯಗಳು ಘೋಷಿಸಿದ ಉಚಿತ ಯೋಜನೆಗಳಿಂದಾಗಿ ಜನರು ಕೆಲಸ ಮಾಡಲು ಬಯಸುತ್ತಿಲ್ಲ. ನಾನೂ ಕೃಷಿ ಕುಟುಂಬದಿಂದ ಬಂದಿದ್ದು, ಮಹಾರಾಷ್ಟ್ರದಲ್ಲಿ ಚುನಾವಣೆಗೂ ಮುನ್ನ ಘೋಷಿಸಲಾದ 'ಫ್ರೀಬೀ'ಗಳಿಂದಾಗಿ ಪಡಿತರವು ಉಚಿತವಾಗಿ ಮನೆಗೆ ತಲುಪುತ್ತಿರುವುದರಿಂದ ಕೃಷಿಕಾರ್ಯಕ್ಕೆ ಕಾರ್ಮಿಕರು ಸಿಗದಂತಾಗಿದೆ'' ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಇತ್ತೀಚೆಗೆ ತಮ್ಮ ವಿವಾದಾತ್ಮಕ ಹೇಳಿಕೆಯಿಂದ ಸುದ್ದಿ ಮಾಡಿದ್ದ ಎಲ್ ಆ್ಯಂಡ್ ಟಿ ಅಧ್ಯಕ್ಷ ಸುಬ್ರಹ್ಮಣ್ಯ ಅವರು ಸ್ವಲ್ಪ ಮುಂದೆ ಹೋಗಿ, ''ಸರಕಾರದ ಯೋಜನೆಗಳಿಂದಾಗಿ ಜನರೀಗ ದುಡಿಯುವ ಆಸಕ್ತಿಯನ್ನೇ ಕಳೆದುಕೊಂಡಿದ್ದಾರೆ. ಸೌಖ್ಯದ ಆದ್ಯತೆಯಿಂದಾಗಿ ಕೆಲಸಕ್ಕಾಗಿ ಬೇರೆಡೆಗೆ ಹೋಗುವ ಮನಸ್ಥಿತಿ ಜನರಲ್ಲಿ ಕಡಿಮೆಯಾಗಿದ್ದು, ಇದು ಕಾರ್ಮಿಕರ ಕೊರತೆಗೆ ಕಾರಣವಾಗಿದೆ'' ಎಂದಿದ್ದಾರೆ.

ರಾಜಕೀಯ ಪಕ್ಷಗಳು ಚುನಾವಣೆ ಗೆಲ್ಲಲು ಪೈಪೋಟಿಯಲ್ಲಿ ಉಚಿತಗಳನ್ನು ನೀಡುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಆತಂಕ–ಅಸಮಾಧಾನ–ಅತೃಪ್ತಿಯನ್ನು ವ್ಯಕ್ತಪಡಿಸಿದ್ದರೆ, 'ಗ್ಯಾರಂಟಿಗಳಿಂದಾಗಿ ದೇಶದ ಆರ್ಥಿಕ ಸ್ಥಿತಿ ಹದಗೆಡುತ್ತದೆ' ಎಂದು ರಿಸರ್ವ್ ಬ್ಯಾಂಕ್ ಕೂಡ ಎಚ್ಚರಿಸಿದೆ. ಉಚಿತಗಳಿಂದಾಗಿ ಅಭಿವೃದ್ಧಿಗೆ ಅನುದಾನ ದೊರಕುತ್ತಿಲ್ಲ ಅಥವಾ ಕೊರತೆಯಾಗುತ್ತಿದೆ ಎಂಬ ಕೂಗು ಕ್ರಮೇಣ ಜೋರಾಗುತ್ತಿದೆ. ಗುತ್ತಿಗೆದಾರರ ದೊಡ್ಡ ಮೊತ್ತದ ಬಿಲ್ ಬಾಕಿಯಿದೆ ಎಂಬ ಆರೋಪವೂ ಕೇಳುತ್ತಿದೆ. ಉಚಿತಗಳ ನೆರವಿನಿಂದ ಚುನಾಯಿತರಾದವರೂ ಈಗ, ಈ ಯೋಜನೆಗಳ ಮುಂದುವರಿಕೆಗೆ ಅಗೋಚರವಾಗಿ ಮತ್ತು ಕೆಲವರು ನೇರವಾಗಿ ಅಪಸ್ವರ ಹಾಡಲಾರಂಭಿಸಿದ್ದಾರೆ. ಮತಬ್ಯಾಂಕ್ ಭದ್ರಪಡಿಸಿಕೊಳ್ಳುವ ತಂತ್ರಗಾರಿಕೆಗೆ ತೆರಿಗೆದಾರರ ಹಣವನ್ನು ಬೇಕಾಬಿಟ್ಟಿ ಬಳಸಿಕೊಳ್ಳುವ ಪರಿಪಾಠವನ್ನು ನಿಲ್ಲಿಸಲು ಇದು ಸಕಾಲ ಎಂಬ ಚಿಂತನೆ ರೂಪುಗೊಳ್ಳುತ್ತಿದೆ.

ಜಾಗೃತರಾಗುತ್ತಿರುವ ಜನರಿಂದು, ''ತೆರಿಗೆದಾರರ ಹಣವು ಕೇವಲ ಕೆಲವರ ಸೊತ್ತಾಗಬೇಕೇ? ಅಭಿವೃದ್ಧಿಗೆ, ಉತ್ಪಾದನಾಶೀಲತೆಗೆ ಬಳಸಬೇಕಾದ ಹಣವನ್ನು ಹೀಗೆ ದುಂದುವೆಚ್ಚ ಮಾಡಿ ದೇಶದಲ್ಲಿ ನಿರುದ್ಯೋಗವನ್ನು ಬೆಳೆಸಬಹುದೇ?'' ಎಂದು ಪ್ರಶ್ನಿಸತೊಡಗಿದ್ದಾರೆ. ಅಂತೆಯೇ, ಉಚಿತಗಳ ಫಲಾನುಭವಿಗಳು ಪ್ರತಿ ತಿಂಗಳೂ ಕಾಯುವ ಸುದ್ದಿ ದೊಡ್ಡದಾಗಿ ಕೇಳುತ್ತಿದ್ದು ಈ ಒತ್ತಡವನ್ನು ಸಹಿಸಲಾಗದ ಕೆಲ ಸರಕಾರಗಳು 'ನಿಶ್ಚಿತ ದಿನ ನೀಡಲು ಇದು ಸಂಬಳವಲ್ಲ' ಎಂಬ ಪಲಾಯನವಾದಿ ಉತ್ತರ ನೀಡುತ್ತಿವೆ. ಈ ಎಲ್ಲ ಬೆಳವಣಿಗೆಗಳು, ಮುಂದಿನ ದಿನಗಳಲ್ಲಿ ಉಚಿತಗಳ ಬಗೆಗಿನ ಮರುಚಿಂತನೆಗೆ ದಾರಿಮಾಡಿಕೊಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಮರದಿಂದ ಮರಕ್ಕೆ ಜಿಗಿಯುವ ಕೋತಿಗೂ, ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ರಾಜಕಾರಣಿಗಳಿಗೂ ವ್ಯತ್ಯಾಸವೇನು?
– **ಏನೂ ಇಲ್ಲ.. ಅಷ್ಟೂ ಸಾಲದೆಂಬಂತೆ ನಂತರ ವಿಧಾನಸೌಧಕ್ಕೆ ಬಂದು ಏನೂ ವ್ಯತ್ಯಾಸ ಇಲ್ಲ ಎಂದು ಪ್ರೂವ್ ಮಾಡ್ತವೆ!**

- **ವಿ.ಹೇಮಂತಕುಮಾರ್, ಬೆಂಗಳೂರು**
ಭಟ್ರೇ, ಮನುಷ್ಯನೇ ಶಾಶ್ವತ ಅಲ್ಲ, ಇನ್ನು ನೋವು ಶಾಶ್ವತಾನಾ?
– **ಹಾಗಂತ ಬದುಕಿದ್ದಷ್ಟು ದಿನ ಎಷ್ಟೂಂತ ನೋವು ಅನುಭವಿಸೋದು?!**

- **ವಿ.ಮಂಜೇಶ್ವರ, ಶನಿವಾರಸಂತೆ**
ಭಟ್ರೇ, ನಿಮ್ಮ ಪತ್ರಿಕೆಯನ್ನು ಓದ ಲು ಎರಡು ಗಂಟೆಗಳಾದರೂ ಬೇಕಲ್ವ?
– **ಇದೇನು ಪ್ರಶಂಸೆಯೋ, ಹಿಂಸೆಯೋ?!**

- **ವಿ.ಕೆ.ನಕುಲ, ಚಿತ್ರದುರ್ಗ**
ಭಟ್ರೇ, ಬೇರೆಯವರ ಮನಸ್ಸಿನಲ್ಲಿ ಏನಿದೆ ಅನ್ನೋದನ್ನು ತಿಳಿದುಕೊಳ್ಳೋದು ಹೇಗೆ?
– **ಅದಕ್ಕೆ ಬ್ರೇನ್ ಮ್ಯಾಪಿಂಗ್ ಮಾಡಬೇಕಿಲ್ಲ!**

- **ನವೀನ ಶೆಣೈ, ಕುಂದಾಪುರ**
ಭಟ್ರೇ, ವಿದೇಶಗಳಿಗೆ ಮನೆ-ಮಂದಿಯೆಲ್ಲ ಹೋಗುವಾಗ ಫೇಸ್ ಬುಕ್‌ನಲ್ಲಿ ಪೋಸ್ಟ್ ಮಾಡಬಾರದು ಅಂತಾರಲ್ಲ?
– **ಗೊತ್ತಾದರೆ ನೀವು ಬರುವ ಮುನ್ನ ಕಳ್ಳರು ಮನೆಯನ್ನು ಶೃಂಗಾರ ಮಾಡಿರುತ್ತಾರಲ್ಲ!**

- **ಕೊಣ್ಣೂರು ಮಹಾದೇವ, ಶಿವಮೊಗ್ಗ**
ಭಟ್ರೇ, ಸರಕಾರ ಸಾರಾಯಿ ಭತ್ಯೆಯನ್ನೂ ಕೊಟ್ಟರೆ ಚೆನ್ನಾಗಿರುತ್ತೆ ಅಲ್ವಾ?
– **ಆ ಹೆಸರಿನಲ್ಲಿ ಕೊಡೋಕಾಗುತ್ಯೇ.. ಹೀಗಾಗಿ ಬೇರೆ ಹೆಸರಿನಲ್ಲಿ ಅದೇ ಉದ್ದೇಶಕ್ಕೆ ಕೊಟ್ಟಿರೋದು!**

- **ನಾಗೇಶ ಕೊಂದೂರು, (ಇಮೇಲ್ ಮೂಲಕ)**
ಭಟ್ರೇ, ಗಂಡಸರೇಕೆ ಕೆಲವೊಮ್ಮೆ ಹೆಂಗಸರ ಥರಾ ಆಡ್ತಾರೆ?
– **ಇಲ್ಲಿ 'ಕೆಲವೊಮ್ಮೆ' ಪದ ಬೇಕಿರಲಿಲ್ಲ!**

- **ಬಿಂದಿ ಗಣೇಶ, ಬೆಳಗಾವಿ**
ಭಟ್ರೇ, ಹುಡುಗ ಕನ್ನಡಿಗ, ಹುಡುಗಿ ಮರಾಠಿ, ಹಾಸಿಗೆ ಯಲ್ಲೂ ಜಗಳ ಆಡ್ತಾರಲ್ಲ?
– **ಅದು ಜಗಳ ಅಲ್ಲ ಗಡಿತಂಟೆ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಇಲ್ಲೊಬ್ಬ ವಿಶ್ವವಾಣಿ ಇ-ಪೇಪರ್ ನೋಡದೇ ಮೇಲೆ ಏಳುವುದಿಲ್ಲವಂತೆ?
– **ಅದೇ ವಾಸಿ, ನಂತರವೂ ಮೇಲೆ ಏಳದಿದ್ದರೆ ಫಜೀತಿ!**

- **ಸಂತೋಷ ಶಿರಸಂಗಿ, ಹಾವೇರಿ**
ಭಟ್ರೇ, ಇತ್ತೀಚೆಗೆ ಪತ್ರಕರ್ತರನ್ನು ಕಂಡರೆ 'ಎನ್ರೀ ಮೀಡಿಯಾ, ಎನ್ರೀ ಮೀಡಿಯಾ' ಅಂತ ಕೂಗುತ್ತಾರಲ್ಲ?
– **ಆಡೋರ ಬಾಯಿಯನ್ನು ಮುಚ್ಚಿಸಲು ಆ ಭಗವಂತನಿಗೂ ಸಾಧ್ಯವಿಲ್ಲ!**

ಅಶ್ವಮೇಧ ಕುದುರೆಯನ್ನು ಕಟ್ಟುವವರಾರು?

ಕಳೆದ ನವೆಂಬರ್‌ನಲ್ಲಿ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯು ಮೋದಿಯವರಿಗೆ ಮತ್ತೊಂದು ಅಗ್ನಿಪರೀಕ್ಷೆಯಾಗಿತ್ತು. ಬಿಜೆಪಿ ಮೈತ್ರಿಕೂಟ ಗೆಲ್ಲುವ ಬಗ್ಗೆ ಇಲ್ಲಿಯೂ ಅನುಮಾನ ವ್ಯಕ್ತವಾಗಿತ್ತು. 'ಮೋದಿಯವರಿಗೆ ವೋಟು ಕೊಟ್ಟರೆ ಉದ್ಯಮಗಳು ಗುಜರಾತಿಗೆ ಸ್ಥಳಾಂತರವಾಗುವುದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ' ಎಂಬ ಅಪಪ್ರಚಾರವು ವಿಪಕ್ಷಗಳ ಪ್ರಮುಖ ಅಸ್ತ್ರವಾಗಿತ್ತು.

ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಡಿಸೆಂಬರ್ 2023ರಲ್ಲಿ ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ರಾಜಸ್ಥಾನ ವಿಧಾನಸಭಾ ಚುನಾವಣೆಗಳು ನಡೆದು, ಮೂರರಲ್ಲೂ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿತು. ಈ ಪೈಕಿ, ಕಾಂಗ್ರೆಸ್ ಆಡಳಿತವಿದ್ದ ರಾಜಸ್ಥಾನ ಮತ್ತು ಛತ್ತೀಸ್‌ಗಢ ಬಿಜೆಪಿಯ ತೆಕ್ಕೆಗೆ ಹೋಗಿದ್ದು ವಿಶೇಷ.

2023ರಲ್ಲಿ ಹೊರಟ ಮೋದಿಯವರ ಅಶ್ವಮೇಧ ಕುದುರೆಯು ದೆಹಲಿಯನ್ನು ತಲುಪಿದೆ, ಆದರೆ ಅದನ್ನು ಕಟ್ಟಿಹಾಕುವ ಸಾಹಸಿಗರು ಇಲ್ಲವಾಗಿದ್ದಾರೆ. 2024ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಮೂರನೆಯ ಬಾರಿಗೆ ಮತ್ತೆ ಅಧಿಕಾರಕ್ಕೆ ಬಂತು. ಲೋಕಸಭೆಯ ಜತೆಗೆ ನಡೆದ ಒಡಿಶಾ ಮತ್ತು ಅರುಣಾಚಲ ಪ್ರದೇಶ ವಿಧಾನಸಭಾ ಚುನಾವಣೆಗಳಲ್ಲೂ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿತು. ಒಡಿಶಾ ಗೆಲುವಿನಿಂದಾಗಿ ಮೊದಲ ಬಾರಿಗೆ ಪೂರ್ವಭಾರತದ ರಾಜ್ಯವೊಂದರಲ್ಲಿ ಕಮಲವು ಅರಳಿತು.

ಇನ್ನು, ಲೋಕಸಭಾ ಚುನಾವಣೆಯ ಜತೆಗೇ ನಡೆದ ಆಂಧ್ರಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಟಿಡಿಪಿ-ಜನಸೇನಾ-ಬಿಜೆಪಿ ಮೈತ್ರಿಕೂಟವು ಅಧಿಕಾರಕ್ಕೆ ಬಂತು. ಅರುಣಾಚಲ ಪ್ರದೇಶದಲ್ಲಿ ಮೂರನೆಯ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯಿತು, ಸಿಕ್ಕಿಂನಲ್ಲಿಯೂ ಎನ್‌ಡಿಎ ಮೈತ್ರಿಕೂಟದ ಪಕ್ಷ ಅಧಿಕಾರಕ್ಕೆ ಬಂತು. ಒಟ್ಟಾರೆಯಾಗಿ, ಕಳೆದ 6 ತಿಂಗಳ ಅವಧಿಯಲ್ಲಿ ನಡೆದ 10 ಚುನಾವಣೆಗಳ ಪೈಕಿ 7ರಲ್ಲಿ ಬಿಜೆಪಿ ಜಯಭೇರಿ ಹೊಡೆದಿದೆ.

ನರೇಂದ್ರ ಮೋದಿಯವರು 10 ವರ್ಷಗಳ ಕಾಲ ಕೇಂದ್ರದಲ್ಲಿ ಆಡಳಿತ ಮಾಡಿದ ತರುವಾಯ, ಮೂರನೆಯ ಬಾರಿಗೆ ಅಧಿಕಾರಕ್ಕೆ ಬಂದಿರುವುದು ಸಾಮಾನ್ಯ ಸಾಧನೆಯಲ್ಲ. ಕಳೆದ 78 ವರ್ಷಗಳಲ್ಲಿ ಜವಾಹರಲಾಲ್ ನೆಹರುರವರು ಮಾತ್ರವೇ ಈ ಸಾಧನೆಯನ್ನು ಮಾಡಿರುವುದು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ನಿರೀಕ್ಷೆಗಿಂತ ಕಡಿಮೆ ಸೀಟುಗಳು ಬಂದವು; ಆದರೆ ಸ್ಪಷ್ಟ ಬಹುಮತವನ್ನು ಪಡೆಯುವಲ್ಲಿ ಎನ್‌ಡಿಎ ಮೈತ್ರಿಕೂಟವು ಯಶಸ್ವಿಯಾಯಿತು. ಮೋದಿಯವರನ್ನು ಹೆಜ್ಜೆ ಹೆಜ್ಜೆಗೂ ಟೀಕಿಸುತ್ತಲೇ ಬಂದಿರುವ ಚುನಾವಣಾ ವಿಶ್ಲೇಷಕರು, ''ಮೋದಿಯವರ ಮ್ಯಾಜಿಕ್ ಮಂಕಾಯಿತು, ಅವರ ಮೋಡಿ ಕುಂದಿದೆ'' ಎಂದು ಉದ್ದುದ್ದದ ಲೇಖನ ಬರೆಯುತ್ತಾರೆ. ಚೇತರಿಕೆಯ ಹಾದಿ ಕಂಡಿದ್ದ ಕಾಂಗ್ರೆಸ್ಸಿಗರು 99 ಸ್ಥಾನಗಳನ್ನು ಪಡೆದು, ಚುನಾವಣೆಯಲ್ಲಿ ತಾವೇ ಗೆದ್ದಂತೆ ಬೀಗಿದರು. ಹೊಸ ಸರಕಾರದ ಆಯಸ್ಸು ಅಲ್ಪಾವಧಿಯದ್ದೆಂದು ಅಭಿಪ್ರಾಯಪಟ್ಟವರೇನೂ ಕಡಿಮೆ ಇರಲಿಲ್ಲ.

ಲೋಕಸಭಾ ಚುನಾವಣೆ ಮುಗಿದ 4 ತಿಂಗಳಲ್ಲಿ ಹರಿಯಾಣ ಮತ್ತು ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆಗಳು ನಡೆದಾಗ, 'ಬಿಜೆಪಿಯ ಗೆಲುವು ಕಷ್ಟ' ಎಂದು ಕೆಲವರು ಅಭಿಪ್ರಾಯಪಟ್ಟಿದ್ದರು. ಚುನಾವಣಾಪೂರ್ವ ಮತ್ತು ಚುನಾವಣೋತ್ತರ ಸಮೀಕ್ಷೆಗಳೂ 'ಹರಿಯಾಣದಲ್ಲಿ ಬಿಜೆಪಿಗೆ ದೊಡ್ಡ ಸೋಲು ಖಚಿತ' ಎಂದಿದ್ದವು. ಫಲಿತಾಂಶ ಪ್ರಕಟವಾದಾಗ, ಎಲ್ಲರ ನಿರೀಕ್ಷೆಯೂ ಸುಳ್ಳಾಗಿ ಬಿಜೆಪಿ 48 ಸ್ಥಾನಗಳಲ್ಲಿ ಗೆದ್ದು ಸತತ 3ನೆಯ ಬಾರಿಗೆ ಮತ್ತೆ ಅಧಿಕಾರಕ್ಕೆ ಬಂತು. 'ಗೆದ್ದೇಬಿಟ್ಟೆವು' ಎಂದು ಜಿಲೇಬಿ ತಿಂದು ಸಂಭ್ರಮಾಚರಣೆಗೆ ಮುಂದಾಗಿದ್ದ ಕಾಂಗ್ರೆಸ್ 36 ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. 'ಮೋದಿಮೋಡಿ ಕುಂದಿದೆ' ಎಂದಿದ್ದವರು ಹರಿಯಾಣ ಫಲಿತಾಂಶದ ಆಘಾತದಿಂದ ಹೊರಬರಲು ಅನೇಕ ದಿನಗಳನ್ನು ತೆಗೆದುಕೊಂಡರು.

ಹರಿಯಾಣದ ಜತೆ ನಡೆದ ಜಮ್ಮು-ಕಾಶ್ಮೀರ ಚುನಾವಣೆಯಲ್ಲಿ ನಿರೀಕ್ಷಿಸಿದಂತೆ ಬಿಜೆಪಿ ಪಾರಮ್ಯ ಮೆರೆದು, ಸ್ಪರ್ಧಿಸಿದ್ದ 43 ಸ್ಥಾನಗಳಲ್ಲಿ 29 ಸ್ಥಾನಗಳನ್ನು ತನ್ನದಾಗಿಸಿಕೊಂಡರೆ, 32 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ ಕೇವಲ 6ರಲ್ಲಿ ಗೆಲುವು ಸಾಧಿಸಿತು. ಹಿಂದೂ ಬಾಹುಳ್ಯವಿರುವ ಜಮ್ಮುವಿನಲ್ಲಿ ಕಾಂಗ್ರೆಸ್ ಗೆದ್ದಿದ್ದು ಕೇವಲ ಒಂದು ಸ್ಥಾನ. ಜಮ್ಮುವಿನ ಹಿಂದೂಗಳು ಕೇವಲ ಮೋದಿಯವರ ನಾಯಕತ್ವದ ಮೇಲೆ ನಂಬಿಕೆಯಿಟ್ಟಿರುವುದಕ್ಕೆ ಇದು ಸಾಕ್ಷಿಯಾಗಿದೆ.

ಕಳೆದ ನವೆಂಬರ್‌ನಲ್ಲಿ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯು ಮೋದಿಯವರಿಗೆ ಮತ್ತೊಂದು ಅಗ್ನಿಪರೀಕ್ಷೆಯಾಗಿತ್ತು. ಬಿಜೆಪಿ ಮೈತ್ರಿಕೂಟ ಗೆಲ್ಲುವ ಬಗ್ಗೆ ಇಲ್ಲಿಯೂ ಅನುಮಾನ ವ್ಯಕ್ತವಾಗಿತ್ತು. 'ಮೋದಿಯವರಿಗೆ ವೋಟು ಕೊಟ್ಟರೆ ಉದ್ಯಮಗಳು ಗುಜರಾತಿಗೆ ಸ್ಥಳಾಂತರವಾಗುವುದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ' ಎಂಬ ಅಪಪ್ರಚಾರವು ವಿಪಕ್ಷಗಳ ಪ್ರಮುಖ ಅಸ್ತ್ರವಾಗಿತ್ತು. ಆದರೆ, ಚುನಾವಣಾ ಫಲಿತಾಂಶವು ಪ್ರಕಟವಾದಾಗ, 288 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಮಹಾಯುತಿ ಮೈತ್ರಿಕೂಟವು 229ರಲ್ಲಿ ಗೆದ್ದಿತ್ತು. ತಾನು ಸ್ಪರ್ಧಿಸಿದ್ದ 115 ಸ್ಥಾನಗಳಲ್ಲಿ 132ನ್ನು ಗೆದ್ದು ಬಿಜೆಪಿ ದಾಖಲೆ ನಿರ್ಮಿಸಿತು. ಕಾಂಗ್ರೆಸ್, ಶಿವಸೇನೆ (ಉದ್ಧವ್) ಮತ್ತು ಎನ್‌ಸಿಪಿ (ಶರದ್ ಪವಾರ್) ತಂಡಕ್ಕೆ 47 ಸ್ಥಾನಗಳನ್ನು ಮಾತ್ರ ಗೆಲ್ಲಲು ಸಾಧ್ಯವಾಗಿದ್ದು.

ಮಹಾರಾಷ್ಟ್ರದೊಂದಿಗೆ ಜಾರ್ಖಂಡ್ ವಿಧಾನಸಭೆಗೂ ಚುನಾವಣೆ ನಡೆಯಿತು. ಹೇಮಂತ್ ಸೊರೇನ್ ನೇತೃತ್ವದ ಜಾರ್ಖಂಡ್ ಮುಕ್ತಿ ಮೋರ್ಚಾ 2ನೇ ಬಾರಿಗೆ ಅಧಿಕಾರಕ್ಕೆ ಬಂತು. ಜಾರಿ ನಿರ್ದೇಶನಾಲಯವು ಮುಖ್ಯಮಂತ್ರಿ ಹೇಮಂತ್ ಸೊರೇನ್‌ರನ್ನು ಜೈಲಿಗೆ ಕಳುಹಿಸದಿದ್ದಿದ್ದರೆ ಪ್ರಾಯಶಃ ಫಲಿತಾಂಶ ಬದಲಾಗುವ ಸಾಧ್ಯತೆಯಿತ್ತು. ಇದರಿಂದಾಗಿ ಆದಿವಾಸಿಗಳ ಪ್ರಾಬಲ್ಯವಿರುವ 24 ಕ್ಷೇತ್ರಗಳ ಪೈಕಿ 23ರಲ್ಲಿ ಬಿಜೆಪಿ ಸೋತಿತು. ಅತಿಯಾದ ಆತ್ಮವಿಶ್ವಾಸವು ಕೆಲವೊಮ್ಮೆ ತಿರುಗುಬಾಣವಾಗುತ್ತದೆ ಎಂಬುದಕ್ಕೆ ಜಾರ್ಖಂಡ್ ಫಲಿತಾಂಶವೇ ಸಾಕ್ಷಿ.

ಇನ್ನು ದೆಹಲಿ ವಿಧಾನಸಭೆಯ ವಿಷಯಕ್ಕೆ ಬರೋಣ. ಇಲ್ಲಿ 27 ವರ್ಷಗಳ ನಂತರ ಬಿಜೆಪಿ ಅಧಿಕಾರಕ್ಕೆ ಬಂದು ಕಮಲವು ಅರಳಿದೆ. ಮೋದಿಯವರು ಈ ಜನ್ಮದಲ್ಲಿ ಆಮ್ ಆದ್ಮಿ ಪಕ್ಷವನ್ನು ಸೋಲಿಸಲು ಸಾಧ್ಯವಿಲ್ಲ ಎಂಬ ಅತಿಯಾದ ಆತ್ಮವಿಶ್ವಾಸದಲ್ಲಿದ್ದ ಅರವಿಂದ ಕೇಜ್ರಿವಾಲರು ತಾವೂ ಸೋತು, ತಮ್ಮ ಪಕ್ಷದ ಸೋಲಿಗೂ ಕಾರಣರಾದರು. 1998ರಿಂದ 2013ರವರೆಗೆ ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಅವರು ಬಿಜೆಪಿಗೆ ಮಗ್ಗುಲಮುಳ್ಳಾಗಿದ್ದರೆ, 2013ರಿಂದ 2025ರ ತನಕ ಕೇಜ್ರಿವಾಲರು 'ಪರ್ಯಾಯ ರಾಜಕೀಯ ವ್ಯವಸ್ಥೆ'ಯ ಆಶ್ವಾಸನೆಯ ಮೇಲೆ ಬಿಜೆಪಿಯನ್ನು ಕಾಡಿದರು. 27 ವರ್ಷದಿಂದ ಗೆಲುವನ್ನೇ ಕಾಣದ ಬಿಜೆಪಿ ಪ್ರತಿ ಚುನಾವಣೆಯಲ್ಲೂ ಸೋತು ಕಂಗೆಟ್ಟಿತ್ತು. ಉಲ್ಲೇಖನೀಯವೆಂದರೆ, 2014, 2019 ಮತ್ತು 2024ರ ಲೋಕಸಭಾ ಚುನಾವಣೆಗಳಲ್ಲಿ

ದೆಹಲಿಯ ಏಳೂ ಸ್ಥಾನಗಳನ್ನು ಬಿಜೆಪಿ ಗೆಲ್ಲುತ್ತಾ ಬಂದಿದೆ; ಆದರೆ 2015ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಕೇವಲ 2 ಸ್ಥಾನ ಮತ್ತು 2020ರಲ್ಲಿ 8 ಸ್ಥಾನ ಮಾತ್ರ ದಕ್ಕಿ ಹೀನಾಯ ಸೋಲು ಕಾಣಬೇಕಾಗಿ ಬಂದಿತ್ತು.

ಕೇಜ್ರಿವಾಲರು ಎರಡೂ ಅವಧಿಯಲ್ಲಿ ಹಲವಾರು ಪ್ರಮಾದಗಳನ್ನು ಮಾಡಿದ್ದರು. 'ನಮ್ಮದು ಸ್ವಚ್ಛ ರಾಜಕೀಯ' ಎಂದು ಡಂಗುರ ಹೊಡೆದುಕೊಂಡು ಊರಲ್ಲಿದ್ದ ಮಿಕ್ಕವರಿಗೆಲ್ಲಾ 'ಭ್ರಷ್ಟ' ಎಂಬ ಹಣೆಪಟ್ಟಿ ಲಗತ್ತಿಸುತ್ತಿದ್ದ ಇವರು ಸ್ವತಃ ನೂರು ಕೋಟಿ ಲಿಕ್ಕರ್ ಹಗರಣದಲ್ಲಿ ಸಿಲುಕಿ ಜೈಲು ಸೇರಿದರು. ಪಂಚತಾರಾ ಹೋಟೆಲ್ ಅನ್ನು ಮೀರಿಸುವ ಭವ್ಯವಾದ 'ಶೀಷ್‌ಮಹಲ್' ನಿರ್ಮಿಸಿ 'ಆಮ್ ಆದ್ಮಿ'ಯ ವರ್ಚಸ್ಸಿಗೆ ಮಸಿ ಬಳಿದರು. ಯಮುನಾ ನದಿಯನ್ನು ಸ್ವಚ್ಛ ಮಾಡುವ ಪೊಳ್ಳು ಆಶ್ವಾಸನೆಯು ಹತ್ತು ವರ್ಷವಾದರೂ ಆಶ್ವಾಸನೆಯಾಗಿಯೇ ಉಳಿಯಿತು. ಅವರ ಬಹುದೊಡ್ಡ ಪ್ರಮಾದವೆಂದರೆ, ಜಾರಿ ನಿರ್ದೇಶನಾಲಯದವರು ಬಂಧಿಸಿದ ನಂತರವೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದುದು. ಭ್ರಷ್ಟ ಲಾಲು ಪ್ರಸಾದ್ ಜೈಲಿಗೆ ಹೋಗುವ ಮುನ್ನ ರಾಜೀನಾಮೆ ನೀಡಿದ್ದರು. ತಾವೊಬ್ಬ ಪ್ರಾಮಾಣಿಕ ಎಂದು ಬೋರ್ಡು ಹಾಕಿಕೊಂಡಿದ್ದ ಕೇಜ್ರಿವಾಲ್ ರಾಜೀನಾಮೆ ನೀಡದಿದ್ದುದನ್ನು ದೆಹಲಿಯ ಜನರು ಒಪ್ಪಲಿಲ್ಲ.

ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿಯದು ಅತ್ಯಂತ ಹೀನಾಯ ಪರಿಸ್ಥಿತಿ. ಕಳೆದ 3 ಲೋಕಸಭೆ ಮತ್ತು 3 ವಿಧಾನಸಭೆ ಚುನಾವಣೆಯಲ್ಲಿ ದೆಹಲಿಯ ಒಂದು ಸೀಟನ್ನು ಗೆಲ್ಲುವುದಕ್ಕೂ ಅದಕ್ಕೆ ಸಾಧ್ಯವಾಗಲಿಲ್ಲ. ಇದು ದೆಹಲಿಯಲ್ಲಿ 15 ವರ್ಷ ರಾಜ್ಯಭಾರ ಮಾಡಿದ ಈ ಪಕ್ಷಕ್ಕೆ ಬಂದಿರುವ ದುರವಸ್ಥೆ, ಒಂದು ಸೀಟೂ ಇಲ್ಲ! ಸ್ಪರ್ಧಿಸಿದ್ದ 70 ಸ್ಥಾನಗಳ ಪೈಕಿ 67ರಲ್ಲಿ ಅದು ಠೇವಣಿಯನ್ನು ಕಳೆದುಕೊಂಡಿತು. ಅದಕ್ಕೆ ದುಃಖ ಪಡುವ ಬದಲು ಅಥವಾ ಆತ್ಮಾವಲೋಕನಕ್ಕೆ ಮುಂದಾಗುವ ಬದಲು, ಆಮ್ ಆದ್ಮಿ ಪಕ್ಷ ಸೋತಿದ್ದಕ್ಕೆ ಕಾಂಗ್ರೆಸ್ ಸಂಭ್ರಮಿಸುತ್ತಿದೆ! ಕಳೆದ ಚುನಾವಣೆಯಲ್ಲಿ ಬಂದಿದ್ದ ಶೇ.4ರಷ್ಟು ಮತಕ್ಕೆ ಹೋಲಿಸಿದರೆ ಈ ಬಾರಿ ತನಗೆ ಶೇ.6ರಷ್ಟು ಮತ ಬಂದಿರುವುದು ಕಾಂಗ್ರೆಸ್‌ಗೆ ದೊಡ್ಡ ವಿಷಯವಾಗಿದೆ.

ಬಿಜೆಪಿ ಮತ್ತು ಆಮ್ ಆದ್ಮಿ ನಡುವಿನ ಗೆಲುವಿನ ಅಂತರ ಶೇ.2ರಷ್ಟು ಮಾತ್ರ ಎಂಬುದಕ್ಕೆ ಚುನಾವಣಾ ವಿಶ್ಲೇಷಕರು ಹೆಚ್ಚು ಒತ್ತು ನೀಡುವ ಕುಚೇಷ್ಟೆ ಮಾಡುತ್ತಿದ್ದಾರೆ. ಬಿಜೆಪಿಯು ತನ್ನ ಮಿತ್ರಪಕ್ಷಗಳಾದ ಜೆಡಿಯು ಮತ್ತು ಎಲ್‌ಜೆಪಿಗೆ 2 ಸೀಟನ್ನು ಬಿಟ್ಟುಕೊಟ್ಟಿತ್ತು. ಅವೆರಡೂ ಪಡೆದ ಮತಗಳನ್ನು ಸೇರಿಸಿದರೆ ಗೆಲುವಿನ ಅಂತರ ಶೇ.3.5ರಷ್ಟಾಗುತ್ತದೆ. ಮುಸ್ಲಿಂಬಾಹುಳ್ಯವಿರುವ ಕ್ಷೇತ್ರದಲ್ಲಿ ಬಿಜೆಪಿಗೆ ಮತ ಬಾರದಿರುವುದು ಕಟುಸತ್ಯ. ಮುಸ್ಲಿಮರು ಆಮ್ ಆದ್ಮಿ ಪಕ್ಷವನ್ನು ಶೇ.100ರಷ್ಟು ಬೆಂಬಲಿಸಿದ್ದು ಅದರ ಮತಗಳಿಕೆ ಹೆಚ್ಚಾಗಲಿಕ್ಕೆ ಮತ್ತೊಂದು ಕಾರಣ.

ಬಿಜೆಪಿ ಕಳೆದ 8 ತಿಂಗಳಲ್ಲಿ ಒಡಿಶಾದಲ್ಲಿ ಮೊಟ್ಟ ಮೊದಲ ಬಾರಿಗೆ ಸ್ವಂತಬಲದ ಮೇಲೆ ಅಧಿಕಾರಕ್ಕೆ ಬಂತು ಮತ್ತು 27 ವರ್ಷಗಳ ತರುವಾಯ ರಾಜಧಾನಿಯಲ್ಲಿ ಕಮಲವು ಅರಳಿತು. 2023ರ ಡಿಸೆಂಬರ್‌ನಲ್ಲಿ ಆರಂಭವಾದ ಮೋದಿಯವರ ವಿಜಯಯಾತ್ರೆಯು ಅಬಾಧಿತವಾಗಿ ಮುಂದುವರಿಯುತ್ತಿದೆ. ಪ್ರಾಮಾಣಿಕ ಮತ್ತು ದೂರದೃಷ್ಟಿಯ ನೇತೃತ್ವದ ದ್ಯೋತಕವಾಗಿರುವ ಮೋದಿಯವರ 'ಗೆಲುವು' ಎಂಬ ಅಶ್ವಮೇಧ ಕುದುರೆಯ ನಾಗಾಲೋಟಕ್ಕೆ ತಡೆಯಿಲ್ಲವಾಗಿದೆ. ಈ ಕುದುರೆಯನ್ನು ಕಟ್ಟಿಹಾಕಿ ಅವರಿಗೆ ಸವಾಲೊಡ್ಡುವ ಮತ್ತೊಂದು ನಾಯಕತ್ವವು ದೇಶದಲ್ಲಿ ಕಾಣುತ್ತಿಲ್ಲ. ಪ್ರತಿಯೊಂದು ಚುನಾವಣೆಯ ನಂತರ ಅವರ ಜನಪ್ರಿಯತೆ ಹೆಚ್ಚಾಗುತ್ತಲೇ ಇದೆ. ಆದರೆ, 'ಮೋದಿ-ವಿರೋಧಿಗಳು' ತಮ್ಮ ಅಸಂಬದ್ಧ ಕಾರ್ಯಸೂಚಿಗಳಿಂದಾಗಿ ತಿರಸ್ಕೃತರಾಗುತ್ತಿದ್ದರೂ, ಆತ್ಮಾವಲೋಕನ ಮಾಡಿಕೊಳ್ಳಲು ಸಿದ್ಧರಿಲ್ಲ. ದೇಶದ 15 ರಾಜ್ಯಗಳಲ್ಲಿ ಏಕಾಂಗಿಯಾಗಿ, 6 ರಾಜ್ಯಗಳಲ್ಲಿ ಮಿತ್ರಪಕ್ಷಗಳೊಂದಿಗೆ ಬಿಜೆಪಿಯು ಸರಕಾರ ನಡೆಸುತ್ತಿರುವುದು ಮೋದಿಯವರ ಅದ್ಭುತ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

(ಲೇಖಕರು ಬಿಜೆಪಿಯ ವಕ್ತಾರರು)

ರಾಜಬಾಂಧವ್ಯ
ಬಸವರಾಜ ಶಿವಪ್ಪ ಗಿರಗಾಂವಿ

ಗೊತ್ತಿರಲಿ, ಭಾರತದ ಕಷ್ಟಕಾಲದ ಗೆಳೆಯ ರಷ್ಯಾ

ಭಾರತದ ರಾಜತಾಂತ್ರಿಕ ವ್ಯವಸ್ಥೆಯಲ್ಲಿ ಸದ್ಯ ಮೋದಿ-ಟ್ರಂಪ್ ಹವಾ ಜೋರಾಗಿಯೇ ಇದೆ. 'ಯು ಆರ್ ಮೈ ಬೆಸ್ಟ್ ಫ್ರೆಂಡ್, ಯು ಆರ್ ಎ ಗ್ರೇಟ್ ಲೀಡರ್' ಎಂಬುದಾಗಿ ಟ್ರಂಪ್ ಅವರು ಮೋದಿಪರ ನೀಡಿದ ಹೇಳಿಕೆಗಳು ಭಾರತದ ಬಹುತೇಕ ಪತ್ರಿಕೆಗಳ ಮುಖಪುಟಗಳಲ್ಲಿ ರಾರಾಜಿಸುತ್ತಿವೆ.

ಇದು ಒಂದು ದಶಕಕ್ಕೂ ಹಿಂದಿನ ಮಾತು. ಭಾರತದ ಸಂವಿಧಾನ ವ್ಯವಸ್ಥೆಯಲ್ಲಿ ಕಲ್ಪಿಸಲಾಗಿರುವ 'ಮುಖ್ಯಮಂತ್ರಿ' ಎಂಬ ದೊಡ್ಡ ಅಧಿಕಾರದ ಹುದ್ದೆಯಲ್ಲಿದ್ದರೂ, ಇದೇ ನರೇಂದ್ರ ಮೋದಿಯವರಿಗೆ ಅಮೆರಿಕ ಭೇಟಿಗೆ ವೀಸಾ ನೀಡುವುದಕ್ಕೂ ಅಲ್ಲಿನ ಆಳುಗ ವ್ಯವಸ್ಥೆ ನಿರಾಕರಿಸಿತ್ತು. ಅಂದು ಮೋದಿಯವರೇನೂ ವೈಯಕ್ತಿಕ ಹಿತಾಸಕ್ತಿಗಾಗಿ ಅಮೆರಿಕಕ್ಕೆ ಹೋಗಲು ನಿರ್ಧರಿಸಿರಲಿಲ್ಲ, ಅದರ ಹಿಂದೆ ಆಡಳಿತಾತ್ಮಕ ಮತ್ತು ಜನಕಲ್ಯಾಣದ ಉದ್ದೇಶಗಳಿದ್ದವು. ಅಂದಿಗೂ ಇಂದಿಗೂ ಇರುವ ವ್ಯತ್ಯಾಸವೇನೆಂದರೆ, ಅಂದು ಭಾರತದ ರಾಜ್ಯವೊಂದರ ಮುಖ್ಯಮಂತ್ರಿಯಾಗಿದ್ದ ಮೋದಿಯವರು ಇಂದು ಒಂದಿಡೀ ದೇಶದ ಪ್ರಧಾನ ಮಂತ್ರಿಯಾಗಿದ್ದಾರೆ. ಜತೆಗೆ, ಅಂದು ಮಾಧ್ಯಮಗಳು ಮೋದಿಯವರನ್ನು ಇಂದಿನಂತೆ 'ವರ್ಣರಂಜಿತ' ಗೊಳಿಸಿರಲಿಲ್ಲ ಮತ್ತು ಗೋಧ್ರಾ ಹತ್ಯಾಕಾಂಡದ ಆರೋಪವು ಮೋದಿಯವರನ್ನು ಸುತ್ತಿಕೊಂಡಿತ್ತು. ಅದೇನೇ ಇರಲಿ, ಹಿಂದಿನವುಗಳ ಚರ್ಚೆ ಈಗ ಅಪ್ರಸ್ತುತ. ಒಟ್ಟಾರೆಯಾಗಿ, ಭಾರತದ ಪ್ರಧಾನಿಗೆ ಅಮೆರಿಕವು ಪ್ರಸ್ತುತ ನೀಡುತ್ತಿರುವ ಗೌರವವನ್ನು ನೋಡಿದರೆ, ಭಾರತೀಯರಾದ ನಾವೆಲ್ಲರೂ ಹೆಮ್ಮೆಪಟ್ಟುಕೊಳ್ಳಬೇಕು.

ಆದರೆ ಇಲ್ಲಿ ಮತ್ತೊಂದು ಸೂಕ್ಷ್ಮವನ್ನು ಮರೆಯುವಂತಿಲ್ಲ. ಭಾರತದಲ್ಲಿ ಬಡತನವು ತಾಂಡವವಾಡುತ್ತಿದ್ದಾಗಿನಿಂದಲೂ ರಷ್ಯಾ ದೇಶವು ಭಾರತದ ಪರಮಾಪ್ತ ಸ್ನೇಹಿತನಂತೆ ನಡೆದುಕೊಂಡಿದೆ. ಹಲವು ವಿಷಯಗಳ ಕುರಿತಾಗಿ ವಿಶ್ವದ ಕೆಲ ರಾಷ್ಟ್ರಗಳು ಭಾರತದ ಮೇಲೆ ನಿರ್ಬಂಧ ಹೇರಿದಾಗ/ದಿಗ್ಬಂಧನ ವಿಧಿಸಿದಾಗ ಶಾಂತಿದೂತನ ಪಾತ್ರ ನಿರ್ವಹಿಸಿ ಭಾರತದ ನೆರವಿಗೆ ಧಾವಿಸಿದ ಕೀರ್ತಿ ರಷ್ಯಾಕ್ಕೆ ಸಲ್ಲುತ್ತದೆ. ಬ್ರಿಟಿಷರ ಬಿಗಿಮುಷ್ಟಿಯಿಂದ ಬಿಡಿಸಿಕೊಂಡು ಸ್ವತಂತ್ರಗೊಂಡ ನಂತರ ಭಾರತದ ಆರ್ಥಿಕ ಪರಿಸ್ಥಿತಿಯು ಅಷ್ಟೊಂದು ಸಮರ್ಪಕವಾಗಿರಲಿಲ್ಲ, ದೇಶದಲ್ಲಿ ಬಡತನ ತಾಂಡವವಾಡುತ್ತಿತ್ತು. ಆ ಸಂದರ್ಭದಲ್ಲಿ ನಮ್ಮ ನೆರವಿಗೆ ಧಾವಿಸಿದ ರಷ್ಯಾ, ತನ್ನಲ್ಲಿದ್ದ ಪಂಚವಾರ್ಷಿಕ ಯೋಜನೆಗಳಂಥ ಹಲವು ಅಭಿವೃದ್ಧಿ ಮಾದರಿಗಳನ್ನು ಭಾರತಕ್ಕೆ ಧಾರೆಯೆರೆಯಿತು. ಭಾರತವು ತನ್ನ ನೆಲದಲ್ಲಿ ಹೇರಳವಾಗಿದ್ದ ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮುನ್ನಡೆಯುವುದಕ್ಕೆ ತಳಪಾಯ ಹಾಕಿದ್ದೇ ರಷ್ಯಾ ದೇಶ. ರಷ್ಯಾದ ಅಂದಿನ ಸಹಕಾರವೇ, ಭಾರತವಿಂದು ಸತತವಾಗಿ ದಾಖಲಿಸುತ್ತ ಬಂದಿರುವ ಬದಲಾವಣೆಗೆ/ಬೆಳವಣಿಗೆಗೆ ಕಾರಣವಾಗಿದೆ. ರಷ್ಯಾ ಮೂಲದ ಪಂಚವಾರ್ಷಿಕ ಯೋಜನೆಗಳಿಂದಾಗಿ ಭಾರತದಲ್ಲಿ ಕೃಷಿ, ಕೈಗಾರಿಕೆ, ನೀರಾವರಿ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿಯಾದವು, ಹಸಿರು-ನೀಲಿ-ಶ್ವೇತಕ್ರಾಂತಿಗಳು ನಮ್ಮ ನೆಲದಲ್ಲಿ ಜರುಗಿದವು. ಹೀಗೆ ಸಂಕಷ್ಟದ ಸಮಯದಲ್ಲಿ ರಕ್ಷಣೆ, ಆರ್ಥಿಕ ಮತ್ತು ಆಹಾರ ವಲಯಗಳಲ್ಲಿ ಕೈಹಿಡಿದು ನೆರವಿಗೆ ಬಂದ ರಷ್ಯಾವನ್ನು ಇಂದಿನ ಭಾರತವು ಮರೆಯಬಾರದು.

ಭಾರತದಂಥ ಅಭಿವೃದ್ಧಿ ಹೊಂದುತ್ತಿರುವ ದೇಶಗಳು, ಅಮೆರಿಕದಂಥ ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಗೆಳೆತನ ಬೆಳೆಸಲು ಹಂಬಲಿಸುವುದು ಸ್ವಾಭಾವಿಕ. ಆದರೆ, ಅಭಿವೃದ್ಧಿ ಪಥದಲ್ಲಿ ದಿನದಿಂದ ದಿನಕ್ಕೆ ಸಾಕಷ್ಟು ಮುನ್ನಡೆಯುತ್ತಿರುವ ಭಾರತವು ತನ್ನತನವನ್ನು ಬಿಟ್ಟು, ಮುಂದುವರಿದ ದೇಶಗಳಿಗೆ ಅತಿಯಾಗಿ ಶರಣಾಗುವುದು ಬೇಡ ಎನಿಸುತ್ತದೆ. ಭಾರತದ ಸಂಸ್ಕಾರ-ಸಂಸ್ಕೃತಿ-ಸಾರ್ವಭೌಮತ್ವದ ವಿಷಯ ಬಂದಾಗ, ಇಂದಿರಾ ಗಾಂಧಿ ಮತ್ತು ಅಟಲ್ ಬಿಹಾರಿ ವಾಜಪೇಯಿಯವರಂಥ ಭಾರತದ ಹಿಂದಿನ ಪ್ರಧಾನಿಗಳು ದೇಶದ ಘನತೆ-ಗೌರವಗಳನ್ನು ತಮ್ಮ ಅಧಿಕಾರದುದ್ದಕ್ಕೂ ಎತ್ತಿ ಹಿಡಿದಿದ್ದಾರೆ ಎಂಬುದು ಗೊತ್ತಿರುವ ಸಂಗತಿಯೇ. ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದಾಗ, ರಾಜಸ್ಥಾನದ ಪೋಖ್ರಾನ್‌ನಲ್ಲಿ ಪರಮಾಣು ಪರೀಕ್ಷೆ ನಡೆಸಲಾಯಿತು ಮತ್ತು ತನ್ಮೂಲಕ ವಿಶ್ವದಲ್ಲಿ ಅಣುಬಾಂಬ್ ಹೊಂದಿದ ಬೆರಳೆಣಿಕೆಯ ದೇಶಗಳಲ್ಲಿ ಭಾರತ ಒಂದೆನಿಸಿಕೊಂಡಿತು. ಅಂದು ವಿಶ್ವದಲ್ಲಿ, ರಕ್ಷಣಾ ವಲಯಕ್ಕೆ ಸಂಬಂಧಿಸಿದಂತೆ ಅಮೆರಿಕ ಮತ್ತು ರಷ್ಯಾ ದೇಶಗಳು ಮಾತ್ರವೇ ಬಲಾಢ್ಯವಾಗಿದ್ದವು. ಪೋಖ್ರಾನ್‌ನಲ್ಲಿನ ಅಣುಬಾಂಬ್ ಪರೀಕ್ಷೆಯ ನಂತರ ಭಾರತವು ತಾನು ಬಲವನ್ನು ವರ್ಧಿಸಿಕೊಂಡಿರುವ ಸಂದೇಶವನ್ನು ವಿಶ್ವಸಮುದಾಯಕ್ಕೆ ರವಾನಿಸಿತ್ತು. ಇದಕ್ಕೂ ಮುನ್ನ ಭಾರತವು ಬಾಂಗ್ಲಾದೇಶವನ್ನು ಪಾಕಿಸ್ತಾನದ ಬಿಗಿಮುಷ್ಟಿಯಿಂದ ವಿಮೋಚನೆಗೊಳಿಸಿತ್ತು. 1971ರಲ್ಲಿ ಬಾಂಗ್ಲಾದೇಶಕ್ಕೆ ಸಿಕ್ಕ ಸ್ವಾತಂತ್ರ್ಯ ಮತ್ತು 1974ರಲ್ಲಿ ಪೋಖ್ರಾನ್‌ನಲ್ಲಿ ನಡೆದ ಪರಮಾಣು ಪರೀಕ್ಷೆಯಂಥ ಬೆಳವಣಿಗೆಗಳು ಅಮೆರಿಕಕ್ಕೆ ಇಷ್ಟವಿರಲಿಲ್ಲ. ಕಾರಣ, ಪಾಕಿಸ್ತಾನವು ಅಮೆರಿಕೆಯ ಸಹವಾಸದಲ್ಲಿತ್ತು. ಭಾರತದ ಮಗ್ಗುಲುಮುಳ್ಳಾಗಿರುವ ಪಾಕಿಸ್ತಾನದ ಸಲಹೆಯಂತೆ ಅಮೆರಿಕವು ರಕ್ಷಣಾ ವಲಯದಲ್ಲಿ ಭಾರತಕ್ಕೆ ನೀಡುತ್ತಿದ್ದ ಸಹಕಾರವನ್ನು ಸಂಪೂರ್ಣವಾಗಿ ನಿಲ್ಲಿಸಿತು.

ರಕ್ಷಣಾ ಕ್ಷೇತ್ರವು ಬಲಾಢ್ಯವಾಗಿದ್ದಾಗ ಮಾತ್ರವೇ ಶತ್ರುರಾಷ್ಟ್ರಗಳು ಬಾಲ ಮುದುರಿಕೊಂಡು ಕೂರುತ್ತವೆ. ರಕ್ಷಣಾ ಸಹಕಾರವನ್ನು ಸ್ಥಗಿತಗೊಳಿಸುವ ಅಮೆರಿಕದ ಕ್ರಮವು, ಪಾಕಿಸ್ತಾನ ಸೇರಿದಂತೆ ತನ್ನ ಮಿಕ್ಕ ಶತ್ರುರಾಷ್ಟ್ರಗಳಿಗೆ ವರದಾನವಾಗುತ್ತದೆ ಎಂಬ ಸೂಚನೆಯು ಭಾರತಕ್ಕೆ ಗೋಚರಿಸಿತು. ಆ ಸಂದರ್ಭದಲ್ಲಿ ವಿಶ್ವದ ಶಾಂತಿದೂತ ದೇಶವೆನಿಸಿದ್ದ ರಷ್ಯಾ ಕೂಡ, ಭಾರತದ ಪರಮಾಣು ಪರೀಕ್ಷೆಗೆ 'ವಿಷಯಾಧಾರಿತ ವಿರೋಧ'ವನ್ನು ವ್ಯಕ್ತಪಡಿಸಿತಾದರೂ, ಮೂಲಭೂತ ವ್ಯವಸ್ಥೆಗಳಿಗೆ ಅಡ್ಡಿಯುಂಟುಮಾಡಲಿಲ್ಲ. ಭಾರತದಲ್ಲಿ ಬಡತನ ಮತ್ತು ಹಸಿವು ತೀವ್ರವಾಗಿದ್ದಂಥ ಸಂಕಷ್ಟಮಯ ದಿನಗಳಲ್ಲಿ, ನಮ್ಮೊಂದಿಗೆ ಹಲವು ಶಾಂತಿ ಒಪ್ಪಂದಗಳನ್ನು ಕೈಗೊಂಡಿದ್ದು ಹಾಗೂ ವಿಶ್ವದ ಕೆಲ ರಾಷ್ಟ್ರಗಳು ಭಾರತದ ವಿರುದ್ಧವಾಗಿದ್ದಾಗ ರಕ್ಷಣಾ ವಲಯ ಸೇರಿದಂತೆ ಅನೇಕ ಕ್ಷೇತ್ರಗಳ ಸಹಾಯಕ್ಕೆ ಧಾವಿಸಿ ಬಂದಿದ್ದು ರಷ್ಯಾ ಮಾತ್ರವೇ ಎಂಬುದನ್ನು ಭಾರತೀಯರು ಮರೆಯಬಾರದು.

ದೇಶದ ಸಾರ್ವಭೌಮತ್ವದ ವಿಷಯದಲ್ಲಿ ಇಂದಿರಾ ಗಾಂಧಿಯವರು ಅತ್ಯಂತ ನಿಷ್ಠುರವಾಗಿದ್ದರು. ಅಮೆರಿಕದ ಅಧ್ಯಕ್ಷರ ಔತಣಕೂಟವು ವಿಶ್ವದ ರಾಜತಾಂತ್ರಿಕ ವ್ಯವಸ್ಥೆಯಲ್ಲಿ ಪ್ರಸಿದ್ಧವಾಗಿದೆ. ಅಮೆರಿಕವು ಈ ಔತಣಕೂಟದ ಸಂಪ್ರದಾಯವನ್ನು ಇಂದಿಗೂ ವಿಶ್ವದ ಪ್ರಮುಖ ದೇಶಗಳೊಂದಿಗೆ ಮಾತ್ರವೇ ಕೈಗೊಳ್ಳುತ್ತದೆ. 70ರ ದಶಕದಲ್ಲಿ ಶ್ರೀಮಂತಿಕೆಯ ದರ್ಪದಿಂದ ಮೆರೆಯುತ್ತಿದ್ದ ಅಮೆರಿಕವು, ಭಾರತ ಸೇರಿದಂತೆ ಬಡತನದ ಕಪಿಮುಷ್ಟಿಗೆ ಸಿಲುಕಿದ್ದ ವಿಶ್ವದ ಕೆಲ ದೇಶಗಳನ್ನು ತನ್ನ ಗುಲಾಮರನ್ನಾಗಿಸಿಕೊಳ್ಳಲು ಒಂದಷ್ಟು ವಿಲಕ್ಷಣ ಕ್ರಮಗಳಿಗೆ ಮುಂದಾಯಿತು. ಇದರಿಂದ ರೊಚ್ಚಿಗೆದ್ದ ಇಂದಿರಾ ಗಾಂಧಿಯವರು, ವಿಶ್ವವೇ ಬೆರಗಾಗುವಂತೆ ಅಮೆರಿಕ ಅಧ್ಯಕ್ಷರ ಔತಣಕೂಟವನ್ನೇ ತಿರಸ್ಕರಿಸಿ ಧೈರ್ಯವಂತೆ ಎನಿಸಿಕೊಂಡರು. ಇನ್ನು ವಾಜಪೇಯಿಯವರು ದೇಶದ ಪ್ರಧಾನಿಯಾಗಿದ್ದಾಗ, ಇರಾನ್ ಮತ್ತು ಇರಾಕ್‌ನಲ್ಲಿ ಬಲವಂತವಾಗಿ ಶಾಂತಿಯನ್ನು ಸ್ಥಾಪಿಸಲು ಅಮೆರಿಕವು ಭಾರತದ ನೆರವನ್ನು ಕೋರಿತ್ತು. ಬಲವಂತದ ಶಾಂತಿಸ್ಥಾಪನೆಯ ಹೆಸರಲ್ಲಿ 'ಬಲಪ್ರಯೋಗ' ಮಾಡುವ ಅಮೆರಿಕದ ಹುನ್ನಾರಕ್ಕೆ ವಿರೋಧ ವ್ಯಕ್ತಪಡಿಸಿದ ವಾಜಪೇಯಿಯವರು, ಅಮೆರಿಕದ ಈ ಪ್ರಸ್ತಾವನೆಯನ್ನು ಸಾರಾಸಗಟಾಗಿ ತಿರಸ್ಕರಿಸಿದ್ದರು.

ಪ್ರಸ್ತುತ, ವಿಶ್ವದ ವಿವಿಧ ದೇಶಗಳಿಗೆ ವಿವಿಧ ಆಯಾಮಗಳಲ್ಲಿ ಸಹಕಾರ ನೀಡುತ್ತಿರುವ ಅಮೆರಿಕವು, ಈ ಎಲ್ಲ ದೇಶಗಳು ಸೇರಿದಂತೆ ಒಂದಿಡೀ ವಿಶ್ವವೇ ತಾನು ಹೇಳಿದಂತೆ ಕೇಳಬೇಕು ಎಂಬ ಸರ್ವಾಧಿಕಾರಿ ನಿಲುವನ್ನು ಅಂತರಾಳದಲ್ಲಿ ಹೊಂದಿದೆ. ಇದು ರಾಜನೀತಿಜ್ಞರು ಬಹಿರಂಗಪಡಿಸಲಾಗದ ಸತ್ಯವಾಗಿದೆ. ತನ್ನಿಷ್ಟದಂತೆ ವಿಶ್ವವನ್ನೇ ಆಳಲು ಹವಣಿಸುವ ಅಮೆರಿಕವು, ಮತ್ತೊಂದು ದೇಶವನ್ನು ಅವಶ್ಯವೆನಿಸಿದಾಗ ಆದರಿಸುವ ಮತ್ತು ತನ್ನ ಕೆಲಸ ಮುಗಿದ ಮೇಲೆ ತಿರಸ್ಕರಿಸುವ ಚಾಳಿಯನ್ನು ಹೊಂದಿದೆ. ಸದ್ಯ ಅಮೆರಿಕವು ಭಾರತೀಯ ವಲಸಿಗರನ್ನು ಹೊರದಬ್ಬುತ್ತಿರುವ ರೀತಿಯನ್ನು ನೋಡಿದರೆ ಎಂಥವರ ಕರುಳೂ 'ಚುರುಕ್' ಎನ್ನದಿರಲಾರದು. ಅವರು ಅಕ್ರಮ ವಲಸಿಗರೇ ಇರಬಹುದು, ಆದರೆ ಮಾನವೀಯತೆಯು ಎಲ್ಲಕ್ಕಿಂತ ದೊಡ್ಡದು ಎಂಬುದು ವಿಶ್ವದ ದೊಡ್ಡಣ್ಣನಿಗೆ ತಿಳಿಯದಿರುವುದು ವಿಷಾದನೀಯ.

(ಲೇಖಕರು ಕೃಷಿತಜ್ಞರು ಹಾಗೂ ಸಹಾಯಕ ಮಹಾಪ್ರಬಂಧಕರು)

ಯುವ ಉದ್ಯಮಿಗಳು ಮಸ್ಕ್‌ರಿಂದ ಕಲಿಯಬೇಕಾದ ಪಾಠ

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಎಲಾನ್ ಮಸ್ಕ್! ಸಾಮಾನ್ಯ ಕುಟುಂಬವೊಂದರಲ್ಲಿ ಜನಿಸಿದ ಈತ, ಮನೆಯಲ್ಲೇ ತಯಾರಿಸುತ್ತಿದ್ದ ಚಾಕೊಲೇಟ್‌ಗಳನ್ನು ಮನೆ ಮನೆಗೆ ಮಾರುತ್ತಿದ್ದ. 12ನೇ ವಯಸ್ಸಿನಲ್ಲಿ ಕಂಪ್ಯೂಟರ್ ಗೇಮ್ ಅನ್ನು ಅಭಿವೃದ್ಧಿಪಡಿಸಿದ. ಹುಡುಗನಾಗಿದ್ದಾಗ ದಿನಕ್ಕೆ 18 ಗಂಟೆ ದುಡಿಯಲೂ ಹಿಂಜರಿಯದ ಅಸೀಮ ಸಾಹಸಿ. ಈತನ ಪರಿಕಲ್ಪನೆ, ಹುಡುಗಾಟಿಕೆಗಳನ್ನು ಕಂಡು ಹುಚ್ಚ ಎಂದು ನಕ್ಕವರೂ ಅನೇಕ. ಆದರೆ ಇಂದು ಈತ ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿ, ಅಮೆರಿಕದ ಶ್ವೇತಭವನದಲ್ಲೂ ಪ್ರಭಾವಿ.

ಇಲೆಕ್ಟ್ರಿಕ್ ಕಾರು ಉತ್ಪಾದಿಸುವ ಎಲಾನ್ ಮಸ್ಕ್ ಅವರ ಟೆಸ್ಲಾ ಕಂಪನಿಯ ಉತ್ಪನ್ನ ಕೊನೆಗೂ ಭಾರತಕ್ಕೆ ಬರುತ್ತಿದೆ ಎಂಬ ಸುದ್ದಿ ಸಂಚಲನ ಸೃಷ್ಟಿಸಿದೆ. 'ಇಟಿ ನೌ' ವರದಿಯ ಪ್ರಕಾರ, ಟೆಸ್ಲಾ ಕಂಪನಿಯು ಭಾರತದಲ್ಲಿ ಸುಮಾರು 3 ಶತಕೋಟಿ ಡಾಲರ್ ಹೂಡಿಕೆ ಮಾಡಲು ಮುಂದಾಗಿದೆ. ರುಪಾಯಿ ಲೆಕ್ಕದಲ್ಲಿ ಇದು ಸುಮಾರು 26,000 ಕೋಟಿ ಆಗುತ್ತದೆ. ವರ್ಷಕ್ಕೆ 5 ಲಕ್ಷ ಇಲೆಕ್ಟ್ರಿಕ್ ಕಾರುಗಳನ್ನು ಉತ್ಪಾದಿಸುವ ಟೆಸ್ಲಾದ ಬೃಹತ್ ಕಾರ್ಖಾನೆ ಯೋಜನೆಯನ್ನು ಆಕರ್ಷಿಸಲು ಗುಜರಾತ್, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳು ಪೈಪೋಟಿ ನಡೆಸುತ್ತಿವೆ. ಮೊದಲಿಗೆ ದಿಲ್ಲಿ ಮತ್ತು ಮುಂಬಯಿನಲ್ಲಿ ಏಪ್ರಿಲ್‌ನಲ್ಲಿ ಟೆಸ್ಲಾದ ಮೊದಲ ಶೋರೂಮ್ ಆರಂಭವಾಗಲಿದೆ. ಭಾರತದಲ್ಲಿ 20ರಿಂದ 25 ಲಕ್ಷ ರುಪಾಯಿಗೆ ಟೆಸ್ಲಾದ ಇಲೆಕ್ಟ್ರಿಕ್ ಕಾರುಗಳ ಕ್ರಾಂತಿಯನ್ನು ನಿರೀಕ್ಷಿಸಲಾಗಿದೆ. ಜತೆಗೆ ಬೆಳೆಯುತ್ತಿರುವ ಭಾರತದ ಇವಿ ವಲಯದಲ್ಲಿ ಕಂಪನಿಯು ದೀರ್ಘಾವಧಿಯ ಅಸ್ತಿತ್ವ ಕಂಡುಕೊಳ್ಳಲು ಯತ್ನಿಸುತ್ತಿದೆ. 2024ರಲ್ಲಿ 17 ಲಕ್ಷ ಕಾರುಗಳನ್ನು ಕಂಪನಿ ಉತ್ಪಾದಿಸಿತ್ತು. ಟೆಕ್ನಾಲಜಿ, ವಿನ್ಯಾಸ, ಪರ್ಫಾರ್ಮೆನ್ಸ್‌ನಲ್ಲಿ ಟೆಸ್ಲಾ ಕಾರುಗಳು ಗ್ರಾಹಕರ ಮನ ಗೆದ್ದಿವೆ. ಕೇವಲ 2.9 ಸೆಕೆಂಡ್‌ನಲ್ಲಿ ಶೂನ್ಯದಿಂದ ಗಂಟೆಗೆ 100 ಕಿ.ಮೀ. ವೇಗವನ್ನು ಕಾರು ಪಡೆಯಬಲ್ಲದು. ಸೆಲ್ಫ್ ಡ್ರೈವಿಂಗ್ ಟೆಕ್ನಾಲಜಿಯೂ ಇದರಲ್ಲಿದೆ. ಟೆಸ್ಲಾದ ಮಾಲೀಕರು ಕಾರಿನ ಸಾಫ್ಟ್‌ವೇರ್ ಅಪ್ಡೇಟ್‌ಗಳಿಗೆ ಸರ್ವೀಸ್ ಸೆಂಟರ್‌ಗೆ ಭೇಟಿನೀಡಬೇಕಿಲ್ಲ. ರಿಮೋಟ್ ತಂತ್ರಜ್ಞಾನದ ನೆರವಿನಿಂದ ಪಡೆಯುತ್ತಾರೆ. ಮನರಂಜನೆ, ಕಂಫರ್ಟ್ ಎರಡನ್ನೂ ಕಾರು ಒಳಗೊಂಡಿದೆ. ಇತ್ತೀಚಿನ ಬಜೆಟ್‌ನಲ್ಲಿ 40,000 ಡಾಲರ್ ಮೇಲಿನ ದರದ ಇವಿ ಕಾರುಗಳಿಗೆ ಆಮದು ತೆರಿಗೆಯನ್ನು ಶೇ.100ರಿಂದ ಶೇ.75ಕ್ಕೆ ಇಳಿಸಲಾಗಿದೆ.

ಫೋರ್ಬ್ಸ್ ನಿಯತಕಾಲಿಕೆಯ ಲಿಸ್ಟ್ ಪ್ರಕಾರ ಟೆಸ್ಲಾ ಸಿಇಒ ಮಸ್ಕ್ ಅವರ ನಿವ್ವಳ ಸಂಪತ್ತು 396 ಶತಕೋಟಿ ಡಾಲರ್. ಅಂದರೆ ಸುಮಾರು 34 ಲಕ್ಷ ಕೋಟಿ ರುಪಾಯಿಗೂ ಹೆಚ್ಚು. ವಿಶೇಷವೇನೆಂದರೆ ಈ ಸಂಪತ್ತು ಅವರ ಸ್ವಯಾರ್ಜಿತ. ಸ್ವಂತ ಪರಿಶ್ರಮದಿಂದ ಗಳಿಸಿದ್ದು. 53 ವರ್ಷ ವಯಸ್ಸಿನ ಮಸ್ಕ್ ಅವರಿಂದ ಈಗಿನ ಯುವಜನತೆ ಕಲಿಯಬೇಕಾದ ಉದ್ಯಮಶೀಲತೆಯ ಪಾಠಗಳು ಹಲವು.

ಮಸ್ಕ್ ಈಗ ಒಟ್ಟು 7 ಕಂಪನಿಗಳ ಮಾಲೀಕರು. ಅದರಲ್ಲಿ ಇಲೆಕ್ಟ್ರಿಕ್ ಕಾರುಗಳನ್ನು ಉತ್ಪಾದಿಸುವ 'ಟೆಸ್ಲಾ' ಮತ್ತು ರಾಕೆಟ್‌ಗಳನ್ನು ಉತ್ಪಾದಿಸುವ 'ಸ್ಪೇಸ್ ಎಕ್ಸ್' ಪ್ರಮುಖವಾಗಿವೆ. ಈ ಹಿಂದೆ ಟ್ವಿಟರ್ ಎಂದು ಜನಪ್ರಿಯವಾಗಿದ್ದ ಜಾಲತಾಣ ಕಂಪನಿಯನ್ನೂ ಖರೀದಿಸಿ 'ಎಕ್ಸ್' ಎಂದು ಹೆಸರು ಬದಲಿಸಿದ್ದಾರೆ. ಇದರೊಂದಿಗೆ ವಿಶ್ವಪ್ರಸಿದ್ಧವಾದ 3 ಕಂಪನಿಗಳಿಗೆ ಎಲಾನ್ ಮಸ್ಕ್ ಅವರು ಮಾಲೀಕರಾಗಿದ್ದಾರೆ. ಎಐ ತಂತ್ರಜ್ಞಾನ ಸ್ಟಾರ್ಟಪ್ ಆಗಿರುವ 'ಎಕ್ಸ್‌ಎಐ'ಯನ್ನೂ ಸ್ಥಾಪಿಸಿದ್ದಾರೆ. ಬಾಹ್ಯಾಕಾಶ ಸಂಸ್ಥೆ ಸ್ಪೇಸ್ ಎಕ್ಸ್ ಅನ್ನು 2002ರಲ್ಲಿ ಆರಂಭಿಸಿದರು, 2022ರಲ್ಲಿ ಟ್ವಿಟರ್ ಅನ್ನು ಖರೀದಿಸಿದ್ದರು.

ದಕ್ಷಿಣ ಆಫ್ರಿಕಾದ ಪ್ರಿಟೋರಿಯಾದಲ್ಲಿ 1971ರಲ್ಲಿ ಜನಿಸಿದ ಎಲಾನ್ ಮಸ್ಕ್, ಬಾಲ್ಯದಲ್ಲೇ ಪ್ರಯೋಗಶೀಲರಾಗಿದ್ದ ಹುಡುಗ. 12 ವರ್ಷ ವಯಸ್ಸಿನಲ್ಲಿಯೇ ವಿಡಿಯೊ ಗೇಮ್ ಅಭಿವೃದ್ಧಿಪಡಿಸಿದ್ದ. ಹೆತ್ತವರು ಬೇರ್ಪಟ್ಟಿದ್ದರು. ಕೌಟುಂಬಿಕ ಸಮಸ್ಯೆಗಳಿತ್ತು. ಸೋದರನ ಜತೆಗೆ ಮನೆಯಲ್ಲೇ ತಯಾರಿಸಿದ ಚಾಕೊಲೇಟ್‌ಗಳನ್ನು ಮಾರಾಟ ಮಾಡುತ್ತಿದ್ದರು. ಬಾಲ್ಯದಲ್ಲೇ ಉದ್ಯಮಶೀಲತೆ ಇತ್ತು. ಭವಿಷ್ಯದ ಅವಕಾಶವನ್ನು ಅರಸುತ್ತ ಕೆನಡಾಕ್ಕೆ ತೆರಳಿದ ಎಲಾನ್ ಮಸ್ಕ್, ಬಳಿಕ ಅಮೆರಿಕಕ್ಕೆ ವಲಸೆ ಹೋದರು. ಇಕನಾಮಿಕ್ಸ್ ಮತ್ತು ಫಿಸಿಕ್ಸ್ ಓದಿದರು. ಇಬ್ಬರನ್ನು ವಿವಾಹವಾಗಿದ್ದ ಮಸ್ಕ್, ಇಬ್ಬರಿಗೂ ವಿಚ್ಛೇದನ ನೀಡಿದ್ದಾರೆ. ಹನ್ನೊಂದು ಮಕ್ಕಳಿದ್ದಾರೆ.

ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಿಂದ ಫಿಸಿಕ್ಸ್ ಗ್ರಾಜ್ಯುಯೇಟ್ ಡಿಗ್ರಿ ಪ್ರೋಗ್ರಾಮ್‌ಗೆ ಸೇರಿದ್ದ ಎಲಾನ್ ಮಸ್ಕ್ ಅವರು ಸ್ವಂತ ಟೆಕ್ನಾಲಜಿ ಸ್ಟಾರ್ಟಪ್ ಸ್ಥಾಪಿಸುವ ಆಕಾಂಕ್ಷೆಯೊಂದಿಗೆ 90ರ ದಶಕದಲ್ಲಿ ಕಾಲೇಜು ಡ್ರಾಪೌಟ್ ಆದರು. ಆಗ ಡಾಟ್‌ಕಾಮ್ ಬೂಮ್ ಶುರುವಾಗಿತ್ತು. ಎಲಾನ್ ಮಸ್ಕ್ ಅವರು ತಮ್ಮದೇ ವೆಬ್ ಸಾಫ್ಟ್‌ವೇರ್ ಸ್ಟಾರ್ಟಪ್ ಮತ್ತು ಆನ್‌ಲೈನ್ ಬ್ಯಾಂಕಿಂಗ್ ಕಂಪನಿ 'ಪೇಪಾಲ್' ಅನ್ನು ಹುಟ್ಟುಹಾಕಿದರು. ಅದನ್ನು 2002ರಲ್ಲಿ 'ಇ-ಬೇ'ಗೆ ಒಂದೂವರೆ ಶತಕೋಟಿ ಡಾಲರ್‌ಗೆ ಮಾರಿದರು. ಅದೇ ವರ್ಷ ಹೊಸ ರಾಕೆಟ್ ಕಂಪನಿ ಸ್ಪೇಸ್ ಎಕ್ಸ್ ಅನ್ನು ಸ್ಥಾಪಿಸಿದರು. ಅಮೆರಿಕದ ಪ್ರತಿಷ್ಠಿತ ಬಾಹ್ಯಾಕಾಶ ಸಂಸ್ಥೆ 'ನಾಸಾ'ಗೆ ಪರ್ಯಾಯವಾಗಿ ಸ್ಪೇಸ್ ಎಕ್ಸ್ ಜನ್ಮತಾಳಿತ್ತು. 2004ರಲ್ಲಿ ಟೆಸ್ಲಾ ಕಂಪನಿಗೆ ಭಾರಿ ಬಂಡವಾಳವನ್ನು ಹೂಡಿಕೆ ಮಾಡಿ ಅದರ ಸಿಇಒ ಆದರು.

ಖ್ಯಾತ ಬ್ಯಾಂಕರ್ ಉದಯ್ ಕೋಟಕ್ ಅವರು, ಭಾರತದ ಯುವ ಉದ್ಯಮಿಗಳು ಉದ್ದಿಮೆಯನ್ನು ಬೆಳೆಸುವುದಕ್ಕಿಂತಲೂ, ಸ್ಟಾಕ್ ಟ್ರೇಡಿಂಗ್ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಯ ಬಗ್ಗೆ ಆಸಕ್ತಿ ವಹಿಸುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದ್ದಾರೆ. ದೇಶದ ಉದ್ಯಮ ವಲಯದ ಕುಟುಂಬಗಳು ಕಂಪನಿಗಳನ್ನು ಕಟ್ಟುವುದರ ಬದಲಿಗೆ ಸ್ಟಾಕ್ ಇನ್ವೆಸ್ಟ್‌ಮೆಂಟ್‌ಗೆ ಗಮನ ಕೊಡುತ್ತಿವೆ. ಇದು ಉದ್ಯಮಶೀಲತೆಯನ್ನು ಕುಗ್ಗಿಸುತ್ತಿದೆ ಎಂದು ಉದಯ್ ಕೋಟಕ್ ಕಳವಳ ವ್ಯಕ್ತಪಡಿಸಿದ್ದಾರೆ.

ಕೋವಿಡ್ ಬಳಿಕ ಈಗಿನ ಪೀಳಿಗೆಯ ಯುವ ಉದ್ಯಮಿಗಳು ಫ್ಯಾಮಿಲಿ ಆಫೀಸ್‌ಗಳನ್ನು ನೋಡಿಕೊಳ್ಳುವುದು, ಸ್ಟಾಕ್ ಮಾರ್ಕೆಟ್‌ನಲ್ಲಿ ಇನ್ವೆಸ್ಟ್ ಮಾಡುವುದು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನೇ ಫುಲ್ ಟೈಮ್ ಉದ್ಯೋಗವಾಗಿಸಿಕೊಂಡಿದ್ದಾರೆ. ಇದು ಸರಿಯಲ್ಲ, ಒಂದಾದ ಮೇಲೊಂದರಂತೆ ಬಿಸಿನೆಸ್‌ಗಳನ್ನು ಮಾಡಬೇಕು. ನಾನು ಹಲವು ಯುವ ಉದ್ಯಮಿಗಳನ್ನು ಮಾತನಾಡಿಸಿರುವೆ. ಏನು ಮಾಡುತ್ತಿದ್ದೀರಿ ಎಂದು ವಿಚಾರಿಸಿದರೆ, ಕುಟುಂಬದ ಕಂಪನಿಯನ್ನು ನೋಡಿಕೊಳ್ಳುತ್ತಿರುವೆ ಎನ್ನುತ್ತಾರೆ. ಹಾಗಾದರೆ ಅವರು ತಮ್ಮದೇ ಹೊಸ ಕಂಪನಿಯನ್ನು ಆರಂಭಿಸುವುದಿಲ್ಲವೇಕೆ? 35-40 ವರ್ಷ ವಯಸ್ಸಿನ ಯುವಜನತೆ ಇಕಾನಮಿಗೆ ನೇರವಾಗಿ ಹೆಚ್ಚಿನ ಕೊಡುಗೆಯನ್ನು ಏಕೆ ಸಲ್ಲಿಸುತ್ತಿಲ್ಲ? ಈಗಿನ ಜನರೇಶನ್‌ನಲ್ಲಿ ಯಶಸ್ಸು ಮತ್ತು ಹೊಸ ಬಿಸಿನೆಸ್ ಕಟ್ಟುವ ಹಸಿವು ಇರಬೇಕು. ಅದಕ್ಕಾಗಿ ಕಠಿಣ ಪರಿಶ್ರಮ ಪಡಬೇಕು ಎನ್ನುತ್ತಾರೆ ಕೋಟಕ್ ಮಹೀಂದ್ರಾ.

ನಿಜ, ಈಗಿನ ಪೀಳಿಗೆಯ ಮಂದಿ ಈ ನಿಟ್ಟಿನಲ್ಲಿ ಎಲಾನ್ ಮಸ್ಕ್ ಅವರಿಂದ ಕಲಿಯಬೇಕಾದ ಪಾಠಗಳು ಇವೆ.

ಜೀವನದಲ್ಲಿ ಸೋಲುಗಳು, ಹಿನ್ನಡೆಗಳು, ಅವಮಾನಗಳು, ಸಂಕಟಗಳು, ಕಷ್ಟನಷ್ಟಗಳು ಎದುರಾದಾಗ ಧೃತಿಗೆಡದೆ ಮುಂದುವರಿಯಬೇಕು. ಎಲಾನ್ ಮಸ್ಕ್ ಅವರ ಸ್ಪೇಸ್ ಎಕ್ಸ್, ರಾಕೆಟ್‌ಗಳ ಉಡಾವಣಾ ವೈಫಲ್ಯದಿಂದಾಗಿ 2008 ಮತ್ತು 2021ರಲ್ಲಿ ಬಹುತೇಕ ದಿವಾಳಿಯ ಅಂಚಿಗೆ ಕುಸಿದಿತ್ತು. ಈಗ ಸ್ಪೇಸ್ ಎಕ್ಸ್ 300 ಕೋಟಿ ಡಾಲರ್ ಲಾಭದಲ್ಲಿರುವ ಕಂಪನಿಯಾಗಿದೆ. ಟೆಸ್ಲಾ ಕೂಡ 2008ರಲ್ಲಿ ದಿವಾಳಿಯ ಅಂಚಿಗೆ ಬಂದಿತ್ತು. ಹಣದ ಕೊರತೆ ತೀವ್ರ ಕಾಡಿತ್ತು. ಉದ್ಯೋಗಿಗಳಿಗೆ ಸಂಬಳ ಕೊಡಲು ದುಡ್ಡಿರಲಿಲ್ಲ. ಆದರೆ ಸಿಇಒ ಎಲಾನ್ ಮಸ್ಕ್ ಅವರು ಮಧ್ಯಪ್ರವೇಶಿಸಿದ್ದರು. ಹೂಡಿಕೆದಾರರಿಂದ ತುರ್ತಾಗಿ ನಿಧಿಯನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾಗಿ ಕಂಪನಿ ದಿವಾಳಿಯಾಗದಂತೆ ಕಾಪಾಡಿದ್ದರು. ಟೆಸ್ಲಾದ ಹೂಡಿಕೆದಾರರಲ್ಲಿ ಅಸಮಾಧಾನ ಸ್ಫೋಟವಾಗಿತ್ತು. ಆಡಳಿತ ಮಂಡಳಿಯಲ್ಲಿದ್ದವರಲ್ಲಿ ಕೆಲವರು ಸಿಇಒ ಎಲಾನ್ ಮಸ್ಕ್ ಅವರಿಗೇ ಕಂಪನಿಯಿಂದ ಗೇಟ್‌ಪಾಸ್ ನೀಡಲು ಯತ್ನಿಸಿದ್ದರು. ಹೀಗಿದ್ದರೂ, ಎಲಾನ್ ಮಸ್ಕ್ ಅವರ ದೃಢ ಸಂಕಲ್ಪ ಮತ್ತು ಅಸಾಂಪ್ರದಾಯಿಕ ತಂತ್ರಗಾರಿಕೆಯಿಂದಾಗಿ ಕೇವಲ ಟೆಸ್ಲಾ ದಿವಾಳಿಯಾಗುವುದು ತಪ್ಪಿದ್ದಷ್ಟೇ ಅಲ್ಲದೆ, ಮಸ್ಕ್ ಅವರ ಕನಸಿನ ಇಲೆಕ್ಟ್ರಿಕ್ ಕಾರು ಕೂಡ ನಂತರದ ದಿನಗಳಲ್ಲಿ ತಯಾರಾಗಿ ಅತ್ಯಂತ ಜನಪ್ರಿಯವಾಯಿತು.

ಎರಡನೆಯದಾಗಿ, ಎಲಾನ್ ಮಸ್ಕ್ ಅವರು ಈ ಮಟ್ಟಕ್ಕೆ ಏರುವಲ್ಲಿ ಪಟ್ಟಿದ್ದ ಕಠಿಣ ಪರಿಶ್ರಮ. ''ಒಂದು ಹಂತದಲ್ಲಿ ದಿನಕ್ಕೆ ಸರಾಸರಿ 18 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದೆ. ಇಲ್ಲದಿದ್ದರೆ ಸ್ಪೇಸ್ ಎಕ್ಸ್, ಟೆಸ್ಲಾದಂಥ ಕಂಪನಿಯನ್ನು ಕಟ್ಟಲು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ'' ಎಂದು ಎಲಾನ್ ಮಸ್ಕ್ ಹೇಳಿದ್ದಾರೆ. ಕಾಯಕವೇ ಕೈಲಾಸವೆಂಬ ಬಸವಣ್ಣನವರ ಆದರ್ಶವನ್ನು ಮಸ್ಕ್ ಅಕ್ಷರಶಃ ಪಾಲಿಸಿದ್ದಾರೆ.

ಮೂರನೆಯದಾಗಿ ಎಲಾನ್ ಮಸ್ಕ್ ಅವರ ಸಂಶೋಧನಾಸಕ್ತಿ. ಟೆಸ್ಲಾ ಇಲೆಕ್ಟ್ರಿಕ್ ಕಾರುಗಳನ್ನು ಅದ್ಭುತವಾಗಿ ಹೊರತರುವ ಮೂಲಕ ಇಡೀ ಆಟೊಮೊಬೈಲ್ ಇಂಡಸ್ಟ್ರಿಯ ದಿಕ್ಕನ್ನೇ ಬದಲಿಸಿದರು. ಒಟ್ಟು 28 ಮಹತ್ವದ ಪೇಟೆಂಟ್‌ಗಳನ್ನು ಮಸ್ಕ್ ಗಳಿಸಿದ್ದಾರೆ. ಅವರು ಕಾಣುವ ಕನಸುಗಳು ಅಸಾಧಾರಣ. ಮಂಗಳ ಗ್ರಹದಲ್ಲಿ ಮನುಷ್ಯರಿಗೆ ವಾಸಿಸಲು ಬೇಕಾದ್ದನ್ನು ಮಾಡಬೇಕು ಎಂಬುದು ಅವರ ಕನಸುಗಳಲ್ಲೊಂದು. ಈ ನಿಟ್ಟಿನಲ್ಲಿ ಸ್ಪೇಸ್ ಎಕ್ಸ್ ಬಾಹ್ಯಾಕಾಶ ಕಂಪನಿ ಕಟ್ಟಿದ್ದಾರೆ. ಮರುಬಳಕೆ ಮಾಡಬಹುದಾದ ರಾಕೆಟ್‌ಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಇಲೆಕ್ಟ್ರಿಕ್ ಕಾರಿನಿಂದ ಹಿಡಿದು ಬಾಹ್ಯಾಕಾಶ ಟೂರಿಸಂ ತನಕ ಅವರ ಆಲೋಚನೆಗಳು, ಅನುಷ್ಠಾನಗಳು ಕ್ರಾಂತಿಕಾರಕ. ಗೇಮ್ ಚೇಂಜರ್. ಇಲೆಕ್ಟ್ರಿಕ್ ಕಾರುಗಳನ್ನು ಎಷ್ಟು ಅದ್ಭುತವಾಗಿ ತಯಾರಿಸಬಹುದು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ವ್ಯಕ್ತಿ ಯಾರಾದರೂ ಇದ್ದರೆ ಅದು ಎಲಾನ್ ಮಸ್ಕ್. ಮನುಷ್ಯನ ಮಿದುಳಿನ ಒಳಗೆ ಚಿಪ್ ಅಳವಡಿಸುವ ಕೆಲಸಕ್ಕೂ ಮಸ್ಕ್ ಆಲೋಚಿಸುತ್ತಿದ್ದು, ನ್ಯೂರಾಲಿಂಕ್ ಸ್ಟಾರ್ಟಪ್ ಸ್ಥಾಪಿಸಿದ್ದಾರೆ. ಉಪಗ್ರಹ ಆಧರಿತ ಜಾಗತಿಕ ಇಂಟರ್ನೆಟ್ ವ್ಯವಸ್ಥೆಯ ಅಭಿವೃದ್ಧಿಗೆ ಸ್ಟಾರ್‌ಲಿಂಕ್ ಇಂಟರ್ನೆಟ್ ಸ್ಥಾಪಿಸಿದ್ದಾರೆ. ಬೃಹತ್ ಮೆಗಾ ಗಿಗಾ ಕಾರ್ಖಾನೆಗಳ ಸ್ಥಾಪನೆಗೂ ಮುಂದಾಗಿದ್ದಾರೆ.

''ನೀವೊಂದು ಕಂಪನಿ ಕಟ್ಟುವುದಿದ್ದರೆ, ಪ್ರತಿ ಗಂಟೆಯನ್ನೂ ಬಿಡದೆ ದುಡಿಯಿರಿ. ಮೊದಲ ಕಂಪನಿ ಶುರುಮಾಡಿದಾಗ ನಾನು ಮತ್ತು ನನ್ನ ಸೋದರ ಅಪಾರ್ಟ್‌ಮೆಂಟ್ ಖರೀದಿಸುವ ಬದಲಿಗೆ ಚಿಕ್ಕ ಕಚೇರಿಯಲ್ಲೇ ರಾತ್ರಿ ಮಲಗುತ್ತಿದ್ದೆವು. ಉದ್ಯಮಶೀಲರು ಯಾರೂ ಊಹಿಸಲೂ ಆಗದ ಅವಾಸ್ತವಿಕ ಕನಸುಗಳನ್ನು ನನಸಾಗಿಸಲು ಕಾರ್ಯಪ್ರವೃತ್ತರಾಗಬೇಕಾಗುತ್ತದೆ ಮತ್ತು ನಿಮ್ಮ ಪ್ರಯತ್ನಗಳು ವಾಸ್ತವಿಕವಾಗಿ ಇರಬೇಕಾಗುತ್ತದೆ, ಎದುರಾಗುವ ಎಲ್ಲ ಸವಾಲುಗಳನ್ನೂ, ಸೋಲುಗಳನ್ನೂ ಎದುರಿಸಬೇಕಾಗುತ್ತದೆ. ಆಗ ಮಾತ್ರ ಯಶಸ್ಸಿನ ಸಂತೋಷ ಸಿಗಲು ಸಾಧ್ಯ'' ಎನ್ನುತ್ತಾರೆ ಎಲಾನ್ ಮಸ್ಕ್.

ಎಲ್ಲರಿಗೂ ಎಲಾನ್ ಮಸ್ಕ್ ಆಗಲು ಸಾಧ್ಯವಾಗದಿದ್ದರೂ, ಅವರ ಯಶೋಗಾಥೆಯಿಂದ ಸ್ಫೂರ್ತಿ ಪಡೆಯಲು ಸಾಧ್ಯ. ಸ್ಟಾಕ್ ಮಾರ್ಕೆಟ್ ಒಂದನ್ನೇ ನೆಚ್ಚಿಕೊಳ್ಳುವ ಬದಲಿಗೆ ಸ್ವಂತ ಉದ್ದಿಮೆಗಳನ್ನು ಕಟ್ಟಿ ಬೆಳೆಸಲು ಸ್ವತಃ ಯುವ ಉದ್ಯಮಿಗಳೇ ಮುಂದಾಗದಿದ್ದರೆ ಹೇಗೆ?

ಪಂಚ್ ಭಕ್ಷ್ಯ ಪರಮಾನ್ನ..!
ಯಗಟಿ ರಘು ನಾಡಿಗ್



ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 288

ಸಮಾಚಾರ ಸಣ್ಣದಲ್ಲ

ಡಿಸಿಎಂ ಶಿಂದೆ ಕಾರು ಸ್ಫೋಟ: ಬೆದರಿಕೆ ಕರೆ

ಮುಂಬೈ: ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ಕಾರಿಗೆ ಬಾಂಬ್ ಇರಿಸಿ ಸ್ಫೋಟಿಸುವುದಾಗಿ ಬೆದರಿಸುವ ಅನಾಮಧೇಯ

ಕರೆ ಮತ್ತು ಇ ಮೇಲ್ ಮುಂಬೈ ಪೊಲೀಸರಿಗೆ ಗುರುವಾರ ಬೆಳಗ್ಗೆ ಬಂದಿದ್ದು, ತನಿಖೆ ನಡೆಸ ಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಗೋರೆಗಾಂವ್, ಜೆಜೆ ಮಾರ್ಗ್ ಪೊಲೀಸ್ ಠಾಣೆ ಮತ್ತು ರಾಜ್ಯ ಸರಕಾರದ ಸಚಿವಾಲಯದ ನಿಯಂತ್ರಣ ಕೊಠಡಿಗೆ ಬೆದರಿಕೆ ಕರೆಗಳು ಬಂದಿವೆ. ಡಿಸಿಎಂ ಶಿಂದೆ ಕಾರನ್ನು ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದಾರೆ. ಈ ಹಿನ್ನೆಲೆ ಶಿಂದೆ ಅವರ ಕಚೇರಿ-ನಿವಾಸದ ಭದ್ರತೆ ಹೆಚ್ಚಿಸಲಾಗಿದೆ. ಕಚೇರಿ ಸಿಬ್ಬಂದಿ ಮತ್ತು ಕುಟುಂಬದವರಿಗೆ ಜಾಗರೂಕರಾಗಿ ಇರುವಂತೆ ಸೂಚನೆ ನೀಡಲಾಗಿದೆ ಎಂದು ಅಧಿಕಾರಿ ವಿವರ ನೀಡಿದ್ದಾರೆ.

ಮುನ್ನಾರ್: ಬಸ್ ಪಲ್ಟಿ 3 ವಿದ್ಯಾರ್ಥಿಗಳ ಸಾವು

ತಿರುವನಂತಪುರ: ಕೇರಳದ ಮುನ್ನಾರ್‌ನ ಪ್ರಸಿದ್ಧ ಪ್ರವಾಸಿ ತಾಣವಾದ ಎಕೋ ಪಾಯಿಂಟ್ ಬಳಿ ಗುರುವಾರ ಖಾಸಗಿ ಬಸ್ ಪಲ್ಟಿಯಾಗಿದ್ದು, ತಮಿಳು ನಾಡಿನ ನಾಗರ್‌ಕೋಯಿಲ್‌ನ ಸ್ಕಾಟ್ ಕ್ರಿಶ್ಚಿಯನ್ ಕಾಲೇಜಿನ ಮೂವರು ವಿದ್ಯಾರ್ಥಿಗಳು ದುರ್ಮರಣಕ್ಕೀಡಾಗಿದ್ದಾರೆ. 19 ಜನರು ಗಾಯಗೊಂಡಿದ್ದಾರೆ. ವೆನಿಕಾ ಆರ್., ಅತಿಕಾ ಆರ್. ಮತ್ತು ಸುಧನ್ ಮೃತರು. 37 ವಿದ್ಯಾರ್ಥಿಗಳು, ನಾಲ್ವರು ಶಿಕ್ಷಕರ ತಂಡ ಖಾಸಗಿ ಬಸ್‌ನಲ್ಲಿ ಮಂಗಳವಾರ ರಾತ್ರಿ ನಾಗರಕೋಯಿಲ್‌ನಿಂದ ಹೊರಟು ಬುಧವಾರ ಮುಂಜಾನೆ ಮುನ್ನಾರ್ ತಲುಪಿತ್ತು. ಕುಂಡಲ ಅಣೆಕಟ್ಟೆ ಕಡೆ ಪ್ರಯಾಣಿಸುತ್ತಿದ್ದಾಗ ಬಸ್ ತಿರುವು ಪಡೆಯುವ ಸಂದರ್ಭ ಚಾಲಕನ ನಿಯಂತ್ರಣ ತಪ್ಪಿ ತಲೆಕೆಳಗಾಗಿದೆ. ಗಾಯಾಳುಗಳಲ್ಲಿ ನಾಲ್ವರು ಸ್ಥಿತಿ ಗಂಭೀರವಾಗಿದ್ದು, ಥೇಣಿ, ಕೋಲೆಂಚೇರಿ ಮತ್ತು ಕೊಟ್ಟಾಯಂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಉಳಿದ 15 ಗಾಯಾಳುಗಳಿಗೆ ಮುನ್ನಾರ್‌ನ ಟಾಟಾ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಅಪಘಾತಕ್ಕೆ ಅತಿವೇಗದ ಚಾಲನೆಯೇ ಕಾರಣ ಎಂದು ಪ್ರತ್ಯಕ್ಷದರ್ಶಿ ಹೇಳಿದ್ದಾರೆ.

ಬಿಜೆಪಿ ಕಾರ್ಯಕ್ರಮಕ್ಕೆ ಎಎಪಿ ಸಂಸದೆ ಸ್ವಾತಿ!

ದೆಹಲಿ: ಕೇಂದ್ರಾಡಳಿತ ಪ್ರದೇಶ ದೆಹಲಿಯಲ್ಲಿ ನೂತನ ಬಿಜೆಪಿ ಸರಕಾರ ರಚನೆ ಮತ್ತು ಸಿಎಂ ಪ್ರಮಾಣವಚನ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿದ್ದ ಮಾಜಿ ಸಿಎಂಗಳಾದ ಎಎಪಿಯ ಅರವಿಂದ್ ಕೇಜ್ರಿವಾಲ್, ಆತಿಷಿ ಹಾಜರಾಗಿರಲಿಲ್ಲ. ಬದಲಾಗಿ ಅದಾಗಲೇ ಪಕ್ಷದಿಂದ ಒಂದು ಕಾಲು ಹೊರಗಿಟ್ಟಿರುವ ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸದಸ್ಯೆ ಸ್ವಾತಿ ಮಲಿವಾಳ್, ರೇಖಾ ಗುಪ್ತಾ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಹಾಜರಿದ್ದರು. ದೆಹಲಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ದೇವೇಂದ್ರ ಯಾದವ್ ಅವರ ಪಕ್ಕದಲ್ಲಿ ಆಸೀನರಾಗಿ ನಗುತ್ತಾ ಮಾತನಾಡುತ್ತಾ ಕಾರ್ಯಕ್ರಮ ಮುಕ್ತಾಯದ ವರೆಗೂ ಉಳಿದಿದ್ದರು.

{ಸಿ.ವಿ.ಆನಂದ್ ಬೋಸ್} ಪ.ಬಂ. ರಾಜ್ಯಪಾಲ

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳ ಒಂದು 'ಮುಕ್ತಿ ಮೇಳ'ವಾಗಿದೆ. ಅದೆಂದಿಗೂ ಮೃತ್ಯುಕುಂಭ ಆಗದು. ಅದು 'ಮೃತ್ಯುಂಜಯ' ಕುಂಭಮೇಳವಾಗಿದೆ. ಪ್ರಯಾಗ್‌ರಾಜ್‌ಗೆ ತೆರಳಿ ಮಹಾ ಕುಂಭಮೇಳದಲ್ಲಿ ವಿನಮ್ರನಾಗಿ ಪಾಲ್ಗೊಂಡೆ. ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದೆ.



ದೆಹಲಿ ಬಿಜೆಪಿ ಸರಕಾರಕ್ಕೆ ಸವಾಲುಗಳ ಸರಮಾಲೆ

ದೆಹಲಿ: 26 ವರ್ಷಗಳ ಕಾಲ ದೆಹಲಿ ವಿಧಾನಸಭೆಯಲ್ಲಿ ಅಧಿಕಾರ ಶೂನ್ಯವಾಗಿದ್ದ ಕಮಲ ಪಕ್ಷ, ಕಡೆಗೂ 48 ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರಕ್ಕೇರಿದೆ. ಫಲಿತಾಂಶ ಪ್ರಕಟಗೊಂಡ 11 ದಿನಗಳ ತರುವಾಯ ಸರಕಾರವನ್ನೂ ರಚಿಸಿದೆ. ಆದರೆ, ಉಚಿತಗಳ ಕಾರಣದಿಂದಾಗಿ 10 ವರ್ಷಗಳಿಂದ ದೆಹಲಿ ಜನರ ಮನಸ್ಥಿತಿ ಬದಲಾಗಿದೆ. ಇನ್ನಷ್ಟು ಉಚಿತ ಸಿಗಲಿ ಎಂಬ ಬೇಡಿಕೆ ಇದೆ. ಜತೆಗೆ ವಾಯು-ಜಲ ಮಾಲಿನ್ಯ, ಸಂಚಾರ ದಟ್ಟಣೆ, ಅಪರಾಧಗಳ ಹೆಚ್ಚಳ ಮೊದಲಾದ ಸವಾಲುಗಳೂ ಇವೆ. ರೇಖಾ ಗುಪ್ತಾ ನೇತೃತ್ವದ ಸರಕಾರಕ್ಕೆ ದೆಹಲಿ ಆಡಳಿತ ಅಷ್ಟೊಂದು ಸರಾಗ ಎನ್ನುವಂತೇನೂ ಇಲ್ಲ. ಸವಾಲುಗಳ ಸರಮಾಲೆಯೇ ಎದುರಿಗಿದೆ.

ಪ್ರಣಾಳಿಕೆ ಜಾರಿ

ವಿಧಾನಸಭೆ ಚುನಾವಣೆಯ ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಈಡೇರಿಸುವುದೇ ದೆಹಲಿಯ ನೂತನ ಬಿಜೆಪಿ ಸರಕಾರದ ಮುಂದಿರುವ ಪ್ರಮುಖ ಸವಾಲು. ಅಂತಾರಾಷ್ಟ್ರೀಯ ಮಹಿಳಾ ದಿನ(ಮಾ.8) ದೆಹಲಿಯ ಅರ್ಹ ಮಹಿಳಾ ಫಲಾನುಭವಿಗಳಿಗೆ ಮಾಸಿಕ 2,500 ರು. ಆರ್ಥಿಕ ನೆರವು ನೀಡಬೇಕಿದೆ. ಇದು ಚುನಾವಣಾ ಪ್ರಚಾರದ ಪ್ರಮುಖ ಭರವಸೆ. ಪ್ರಧಾನಿ ನರೇಂದ್ರ ಮೋದಿ ಅವರೇ ಖುದ್ದು ಚುನಾವಣಾ ಪ್ರಚಾರ ಸಭೆಗಳಲ್ಲಿ ಈ ಭರವಸೆ ನೀಡಿದ್ದರು. ಇದನ್ನು ತಕ್ಷಣ ಜಾರಿಗೊಳಿಸಬೇಕಾದ ಅನಿವಾರ್ಯತೆ.

ಮಾಲಿನ್ಯ ನಿವಾರಣೆ

ದೆಹಲಿ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ತೀರಾ ಹದಗೆಟ್ಟಿರುವ, ಜನ-ಜಾನುವಾರು-ಪಕ್ಷಿ ಸಂಕುಲದ ಜೀವಕ್ಕೇ ಅಪಾಯಕಾರಿಯಾಗಿರುವ ಕಲುಷಿತ ಗಾಳಿ ಸಮಸ್ಯೆ ಪರಿಹರಿಸಬೇಕಿದೆ. ಗಾಳಿಯ ಗುಣಮಟ್ಟ ಹೆಚ್ಚುವಂತೆ ಮಾಡಬೇಕಿದೆ. ಇದೊಂದು ಗುರುತರ ಜವಾಬ್ದಾರಿ ರೇಖಾ ಗುಪ್ತಾ ಸರಕಾರದ ಮೇಲಿದೆ.

ನೀರು-ವಿದ್ಯುತ್-ಗ್ಯಾಸ್

ದೆಹಲಿ ಮಹಾ ನಗರದ ಅನೇಕ ಪ್ರದೇಶಗಳು ನೀರಿನ ಕೊರತೆ ಎದುರಿಸುತ್ತಿವೆ. ನಿಯಮಿತ ಜಲ ಪೂರೈಕೆ ಆಗುವಂತೆ ವ್ಯವಸ್ಥೆ ಮಾಡಬೇಕಿದೆ. ಮುಖ್ಯವಾಗಿ ಯಮುನಾ ನದಿ ಮಾಲಿನ್ಯ ನಿವಾರಿಸಬೇಕಿದೆ. ನದಿಯನ್ನು ಆಮೂಲಾಗ್ರ ಸ್ವಚ್ಛಗೊಳಿಸಬೇಕಾದ ಅತಿದೊಡ್ಡ ಜವಾಬ್ದಾರಿ ಇದೆ.

ಚುನಾವಣೆ ವೇಳೆ ಬಿಜೆಪಿ ನೀಡಿದ ಭರವಸೆಗಳ ಪಟ್ಟಿಯಲ್ಲಿ ಶುದ್ಧ ಕುಡಿವ ನೀರು ಮತ್ತು ನಿರಂತರ ವಿದ್ಯುತ್ ಸರಬರಾಜು ಜನರ ಗಮನ ಸೆಳೆದಿವೆ. ಉಚಿತವಾಗಿ ವಿದ್ಯುತ್ ನೀಡಬೇಕಿದೆ. ಸಬ್ಸಿಡಿ ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ಒದಗಿಸಬೇಕಿದೆ. ಈ ಕಲ್ಯಾಣ ಯೋಜನೆಗಳಿಂದಾಗಿ ಖಜಾನೆ ಖಾಲಿ ಆಗದಂತೆಯೋ ನಿಗಾ ಇಡಬೇಕಿದೆ.

ಕಾನೂನು-ಸುವ್ಯವಸ್ಥೆ

ರಾಜಧಾನಿ ಪ್ರದೇಶ ಮಹಿಳೆಯರ ಪಾಲಿಗೆ ಅಸುರಕ್ಷಿತ ನಗರ ಎಂಬ ಕುಖ್ಯಾತಿಗೂ ಒಳಗಾಗಿದೆ. ಅಪರಾಧಗಳು ಹೆಚ್ಚಿವೆ. ಇದಕ್ಕೆ ಹೊಸ ಸರಕಾರ ಪರಿಹಾರ ಕಂಡುಕೊಳ್ಳಬೇಕಿದೆ. ಮಹಿಳೆಯರಿಗೆ, ಮಕ್ಕಳಿಗೆ ದೆಹಲಿ ಬಹಳ ಸುರಕ್ಷಿತ ಎನ್ನುವಂತೆ ಮಾಡಬೇಕಾದ ಕಠಿಣ ಸವಾಲಿದೆ. ಪೊಲೀಸ್ ವ್ಯವಸ್ಥೆ ಬಲಪಡಿಸುವುದು, ಸಮನ್ವಯ ಸಾಧಿಸುವುದು ತುರ್ತು ಅಗತ್ಯವಾಗಿದೆ.

ಕಲ್ಯಾಣ ಯೋಜನೆ

2015 ಮತ್ತು 2010ರ ಚುನಾವಣೆಗಳಲ್ಲಿ ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ ಬರಲು ಉಚಿತ ನೀರು-ವಿದ್ಯುತ್ ಮತ್ತು ಸರಕಾರಿ ಶಾಲೆಗಳಲ್ಲಿ ಸುಧಾರಿತ ಶಿಕ್ಷಣ, ಉಚಿತ ಬಡಾವಣೆ ಕ್ಲಿನಿಕ್ ಮೊದಲಾದ ಯೋಜನೆಗಳು ಕಾರಣವಾಗಿದ್ದವು. ಈ ಬಾರಿ ಬಿಜೆಪಿ ಕೂಡಾ ಸಂಕಲ್ಪ ಪತ್ರದಲ್ಲಿ (ಪ್ರಣಾಳಿಕೆ) ಇದೇ ರೀತಿಯ ಕಲ್ಯಾಣ ಯೋಜನೆಗಳನ್ನು ಘೋಷಿಸಿದೆ. ಲಭ್ಯವಿರುವ ಸಂಪನ್ಮೂಲದಲ್ಲೇ ಕಲ್ಯಾಣ ಯೋಜನೆಗಳ ಅನುಷ್ಠಾನವಾಗಲಿವೆಯೇ? ಡಬಲ್ ಎಂಜಿನ್ ಸರಕಾರ ಎನ್ನುವ ನಾಯಕರಿಂದ ಕೇಂದ್ರ ಸರಕಾರದ ನೆರವೂ ಸಿಗುವಂತಾಗುವುದೇ ಕಾದು ನೋಡಬೇಕಿದೆ.

ಕೇಂದ್ರಾಡಳಿತ ಪ್ರದೇಶ ದೆಹಲಿಯಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ ನೇತೃತ್ವದಲ್ಲಿ ಗುರುವಾರ ಹೊಸದಾಗಿ ಅಸ್ತಿತ್ವಕ್ಕೆ ಬಂದ ಬಿಜೆಪಿ ಸರಕಾರದ ಸಚಿವ ಸಂಪುಟದ ಜತೆ ಪ್ರಧಾನಿ ನರೇಂದ್ರ ಮೋದಿ ಮತ್ತು ದೆಹಲಿ ಲೆ.ಗವರ್ನರ್ ವಿನಯ್ ಕುಮಾರ್ ಸಕ್ಸೇನಾ. ಸಚಿವರಾದ ಪರ್ವೇಶ್ ವರ್ಮಾ, ಕಪಿಲ್ ಮಿಶ್ರಾ, ಮಂಜಿಂದರ್ ಸಿಂಗ್ ಸಿರ್ಸಾ, ರವೀಂದರ್ ಇಂದರ್ ರಾಜ್ ಸಿಂಗ್, ಆಶಿಶ್ ಸೂದ್, ಪಂಕಜ್ ಸಿಂಗ್.

ದೆಹಲಿ ಸರಕಾರ- ಸಚಿವರ ಪರಿಚಯ

● ಪರ್ವೇಶ್ ವರ್ಮಾ

'ನವದೆಹಲಿ' ವಿಧಾನಸಭಾ ಕ್ಷೇತ್ರದಲ್ಲಿ 4089 ಮತಗಳ ಅಂತರದಿಂದ ಎಎಪಿಯ ಅರವಿಂದ್ ಕೇಜ್ರಿವಾಲ್‌ರನ್ನು ಸೋಲಿಸಿದ ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ(47) ಜಾಟ್ ಸಮುದಾಯದವರು. ಅವರ ತಂದೆ ಸಾಹಿಬ್ ಸಿಂಗ್ ವರ್ಮಾ ದೆಹಲಿಯ ಮಾಜಿ ಸಿಎಂ. ಪರ್ವೇಶ್ ವರ್ಮಾ ಪಶ್ಚಿಮ ದೆಹಲಿ ಲೋಕಸಭಾ ಕ್ಷೇತ್ರದಲ್ಲಿ ಗೆದ್ದು 2 ಬಾರಿ ಸಂಸದರಾಗಿದ್ದರು. 30 ವರ್ಷಗಳಿಂದ ಬಿಜೆಪಿಯಲ್ಲಿದ್ದಾರೆ.

● ಮಂಜಿಂದರ್ ಸಿಂಗ್ ಸಿರ್ಸಾ

ಮಂಜಿಂದರ್ ಸಿಂಗ್ ಸಿರ್ಸಾ ರಾಜೌರಿ ಗಾರ್ಡನ್ ವಿಧಾನಸಭಾ ಕ್ಷೇತ್ರದಲ್ಲಿ 18,190 ಮತಗಳ ಅಂತರದಲ್ಲಿ ಗೆದ್ದವರು. ದೆಹಲಿ ಸಿಖ್ ಗುರುದ್ವಾರ ಪ್ರಬಂಧಕ ಸಮಿತಿ ಅಧ್ಯಕ್ಷರಾಗಿದ್ದ ಸಿರ್ಸಾ, ಬಿಜೆಪಿಯಲ್ಲಿನ ಪ್ರಮುಖ ಸಿಖ್ ನಾಯಕ. ದೆಹಲಿಯಲ್ಲಿನ ಸಿಖ್ ಸಮುದಾಯದಲ್ಲಿನ ಪ್ರಭಾವಿ ನಾಯಕ.

● ಆಶಿಶ್ ಸೂದ್

ಆಶಿಶ್ ಸೂದ್ ಈ ಬಾರಿ ಜನಕಪುರಿ ವಿಧಾನಸಭಾ ಕ್ಷೇತ್ರದಲ್ಲಿ 19 ಸಾವಿರ ಮತಗಳ ಅಂತರದಿಂದ ಆರಿಸಿ ಬಂದಿದ್ದಾರೆ. ಪಂಜಾಬ್ ಮೂಲದ ಸೂದ್ ಬಿಜೆಪಿಯ ಕಟ್ಟಾಭಿಮಾನಿ, ಕಟಿಬದ್ಧ ನಾಯಕ. ಪ್ರಸ್ತುತ ಬಿಜೆಪಿಯ ಗೋವಾ ಉಸ್ತುವಾರಿ ಮತ್ತು ಜಮ್ಮು-ಕಾಶ್ಮೀರದ ಸಹ-ಉಸ್ತುವಾರಿ. ಅದಕ್ಕೆ ಮೊದಲ ದೆಹಲಿ ದಕ್ಷಿಣ ಮುನ್ಸಿಪಲ್ ಕೌನ್ಸಿಲ್ ಸದಸ್ಯ-ಪ್ರತಿಪಕ್ಷ ನಾಯಕ. ಜೆ.ಪಿ. ನಡ್ಡಾ, ಧರ್ಮೇಂದ್ರ ಪ್ರಧಾನ್ ಅವರ ಆಪ್ತ. ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ, ರಾಷ್ಟ್ರೀಯ ಉಪಾಧ್ಯಕ್ಷರಾಗಿ ಸೇವೆ.

● ರವೀಂದರ್ ಇಂದ್ರಜ್ ಸಿಂಗ್

ರವೀಂದರ್ ಇಂದ್ರಜ್ ಸಿಂಗ್ ಉತ್ತರ ದೆಹಲಿಯ ಬವಾನ ಕ್ಷೇತ್ರದಲ್ಲಿ 21,475 ಮತಗಳ ಅಂತರದಿಂದ ಗೆದ್ದಿದ್ದಾರೆ. ಮಾಜಿ ಶಾಸಕ ಇಂದ್ರಜ್ ಸಿಂಗ್ ಅವರ ಪುತ್ರ. ಬಿಜೆಪಿಯ ದೆಹಲಿ ಘಟಕದಲ್ಲಿನ ಪ್ರಮುಖ ದಲಿತ ನಾಯಕ.

● ಕಪಿಲ್ ಮಿಶ್ರಾ

ಕಪಿಲ್ ಮಿಶ್ರಾ (44) ಕರವಾಲ್ ನಗರದಿಂದ ಶಾಸಕರಾಗಿದ್ದಾರೆ. ಕಪಿಲ್ ಮಿಶ್ರಾ ಬ್ರಾಹ್ಮಣ ಸಮುದಾಯದವರಾಗಿದ್ದು, ಆಮ್ ಆದ್ಮಿ ಪಕ್ಷದಿಂದ ಬಿಜೆಪಿಗೆ ಸೇರ್ಪಡೆಯಾದವರು. ಎಎಪಿ ದೆಹಲಿ ಸರಕಾರದಲ್ಲಿ 2015-17ರ ಅವಧಿಯಲ್ಲಿ ಸಂಪುಟ ದರ್ಜೆ ಸಚಿವರಾಗಿದ್ದರು. ಆಗಿನ ಅನುಭವ ಈಗ ಆಡಳಿತದಲ್ಲಿ ನೆರವಾಗಬಹುದಾಗಿದೆ.

● ಪಂಕಜ್ ಕುಮಾರ್ ಸಿಂಗ್



ಪಂಕಜ್ ಕುಮಾರ್ ಸಿಂಗ್ ದೆಹಲಿ ಬಿಜೆಪಿ ಸರಕಾರದಲ್ಲಿ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ವಿಕಾಸಪುರಿ ವಿಧಾನಸಭಾ ಕ್ಷೇತ್ರದಲ್ಲಿ 12,876 ಮತಗಳ ಅಂತರದಿಂದ ಗೆದ್ದಿದ್ದಾರೆ. ಕೆಲ ದಿನಗಳ ಹಿಂದೆ ನಿಧನರಾದ ತಾಯಿಯ ಕ್ರಿಯಾಕರ್ಮಗಳನ್ನು ಬುಧವಾರವಷ್ಟೇ ಮುಗಿಸಿದ್ದರು. ಹಾಗಾಗಿ ತಾಯಿಯ ಹೆಸರಿನಲ್ಲೇ ಪ್ರಮಾಣವಚನ ಸ್ವೀಕರಿಸಿದರು. ಬಕ್ಸರ್ ಜಿಲ್ಲೆಯ ಧಾರೌಲಿ ಗ್ರಾಮ ಮೂಲದ ಪಂಕಜ್ ಸಿಂಗ್, ಅವರ ತಂದೆ ರಾಜಮೋಹನ ಸಿಂಗ್ ದೆಹಲಿ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಆಯುಕ್ತರಾಗಿದ್ದರು.

ವಿಜೇಂದ್ರ ಗುಪ್ತಾ ದೆಹಲಿ ಅಸೆಂಬ್ಲಿ ಸ್ಪೀಕರ್

ಅಶಿಸ್ತು ಕಾರಣ ಸದನದಿಂದ ಗೇಟ್‌ಪಾಸ್ ಪಡೆದಿದ್ದ ಗುಪ್ತಾ
ಮುಸ್ಲಿಂ ಪ್ರಾಬಲ್ಯದ ಕ್ಷೇತ್ರದಲ್ಲಿ ಗೆದ್ದ ಬಿಶ್ತ್ ಡೆಪ್ಯುಟಿ ಸ್ಪೀಕರ್

ದೆಹಲಿ: ಕೇಂದ್ರಾಡಳಿತ ಪ್ರದೇಶ ದೆಹಲಿಯಲ್ಲಿ ಹೊಸ ಸರಕಾರದ ರಚನೆಗೂ ಮುನ್ನವೇ ಬಿಜೆಪಿ, ವಿಧಾನಸಭೆ ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಹುದ್ದೆಗೆ ಹೆಸರು ಘೋಷಿಸಿದೆ.

ದೆಹಲಿ ಬಿಜೆಪಿ ಮಾಜಿ ಅಧ್ಯಕ್ಷ, ರೋಹಿಣಿ ವಿಧಾನಸಭಾ ಕ್ಷೇತ್ರದ 3 ಬಾರಿಯ ಶಾಸಕ ವಿಜೇಂದ್ರ ಗುಪ್ತಾ ಸ್ಪೀಕರ್ ಆಗಲಿದ್ದಾರೆ. ಈ ಬಾರಿ ಎಎಪಿಯ ಪ್ರದೀಪ್ ಮಿತ್ತಲ್‌ರನ್ನು 38 ಸಾವಿರ ಮತಗಳ ಭಾರಿ ಅಂತರದಿಂದ ಸೋಲಿಸಿದರು. ಹಿಂದಿನ ವಿಧಾನಸಭೆ ಅವಧಿಯಲ್ಲಿ ವಿಜೇಂದರ್ ಗುಪ್ತಾ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಆಮ್ ಆದ್ಮಿ ಪಕ್ಷದ 10 ವರ್ಷಗಳ ಆಡಳಿತ ಕಾಲದಲ್ಲೊಮ್ಮೆ ಸದನದಲ್ಲಿ ಗದ್ದಲ ಮಾಡಿದ ಆರೋಪದಡಿ ಪ್ರತಿಪಕ್ಷ ನಾಯಕರಾಗಿದ್ದ ವಿಜೇಂದ್ರ ಗುಪ್ತಾರನ್ನು ಮಾರ್ಷಲ್‌ಗಳನ್ನು ಕರೆಸಿ ವಿಧಾನಸಭೆಯಿಂದ ಬಲಪ್ರಯೋಗಿಸಿ ಹೊರಹಾಕಲಾಗಿತ್ತು.

ಡೆಪ್ಯುಟಿ ಸ್ಪೀಕರ್ ಹುದ್ದೆಗೆ ಉತ್ತರಾಖಂಡ ಮೂಲದವರೂ, 7 ಬಾರಿ ಶಾಸಕರೂ ಆದ ಮೋಹನ್ ಸಿಂಗ್ ಬಿಶ್ತ್ ಹೆಸರು ಘೋಷಿಸಿದೆ. ಮೋಹನ್ ಸಿಂಗ್ ಬಿಶ್ತ್ 1998ರಿಂದ 2013ರವರೆಗೆ ಸತತ ನಾಲ್ಕು ಬಾರಿ ಕರವಾಲ್ ನಗರ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿದ್ದರು. 2025ರ ಚುನಾವಣೆಯಲ್ಲಿ ಬಿಶ್ತ್ ಬದಲಿಗೆ ಕಪಿಲ್ ಮಿಶ್ರಾರನ್ನು ಕರವಾಲ್ ನಗರ ಕ್ಷೇತ್ರದಿಂದ ಅಭ್ಯರ್ಥಿಯನ್ನಾಗಿ ಘೋಷಿಸಲಾಯಿತು. 4 ಬಾರಿ ಗೆದ್ದ ಕ್ಷೇತ್ರದ ಟಿಕೆಟ್ ಸಿಗದ್ದಕ್ಕೆ ಸಿಟ್ಟಿಗೆದ್ದ ಬಿಶ್ತ್ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದರು. 2 ದಿನಗಳ ಬಳಿಕ ಪಕ್ಷ ಅವರನ್ನು ಮುಸ್ಲಿಂ ಪ್ರಾಬಲ್ಯದ ಮುಸ್ತಫಾಬಾದ್ ಅಭ್ಯರ್ಥಿಯನ್ನಾಗಿಸಿತು. ಬಿಜೆಪಿ ಗೆಲವು ಅಸಾಧ್ಯ ಎನ್ನುವಂತಹ ಮುಸ್ತಾಬಾದ್ ವಿಧಾನಸಭಾ ಕ್ಷೇತ್ರದಿಂದ ಗೆದ್ದಿರುವುದು ಬಿಶ್ತ್ ಅವರ ಚುನಾವಣಾ ರಾಜಕೀಯ ಸಾಮರ್ಥ್ಯಕ್ಕೆ ಸಾಕ್ಷಿ.

ಪವನ್ ಕಲ್ಯಾಣ್ ಜತೆ ಮೋದಿ ನಗೆ ಚಟಾಕಿ

ದೆಹಲಿ: ದೆಹಲಿ ನೂತನ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು 6 ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ವೇದಿಕೆ ಮೇಲೇರಿದಾಗ ಅಲ್ಲಿದ್ದ ಬಿಜೆಪಿ ಮತ್ತು ಎನ್‌ಡಿಎ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಕೆಲವು ಪ್ರಮುಖ ಸಚಿವರಿಗೆ ವಂದಿಸುತ್ತಾ ಕೆಲವರ ಜತೆಗೆ ಕ್ಷಣ ಕಾಲ ಕುಶೋಲೋಪರಿ ನಡೆಸಿದರು.

ಆ ಸಂದರ್ಭ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಜತೆ ಹೆಚ್ಚು ಸಮಯ ಮಾತನಾಡಿದರು.

ಖ್ಯಾತ ನಟರೂ ಆದ ಡಿಸಿಎಂ ಪವನ್ ಕಲ್ಯಾಣ್ ಜತೆ ತುಸು ಹೆಚ್ಚೇ ಮಾತನಾಡಿದ ಮೋದಿ ಚಟಾಕಿ ಹಾರಿಸಿದರು. ಪ್ರಧಾನಿಯ ತಮಾಷೆ ಮಾತಿಗೆ ಪವನ್ ಹೃತ್ಪೂರ್ವಕವಾಗಿ ನಗುತ್ತಾ ಸಂಕೋಚದ ಮುದ್ದೆಯಾದರು.

ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್, ಡಿಸಿಎಂ ಅಜಿತ್ ಪವಾರ್, ಮಧ್ಯಪ್ರದೇಶ ಸಿಎಂ ಮೋಹನ್ ಯಾದವ್, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತಿತರರು ವೇದಿಕೆಯಲ್ಲಿದ್ದರು. ಆದರೆ, ಬಿಹಾರದಲ್ಲಿನ ಎನ್‌ಡಿಎ ಸರಕಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ಸಚಿವರಾದ ಚಿರಾಗ್ ಪಾಸ್ವಾನ್ ಮತ್ತು ಮಾಂಜಿ ಅವರ ಗೈರು ಎದ್ದುಕಂಡಿತು.

ರೇಖಾ ಜತೆಗಿನ ಕಾಲೇಜು ದಿನ ಸ್ಮರಿಸಿದ ಅಲ್ಕಾ ಲಂಬಾ

ದೆಹಲಿ: ದೆಹಲಿ ಮುಖ್ಯಮಂತ್ರಿಯಾಗಿ ಗೆಳತಿ ರೇಖಾ ಗುಪ್ತಾ ಪ್ರಮಾಣವಚನ ಸ್ವೀಕರಿಸಿದ ಸಂದರ್ಭ, ಕಾಂಗ್ರೆಸ್ ನಾಯಕಿ ಅಲ್ಕಾ ಲಂಬಾ ಕಾಲೇಜು ದಿನಗಳನ್ನು ಮೆಲುಕು ಹಾಕಿದ್ದಾರೆ.

1995ರಲ್ಲಿ ದೆಹಲಿ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘದ(ಡಿಯುಎಸ್‌ಯು) ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ವಿಭಾಗವಾದ 'ಎನ್‌ಎಸ್‌ಯುಐ' ನಾಯಕಿಯಾಗಿದ್ದ ತಾವು(ಅಲ್ಕಾ ಲಂಬಾ) ಅಧ್ಯಕ್ಷೆಯಾಗಿ ಚುನಾಯಿತರಾಗಿದ್ದು, ಬಿಜೆಪಿಯ ವಿದ್ಯಾರ್ಥಿ ವಿಭಾಗವಾದ 'ಎಬಿವಿಪಿ' ನಾಯಕಿಯಾಗಿದ್ದ ರೇಖಾ ಗುಪ್ತಾ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗದ್ದು, ಇಬ್ಬರೂ ಒಂದೇ ವೇದಿಕೆಯಲ್ಲಿ ಒಟ್ಟಿಗೇ ಪ್ರಮಾಣವಚನ ಸ್ವೀಕರಿಸಿದ್ದನ್ನೂ ನೆನಪಿಸಿಕೊಂಡಿದ್ದಾರೆ.

ಆ ಸಂದರ್ಭದ ಫೋಟೋವನ್ನೂ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು 'ಇದು 1995ರ ಹಳೆಯ ದಿನಗಳ ಮಧುರ ನೆನಪುಗಳ ಚಿತ್ರ. ನಾನು(ಅಲ್ಕಾ) ಮತ್ತು ರೇಖಾ ಗುಪ್ತಾ ಒಂದೇ ವೇದಿಕೆಯಲ್ಲಿ ಪ್ರಮಾಣವಚನ ಸ್ವೀಕರಿಸಿದ ಸಂದರ್ಭದ ಚಿತ್ರ' ಎಂದು ಬರೆದಿದ್ದಾರೆ.

'ರೇಖಾ ಗುಪ್ತಾ ಅವರಿಗೆ ಅಭಿನಂದನೆಗಳು ಹಾಗೂ ಶುಭ ಹಾರೈಕೆಗಳು' ಎಂದು ಸಂದೇಶ ಬರೆದಿರುವ ಅಲ್ಕಾ ಲಂಬಾ, 'ನಾವು ದೆಹಲಿ ನಿವಾಸಿಗಳು ಬಯಸುವುದೇನೆಂದರೆ ಯಮುನಾ ಮಾತೆ ಸ್ವಚ್ಛವಾಗಲಿ, ದೆಹಲಿಯ ಹೆಣ್ಣು ಮಕ್ಕಳು ಸುರಕ್ಷಿತವಾಗಿರುವಂತಾಗಲಿ' ಎಂದು ಆಶಿಸಿದ್ದಾರೆ.

ಭಾರತಕ್ಕೆ ಟೆಸ್ಲಾ ಹೋದರೆ ಅಮೆರಿಕಕ್ಕೆ ನಷ್ಟ: ಟ್ರಂಪ್

ವಾಷಿಂಗ್ಟನ್: ಎಲಾನ್ ಮಸ್ಕ್ ಅವರ ಪ್ರತಿಷ್ಠಿತ ಕಾರು ಕಂಪನಿ 'ಟೆಸ್ಲಾ' ಆಮದು ಸುಂಕದ ಹೊರೆ ತಪ್ಪಿಸಿಕೊಳ್ಳುವ ಸಲುವಾಗಿ ಭಾರತದಲ್ಲೇನಾದರೂ ಕಾರ್ಖಾನೆ ಆರಂಭಿಸಿದರೆ ಅದರಿಂದ ಅಮೆರಿಕಕ್ಕೆ ನಷ್ಟವಾಗುತ್ತದೆ, ಅನ್ಯಾಯವಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಳವಳ ವ್ಯಕ್ತಪಡಿಸಿದ್ದಾರೆ.

'ಫಾಕ್ಸ್ ನ್ಯೂಸ್'ನ ಸೀನ್ ಹ್ಯಾನಿಟಿ ಜತೆಗಿನ ಸಂದರ್ಶನದಲ್ಲಿ ಈ ವಿಚಾರ ಪ್ರಸ್ತಾಪಿಸಿರುವ ಟ್ರಂಪ್, ಭಾರತದಲ್ಲಿ ವಿಶ್ವ ದಲ್ಲೇ ಅತ್ಯಧಿಕ ಆಮದು ಸುಂಕ ವಿಧಿಸಲಾಗುತ್ತಿದೆ. ಅಷ್ಟೊಂದು ಸುಂಕ ನೀಡಿ ಭಾರತ ದಲ್ಲಿ ಟೆಸ್ಲಾ ಕಾರು ಮಾರುವುದು ಮಸ್ಕ್ ಅವರಿಗೆ ಅಸಾಧ್ಯ. ಹಾಗಾಗಿ ಸುಂಕದ ಹೊರೆ ತಪ್ಪಿಸಿಕೊಳ್ಳಲು ಅವರು ಭಾರತದಲ್ಲೇ ತಯಾರಿಕಾ ಘಟಕ ಸ್ಥಾಪಿಸಬಹುದೇನೋ. ಆದರೆ, ಅದರಿಂದ ನಮ್ಮ ದೇಶಕ್ಕೆ ಹಾನಿಯಾಗುತ್ತದೆ ಎಂದಿದ್ದಾರೆ. ಅಮೆರಿಕದ ಸರಕುಗಳಿಗೆ ಹೆಚ್ಚಿನ ಸುಂಕ ವಿಧಿಸುವ ಮೂಲಕ ವಿಶ್ವದ ಪ್ರತಿ ದೇಶವೂ ಲಾಭ ಮಾಡಿಕೊಳ್ಳುತ್ತಿವೆ ಎಂದೂ ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರಕಾರದ ದಕ್ಷತೆ ಹೆಚ್ಚಿಸುವ ಇಲಾಖೆ ಮುಖ್ಯಸ್ಥರಾದ ಎಲಾನ್ ಮಸ್ಕ್ ಅವರೂ ಈ ಸಂದರ್ಶನ ಸಮಯದಲ್ಲಿ ಹಾಜರಿದ್ದರು. ಈ ಮಧ್ಯೆ, ಟೆಸ್ಲಾ ಕಂಪನಿ ಭಾರತದ ಮಾರುಕಟ್ಟೆಗೆ ಚೀನಾ ಬದಲು ಜರ್ಮನಿ ಘಟಕದಲ್ಲಿ ತಯಾರಾಗುವ ಟೆಸ್ಲಾ ಕಾರುಗಳನ್ನು ತರಲಿದೆ. ಭಾರತ ಸರಕಾರದ ಕೋರಿಕೆ ಮೇರೆಗೆ ಈ ನಿರ್ಧಾರ ಮಾಡಿದೆ ಎಂದು ತಿಳಿದುಬಂದಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ&ಗು.ಆ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಸಂ. ಬೆಂಜಮಂ/ಮುಅ(ವಿ&ಗು.ಆ)/ಅಮುಅ(ವಿ)/ತಾಂಸ/4001/2024-25		ದಿನಾಂಕ: 18.02.2025
1.	ಕಾನಿಅ(ಡಿಸಿ&ಬಿಎಂ) ವಿಭಾಗದ ಅಡಿಯಲ್ಲಿ ಬರುವ ಪೂರ್ವ ವಲಯ ಪ್ರದೇಶಗಳಿಗೆ ಸಂಬಂಧಿಸಿದ ಗ್ರಾಹಕರಿಗೆ ಕುಡಿಯುವ ನೀರು/ಪರಿಸರ ಸ್ನೇಹಿ ಸಂಸ್ಕರಿಸಿದ ನೀರನ್ನು ಪೂರೈಸಲು ವಿವಿಧ ಸಾಮರ್ಥ್ಯದ ಬಾಡಿಗೆ ಆಧಾರದ ಮೇಲೆ ನೀರಿನ ಟ್ಯಾಂಕರ್‌ಗಳನ್ನು ಒದಗಿಸುವ ಕಾಮಗಾರಿ.	ರೂ. 373.32 ಲಕ್ಷಗಳು ರೂ. 5.60 ಲಕ್ಷಗಳು
2.	ಕಾನಿಅ(ಡಿಸಿ&ಬಿಎಂ) ವಿಭಾಗದ ಅಡಿಯಲ್ಲಿ ಬರುವ ಉತ್ತರ ವಲಯ ಮತ್ತು ಎಸ್‌ಟಿಪಿಯ ಪ್ರದೇಶಗಳಿಗೆ ಸಂಬಂಧಿಸಿದ ಗ್ರಾಹಕರಿಗೆ ಕುಡಿಯುವ ನೀರು/ಪರಿಸರ ಸ್ನೇಹಿ ಸಂಸ್ಕರಿಸಿದ ನೀರನ್ನು ಪೂರೈಸಲು ವಿವಿಧ ಸಾಮರ್ಥ್ಯದ ಬಾಡಿಗೆ ಆಧಾರದ ಮೇಲೆ ನೀರಿನ ಟ್ಯಾಂಕರ್‌ಗಳನ್ನು ಒದಗಿಸುವ ಕಾಮಗಾರಿ	ರೂ. 283.68 ಲಕ್ಷಗಳು ರೂ. 4.26 ಲಕ್ಷಗಳು
3.	ಕಾನಿಅ(ಡಿಸಿ&ಬಿಎಂ) ವಿಭಾಗದ ಅಡಿಯಲ್ಲಿ ಬರುವ ದಕ್ಷಿಣ ವಲಯ ಪ್ರದೇಶಗಳಿಗೆ ಸಂಬಂಧಿಸಿದ ಗ್ರಾಹಕರಿಗೆ ಕುಡಿಯುವ ನೀರು/ಪರಿಸರ ಸ್ನೇಹಿ ಸಂಸ್ಕರಿಸಿದ ನೀರನ್ನು ಪೂರೈಸಲು ವಿವಿಧ ಸಾಮರ್ಥ್ಯದ ಬಾಡಿಗೆ ಆಧಾರದ ಮೇಲೆ ನೀರಿನ ಟ್ಯಾಂಕರ್‌ಗಳನ್ನು ಒದಗಿಸುವ ಕಾಮಗಾರಿ	ರೂ. 179.64 ಲಕ್ಷಗಳು ರೂ. 2.70 ಲಕ್ಷಗಳು
4.	ಕಾನಿಅ(ಡಿಸಿ&ಬಿಎಂ) ವಿಭಾಗದ ಅಡಿಯಲ್ಲಿ ಬರುವ ಪಶ್ಚಿಮ ವಲಯದ ಪ್ರದೇಶಗಳಿಗೆ ಸಂಬಂಧಿಸಿದ ಗ್ರಾಹಕರಿಗೆ ಕುಡಿಯುವ ನೀರು/ಪರಿಸರ ಸ್ನೇಹಿ ಸಂಸ್ಕರಿಸಿದ ನೀರನ್ನು ಪೂರೈಸಲು ವಿವಿಧ ಸಾಮರ್ಥ್ಯದ ಬಾಡಿಗೆ ಆಧಾರದ ಮೇಲೆ ನೀರಿನ ಟ್ಯಾಂಕರ್‌ಗಳನ್ನು ಒದಗಿಸುವ ಕಾಮಗಾರಿ	ರೂ. 234.00 ಲಕ್ಷಗಳು ರೂ. 3.51 ಲಕ್ಷಗಳು

ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 28.02.2025 ರಂದು ಸಂಜೆ 4.00 ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ : 01.03.2025 ರ ಸಂಜೆ 4.00 ಗಂಟೆಗೆ

ಸಹಿ/- ಮುಖ್ಯ ಅಭಿಯಂತರರು (ವಿನ್ಯಾಸ & ಗು.ಆ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/5219/Zen/2024-25

ಕೆಸಿಆರ್ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ್ದವನ ಹತ್ಯೆ

ತೆಲಂಗಾಣ: ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್(ಕೆಸಿಆರ್) ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ್ದ ಎನ್.ರಾಜಲಿಂಗಮೂರ್ತಿ(50) ಎಂಬವರು ಜಯಶಂಕರ ಭೂಪಾಲಪಲ್ಲಿ ಪಟ್ಟಣದಲ್ಲಿ

ಬುಧವಾರ ಸಂಜೆ 7.30ರಲ್ಲಿ ಬರ್ಬರವಾಗಿ ಕೊಲೆಯಾಗಿದ್ದಾರೆ.

ಮೋಟಾರ್ ಬೈಕ್‌ನಲ್ಲಿ ಹೋಗುತ್ತಿದ್ದ ರಾಜಲಿಂಗಮೂರ್ತಿ ಅವರನ್ನು ಬುಧವಾರ ಸಂಜೆ 7.30ರಲ್ಲಿ ಅಡ್ಡಗಟ್ಟಿದ ಇಬ್ಬರು ವ್ಯಕ್ತಿಗಳು ಇರಿದು ಕೊಂದಿದ್ದಾರೆ. ಕೊಲೆಗೆ ಭೂ ವಿವಾದ ಕಾರಣವಾಗಿರಬಹುದು, ಘಟನೆ ರಾಜಕೀಯ ದ್ವೇಷದಿಂದ ನಡೆದಿಲ್ಲ. ಕೊಲೆ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಕೆಸಿಆರ್ ಮತ್ತಿತರರು ಕಾಳೇಶ್ವರಂ ಯೋಜನೆಯ ಭಾಗವಾದ ಮೇಡಗಡ್ಡ ಬ್ಯಾರೇಜ್ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ. ಹಾಗಾಗಿ ಕಳಪೆ ಕಾಮಗಾರಿ ನಡೆದು ಮೇಡಿಗಡ್ಡ ಬ್ಯಾರೇಜ್‌ನ ಕೆಲ ಪಿಲ್ಲರ್‌ಗಳು ಮುಳುಗಿವೆ ಎಂದು ರಾಜಲಿಂಗಮೂರ್ತಿ ನ್ಯಾಯಾಲಯದಲ್ಲಿ 2023ರ ಅಕ್ಟೋಬರ್‌ನಲ್ಲಿ ದೂರು ದಾಖಲಿಸಿದ್ದರು.

ಬಾಲಕಿ ಮೇಲೆ ಅತ್ಯಾಚಾರ ಸ್ವಾಮೀಜಿ ಸೇರಿ ಮೂವರ ಸೆರೆ

ಮುಂಬೈ: ಅಪ್ರಾಪ್ತ ಬಾಲಕಿ ಮೇಲೆ ಸತತ ಅತ್ಯಾಚಾರ ನಡೆಸಿದ ಆರೋಪದಡಿ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ರಿದ್ಧಾಪುರ ಮಠದ ಮಠಾಧೀಶ(75) ಮತ್ತು ಸಹಚರನನ್ನು ಹಾಗೂ ಸಂತ್ರಸ್ತೆಯ ಚಿಕ್ಕಮ್ಮನನ್ನೂ ಬಂಧಿಸಲಾಗಿದೆ. ಮೂರೂ ಆರೋಪಿ ಗಳ ವಿರುದ್ಧ

ಬಿಎನ್‌ಎಸ್ ಕಲಂ 376, 323 ಮತ್ತು 506 ಹಾಗೂ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. 17 ವರ್ಷದ ಬಾಲಕಿ ಪೋಷಕರೊಂದಿಗೆ ಮಂಗಳವಾರ ಸಂಜೆ ಅಮರಾವತಿಯ ಶಿರ್ಖೇಡ್ ಠಾಣೆಗೆ ಬಂದು ದೂರು ದಾಖಲಿಸಿದ ಬಳಿಕ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ಬಾಲಕಿ 8 ತಿಂಗಳ ಗರ್ಭಿಣಿ ಎಂದು ದೃಢಪಟ್ಟಿದೆ. ಬಾಲಕಿ ಚಿಕ್ಕಪ್ಪ- ಚಿಕ್ಕಮ್ಮನ ಜತೆ 1 ವರ್ಷದಿಂದ ಸ್ವಾಮೀಜಿ ಸೇವೆಗಾಗಿ ಮಠದಲ್ಲಿ ತಂಗಿದ್ದಳು. ಮಠಾಧೀಶ ಸುರೇಂದ್ರಮುನಿ ತಾಳೇಗಾಂವ್ಕರ್ ಕೋಣೆಗೆ ಬಾಲಕಿಯನ್ನು ಚಿಕ್ಕಮ್ಮ 2024ರ ಏ.2ರಂದು ಕಳುಹಿಸಿದ್ದಾಗ ಸ್ವಾಮೀಜಿ ಅತ್ಯಾಚಾರ ನಡೆಸಿದ್ದಾರೆ. ಬಾಲಕಿ ಚಿಕ್ಕಮ್ಮನಿಗೆ ಈ ವಿಚಾರ ತಿಳಿಸಿದರೂ ಆಕೆ ಬಾಲಕಿಗೇ ಬೆದರಿಸಿ ಸುಮ್ಮನಾಗಿಸಿದ್ದಾಳೆ. ಮಠದಲ್ಲೇ ಇರುವ ಬಾಳಾಸಾಹೇಬ್ ದೇಸಾಯಿ(40)ಗೆ ಈ ವಿಷಯ ತಿಳಿದು ಆತನೂ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದಾನೆ. ಆರೋಪಿಗಳಿಬ್ಬರೂ ಹಲವು ತಿಂಗಳು ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ವಿವರ ನೀಡಿದ್ದಾರೆ.

ಮಹಾರಾಣಾ ಪ್ರತಿಮೆ: ಆಕ್ಷೇಪ ಕೈಬಿಟ್ಟ ಮಸೀದಿ

ಹಮೀರಪುರ: ಹಿಮಾಚಲ ಪ್ರದೇಶದ ಸುಜಾನ್‌ಪುರ ತಿರಾದಲ್ಲಿ ಮಸೀದಿ ಮುಂಭಾಗ ಮಹಾ ಪರಾಕ್ರಮಿ ಹಿಂದೂ ಸಾಮ್ರಾಟ ಮಹಾರಾಣಾ ಪ್ರತಾಪ್ ಅವರ ಪ್ರತಿಮೆಯ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದ ಮುಸ್ಲಿಂ ಸಮುದಾಯ, ಈಗ ಆಕ್ಷೇಪಣೆ ಕೈಬಿಟ್ಟಿದೆ. ಪ್ರತಿಮೆ ವಿರೋಧಿಸಿದ್ದ

ಪತ್ರ ವನ್ನು ಬುಧವಾರ ಹಿಂಪಡೆದಿದೆ. ಪ್ರತಿಮೆ ಸ್ಥಾಪನೆಯನ್ನು ಮುಸ್ಲಿಂ ಸುಧಾರ್ ಸಭಾ ಬೆಂಬಲಿಸಿದೆ. ಸಮುದಾಯದ ಕೆಲ ಪ್ರಮುಖರು ಪ್ರತಿಮೆ ಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ನಗರ ಪರಿಷತ್ ಕಾರ್ಯಕಾರಿ ಅಧಿಕಾರಿ ಅಜ್ಮೀರ್ ಠಾಕೂರ್ ಗುರುವಾರ ಹೇಳಿದ್ದಾರೆ. ವಾರ್ಡ್ ಸಂಖ್ಯೆ 4ರಲ್ಲಿನ ಮಸೀದಿ ಮುಂದಿನ ಉದ್ಯಾನ ದಲ್ಲಿ ಮಹಾರಾಣಾ ಪ್ರತಾಪ್ ಪ್ರತಿಮೆ ಸ್ಥಾಪಿಸದಂತೆ ಮುಸ್ಲಿಂ ಸಮುದಾಯದ ನಿಯೋಗ ಹಮೀರ್‌ಪುರ ಆಡಳಿತಕ್ಕೆ ಈ ಮೊದಲು ಸೋಮವಾರ ಮನವಿ ಸಲ್ಲಿಸಿತ್ತು. ಈ ಸಂದರ್ಭದ ವಿಡಿಯೊ ವೈರಲ್ ಆಗಿತ್ತು. ಬಳಿಕ ವಿಶ್ವ ಹಿಂದೂ ಪರಿಷತ್, ಅನುಮೋದಿಸಿದ ಸ್ಥಳದಲ್ಲೇ ಪ್ರತಿಮೆ ಸ್ಥಾಪಿಸಬೇಕು ಎಂದು ಒತ್ತಾಯಿಸಿತ್ತು.

ಸಮಾಚಾರ ಸಣ್ಣದಲ್ಲ

ರನ್ನವೈಭವ: ವಿಶೇಷ ಬಸ್ ವ್ಯವಸ್ಥೆ

ಬಾಗಲಕೋಟೆ: ಮುಧೋಳದಲ್ಲಿ ಫೆ.22 ರಿಂದ 24ರ ವರೆಗೆ ಜರುಗಲಿರುವ ರನ್ನವೈಭವ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಣೆಗೆ ಮುಧೋಳ, ಜಮಖಂಡಿ, ಮಹಾಲಿಂಗಪೂರ, ಬಾಗಲಕೋಟೆ ಹಾಗೂ ಬೀಳಗಿ ಬಸ್ ನಿಲ್ದಾಣಗಳಿಂದ ಕವಿ ಚಕ್ರವರ್ತಿ ರನ್ನ ಕ್ರೀಡಾಂಗಣಕ್ಕೆ ತೆರಳಲು ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ಈ ವಿಶೇಷ ವಾಹನಗಳ ಸದುಪಯೋಗ ಪಡೆದುಕೊಳ್ಳುವಂತೆ ಬಾಗಲಕೋಟೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಣಬೆ ಕೃಷಿ ತರಬೇತಿಗೆ ಅರ್ಜಿ

ಬಾಗಲಕೋಟೆ: ಕೃಷಿ ವಿಜ್ಞಾನ ಕೇಂದ್ರವು ಅಣಬೆ ಕೃಷಿ ಕುರಿತು 21 ದಿನಗಳ ಕಾಲ ತರಬೇತಿಯನ್ನು ನೀಡಲಾಗುತ್ತಿದ್ದು, ಈ ತರಬೇತಿಯಲ್ಲಿ ಭಾಗವಹಿಸಲು 25 ಜನರಿಗೆ ಅವಕಾಶವಿದೆ. ತರಬೇತಿಯನ್ನು ಮಾರ್ಚ 1 ರಿಂದ ಪ್ರಾರಂಭಿಸಲಾಗುತ್ತಿದೆ. ಆಸಕ್ತರು ಮೊ ನಂ. 70220-71199ಗೆ ಕರೆ ಮಾಡಿ ಫೆ.28 ರೊಳಗಾಗಿ ತಮ್ಮ ಹೆಸರನ್ನು ನೋಂದಾಣಿಸಿಕೊಳ್ಳುವಂತೆ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರನ್ನ ರಥಯಾತ್ರೆಗೆ ಭವ್ಯ ಸ್ವಾಗತ, ಬೀಳ್ಕೊಡುಗೆ

ಮುಧೋಳ: ತಾಲೂಕಿನ ವಿವಿಧ ಪಂಚಾಯತ ಮಟ್ಟದಲ್ಲಿ ರನ್ನ ವೈಭವ ಕಾರ್ಯಕ್ರಮದ ಪ್ರಚಾರಕ್ಕಾಗಿ ಹಲವಾರು ದಿನಗಳಿಂದ ಸಂಚರಿಸುತ್ತ ಮಂಟೂರ ಗ್ರಾ.ಪಂ. ಮುಗಿಸಿ ನಗರಕ್ಕೆ ಆಗಮಿಸಿದ್ದ ರನ್ನ ರಥಯಾತ್ರೆಗೆ ಬಸವೇಶ್ವರ ವೃತ್ತದಲ್ಲಿ ತಾಲೂಕಾ ಆಡಳಿತ, ನಗರಸಭೆ ಅಧಿಕಾರಿಗಳು ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ರಥಕ್ಕೆ ಪುಷ್ಪ, ಮಾಲಾರ್ಪನೆ, ಆರತಿ ಬೆಳಗಿ ಪೂಜೆ ಸಲ್ಲಿಸಿ ಶಿರೋಳ ಪಂಚಾಯತಿ ಕಡೆ ಆತ್ಮೀಯವಾಗಿ ಬೀಳ್ಕೊಟ್ಟರು. ಈ ಸಂದರ್ಭದಲಲಿ ನಗರಸಭೆ ಅಧ್ಯಕ್ಷೆ ಸುನಂದಾ ತೇಲಿ, ಸದಸ್ಯ ಸಂತೋಷ ಪಾಲೋಜಿ, ಪೌರಾಯುಕ್ತ ಗೋಪಾಲ ಕಾಸೆ, ಎಇ. ಎಸ್.ಬಿ. ಹೊಸೂರ, ಸಿಬ್ಬಂದಿಯವರು, ಮುಖಂಡ ಹಣಮಂತ ತೇಲಿ, ರಥದ ಉಸ್ತುವಾರಿ ವಹಿಸಿಕೊಂಡಿರುವ ಸಂಗಮೇಶ ನೀಲಗುಂದ, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು ಇತರರು ಪಾಲ್ಗೊಂಡಿದ್ದರು.

ಎಲ್ಲ ರಂಗಗಳಲ್ಲಿಯೂ ಸ್ತ್ರೀಯರ ಪಾತ್ರ ದೊಡ್ಡದು

ರಬಕವಿ-ಬನಹಟ್ಟಿ: ಪುರುಷರ ಯಶಸ್ವಿಗೆ ಸ್ತ್ರೀ ಪ್ರೇರಣೆಯಾಗಿದ್ದಾಳೆ ಎಂದು ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ ಹೇಳಿದರು. ಶಂಕರಲಿಂಗ ಟ್ರಸ್ಟ್ ಕಮೀಟಿಯ ಶ್ರೀ ಶಂಕರಲಿಂಗ ಮಹಿಳಾ ಸಂಘದ 2ನೇ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಇಂದಿನ ದಿನಮಾನಗಳಲ್ಲಿ ಮಹಿಳೆ ಎಲ್ಲ ರಂಗದಲ್ಲಿ ಮುಂದಿದ್ದಾಳೆ. ಸಂಘ ಸಂಸ್ಥೆ ಗಳಲ್ಲಿಯೂ ಮಹಿಳೆಯರು ಜಾಗೃತರಾಗಬೇ ಕಾಗಿದೆ. ಮಕ್ಕಳ ಯಶಸ್ವಿಯಾಗಿ ಮುನ್ನಡೆಯಲು ಅವರಿಗೆ ಪ್ರೋತ್ಸಾಹ ನೀಡುವ ಕೆಲಸ ತಾಯಂದಿರು ಮಾಡಬೇಕು ಎಂದರು. ಕಾರ್ಯಕ್ರಮ ಉದ್ಘಾಟಿಸಿದ ಯಲ್ಲಟ್ಟಿಯ ಕೊಣ್ಣೂರ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಥಾಪಕ ಪ್ರಾಚಾರ್ಯ ಪ್ರೊ. ಬಸವರಾಜ ಕೊಣ್ಣೂರ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಿಕ್ಷಕಿ ಸುಜಾತಾ ಯಂಡಿಗೇರಿ, ಶಿಕ್ಷಕ ಶಂಕರ ಯಂಡಿಗೇರಿ, ಪತ್ರಕರ್ತರಾದ ಮಲ್ಲಿಕಾರ್ಜುನ ತುಂಗಳ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಿಳಾ ಸಂಘದ ಅಧ್ಯಕ್ಷೆ ಅನುರಾಧಾ ಹೊರಟ್ಟಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಚನಗಿರೆಪ್ಪ ಗುಣಕಿ, ಕಿರಣ ಆಳಗಿ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಜ್ಯೋತಿ ಗುಣಕಿ, ರತ್ನಾ ಕೊಳಕಿ, ರೇಖಾ ಕಿನ್ನಾಳ, ರೇವತಿ ಭೂತಿ, ವಾಣಿ ಲುಕ್ಕ, ಶಿಲ್ಪಾ ಅಮಟಿ, ಆಶಾ ಭೂತಿ, ರೂಪಾ ಹಿಂಡಿವಳಿ, ಪೂಜಾ ಜುಂಜಪ್ಪನವರ, ಪಾರ್ವತಿ ಕೊಳಕಿ, ಸುರೇಖಾ ಕೊಳಕಿ, ಮಧು ಕೊಳಕಿ, ರಿಯಾ ಮಟ್ಟಿಕಲ್ಲಿ, ಚಂದ್ರಶೇಖರ ಮಿರ್ಜಿ, ಪ್ರಭು ಗುಣಕಿ, ರೇವಪ್ಪ ಗುಣಕಿ, ವಿನಯ ಮಟ್ಟಿಕಲ್ಲಿ, ಇದ್ದರು.

ಅಗಲಿದ ಜೀವ

ಕಸ್ತೂರಿ ಬಸವರಾಜ ಮುಳಗುಂದ

ಗುಳೇದಗುಡ್ಡ: ಸಮೀಪದ ಪರ್ವತಿ ಗ್ರಾಮದ ನಿವಾಸಿ ದೇವಾಂಗ ಸಮಾಜದ ಕಸ್ತೂರಿ ಬಸವರಾಜ

ಮುಳಗುಂದ (42) ನಿಧನರಾದರು. ಮೃತರು ಪತಿ, ಪುತ್ರ ಹಾಗೂ ಪುತ್ರಿ ಹಾಗೂ ಅಪಾರ ಬಂಧುಗಳು ಬಳಗವನ್ನು ಅಗಲಿದ್ದಾರೆ. ದೇವಾಂಗ ಸಮಾಜದ ಹಿರಿಯರು, ಗಣ್ಯರು ಸಂತಾಪ ಸೂಚಿಸಿದ್ದಾರೆ.

{ಎಚ್.ಸಿ.ಮಹದೇವಪ್ಪ} ಸಚಿವ

ಸಿದ್ದರಾಮಯ್ಯ ಸಿಎಂ ಆಗಬೇಕು ಎಂದು ಶಾಸಕರು ಮುದ್ರೆ ಹೊತ್ತಿದ್ದಾರೆ. ಹೈಕಮಾಂಡ್ ಅದನ್ನು ನಿರ್ದೇಶಿಸಿದೆ. ಹೀಗಾಗಿ ಸಿಎಂ ತಮ್ಮ ಸ್ಥಾನದಲ್ಲಿ ಗಟ್ಟಿಯಾಗಿಯೇ ಇದ್ದಾರೆ.

ಶಿವಾಜಿ ಮಹಾರಾಜರ 396ನೇ ಜಯಂತಿ | ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಹೇಳಿಕೆ

ಹಿಂದುಗಳ ಹೃದಯ ಸಾಮ್ರಾಟ ಶಿವಾಜಿ

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರು ಅಖಂಡ ಹಿಂದು ಸ್ವರಾಜ್ಯದ ಕನಸಿನೊಂದಿಗೆ ಮೊಘಲರು, ನವಾಬರು ಸೇರಿದಂತೆ ಅನೇಕರೊಂದಿಗೆ ಹೋರಾಡಿದರು. ಶಿವಾಜಿಯವರ ಕನಸನ್ನು ಸಾಕಾರಗೊಳಿಸಲು ಅವರ ಮಗನಾದ ಸಂಬಾಜಿ ಕೂಡ ಹೋರಾಟ ಮಾಡಿದರು ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ತಿಳಿಸಿದರು.

ನಗರದಲ್ಲಿ ದಿ ಮರಾಠ ಹಿತಚಿಂತಕ ಸಂಘದಿಂದ ಇಲ್ಲಿನ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡಿದ್ದ ಶಿವಾಜಿ ಮಹಾರಾಜರ 396ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊಘಲರ ಸೇನೆಯವರೇ ಅವರ ರಾಜನ ಮಗಳನ್ನು ಅಪಹರಣ ಮಾಡಿದಾಗ ಆ ಬಾಲಕಿಯನ್ನು ರಕ್ಷಿಸಿ ಅರಮನೆಯಲ್ಲಿ ಜಾಗ ಕೊಟ್ಟು, ಒಳ್ಳೆಯ ಸಮಯ ಬಂದಾಗ ಆಕೆಯನ್ನು ಪುನಃ ಆ ರಾಜನ ಬಳಿ ಬಿಟ್ಟರು. ಇವರ ಇಂತಹ ಗುಣ ನನಗೆ ಅರಿಯದಾಯಿತ್ತಲ್ಲ ಎಂದು ಆ ಮೊಘಲ ರಾಜ ವಿಷಾದ ವ್ಯಕ್ತ ಪಡಿಸಿದ್ದ ಎಂದು ತಿಳಿಸಿದರು.

ಶಿವಾಜಿ ಮಹಾರಾಜರು ಎಷ್ಟು ಪರಾಕ್ರಮಿಯಾಗಿದ್ದಾರೆ ಎನ್ನುವುದಕ್ಕೆ ಅವರ ಇತಿಹಾಸ ನೋಡಿದರೆ ಅರ್ಥವಾಗುತ್ತದೆ. ಅವರಂತೆಯೇ ಅವರ ಮಗ ಸಂಬಾಜಿ ಕೂಡ ಅಷ್ಟೇ ಪರಾಕ್ರಮಿಯಾಗಿದ್ದ. ಸಾವಿರಾರು ಮೊಘಲರ ಸೈನ್ಯದೊಂದಿಗೆ ನೂರರಿಂದ ನೂರೈವತ್ತು ಜನರ ಸೇನೆಯೊಂದಿಗೆ ಸೆಣಸಿದ್ದ ಆತನನ್ನು ಮೊಘಲರು ಬಂಧಿಸಿ, ಚಿತ್ರಹಿಂಸೆ ಕೊಟ್ಟು ಆತನ ಜೀವ ತೆಗೆದರು. ಈಚೆಗೆ ಬಿಡುಗಡೆಯಾದ ಛಾವಾ ಎಂಬ ಹಿಂದೆ ಚಿತ್ರದಲ್ಲಿ ಸಂಬಾಜಿ ಪರಾಕ್ರಮ ಹಾಗೂ ಆತನಿಗೆ ನೀಡಿದ ಚಿತ್ರಹಿಂಸೆ ನಮ್ಮಲ್ಲಿ ರೋಷ ಬರುವ ಹಾಗಿದೆ. ಪ್ರತಿಯೊಬ್ಬರು ಆ ಚಿತ್ರ ವೀಕ್ಷಿಸಬೇಕು ಎಂದರು.

ಹಿಂದುಗಳ ಹೃದಯ ಸಾಮ್ರಾಟ ಶಿವಾಜಿ ಹಾಗೂ ವಿಶ್ವಗುರು ಬಸವಣ್ಣನವರ ಪುತ್ಥಳಿಗಳು ತಯಾರಾಗಿ ನಗರದ ಶೆಡ್‌ವೊಂದರಲ್ಲಿವೆ ಎನ್ನುವುದು ಬೇಸರದ ಸಂಗತಿ. ಈ ಇಬ್ಬರ ಕೋಟ್ಯಾಂತರ ಜನರ ಹೃದಯದಲ್ಲಿದ್ದಾರೆ. ಒಬ್ಬರು ಹಿಂದುಗಳಿಗಾಗಿ ಹೋರಾಟ ಮಾಡಿದರೆ ಮತ್ತೊಬ್ಬರು ಸಮಾಜದಲ್ಲಿರುವ ಅಸಮಾನತೆಯನ್ನು ತೊಲಗಿಸಿ ಎಲ್ಲರೂ ಸಮಾನರು ಎಂಬುವುದನ್ನು ಸಾರಿದರು. ಇಂಥವರ ಪುತ್ಥಳಿ ಪ್ರತಿಷ್ಠಾಪಿಸಲು ಸರಕಾರ ಅಡ್ಡಿಯಾಗುತ್ತಿರುವುದು ಸರಿಯಲ್ಲ. ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಶಿವಾಜಿ ಮಹಾರಾಜರ ಹಾಗೂ ಬಸವಣ್ಣನವರ ಪುತ್ಥಳಿ ಪ್ರತಿಷ್ಠಾಪಿಸಲು ಸರಕಾರಕ್ಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಅನೇಕ ಬಾರಿ ಮನವಿ ಕೊಟ್ಟರು ಯಾವುದೇ ಪ್ರಯೋಜನವಾಗುತ್ತಿಲ್ಲ. ಸರಕಾರ ಹಾಗೂ ಜಿಲ್ಲಾಡಳಿತ ಆದಷ್ಟು ಬೇಗ ಮಹನೀಯರ ಪುತ್ಥಳಿ ಪ್ರತಿಷ್ಠಾಪನೆಗೆ ಅನುಮತಿ ನೀಡಬೇಕು ಎಂದು ಆಗ್ರಹಿಸಿದರು.

ಗುಳೇದಗುಡ್ಡ ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಸ್ವಾಮೀಜಿ, ದಿ ಮರಾಠ ಹಿತಚಿಂತಕ ಸಂಘದ ಅಧ್ಯಕ್ಷ ಮಾರುತಿರಾವ್ ಶಿಂಧೆ, ನಗರಸಭೆ ಅಧ್ಯಕ್ಷೆ ಸವಿತಾ ಲಂಕೆನ್ನವರ, ಉಪಾಧ್ಯಕ್ಷೆ ಶೋಭಾ ರಾವ್, ಗಣಪತಿ(ರಾಜು) ವಾಘ, ರಾಜು ಶಿಂಧೆ, ಮಿಥುನ್ ಸಾಳುಂಕೆ, ಗುಂಡೂರಾವ್ ಶಿಂಧೆ, ಭೀಮಶಿ ಮೋರೆ, ಸಂಜೀವ ವಾಡಕರ್ ಸೇರಿದಂತೆ ಇತರರಿದ್ದರು.



ಬಾಗಲಕೋಟೆಯಲ್ಲಿ ದಿ ಮಾರಾಠ ಹಿತಚಿಂತಕ ಸಂಘದಿಂದ ಶಿವಾಜಿ ಜಯಂತಿ ಕಾರ್ಯಕ್ರಮ ಜರುಗಿತು.

ಭವ್ಯ ಶೋಭಾಯಾತ್ರೆ

ದಿ ಮರಾಠ ಹಿತಚಿಂತಕ ಸಂಘದಿಂದ ಛತ್ರಪತಿ ಶಿವಾಜಿ ಮಹಾರಾಜರ 395ನೇ ಜಯಂತ್ಯುತ್ಸವದ ಪ್ರಯುಕ್ತ ನಗರದಲ್ಲಿ ಭವ್ಯ ಶೋಭಾಯಾತ್ರೆ ಜರುಗಿತು. ಕಿಲ್ಲಾ ಅಂಬಾಭವಾನಿ ದೇವಸ್ಥಾನದಿಂದ ಹೊರಟ ಶಿವಾಜಿ ಮಹಾರಾಜರ ಮೂರ್ತಿ ಸಹಿತ ಮೆರವಣಿಗೆಯಲ್ಲಿ ಮಹಿಳೆಯರು, ಯುವಕರು, ಮರಾಠ ಸಮಾಜದ ಮುಖಂಡರು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಕಿಲ್ಲಾ ಓಣಿ, ಪಂಕಾ ಮಸೀದಿ, ವಲ್ಲಭಬಾಯ್ ಚೌಕ, ಎಂಜಿ ರಸ್ತೆ ಮೂಲಕ ಬಸವೇಶ್ವರ ವೃತ್ತ ತಲುಪಿ ಸಮಾವೇಶಗೊಂಡಿತು.

ನೂತನ ಸಹಕಾರಿ ಬ್ಯಾಂಕಿನ ಅಧ್ಯಕ್ಷೆ ಶಕುಂತಲಾ ಸಂಗಣ್ಣ

ಹುನಗುಂದ: ಶ್ರೀ ವಿಜಯ ಮಹಾಂತೇಶ ಸಹಕಾರಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಶಕುಂತಲಾ ಸಂಗಣ್ಣ ಗಂಜಿಹಾಳ, ಉಪಾಧ್ಯಕ್ಷರಾಗಿ ಸೋಮಶೇಖರ ಬಲ ಕುಂದಿ, ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಬುಧವಾರ ಜರುಗಿದ ಚುನಾವಣೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ, ಚುನಾವಣೆ ಅಧಿಕಾರಿ ದಾನಯ್ಯ ಹಿರೇಮಠ ಇವರಿಬ್ಬರ ಅವಿರೋಧ ಆಯ್ಕೆಯನ್ನು ಘೋಷಿಸದರು. ಬ್ಯಾಂಕಿನ ನೂತನ ನಿರ್ದೇಶಕರಾದ ದೇವು ಡಂಬಳ, ಮಂಜುನಾಥ ಆಲೂರ, ಶಕುಂತಲಾ ಬೆಲ್ಲದ, ರವಿ ಹುಚನೂರ, ಮಹಾಂತೇಶ ಅವಾರಿ, ನೀಲಪ್ಪ, ಮುಕ್ಕ ಣ್ಣವರ, ಲಕ್ಷ್ಮೀಬಾಯಿ ಮುಕ್ಕಣ್ಣವರ, ಶಿವಾನಂದ ಕಂಠಿ, ಬಸವರಾಜ, ಹೊಸೂರ. ನೀಲಪ್ಪ ತಪೇಲಿ. ತಿಪರೆಡ್ಡೆಪ್ಪ. ನಾಗರಾಳ. ರಾಜಕುಮಾರ ಬಾದವಾ ಡಗಿ, ಶರಣಪ್ಪ, ಹೊಸೂರ ಬಸವರಾಜ, ನಾಡಗೌಡರ, ನೂರಂದಗೌಡ (ಮುತ್ತಣ್ಣ) ಕಲಗೋಡಿ, ತಿರುಪತಿ ಕುಷ್ಟಗಿ, ದೀಪಾ, ಸುಂಕದ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿ ದ್ದರು. ಅಧ್ಯಕ್ಷರಾಗಿ ಆಯ್ಕೆಗೊಂಡ ನಂತರ ಸುದ್ದಿಗಾರೊಂದಿಗೆ ಮಾತನಾಡಿದ ಅವರು, ಮುತ್ಸದಿ ರಾಜಕಾರಣಿ, ಸಹಕಾರಿ ಧುರಿಣ ದಿ. ಎಸ್. ಎಸ್. ಕಡಪಟ್ಟಿ ಅವರು ಸ್ಥಾಪಿಸಿದ ಈ ಬ್ಯಾಂಕ್ ಇಂದು 6 ನೂರು ಕೋಟಿಗೂ ಹೆಚ್ಚು ದುಡಿಯುವ ಬಂಡವಾಳ ಹೊಂದಿದೆ. ಇಂತ ಪ್ರತಿಷ್ಠಿತ ಹಣಕಾಸು ಸಂಸ್ಥೆಗೆ ಸತತ 2 ಬಾರಿ ನಿರ್ದೇಶಕನಾಗಿ ಅಯ್ಕೆಗೊಳ್ಳುವುದರ. ಈ ಬಾರಿ ಅಧ್ಯಕ್ಷೆಯಾಗುವ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ ಇದಕ್ಕೆ ಸಹಕರಿಸಿದ ಬ್ಯಾಂಕಿನ ಎಲ್ಲ ನಿರ್ದೇಶಕ ಮಂಡಳಿಗೆ ಕೃತಜ್ಞತೆ ಸಲ್ಲಿಸಿದರು.

ವಿಜಯೋತ್ಸವ: ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಬ್ಯಾಂಕಿನ ಮುಂದೆ ಜಮಾಯಿಸಿದ್ದ ಅಧ್ಯಕ್ಷೆ ಶಕುಂತಲಾ ಮತ್ತು ಉಪಾಧ್ಯಕ್ಷ ಸೋಮಶೇಖರ ಬೆಂಬಲಿ ಗರು ಪಟಾಕಿ ಸಿಡಿಸಿ ಹರ್ಷ ವ್ಯಕ್ತಪಡಿಸಿದರು.

ಶ್ರೀ ವಿಜಯ ಮಹಾಂತೇಶ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಶಕುಂತಲಾ ಸಂಗಣ್ಣ ಗಂಜಿಹಾಳ, ಉಪಾಧ್ಯಕ್ಷರಾಗಿ ಸೋಮಶೇಖರ ಬಲಕುಂದಿ, ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

2025ರಲ್ಲೇ ಲೋಕಾರ್ಪಣೆ :ಪೆಂಡಾರಿ ಉಮರಫಾರೂಕ

ಶಾದಿ ಮಹಲ್‌ಗೆ ಶಾಸಕರ ಅನುದಾನದ ಭರವಸೆ

ಕೆರೂರ: ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವ ಶಾದಿ ಮಹಲ ಈ 2025ರಲ್ಲಿ ಪೂರ್ಣಗೊಂಡು ಲೋಕಾರ್ಪಣೆಗೊಳಲಿದೆ ಎಂದು ನೌ ಜವಾನ್ ಶೀರತ್ ಕಮಿಟಿ ಕಾರ್ಯದರ್ಶಿ ಉಮರಫಾರೂಕ ಪೆಂಡಾರಿ ಹೇಳಿದರು.

ಅಂಜುಮನ ಕಚೇರಿಯಲ್ಲಿ ಜರುಗಿದ ಪತ್ರಕರ್ತರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಬಾದಾಮಿ ಶಾಸಕರಾದ ಭೀಮಸೇನ ಚಿಮ್ಮನಕಟ್ಟಿ ಅವರು ಕಮಿಟಿ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಮ್ಮ ತಂದೆಯವರ ಕಾಲದಿಂದಲೂ ನಾವು ಅಲ್ಪಸಂಖ್ಯಾತರ ಜೊತೆಗಿದ್ದು ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿದೇವೆ. ನಮ್ಮ ಕುಟುಂಬ ಸಮುದಾಯ ಜನರ ಹಿತವನ್ನು ಬಯಸಿದೆ.ನಾನು ಸಹ ಈ ಸಮುದಾಯದ ಜನರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ. ಹಾಗೆ ನಿರ್ಮಾಣ ಹಂತದಲ್ಲಿರುವ ಶಾದಿ ಮಹಲಗೆ ಸರ್ಕಾರದಿಂದ ಬರಬಹುದಾದ ಅನುದಾನ ಒದಗಿಸುವಂತೆ ಶಾಸಕರು ನೀಡಿದ ಭರವಸೆ ಸಮುದಾಯಕ್ಕೆ ಸಂತಸದ ಜತೆಗೆ ಬಲ ನೀಡಿದೆ.ಪ್ರಸಕ್ತ ವರ್ಷದಲ್ಲಿ ಶಾದಿ ಮಹಲ್ ಉದ್ಘಾಟನೆ ಆಗುವುದು ನಿಶ್ಚಿತ ಎಂದರು.ಅಧ್ಯಕ್ಷ ಮೋದಿನಸಾಬ ದೊಡಕಟ್ಟಿ ಮಾತನಾಡಿ ಸಮುದಾಯದ ಅಭಿವೃದ್ಧಿಗೆ ಅಂಜುಮನ ಕಮಿಟಿ ಶ್ರಮಿಸುತ್ತಿದೆ.ಆರ್ಥಿಕವಾಗಿ ಹಿಂದುಳಿದ ಸಮುದಾಯದ ಜನರಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಹಾಯ ಸಹಕಾರ ನೀಡುತ್ತಾ ಬಂದಿದ್ದೇವೆ ಎಂದರು. ಮುಖಂಡ ರಫೀಕ್ ಪಿರಖಾನ ಮಾತನಾಡಿದರು.

ಉಪಾಧ್ಯಕ್ಷ ಇಸ್ಮಾಯಿಲಸಾಬ ಮುಲ್ಲಾ,ಪ್ರಮುಖರಾದ ಉಸ್ಮಾನಸಾಬ ಮುಲ್ಲಾ, ಸಾಹೇಬಲಾಲ್ ಜಾತಗೇರ, ಹುಸೇನಸಾಬ ನದಾಫ,ಕರೀಮಸಾಬ ದೊಡಮನಿ, ಪತ್ರಕರ್ತರಾದ ರಾಘವೇಂದ್ರ ಕಲಾದಗಿ, ಶ್ರೀಧರ ಚಂದರಗಿ, ಅಬುಬಕರ ಯಡಹಳ್ಳಿ,ಮಲ್ಲೇಶ ಮೆಡಿ ಇತರರಿದ್ದರು.

ನೌಜವಾನ್ ಶಿರತ ಕಮಿಟಿ ಕಚೇರಿಯಲ್ಲಿ ಪತ್ರಕರ್ತರನ್ನು ಸನ್ಮಾನಿಸಲಾಯಿತು.

ಸಹಕಾರಿ ರಂಗದಲ್ಲಿ ಜಾತಿ ರಾಜಕಾರಣ ಬೇಡ

ಬಾಗಲಕೋಟೆ: ಸಹಕಾರಿ ಸಂಘ ಜಾತಿ ಹಾಗೂ ರಾಜಕಾರಣದಿಂದ ಹೊರತಾಗಿರಬೇಕು. ಅಲ್ಲಿ ರಾಜಕಾರಣ ನುಸುಳಿದರೆ ಸಹಕಾರಿ ರಂಗ ಅಧೋಗತಿಗೆ ಇಳಿಯುತ್ತದೆ ಎಂದು ಹುನಗುಂದ ವಿಜಯ ಮಹಾಂತೇಶ ಸಹಕಾರಿ ಸಂಘದ ನಿರ್ದೇಶಕ ರಾಜು ನಾಡಗೌಡರ ಹೇಳಿದರು.

ಜಿಲ್ಲೆಯ ಅಮೀನಗಡದ ಶಂಕರ ಪುಣ್ಯಾಶ್ರಮದಲ್ಲಿ ಅಮೀನಗಡ ಗೆಳೆಯರ ಬಳಗದಿಂದ ಬ್ಯಾಂಕ್‌ಗೆ ನಿರ್ದೇಶಕರಾಗಿ ಹ್ಯಾಟ್ರಿಕ್ ಸಾಧನೆ ಮಾಡಿದ ನಿಮಿತ್ತ ಹಮ್ಮಿಕೊಂಡ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು. ನಮ್ಮೂರು ಕೆಲೂರ ಆದರೂ ಚುನಾವಣೆಯಲ್ಲಿ ಅಮೀನಗಡದ ಗೆಳೆಯರ ಸಹಕಾರ ಹೆಚ್ಚಿದೆ. ನನ್ನ ಗೆಲುವಿಗೆ ಅಮೀನಗಡ, ಸೂಳೇಬಾವಿ, ಕೆಲೂರ ಹಾಗೂ ಗುಡೂರ ಭಾಗದ ಶೇರ್‌ದಾರರು ಕೈ ಹಿಡಿದಿದ್ದಾರೆ. ಇವನಾರವ, ಇವನಾರವ ಎನ್ನದೆ ಮನೆಯ ಮಗನೆಂದು ತಿಳಿದು ಬೆಂಬಲಿಸಿದ್ದೀರಿ. ನಿಮ್ಮ ಪ್ರೀತಿ, ವಿಶ್ವಾಸ ಉಳಿಸಿಕೊಂಡು ಹೋಗುತ್ತೇನೆ ಎಂದು ಹೇಳಿದರು.

ಎಸ್ಸೆಸ್ಸಿ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಶಿವಕುಮಾರ ಹಿರೇಮಠ ಮಾತನಾಡಿ, ರಾಜಕೀಯ ಕ್ಷೇತ್ರವೂ ಸೇರಿದಂತೆ ಪ್ರತಿಯೊಂದು ಕ್ಷೇತ್ರವೂ ಗೊಂದಲಲ್ಲಿದೆ. ಇದೀಗ ಸಹಕಾರಿ ರಂಗವೂ ಅದಕ್ಕೆ ಹೊರತಾಗಿಲ್ಲ. ಒಂದು ಬಾರಿ ಅಧಿಕಾರಕ್ಕೆ ಅಂಟಿಕೊಂಡರೆ ಅದನ್ನು ಬಿಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಎಲ್ಲ ರಂಗದಲ್ಲೂ ಜಾತಿ, ಜನ, ಧನ, ತೋಳ್ಬಲ ಅಗತ್ಯವಾಗಿರುವ ಅಂಶಗಳಾಗಿವೆ ಎಂದು ವಿಷಾದ ವ್ಯಕ್ತಪಡಿಸಿದರು. ಬಿಜೆಪಿ ಮುಖಂಡ ಮಲ್ಲೇಶ ಬಿಜಾಪೂರ ಮಾತನಾಡಿದರು.

ಅಂಜುಮನ್ ಇಸ್ಲಾಂ ಸಮಿತಿ ಮಾಜಿ ಅಧ್ಯಕ್ಷ ಅಜ್ಮೀರ್ ಮುಲ್ಲಾ, ಪಪಂ ಸದಸ್ಯ ಬಾಬು ಛಬ್ಬಿ, ವಿಜಯಕುಮಾರ ಕನ್ನೂರ, ಗ್ರಾಪಂ ಮಾಜಿ ಅಧ್ಯಕ್ಷ ಜಗದೀಶ ಬಿಸಲದಿನ್ನಿ, ಪಪಂ ಮಾಜಿ ಸದಸ್ಯ ಮನೋಹರ ರಕ್ಕಸಗಿ, ಮುಖಂಡರಾದ ವಿಷ್ಣು ಗೌಡರ, ಶಿಕ್ಷಕ ವಿ.ಎನ್.ಪಾಟೀಲ ಮಾತನಾಡಿದರು. ಸುರೇಶ ಕಾಯಿ, ಮಂಜುನಾಥ ಬಂಡಿ, ಶಿವಕುಮಾರ ಆನೆಹೊಸೂರ, ಪಪಂ ಸದಸ್ಯ ತುಕಾರಾಮ ಲಮಾಣಿ, ಕಂದಾಯ ಇಲಾಖೆಯ ಜಂಬುನಾಥ ಚಿನಿವಾಲರ, ಪಪಂ ಮಾಜಿ ಅಧ್ಯಕ್ಷ ಸಂಗಪ್ಪ ತಳವಾರ, ಮಲ್ಲೇಶ ನಿಡಗುಂದಿ ಸೇರಿ ಇತರರಿದ್ದರು.

ಅಮೀನಗಡದಲ್ಲಿ ಗೆಳೆಯರ ಬಳಗದಿಂದ ಹುನಗುಂದ ವಿಮ ಬ್ಯಾಂಕ್‌ಗೆ ನಿರ್ದೇಶಕರಾಗಿ ಹ್ಯಾಟ್ರಿಕ್ ಸಾಧನೆ ಮಾಡಿದ ರಾಜು ನಾಡಗೌಡರನ್ನು ಸನ್ಮಾನಿಸಲಾಯಿತು.

ಪ್ರಥಮ ಕೆಡಿಪಿ ಸಭೆಯಲ್ಲಿ ಡಿಪೋ ಮ್ಯಾನೇಜರ್‌ಗೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ತರಾಟೆ

ಸಾರ್ವಜನಿಕರ ಸಮಸ್ಯೆ ಅರಿತು ಕೆಲಸ ಮಾಡಿ

ಗುಳೇದಗುಡ್ಡ: ಗುಳೇದಗುಡ್ಡ ಮಾರ್ಗದಿಂದ ಬಾಗಲಕೋಟೆ, ಕೆರೂರ, ಗ್ರಾಮೀಣ ಪ್ರದೇಶಗಳಿಗೆ ಸರಿಯಾಗಿ ಬಸ್ ವ್ಯವಸ್ಥೆ ಕಲ್ಪಿಸಿಲ್ಲ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಕಚೇರಿಯಲ್ಲಿ ಕುಳಿತು ಏನು ಮಡುತ್ತೀರಿ. ಪ್ರಯಾಣಿಕರ ಸಮಸ್ಯೆ ಅರಿತು ಕೆಲಸ ಮಾಡಿ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಗುಳೇದಗುಡ್ಡ ಡಿಪೋ ಮ್ಯಾನೇಜರ್ ವಿದ್ಯಾ ನಾಯಕ ಅವರನ್ನು ತರಾಟೆಗೆ ತೆಗೆದುಕೊಂಡರು.

ಪಟ್ಟಣದ ಗುರುಸಿದ್ದೇಶ್ವರ ಮಠದ ಸಭಾ ಭವನದಲ್ಲಿ ನಡೆದ ಪ್ರಥಮ ತಾಲೂಕು ಕೆಡಿಪಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಶಾಸಕರು, ಕೆಲವು ಪ್ರಮುಖ ಸ್ಥಳಗಳಿಗೆ ರೂಟ್ ಬಸ್‌ಗಳಿಲ್ಲ. ಗುಳೇದಗುಡ್ಡ ಹೈದರಾಬಾದ್, ಬಾದಾಮಿ ಡಿಪೋದವರು ಬಾದಾಮಿ ಪುಣಾ ಬಸ್ ಬಂದ್ ಮಾಡಿದ್ದೀರಿ. ಗುಳೇದಗುಡ್ಡದಿಂದ ಕೆರೂರ್ ಪಟ್ಟಣಕ್ಕೆ ಬಸ್ ಇಲ್ಲ. ಪ್ರಯಾಣಿಕರೊಂದಿಗೆ, ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ. ಸಾರ್ವಜನಿಕರ ಸೇವೆ ಮಾಡಿ, ನಿಮ್ಮ ಮೇಲೆ ಸಾರ್ವಜನಿಕರ ದೂರುಗಳಿವೆ. ಮುಂದಿನ ಕೆಡಿಪಿ ಸಭೆಯೊಳಗೆ ಹೇಳಿದ ಕೆಲಸ ಮಾಡದಿದ್ದರೆ ನೋಟಿಸ್ ನೀಡಲಾಗುವದು ಎಂದು ಎಚ್ಚರಿಸಿದರು.

ಕೇವಲ ಶಾಸಕರು, ಬಿಇಓ ಮಾತ್ರ ಶಾಲೆಗಳಿಗೆ ಭೇಟಿ ನೀಡುವುದಲ್ಲ, ತಾಲೂಕಿನ ಎಲ್ಲಾ ಸರಕಾರಿ ಅಧಿಕಾರಿಗಳು, ತಹಸೀಲ್ದಾರರು, ತಾಪಂ ಇಓ ಹಾಗೂ ಇಲಾಖಾ ಅಭಿಯಂತರರು ಸರಕಾರಿ ಆಸ್ಪತ್ರೆ, ಪಿಎಚ್‌ಪಿ ಹಾಗೂ ಸರಕಾರಿ ಶಾಲೆಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಪರಿಶೀಲನೆ ಮಾಡಿದರೆ ಎಲ್ಲರೂ ಕೂಡಿ ಸಮಸ್ಯೆಗಳನ್ನು ಪರಿಹರಿಸಬಹುದು. ಆಸ್ಪತ್ರೆ ಹಾಗೂ ಸರಕಾರಿ ಶಾಲೆಗೆ ಭೇಟಿ ನೀಡಿ ನನಗೆ ವರದಿ ನೀಡಿ ಎಂದರು. .

ವೇದಿಕೆ ಮೇಲೆ ಬಾದಾಮಿ ತಹಸೀಲ್ದಾರ್ ಮಧುರಾಜ ಕೂಡಲಗಿ, ಗುಳೇದಗುಡ್ಡ ತಹಸೀಲ್ದಾರ್ ಮಂಗಳಾ ಎಂ. ಗುಳೇದಗುಡ್ಡ ತಾಪಂ ಇಓ ಮಲ್ಲಿಕಾರ್ಜುನ ಬಡಿಗೇರ, ಬಾದಾಮಿ ತಾಪಂ ಇಓ ಸುರೇಶ ಕೊಕರೆ, ತಾಲೂಕು ಉಸ್ತುವಾರಿ ಅಧಿಕಾರಿ ಶಿವಾನಂದ ಸಾಗರ, ಕೆಡಿಪಿ ಸಭೆಯ ಸದಸ್ಯರಾದ ಕೈಲಾಸ ಕುಂಬಾರ, ಪ್ರಕಾಶ ಮುರಗೋಡ, ಲೆಂಕೆಪ್ಪ ಹಿರೇಕುರುಬರ, ಸೈಯದ್‌ಸಾಬ ಖಾಜಿ, ಗೋಪಾಲ ಜಾಧವ, ಲತಾ ತಾಪಡಿಯಾ ಇದ್ದರು.

ಗುಳೇದಗುಡ್ಡ ಪಟ್ಟಣದಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿಯವರ ಅಧ್ಯಕ್ಷತೆಯಲ್ಲಿ ಪ್ರಥಮ ಕೆಡಿಪಿ ಸಭೆ ನಡೆಯಿತು.

ಬೇಸಿಗೆ ಸಮೀಪಿಸುತ್ತಿದ್ದು ಮತಕ್ಷೇತ್ರದ ಯಾವುದೇ ಹಳ್ಳಿಗೂ ಕುಡಿಯುವ ನೀರಿನ ಸಮಸ್ಯೆ ಯಾಗದಂತೆ ಈಗಾಗಲೇ ಸಿದ್ಧತೆ ಮಾಡಿಕೊಳ್ಳಿ. ಗ್ರಾಮೀಣ ಪ್ರದೇಶದ ಜನತೆಗೆ ಕುಡಿಯುವ ನೀರಿನ ಸಮಸ್ಯೆಯಾಗುವಂತಿಲ್ಲ. ಅನುದಾನ ಇಲ್ಲವೆಂದು ನೆಪ ಹೇಳಬೇಡಿ

- ಭೀಮಸೇನ ಚಿಮ್ಮನಕಟ್ಟಿ, ಶಾಸಕರು

ಆರೋಗ್ಯ ರಕ್ಷಣೆ ಕುರಿತು ಜನಜಾಗೃತಿ

ಬೀಳಗಿ: ಸಾಂಕ್ರಾಮಿಕ ರೋಗಗಳನ್ನು, ತಾಯಿ ಮತ್ತು ಶಿಶು ಮರಣ ತಡೆಗಟ್ಟುವದು, ಅನೀಮಿಯ ಮುಕ್ತ ಭಾರತ ಪ್ರಧಾನ ಮಂತ್ರಿ ಮಾತೃತ್ವ ಅಭಿಯಾನ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ವಿಷಯಗಳ ಕುರಿತು ಎನ್‌ಎಚ್‌ಎಂ ಯೋಜನೆಯಡಿ ಜನಪದ ಗೀತೆಗಳು ಹಾಗೂ ಬೀದಿ ನಾಟಕ ಮೂಲಕ ಜನ ಜಾಗೃತಿ ಮೂಡಿಸುತ್ತಿದೆ ಎಂದು ಗೌರಿ ಗಣೇಶ ಸಾಂಸ್ಕೃತಿಕ ಕಲಾ ಗ್ರಾಮೀಣ ಅಭಿವೃದ್ಧಿ ಸಂಘದ ಅಧ್ಯಕ್ಷೆ ಪವಿತ್ರಾ, ಜಕ್ಕಪ್ಪನವರ ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಲು ಕರೆ ನೀಡಿದರು.

ಪಟ್ಟಣದ ತಾಲೂಕು ಆಸ್ಪತ್ರೆ, ಆವರಣದಲ್ಲಿ ಆರೋಗ್ಯದ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಹಾಗೂ ತಾಲೂಕು ಆಸ್ಪತ್ರೆ, ಗೌರಿ ಗಣೇಶ ಸಾಂಸ್ಕೃತಿಕ ಕಲಾ ಮತ್ತು ಗ್ರಾಮೀಣ ಅಭಿವೃದ್ಧಿ ಸಂಘ ನಾಗರಾಳ ಇವರ ಸಹಯೋಗದಲ್ಲಿ ಜರುಗಿದ ಆರೋಗ್ಯ ಕುರಿತು ಜನಪದ ಹಾಗೂ ಬೀದಿ ನಾಟಕಗಳ ಜನ ಜಾಗೃತಿ ಕಾರ್ಯಕ್ರಮ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು.

ತಾಲೂಕಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಸಂಜಯ ಯಡಹಳ್ಳಿ ಮಾತನಾಡಿ, ಸಾರ್ವಜನಿಕರು ಆರೋಗ್ಯ ಸಂರಕ್ಷಣೆಗಾಗಿ ಸರಕಾರದ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು ಅವುಗಳನ್ನು ಕಲಾ ತಂಡಗಳ ಹಾಡುಗಳ ಹಾಗೂ ಬೀದಿ ನಾಟಕಗಳ ಮೂಲಕ ಜನ ಜಾಗೃತಿ ಮೂಡಿಸುತ್ತಿರುವ ಕಲಾವಿದರ ಶ್ಲಾಘನೀಯವಾದುದು ಎಂದರು.

ಈ ಕಾರ್ಯಕ್ರಮದಲ್ಲಿ ನಿಂಗಪ್ಪ ಸೋಲಾಪುರ, ಲಕ್ಕನಗೌಡ ಮರಿಗೌಡರ, ರವಿ ಪವಾರ, ಆರೋಗ್ಯ ಇಲಾಖೆ ಸಿಬಂದ್ದಿ , ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಆರೋಗ್ಯ ರಕ್ಷಣೆಗಾಗಿ ಸರಕಾರದ ಸೌಲತ್ತು ಕುರಿತು ಜನ ಜಾಗೃತಿ ಕಾರ್ಯಕ್ರಮಕ್ಕೆ ಪವಿತ್ರಾ, ಜಕ್ಕಪ್ಪನವರ ಚಾಲನೆ ನೀಡಿದರು.

ಶಾಲೆಯಲ್ಲಿ ಮಕ್ಕಳ ಸಂತೆ ಯಶಸ್ವಿ

ಬಾದಾಮಿ: ಮಕ್ಕಳ ಸಂತೆಯಿಂದ ಶಾಲಾ ಮಕ್ಕಳಲ್ಲಿ ವ್ಯವಹಾರಿಕ ಜ್ಞಾನ ಬೆಳೆಯಲು ಸಹಕಾರಿಯಾಗಿದೆ ಎಂದು ಪತ್ರಕರ್ತ ಬಸವರಾಜ್ ಉಳ್ಳಾಗಡ್ಡಿ ಹೇಳಿದರು.

ಕಾರ್ಯಕ್ರಮದ ಉದ್ಘಾಟನೆ ಮಾಡಿದ ಕಿತ್ತೂರ ಚನ್ನಮ್ಮ ಹಿರಿಯ ಪ್ರಾಥಮಿಕ ಶಾಲೆಯ ಆಡಳಿತಾಧಿಕಾರಿ ಹಾಗೂ ಪತ್ರಕರ್ತ ಬಸವರಾಜ್ ಉಳ್ಳಾಗಡ್ಡಿ ಮಾತನಾಡಿ, ಚಿಕ್ಕಮಕ್ಕಳಲ್ಲಿ ವ್ಯವಹಾರಿಕ ಜ್ಞಾನ ಬೆಳೆಯಲಿ ಮತ್ತು ಗಣಿತದ ಬಗ್ಗೆ ಅರಿವು ಮೂಡಲಿ ಎಂಬ ಉದ್ದೇಶದಿಂದ ಶಾಲಾ ಶಿಕ್ಷಣ ಇಲಾಖೆಯ ಆದೇಶದಂತೆ ಮಕ್ಕಳ ಸಂತೆ ನಡೆಯಿತು ಎಂದರು.

ಶ್ರೀ ಮಹಾಕೂಟೇಶ್ವರ ಶಾಲೆಯ ಆವರಣದಲ್ಲಿ ಪಾಲಕರಿಗೆ, ಸಾರ್ವಜನಿಕರಿಗೆ ಮಾರಾಟ ಮಾಡಿ ಗಮನ ಸೆಳೆದರು. ಶಾಲೆಯ ಪಾಲಕರು ತಮಗೆ ಬೇಕಾದ ದಿನನಿತ್ಯಕ್ಕೆ ಬೇಕಾದ ಈರುಳ್ಳಿ, ಮೆಣಸಿನಕಾಯಿ, ಟೊಮೊಟೊ, ಹೀರಿಕಾಯಿ ಇದಲ್ಲದೇ ಜನರ ತಿನಸಿಗಳಾದ ಪಾಣೆಮರಿ ವಡಾ ಪಾವ್, ಸಮೋಸಾ ಸಹಿತ ವ್ಯಾಪಾರ ಮಾಡಿದರು. ಬಹಳಷ್ಟು ಜನರು ಖರೀದಿ ಮಾಡಿದರು. ಕಾರ್ಯಕ್ರಮದಲ್ಲಿ ಮಹಾಕೂಟೇಶ್ವರ ಶಾಲೆಯ ಅಧ್ಯಕ್ಷ ವೊಜಯ ಕೊಪ್ಪದ, ವಿಶ್ವಭಾರತಿ ಪಬ್ಲಿಕ್ ಶಾಲೆಯ ಅಧ್ಯಕ್ಷ ಸಂಗಮೇಶ ಕಂಬಾರ, ಮಹಾಕೂಟೇಶ್ವರ ಶಾಲೆಯ ಆಡಳಿತಾಧಿಕಾರಿ ವಿಕ್ರಮ ಕೊಪ್ಪದ, ಬಸವರಾಜ್ ಕೊಪ್ಪದ, ಗುರುಮಾತೆ ಸಾವಿತ್ರಿ, ಸಹಶಿಕ್ಷಕರು. ಸಿಬ್ಬಂದಿಗಳು ಭಾಗವಹಿ ಸಿದ್ದರು ಪಾಲಕರು ವಸ್ತುಗಳನ್ನು ಮಕ್ಕಳ ಸಂತೆಯಲ್ಲಿ ಖರೀದಿ ಮಾಡಿದರು.

ಜಾಲಿಹಾಳ ಸಿದ್ದೇಶ್ವರ ಪತ್ತಿನ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಕಟ್ಟಡಕ್ಕೆ ಪಿ.ಸಿ.ಗದ್ದಿಗೌಡರ ಚಾಲನೆ

ಪರಸ್ಪರ ವಿಶ್ವಾಸಗಳಿಂದ ಸಹಕಾರಿ ಸಂಘಗಳ ಅಭಿವೃದ್ಧಿ ಸಾಧ್ಯ

ಬಾದಾಮಿ: ಪರಸ್ಪರ ಸಹಕಾರ ನಂಬಿಕೆ, ವಿಶ್ವಾಸಗಳಿಂದ ಸಹಕಾರಿ ಸಂಘಗಳು ಅಭಿವೃದ್ಧಿ ಹೊಂದಲು ಸಾಧ್ಯ ಆಡಳಿತ ಮಂಡಳಿ ಅತ್ಯಂತ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿದಾಗ ಮಾತ್ರ ಸಹಕಾರಿ ಸಂಘಗಳು ಯಶಸ್ವಿ ಹೊಂದಲು ಸಾಧ್ಯ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ಗುರುವಾರ ತಾಲೂಕಿನ ಜಾಲಿಹಾಳ ಗ್ರಾಮದ ಶ್ರೀ ಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಇದರ ನೂತನ ಕಟ್ಟಡ ಹಾಗೂ ರಜತ ಮಹೋತ್ಸವದ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಂಘದ ಅಧ್ಯಕ್ಷರ ಸಹಕಾರ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿ ಬ್ಯಾಂಕಿನ ಹಿತವನ್ನು ಕಾಪಾಡಿದ್ದರಿಂದ ಇಂದು 25 ವರ್ಷದ ರಜತ ಮಹೋತ್ಸವ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದೆ. ಸಹಕಾರಿ ತತ್ವದ ಮೇಲೆ ಕಾನೂನು ಚೌಕಟ್ಟಿನಲ್ಲಿ ಸಾಲ ದೊರೆಯುತ್ತದೆ ಸಾಲಗಾರರು ಸಕಾಲಕ್ಕೆ ಮರು ಪಾವತಿಸುವ ಮೂಲಕ ಬ್ಯಾಂಕಿನ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಸಲಹೆ ನೀಡಿದರು. ಮಾಜಿ ಶಾಸಕ ರಾಜಶೇಖರ ಮಾತನಾಡಿ ಸಿದ್ದೇಶ್ವರ ಪತ್ತಿನ ಸೌಹಾರ್ಧ ಸಹಕಾರಿ ಸಂಘ ಶಾಂತಗೌಡ ಅವರ ಅಧ್ಯಕ್ಷತೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿ. ಯಾವದೇ ಒಂದು ಹಣಕಾಸು ಸಂಸ್ಥೆ ಅಭಿವೃದ್ಧಿಯಾಗಲು ಸಾರ್ವಜನಿಕರ ಸಹಕಾರ ಬಹಳ ಮುಖ್ಯವಾಗಿದೆ ಸಾಲ ಪಡೆದವರು ಸಕಾಲಕ್ಕೆ ಸಾಲ ಮರು ಪಾವತಿ ಮಾಡಬೇಕು ಎಂದು ಹೇಳಿದರು.

ಶ್ರೀ ಸಿದ್ದೇಶ್ವರ ಬ್ಯಾಂಕಿನ ಅಧ್ಯಕ್ಷ ಶಾಂತಗೌಡ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಲಪ್ರಭಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಪಿ.ಹಳ್ಳೂರ ಗಣಕಯಂತ್ರ ಉದ್ಘಾಟಿಸಿದರು. ಪಿ.ಎಲ್.ಡಿ ಬ್ಯಾಂಕಿನ ಅಧ್ಯಕ್ಷ ಮಹಾಂತೇಶ ಮಮದಾಪೂರ, ಮಾಜಿ ಜಿ.ಪಂ.ಉಪಾಧ್ಯಕ್ಷ ಹನಮಂತ ಮಾವಿನಮರದ ಮಾತನಾಡಿದರು. ಗುಳೇದಗುಡ್ಡ ಮರಡಿಮಠ ಒಪ್ಪತ್ತೇಶ್ವರ ಮಹಾಸ್ವಾಮಿಗಳು, ರೋಣ ಗುಲಗಂಜಿಮಠದ ಗುರುಪಾದ ಮಹಾಸ್ವಾಮಿಗಳು, ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಹೊನ್ನಯ್ಯ ಹಿರೇಮಠ, ಉಪಾಧ್ಯಕ್ಷ ಅಂದಾನಗೌಡ ಗೌಡರ, ಗ್ರಾ.ಪಂ. ಅಧ್ಯಕ್ಷೆ ಜಯಶ್ರೀಪಾಟಿಲ, ಬೇಲೂರ ಗ್ರಾ.ಪಂ. ಅಧ್ಯಕ್ಷೆ ನೇತ್ರಾ ಮದಕಟ್ಟಿ, ಸರ್ಜಾಪೂರ ಶರಣಗೌಡ ಪಾಟಿಲ, ಸಹಕಾರ ಸಂಘಗಳ ಉಪನಿಬಂಧಕ ದಾನಯ್ಯ ಹಿರೇಮಠ, ಸಹಕಾರಿ ಯೂನಿಯನ್ ಬ್ಯಾಂಕ ನಿರ್ದೇಶಕ ವಿರೇಶ ಬದ್ರಗೌಡ್ರ, ಸಂಪತ್‌ಕುಮಾರ ರಾಠಿ, ನಿರ್ದೇಶಕರಾದ ಗಂಗಾಧರ ಮೂಲಿಮನಿ, ಆಸಂಗೆಪ್ಪ ಹೊಸಮನಿ, ಪ್ರಕಾಶ ಹಂಚಾಟೆ, ಅಬ್ದುಲರಜಾಕ ಬಾಗವಾನ, ಮೋಹನದಾಸ ನಾಗರಾಳ, ಶ್ರೀಕಾಂತ ಖಾಸನೀಸ್, ಮಲ್ಲಪ್ಪ ಮಣ್ಣೇರಿ, ರೇಣುಕಾ ಗಿರತಿಮ್ಮನ್ನವರ, ಶಾಂತಾ ಇಟಗಿ, ನಿರ್ಮಲಾ ಕರಿಯಣ್ಣವರ, ರಾಮಣ್ಣ ಲಮಾಣಿ, ಹನಮಂತ ಪೂಜಾರ ಸೇರಿದಂತೆ ಸಿಬ್ಬಂದಿ ಇದ್ದರು.

ತಾಲೂಕಿನ ಜಾಲಿಹಾಳದ ಶ್ರೀ ಸಿದ್ದೇಶ್ವರ ಪತ್ತಿನ ಸೌಹಾರ್ಧ ಸಹಕಾರಿ ಸಂಘ ನಿ. ಇದರ ನೂತನ ಕಟ್ಟಡದ ಸಮಾರಂಭದ ಉದ್ಘಾಟನೆಯನ್ನು ಸಂಸದ ಪಿ.ಸಿ.ಗದ್ದಿಗೌಡರ ಮಾಡಿದರು.

ಚಿತ್ತವಿಹಾರ

ಸಹಾನುಭೂತಿ ಇರಲಿ

ಮನುಷ್ಯ ತನ್ನ ಸುತ್ತಮುತ್ತಲಿರುವ ಜನರೊಡನೆ ತನ್ನನ್ನು ಹೋಲಿಸಿಕೊಂಡು ತನ್ನಲ್ಲಿ ಇಲ್ಲದಿರುವ ಬಗ್ಗೆ ಬೇಸರ ಪಟ್ಟುಕೊಳ್ಳುವನು. ಇತರರಿಗೆ ದೊರೆತ ಕೀರ್ತಿ, ಅಧಿಕಾರ, ಹಣ, ಅಂತಸ್ತು ತನಗೆ ದೊರೆತಿಲ್ಲ ಎಂದು ವ್ಯಥೆ ಪಡುವನು. ಇದು ತಪ್ಪು. ನಾವೂ ನಮ್ಮನ್ನು ಇನ್ನೊಬ್ಬರ ಜೊತೆ ಹೋಲಿಕೆ ಮಾಡಿಕೊಳ್ಳಬಾರದು. ನಮ್ಮ ಜೀವನದ ದಾರಿ ನಮಗೆ. ನಮ್ಮ ಗುಣಗಳು ನಮ್ಮ ಸ್ವತ್ತು. ನಮ್ಮ ಬದುಕಿನ ಪಯಣದ ಮಿತಿಯಲ್ಲಿ ನ್ಯಾಯಯುತವಾಗಿ ಯಾರಿಗೂ ಅಹಿತ ಬಯಸದೇ ಎಲ್ಲರೊಳಗೆ ಒಂದಾಗಿ ನಯ, ವಿನಯ ರೂಢಿಸಿಕೊಂಡು ಬದುಕಬೇಕಾದದ್ದು ಇಂದಿನ ಅಗತ್ಯ. ಹಣವುಳ್ಳವರು, ಅಧಿಕಾರ ಇರುವವರು, ಆರ್ಥಿಕವಾಗಿ ಬಲಿಷ್ಠ ಇರುವವರು ಸಾಕಷ್ಟು ಸಿರಿವಂತಿಕೆ ಬದುಕನ್ನು ನಡೆಸುವವರು. ಆದರೆ ಬಡವರು ಅನೇಕ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಂಕಷ್ಟ ಪಡುವರು. ಹೀಗಾಗಿ ನಾವೂ ನಿಷ್ಠೆ ಯಿಂದ ಕಾಯಕ ಮಾಡುತ್ತಾ ಇರುವದರಲ್ಲಿ ತೃಪ್ತಿ ಜೀವನ ನಡೆಸಬೇಕು ಎಂಬ ಸಂದೇಶ ಈ ವಚನ ಒಳಗೊಂಡಿದೆ.

ಇತ್ತೀಚಿಗೆ ಮನುಷ್ಯರಲ್ಲಿ ಅನುಭೂತಿ, ಸಹಾನುಭೂತಿ ಈ ಎರಡೂ ಗುಣಗಳು ಕಡಿಮೆಯಾಗುತ್ತಿವೆ. ಅದರಲ್ಲಿಯೂ ಸಹಾನುಭೂತಿ ಗುಣ ಎಲ್ಲರಲ್ಲಿ ಮನೆ ಮಾಡಬೇಕಿದೆ. ಸಹಾನುಭೂತಿ ಎಂದರೆ ಇನ್ನೊಬ್ಬರ ಸ್ಥಾನದಲ್ಲಿ ನಿಂತು ನಾವೂ ಚಿಂತಿಸುವ , ಪ್ರತಿಸ್ಪಂದಿಸುವ ಒಂದು ಮನೋಗುಣ. ಸಹಾನುಭೂತಿ ಗುಣ ಇರುವ ಮನುಷ್ಯ ಹಮ್ಮು ಬಿಮ್ಮು ಇಲ್ಲದೇ ಸರಳ ಸಾದಾ ಜೀವನ ನಡೆಸಲು ಬಯಸುವವನು. ಅಧಿಕಾರ , ಹಣ , ಅಂತಸ್ತು ದೊರೆತರೂ ಅದರ ಮೋಹ ಹತ್ತಿಸಿಕೊಳ್ಳರು. ಪ್ರತಿಯೊಬ್ಬರ ಕಷ್ಟಗಳಿಗೆ ನೆರವಾಗಿ ತಮ್ಮ ಕೈಲಾದ ಸಹಾಯ ಮಾಡುವರು. ಸಹಕಾರ , ತ್ಯಾಗ ಗುಣ ಅಳವಡಿಸಿಕೊಳ್ಳುವರು. ಹೀಗಾಗಿ ಸಹಾನುಭೂತಿ ಇಂದಿನ ಅಗತ್ಯವಾದ ಗುಣವಾಗಿದೆ. ಸಹಾನುಭೂತಿ ಗುಣ ಅಳವಡಿಸಿಕೊಳ್ಳಲು ದೊಡ್ಡವರೇ ಆಗಿರಬೇಕೆಂದಿಲ್ಲ, ಸಾಕಷ್ಟು ಓದಿರಬೇಕೆಂತಿಲ್ಲ, ಅಧಿಕಾರ, ಹಣ ಹೊಂದಿರಬೇಕಂತಿಲ್ಲ. ಒಳ್ಳೆಯ ಮನಸ್ಸು. ಎದುರುಗಡೆ ಇರುವ ವ್ಯಕ್ತಿಯ ಗುಣಕ್ಕೆ ಪ್ರತಿಸ್ಪಂದಿಸುವ, ನೆರೆಯ ವ್ಯಕ್ತಿಯ ಸಮಸ್ಯೆ ತನ್ನದೇ ಸಮಸ್ಯೆ ಎಂದು ತಿಳಿಯುವ ಮನೋ ವೈಶಾಲ್ಯತೆ ಇದ್ರೆ ಸಾಕು. ಹಲವಾರು ಸಂದರ್ಭಗಳಲ್ಲಿ ಈ ಮನೋ ವೈಶಾಲ್ಯ ಫಿತೆ ಮಕ್ಕಳಲ್ಲಿಯೂ ಕಾಣಬಹುದು.

ಇಂದು ಒತ್ತಡದ ಬದುಕಿನಲ್ಲಿ ನಾವೆಲ್ಲಾ ತುಂಬಾ ಮುಳುಗಿ ಬಿಟ್ಟಿದ್ದೇವೆ. ಸ್ವಾರ್ಥ ಅನೇಕರನ್ನು ಆಕ್ರಮಿಸಿಕೊಳ್ಳುತ್ತಿದೆ. ನಾನು ನಾನು ಎಂಬ ಅಹಂ ಮನೆ ಮಾಡುತ್ತಿದೆ. ನಾವೂ ಎಂಬ ವಿಶಾಲತೆ ಕಡಿಮೆ ಯಾಗುತ್ತಿದೆ. ಹಂಚಿ ತಿನ್ನುವ ಸಂಸ್ಕೃತಿ ನಶಿಸುತ್ತಿದೆ ಎಂಬ ಭಾವ ಉಂಟಾಗುತ್ತಿದೆ. ಇದಾಗಬಾರದು ಎಂದರೆ ಸಹನೆ, ತಾಳ್ಮೆ , ಮಮಕಾರ ಈ ರೀತಿಯ ಗುಣಗಳ ಜೊತೆ ಪ್ರತಿಯೊಬ್ಬರೂ ಸಹಾನುಭೂತಿ ಗುಣವನ್ನು ರೂಢಿಸಿಕೊಳ್ಳಬೇಕು. ಇನ್ನೊಬ್ಬರ ನೋವಿಗೆ, ಇನ್ನೊಬ್ಬರ ಕಷ್ಟಕ್ಕೆ ಸ್ಪಂದಿಸುವ ಗುಣ ಬೆಳೆಸಿಕೊಳ್ಳಬೇಕಿದೆ. ಆ ಚಿತ್ರದಿಂದ ನಾವೂ ಪಾಠ ಕಲಿಯಬೇಕಿದೆ. ಸಾವಿರ ಪದಗಳು ಹೇಳುವ ವಿಷಯವನ್ನು ಒಂದು ಚಿತ್ರ ಹೇಳುತ್ತದೆ ಎಂಬ ಮಾತು ಸತ್ಯ.ಸಹಾನುಭೂತಿ ಗುಣ ರೂಢಿಸಿಕೊಳ್ಳೋಣ.

• ರಂಗನಾಥ ಎನ್ ವಾಲ್ಮೀಕಿ

ಹನಿಮಳೆ

ಮೆಟ್ರೋ ದರ

ಸಮಯ ಉಳಿಸಿತ್ತು
ಈ ನಮ್ಮ ಮೆಟ್ರೊ
ಸಂಚಾರ ಸಮಸ್ಯೆ ದೂರ ಮಾಡಿ
ಓಡುತಲಿದೆ ದರ ಏರಿಸಿ
ಸಾಮಾನ್ಯನನ್ನು ದೂರ ಮಾಡಿ

• ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ
ಮಠದ ಹತ್ತಿರ, ಬಿಇಎಂಎಲ್
ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098

ಇ-ಮೇಲ್
vishwavanimagazine
@gmail.com

ಇದೊಂದು ಉಪ್ಪಿನ ಕೋಟೆ!

ಉಪ್ಪನ್ನು ಉತ್ಪಾದಿಸಿ, ರಫ್ತು ಮಾಡಿ ಈ ನಗರದ ಶ್ರೀಮಂತಿಕೆ ವೃದ್ಧಿಸಿದ್ದರಿಂದಾಗಿ, ನಗರದ ಹೆಸರನ್ನೇ ಉಪ್ಪಿನ ಕೋಟೆ ಎಂದು ಇರಿಸಿದ್ದಾರೆ! ಇಲ್ಲಿನ ಕಟ್ಟಡಗಳು, ನದಿ, ಹಿಮ ಪರ್ವತಗಳ ನೋಟ ಎಲ್ಲವೂ ಇದನ್ನು ಒಂದು ಪ್ರವಾಸಿ ತಾಣವನ್ನಾಗಿಸಿದೆ.

• ಪ್ರಹ್ಲಾದ ಪರ್ವತಿ

ಯುರೋಪ್‌ನಲ್ಲಿನ ನಮ್ಮ ಪ್ರವಾಸದಲ್ಲಿ ಜರ್ಮನಿಯ ಗಡಿಭಾಗದ ಸಾಲ್ಜ್ ಬರ್ಗ್ ನಗರಕ್ಕೆ ಭೇಟಿ ನೀಡಿದ್ದು ಮರೆಯಲಾರದ ಅನುಭವ. ಹಿಮದ ಕೀರಿಟ ಹೊತ್ತು ಆಲ್ಪ್ಸ್ ಮಡಿಲಲ್ಲಿ ಪವಡಿಸಿರುವ ಈ ನಗರವು,ಬರೋಕ್ ವಾಸ್ತುಶಿಲ್ಪ, ಇತಿಹಾಸ, ಸಂಗೀತ ಮತ್ತು ಶ್ರೀಮಂತ ಪರಂಪರೆಯಿಂದ ಪ್ರವಾಸಿ ಗರನ್ನು ಕೈ ಬೀಸಿ ಕರೆಯುತ್ತದೆ. ಹಸಿರು ಹುಲ್ಲುಗಾವಲು, ಸ್ವಚ್ಛ ನೀರಿನ ಕಡಲು, ಆಲ್ಪ್ಸ್ ಪ್ರಕೃತಿ ಸೌಂದರ್ಯ, ವಾಸ್ತು ಶಿಲ್ಪ, ಕೋಟೆ, ಅರಮನೆ, 3 ವಿಶ್ವವಿದ್ಯಾಲಯಗಳು, ಉಪ್ಪಿನ ಗಣಿಗಳು, ಕ್ಯಾಥೇಡ್ರಲ್, ಸಂಗೀತ,ಯುನೆಸ್ಕೋ ವಿಶ್ವ ಪರಂಪರೆಯ ತಾಣ....ಹೀಗೆ ಹತ್ತು ಹಲವು ವೈಶಿಷ್ಟ್ಯತೆಗಳನ್ನು ಹೊಂದಿರುವ ಸಾಲ್ಜ್ ಬರ್ಗ್, ಆಸ್ಟ್ರಿಯಾ ದೇಶದ ನಾಲ್ಕನೆಯ ದೊಡ್ಡ ನಗರ.

ಉಪ್ಪಿನ ಕೋಟೆ

ನಗರದ ಹೆಸರಿನ ಅರ್ಥ ಉಪ್ಪಿನ ಕೋಟೆ ಎಂದು! ಪ್ರಮುಖ ಆದಾಯದ ಮೂಲವಾಗಿದ್ದ ಉಪ್ಪಿನ ವ್ಯಾಪಾರದಿಂದ ಸ್ಥಳೀಯರು ಪ್ರಗತಿಹೊಂದಿದ್ದರಿಂದ, ಈ ನಗರಕ್ಕೆ ಸಾಲ್ಜ್ ಬರ್ಗ್ (ಉಪ್ಪಿನ ಕೋಟೆ) ಎಂಬ ಹೆಸರು! ಜರ್ಮನ್ ಭಾಷೆಯಲ್ಲಿ ಸಾಲ್ಜ್-ಉಪ್ಪು, ಬರ್ಗ್-ಕೋಟೆ ಎಂದರ್ಥ. ಸಾಲ್ಜಾಕ್ ನದಿಯಲ್ಲಿ ದೋಣಿ ಮೂಲಕ ಉಪ್ಪನ್ನು ಸಾಗಿಸುತ್ತಿದ್ದುದರಿಂದ ಆ ಹೆಸರು. ಇದರೊಂದಿಗೆ ಚಿನ್ನದ ಗಣಿಗಾರಿಕೆಯೂ ಇತ್ತು. ಉಪ್ಪು ಈ ನಗರವನ್ನು ಶ್ರೀಮಂತ ಗೊಳಿಸಿತು, ಅದರ ನಿವಾಸಿಗಳು ಊರನ್ನು ಪ್ರಸಿದ್ಧಗೊಳಿಸಿದರು ಎಂಬ ಮಾತಿದೆ.

ಸಾಲ್ಜಬರ್ಗ್ ಇತಿಹಾಸವು ರೋಮನ್ ಯುಗಕ್ಕೆ ಹಿಂದಿನದು. ಇದನ್ನು ಐವಾವುಮ್ ಎಂದು ಕರೆಯಲಾಗಿತ್ತು. ಎಂಟನೆಯ ಶತಮಾನದ ಮೊದಲು ಈ ಪ್ರದೇಶದಲ್ಲಿ ಸೆಲ್ಟಿಕ್ ಮತ್ತು ರೋಮನ್ ಜನರು ವಾಸಿಸುತ್ತಿದ್ದರು. ಇದನ್ನು ಸಾ.ಶ.696ರಲ್ಲಿ ಧರ್ಮಾಧ್ಯಕ್ಷರ (ಎಪಿಸ್ಕೋಪಲ್ ಸೀ) ಸ್ಥಾನವಾಗಿ ಸ್ಥಾಪಿಸಲಾಗಿತ್ತು. 798ರಲ್ಲಿ ಆರ್ಚ ಬಿಷಪ್‌ರ ಸ್ಥಾನವಾಗಿ, ರೋಮನ್ ಸಾಮ್ರಾಜ್ಯದ ರಾಜಕುಮಾರ ರರೂ ಆಗಿದ್ದ ಆರ್ಚ ಬಿಷಪ್ ನಿಂದ ಆಳಲ್ಪಟ್ಟ ಚರ್ಚಿನ ಸಂಸ್ಥಾನ ವಾಗಿದ್ದ ಈ ಸ್ಥಳವು, ಸುಧಾರಣೆ ಕೇಂದ್ರವಾಗಿತ್ತು; ಹದಿನೇಳನೇ ಶತಮಾನದಲ್ಲಿ ಅನೇಕ ಬರೋಕ್ ಚರ್ಚುಗಳು ಮತ್ತು ಮಾನಸ್ಟರೀಗಳು ನಿರ್ಮಾಣವಾದವು. ಈ ನಗರದ ಮಧ್ಯೆ ಸಾಲ್ಜಾಕ್ ನದಿ ಹರಿಯುತ್ತದೆ. ನದಿಯ ಎಡ ದಂಡೆಯಲ್ಲಿರುವ ಹಳೆಯ ಪಟ್ಟಣ (ಆಲ್ಟ್ ಸ್ಟಾಡ್''ದಲ್ಲಿ ಮಧ್ಯಕಾಲೀನ ಹಾಗೂ ಬರೋಕ್ ಅವಧಿಯ ಮೂಲ ಲೇಔಟ್ ಮತ್ತು ಸ್ಮಾರಕಗಳನ್ನು ಸಂರಕ್ಷಿಸಲಾಗಿದ್ದು, ಇದು ಯುನೆಸ್ಕೋ ವಿಶ್ವ ಪರಂಪರೆಯ (1996) ತಾಣಗಳ ಪಟ್ಟಿಯಲ್ಲಿದೆ.

ಹೊಸ ಪಟ್ಟಣ

ನದಿಯ ಬಲದಡದಲ್ಲಿರುವ 19 ನೇ ಶತಮಾನದ ಹೊಸ ಪಟ್ಟಣ (ನ್ಯೂ ಸ್ಟಾಡ್)ದಲ್ಲಿ ರೈಲು, ಬಸ್ ನಿಲ್ದಾಣ, ರೆಸ್ಟೋರೆಂಟ್, ಮಾಲ್, ಮಾರಾಟ ಮಳಿಗೆಗಳು, ವಿದ್ಯಾಕೇಂದ್ರಗಳಿದ್ದು, ವಿಭಿನ್ನ ವಾತಾವರಣ ದಿಂದ ವರ್ಣರಂಜಿತ ತಾಣವಾಗಿ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಹಳೆ ಹಾಗೂ ಹೊಸ ಪಟ್ಟಣಗಳು ಪುರಾತನ ಸಂಸ್ಕೃತಿಯ ಜೊತೆಗೆ ಆಧುನಿಕ ಜೀವನಶೈಲಿಯನ್ನು ಮೇಳೈಸಿಕೊಂಡಿವೆ.

ಎಲ್ಲೆಂದರಲ್ಲಿ ಸಂಗೀತಗಾರನ ಹೆಸರು

ಈ ನಗರವು ಹದಿನೆಂಟನೇ ಶತಮಾನದ ಪಾಶ್ಚಿಮಾತ್ಯ ಸಂಗೀತದ ಇತಿಹಾಸದಲ್ಲಿ ಶ್ರೇಷ್ಠ ಸಂಗೀತ ಸಂಯೋಜಕ ಎಂದು ಪ್ರಸಿದ್ಧಿ ಪಡೆದ ವೋಲ್ಫ್‌ಗ್ಯಾಂಗ್ ಅಮೆಡಿಯಸ್ ಮೊಜಾರ್ಟನ ಜನ್ಮ ಸ್ಥಳವಾಗಿದ್ದು, ಆಸ್ಟ್ರಿಯಾದಲ್ಲಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಸ್ಥಳವಾಗಿದೆ. ಈತ ಮೂವತ್ತು ವರ್ಷಗಳ ಕಾಲ ವಾಸಿಸುತ್ತಿದ್ದ ಮೂರು ಮಹಡಿಯ ಮನೆಯನ್ನು ವಸ್ತು ಸಂಗ್ರಹಾಲವಾಗಿ ಪರಿವರ್ತಿಸಲಾಗಿದೆ. ಆತ ನಾಲ್ಕನೆಯ ವಯಸ್ಸಿನಲ್ಲಿ ನುಡಿಸಲು ಪ್ರಾರಂಭಿಸಿದ ಪಿಯಾನೋ, ಮೂಲ ವಾದ್ಯ ಪರಿಕರಗಳು, ವೈಯಕ್ತಿಕ ವಸ್ತುಗಳು, ಭಾವಚಿತ್ರ, ಆತ ಬರೆದ ನೈಜ ಟಿಪ್ಪಣಿಗಳನ್ನು, ಪತ್ರಗಳನ್ನು ಇಲ್ಲಿ ಸಂರಕ್ಷಿಸಿ ಇಡಲಾಗಿದೆ. ಮೊಜಾರ್ಟ ತಮ್ಮ ಅಲ್ಪಾವಧಿ ಜೀವನದಲ್ಲಿ ಅನೇಕ ಪ್ರಸಿದ್ಧ ಸ್ವರಮೇಳ, ಸಂಗೀತ ಕಚೇರಿಗಳನ್ನು ಮತ್ತು ಒಪೆರಾಗಳನ್ನು ಸಂಯೋಜಿಸಿದ್ದರು. ಇತನ ಹೆಸರು ಈ ಊರಲ್ಲಿ ಜೀವಂತವಾಗಿದ್ದು, ವಿಶ್ವವಿದ್ಯಾಲಯ, ವಿಮಾನ ನಿಲ್ದಾಣ, ಚಾಕೋಲೇಟ್, ಮಾರಾಟ ಮಳಿಗೆ ಹೀಗೆ ಎಲ್ಲೆಂದರಲ್ಲಿ ಹೆಸರು ರಾರಾಜಿಸುತ್ತದೆ.

ಮೊಜಾರ್ಟ ಪ್ಲಾಟ್ಜ್ ಎಂಬುದು ಈತನ ಆಳೆತ್ತರದ ಪ್ರತಿಮೆ ಇರುವ ಚೌಕವಾಗಿದೆ. ಇದು ಮೂಸಿಯಂ, ಕ್ಯಾಥೆಡ್ರಲ್ ಮತ್ತು ಸರಕಾರಿ ನಿವಾಸಗಳ ನೆಲೆಯಾಗಿದೆ. ಮೊಜಾರ್ಟನ ಈ ತವರೂರಿನಲ್ಲಿ ಪ್ರತಿ ವರ್ಷ ಜುಲೈ-ಅಗಷ್ಟನಲ್ಲಿ ಜರುಗುವ ಸಾಲ್ಜಬರ್ಗ್ ಸಂಗೀತ ಉತ್ಸವ ಬಹಳ ಹೆಸರುವಾಸಿ. ಎರಡನೂರಕ್ಕೂ ಹೆಚ್ಚು ಸಂಗೀತ ಕಚೇರಿಗಳು ಏರ್ಪಡಾಗುವ ಈ ಸಂಗೀತೋತ್ಸವ ಯುರೋಪಿನ ಬಹು ದೊಡ್ಡ ಶಾಸ್ತ್ರೀಯ ಸಂಗೀತ ಸ್ವರ್ಗವಾಗಿ ರೂಪುಗೊಳ್ಳುತ್ತದೆ.



ಉಪ್ಪಿನ ಗಣಿ

ನಗರದ ಹೊರಭಾಗದಲ್ಲಿರುವ ಬರ್ಚಟೆಸಗಾಡೆನ್ ಭೂಗತ ಉಪ್ಪಿನ ಗಣಿಯ ಭೇಟಿ ವಿಶಿಷ್ಟವಾಗಿತ್ತು. ವಿಶ್ವದ ಅತ್ಯಂತ ಹಳೆಯ ಆಳವಾದ ಗಣಿಗಳಲ್ಲೊಂದಾದ ಇಲ್ಲಿ, ಇಂದಿಗೂ ಉಪ್ಪು ತಯಾರಾಗುತ್ತದೆ. ಶುಲ್ಕ ನೀಡಿ, ಪೋಷಾಕು ಧರಿಸಿ ಭೂಗತ ಸುರಂಗಗಳಲ್ಲಿ ರೈಲ್ ಸವಾರಿಯಲ್ಲಿ ಸಾಗಿ, ಕೆಳಮಟ್ಟಕ್ಕೆ ರಾಫ್ಟ್, ಸ್ಲೈಡ್ ಮೂಲಕ ಸಾಗಿ, ಉಪ್ಪಿನ ಗಣಿಗಾರಿಕೆಯನ್ನು ನೋಡಬಹುದು.

ಸ್ಥಳೀಯ ತಿನಿಸುಗಳು

ಸಾಂಸ್ಕೃತಿಕ ಹಾಗೂ ಐತಿಹಾಸಿಕ ತಾಣಗಳ ಪ್ರವಾಸ ವೆಂದರೆ, ಅಲ್ಲಿನ ತಿನಿಸುಗಳನ್ನು ಸವಿಯದೇ ಪೂರ್ಣಗೊಳ್ಳುವದಿಲ್ಲ. ಈ ನಗರದ ಮೊಜಾರ್ಟ ಹೆಸರಿನ ಚಾಕೋಲೇಟ್ ಮತ್ತು ಮಾರ್ಜಿಪಾನ್ ಮಿಠಾಯಿ, ಸೇಬು ತುಂಬಿದ ಅಫೇಲ್ಸು ಟ್ರಡೆಲ್ ಎಂಬ ಪೆಸ್ಟ್ರಿ, ಕಾಸ್ನೋಕೆನ್ ಎನ್ನುವ ಚೀಸ್ ಡಂಪ್ಲಿಗ್ಸ್, ಸಾಲ್ಜಬರ್ಗ ನೋರ್ಕಲ್ ಎಂದು ಪ್ರಸಿದ್ಧವಾದ ತುಪ್ಪಳದಂತಿರುವ ಸಿಹಿ ತಿಂಡಿ ಹಾಗೂ ಕಟ್ಲೆಟ್‌ದಂತಿರುವ ಕರಿದ ಮಾಂಸ ಮತ್ತು ಬ್ರೆಡ್ ಮಿಶ್ರಣದ 'ವೀನರ್ ಸ್ಕಿನಿಟ್ಜೆಲ್' ಇಲ್ಲಿಯ ವಿಶೇಷ ತಿನಿಸು.

ಹೊಹೆನ್ಸಾಲ್ಬರ್ಗ ಕೋಟೆ

ಯುರೋಪಿನ ಅತಿ ದೊಡ್ಡ ಮಧ್ಯಕಾಲೀನ ದೊಡ್ಡ ಕೋಟೆ ಇಲ್ಲಿದೆ. ಒಂಬೈನೂರು ವರುಷಗಳ ಹಳೆಯದಾದ ಈ ಕೋಟೆಯು ಹಲ ವಾರು ಯುದ್ಧಗಳು ಹೊರತಾಗಿಯೂ, ಅತ್ಯುತ್ತಮವಾಗಿ ಸಂರಕ್ಷಿಸ ಲ್ಪಟ್ಟು, ಸಾಲ್ಜಬರ್ಗ್ ಹಗ್ಗುರುತಾಗಿ ಫೆಸ್ಟಂಗ್ಬರ್ಗ್ ಪರ್ವತದ ಮೇಲೆ ನಿರ್ಮಾಣವಾಗಿದೆ. 506 ಮೀಟರ್ ಎತ್ತರದಲ್ಲಿರುವ ಈ ಕೋಟೆ ಯನ್ನು ವೀಕ್ಷಿಸಲು ಫ್ಯೂನಿಕ್ಯೂಲರ್ (ಯಂತ್ರ ಚಾಲಿತ ಬೋಗಿ) ಮೂಲಕ ಅಥವಾ ಕಾಲ್ನಡಿಗೆ ಮೂಲಕ ಸಾಗಬೇಕು. ಕೋಟೆ ಏರುತ್ತಿದ್ದಂತೆಯೇ ಹಿಮಾವೃತ ಆಲ್ಪ್ ಪರ್ವತ, ಹಸಿರು ಕಣಿವೆಗಳು, ಸಾಲ್ಜಾಕ್ ನದಿಯ ನೋಟ ದಕ್ಕುತ್ತದೆ. ಪಕ್ಕದ ಮೊಂಚಬರ್ಗ ಮತ್ತು ಕಪುಜಿನರಬರ್ಗ್ವ ಪರ್ವತಗಳಿಂದ ಹಳೆ ಮತ್ತು ಹೊಸ ನಗರಗಳ ಭವ್ಯವಾದ ವಿಹಂಗಮ ನೋಟ, ಪುರಾತನ ಹಾಗೂ ಆಧುನಿಕ ಕಟ್ಟಡಗಳ ಸೌಂದರ್ಯ ರೋಮಾಂಚನಗೊಳಿಸುತ್ತದೆ. ಈ ಕೋಟೆಯಲ್ಲಿ ಅರಮನೆ, ದರ್ಬಾರ ಹಾಲ್, ಗೋಲ್ಡನ್ ಚೇಂಬರ್, ಶಸ್ತ್ರಾಗಾರ, ಮ್ಯಾಜಿಕಲ್ ಥಿಯೇಟರ್, ವಸ್ತುಸಂಗ್ರಹಾಲಯವಿದೆ. ಇಲ್ಲಿಯೂ ಸಂಗೀತ ಕಚೇರಿಗಳು ನಡೆಯುತ್ತವೆ.

ಹಳೆಯ ಪಟ್ಟಣದಲ್ಲಿರುವ ಸಾಲ್ಜಬರ್ಗ್ ಕ್ಯಾಥೆಡ್ರಲ್ ಅತೀ ದೊಡ್ಡ ಗುಮ್ಮಟದ ರಚನೆಗಳಲ್ಲೊಂದಾಗಿದೆ. ಮೂವತ್ತೆರಡು ಮೀಟರ್ ಎತ್ತರದ ನೇವ್ ನಿರ್ಮಾಣ ಅಚ್ಚರಿ ಮೂಡಿಸುತ್ತದೆ. ಇಲ್ಲಿ ಅಕ್ಕಪಕ್ಕ ದಲ್ಲಿರುವ ಚರ್ಚುಗಳು ಆಕರ್ಷಕವಾಗಿವೆ. ಕ್ಯಾಥೆಡ್ರಲ್ ಪಕ್ಕದ ಅಲಂಕೃತ ಬರೊಕ್ ಸೇಂಟ್ ಪೀಟರ್ಸ ಚರ್ಚ್ ಮತ್ತು ನಗರದ ಎರಡನೇ ದೊಡ್ಡ ಗುಮ್ಮಟದ ರಚನೆಯ ಕಾಲೇಜಿಯೇಟ್ ಚರ್ಚಗಳು ಗಮನ ಸೆಳೆಯುತ್ತವೆ.

ಮಿರಾಬೆಲ್ ಅರಮನೆಯನ್ನು ಬರೊಕ್ ಆರ್ಚಬಿಷಪ್ಪರು ನಿರ್ಮಿ ಸಿದ್ದಾರೆ. ವಿಚಿತ್ರವೆನಿಸುವ ಕುಬ್ಜ ಪ್ರತಿಮೆಗಳ ಉದ್ಯಾನ, ಕಾರಂಜಿ, ಕ್ಯಾಥೇಡ್ರಲ್ಗಳಿಂದ ಅರಮನೆ ಗಮನ ಸೆಳೆಯುತ್ತದೆ. ಇಂದು ಈ ಅರಮನೆಯು ಸಾಲ್ಜಬರ್ಗ ಪುರಸಭೆಯ ಆಡಳಿತ ಕಚೇರಿ ಗಳನ್ನು ಹೊಂದಿದೆ. ಇಲ್ಲಿಯ ಮಾರ್ಬಲ್ ಹಾಲ್‌ನ್ನು ವಿಶ್ವದ ಅತ್ಯುತ್ತಮ ವಿವಾಹ ಸಭಾಂಗಣಗಳಲ್ಲಿ ಒಂದೆಂದು ಪರಿಗಣಿಸಲಾ ಗುತ್ತದೆ. ಬರೊಕ್ ವಾಸ್ತುಶಿಲ್ಪಿ ಜೋಹಾನ್ ಬರ್ನ್ಹಾರ್ಡ ಫೀಸರ್ ಜ್ಯಾಮಿತಿಯ ರೂಪದ ಲಕ್ಷಣ

ಹೊಂದಿರುವ ಸುಂದರ ಉದ್ಯಾನ ವನ್ನು ಅರಮನೆಯ ಪ್ರಾಂಗಣದಲ್ಲಿ ರೂಪಿಸಿದ್ದಾನೆ. ಆಸ್ಟ್ರೀಯಾದ ಸುಂದರವಾದ ಸ್ಥಳಗಳಲ್ಲಿ ಒಂದಾದ ಹೆಲ್ಬ್ರನ್ ಅರಮನೆ ವಿಶಾಲವಾದ ಉದ್ಯಾನವನ, ಕಾರಂಜಿಗಳು, ನೀರಿನಾಟದ ಮನರಂಜನೆಯನ್ನು ಒದಗಿಸುತ್ತವೆ. ಹಿಂಬಾಗದ ಸ್ಮಾರಕ, ಸ್ಟೋನ್ ಥಿಯೇಟರ್, ಮೃಗಾಲಯಗಳನ್ನು ನೋಡಬಹುದು. ಹ್ಯಾಂಗರ್-7 ಎಂಬ ಪ್ರದರ್ಶನ ಮಳಿಗೆಯಲ್ಲಿ ರೇಸಿಂಗ್ ಕಾರು ಗಳು, ವಾಯು ಮಂಡಳದ ಜಂಪ್ ಕ್ಯಾಪ್ಸುಲ್‌ಗಳಿಂದ ಪ್ರಾರಂಭವಾಗಿ ಹೆಲಿಕಾಪ್ಟರ್, ವಿಮಾನದವರೆಗಿನ ವೈವಿಧ್ಯತೆ ಇದೆ.

ಸೌಂಡ್ ಆಫ್ ಮೂಸಿಕ್

ಐದು ಆಸ್ಕರ್ ಪ್ರಶಸ್ತಿಗಳನ್ನು ಪಡೆದ 'ದಿ ಸೌಂಡ್ ಆಫ್ ಮೂಸಿಕ್' ಬಾಲಿವುಡ್ ಚಲನಚಿತ್ರವನ್ನು ಇಲ್ಲೇ ಸುತ್ತಮುತ್ತಲಿನ ಪ್ರದೇಶದಲ್ಲಿ ಚಿತ್ರೀಕರಿಸಲಾಗಿದೆ. ಈ ಚಿತ್ರದ ''ಡೂ-ರೇ-ಮಿ'' ಚಿತ್ರೀಕರಣ ಗೊಂಡ ಮಿರಾಬೆಲ್ ಉದ್ಯಾನವನದಿಂದ ''ಸಿಕ್ಸಟೀನ್ ಗೋಯಿಂಗ್ ಆನ್ ಸೆವೆಂಟೀನ್'' ಚಿತ್ರೀಕರಣ ಗೊಂಡ ಹೆಲ್ಬ್ರನ್ ಕ್ಯಾಸಲ್‌ದಲ್ಲಿ ರುವ ಐಕಾನಿಕ್ ಗೆಜೆಬೋ ವರೆಗೆ ಸಾಗಿದಾಗ ಸಿನಿಮಾದಲ್ಲೆ ಸಂಚರಿಸಿದ ಅನುಭವ ವಾಗುತ್ತದೆ. ಇಲ್ಲಿ ಹಲವು ಚಿತ್ರಗಳ ಚಿತ್ರೀಕರಣ ನಡೆದಿದೆ.



ಇದು ಬದುಕಿನ ಲೆಕ್ಕ

• ಗೀತಾ ಕುಂದಾಪುರ

ಪ್ರತಿಯೊಬ್ಬರ ಬದುಕೂ ಹೆಡ್ ಅಂಡ್ ಟೈಲ್ (ಚಿತ್ತ-ಬಕ್ಕ) ಟಾಸ್ ಹಾಕಿದಂತೆ ಉರುಳುತ್ತಲೇ ಇರುತ್ತದೆ, ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ ಎನ್ನುವಂತೆ ಯೋಚಿಸಿದ್ದು, ಯೋಜಿಸಿದ್ದು ಉಲ್ಟಾ ಆಗುವುದೇ ಹೆಚ್ಚು, ಬದುಕಿನ ಪ್ರಯಾಣದಲ್ಲಿ ಎದುರಾಗುವ ಆಕಸ್ಮಿಕ ತಿರುವುಗಳೇನೂ ಕಮ್ಮಿಯೇ? ಜೀವನದಲ್ಲಿ ನಡೆದದ್ದು, ನೋಡಿದ್ದು, ಕೇಳಿದ್ದು, ಓದಿದ್ದದ್ದನ್ನು ತನ್ನದೇ ರೀತಿಯಲ್ಲಿ ಅರ್ಥೈಸಿ, ಸಮಾಜದ ಹಲವಾರು ಸವಾಲುಗಳಿಗೆ ಉತ್ತರ ಹುಡುಕಲು ಪ್ರಯತ್ನಿಸಿ ಬರೆದ ಲೇಖನಗಳು, 'ಚಿತ್ತ-ಬಕ್ಕ'ದಲ್ಲಿವೆ. ನಳಿನಿ ಟಿ.ಭೀಮಪ್ಪ ಅವರು ಬರೆದಿರುವ ಇಲ್ಲಿರುವ ಕೆಲವೊಂದು ಲೇಖನಗಳು ನಮ್ಮನ್ನು ಚಿಂತಿಸುವಂತೆ ಮಾಡಿದರೆ, ಹೆಚ್ಚಿನವು ನಮ್ಮದೇ ಅನುಭವ, ಅನಿಸಿಕೆಯನ್ನು ಒಪ್ಪವಾಗಿ ಅಕ್ಷರ ರೂಪಕ್ಕಿಳಿಸಿದ್ದಾರೆ ಎನಿಸುತ್ತದೆ.

ಇದರಲ್ಲಿ ನನ್ನ ಮೆಚ್ಚಿನ ಲೇಖನ 'ಪ್ರಕೃತಿಯನ್ನು ಎದುರು ಹಾಕಿಕೊಳ್ಳಲು ಸಾಧ್ಯವೇ?'. ಮನುಷ್ಯರು ಸ್ವಾರ್ಥಿಗಳು, ತಮ್ಮ ಸ್ವಾರ್ಥಕ್ಕೊಸಕ್ಕರ ಪ್ರಕೃತಿದತ್ತವಾಗಿ ಸಿಕ್ಕಿದ ನೆಲ, ಜಲ, ವಾತಾವರಣವನ್ನು ಕಲುಷಿತಗೊಳಿಸಲು ಪಣ ತೊಟ್ಟಿದ್ದಾರೆ. ನೀರಿಗಾಗಿ ನಡೆಯುತ್ತಿರುವ ಹಾಹಾಕಾರ ಬಗ್ಗೆ ಬರೆಯುತ್ತಾ ಅಬ್ದುಲ್ ಕಲಾಂರ 'ಇಂಡಿಯಾ 2050'ರ ಪುಸ್ತಕದಲ್ಲಿ ನೀರಿನ ಅಭಾವದ ಬಗ್ಗೆ ಬರೆದಿರವುದನ್ನು ಉಲ್ಲೇಖಿಸಿದ್ದಾರೆ. ಇನ್ನು ಕೆಲವೇ ವರ್ಷಗಳಲ್ಲಿ ಹಣದ ಬದಲಾಗಿ 'ನೀರೇ ಕರೆನ್ಸಿಯಾಗಬಹುದು' ಎಂದು ಬರೆದಿದ್ದನ್ನು ಓದಿದಾಗ ಖಂಡಿತ ಹೀಗಾಗುವ ದಿನ ದೂರವಿಲ್ಲ ಎನಿಸುತ್ತದೆ. ನೀರಿಲ್ಲದ ಅಥವಾ ನೀರಿಗೆ ಬರ ಇರುವ ಊರಿಗೆ ಹೆಣ್ಣನ್ನು ಕೊಡಲಿಕ್ಕಿಲ್ಲ ಎನ್ನುವ ಅವರ ಅನಿಸಿಕೆಗಳು ನೂರಕ್ಕೆ ನೂರು ಸತ್ಯ.



ಚಿತ್ತ ಬಕ್ಕ
ಲೇಖನಗಳ ಸಂಗ್ರಹ
ಲೇ: ನಳಿನಿ ಟಿ. ಭೀಮಪ್ಪ
ಪ್ರ: ನ್ಯೂ ವೇವ್ ಬುಕ್ಸ್

ಇಲ್ಲಿನ ಕೆಲವು ಲೇಖನಗಳು ಹೆಣ್ಣಿನ ಸೂಕ್ಷ್ಮ ಸಂವೇದನೆ, ಮನೋವೇದನೆಗಳನ್ನುಅನಾವರಣಗೊಳಿಸುತ್ತವೆ. ಹೆಣ್ಣಿಗೆ ಮಾತ್ರ ವಿಧಿಸಿರುವ 'ಬಾರದು'ಗಳ ನಡುವೆ ನಡೆಯುವ ಹೆಣ್ಣಿನ ನರಳಾಟಕ್ಕೆ ಕೊನೆ ಮೊದಲಿಲ್ಲವೇ? ಗಂಡಸರ ಮುಖವಾಡದ ಹಿಂದಿರುವ ದುರ್ಗುಣದಿಂದ ಮೂಕ ವೇದನೆ ಅನುಭವಿಸುತ್ತಿರುವ ಹೆಣ್ಣುಗಳಿಗೇನೂ ಕಮ್ಮಿ ಇಲ್ಲ. ಹೆಣ್ಣನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸಬೇಕೆಂದಿಲ್ಲ, ಹೆಣ್ಣಿಗೂ ಒಂದು ಮನಸ್ಸಿದೆ, ಅವಳ ಭಾವನೆಗಳನ್ನು ಅರ್ಥಮಾಡಿಕೊಳ್ಳಿ ಎನ್ನುವ ಕಿವಿ ಮಾತು ಕೊಡುತ್ತಾರೆ ಲೇಖಕಿ. ತಾಯ್ತನಕ್ಕಾಗಿ ಹಂಬಲಿಸುವ ಹೆಣ್ಣು ಜೀವಗಳಿಗೆ ಸಹಾನುಭೂತಿಗಿಂತ ಸಮತಾಭಾವದ ಅಗತ್ಯವಿದೆ ಎನ್ನುತ್ತಾ ದತ್ತು ಸ್ವೀಕರಿಸಿದವರ ವೈಯಕ್ತಿಕ ನಿರ್ಧಾರವನ್ನು ಬೆಂಬಲಿಸೋಣ ಎಂದು ಕರೆ ನೀಡಿ ನಮ್ಮ ತಲೆಮಾರಿನಿಂದಲೇ ಒಳ್ಳೆಯ ಸಾಮಾಜಿಕ ಬದಲಾವಣೆ ತರಲು ಮುಂದಾಗೋಣ ಎನ್ನುತ್ತಾರೆ ಲೇಖಕಿ. ಹೆಣ್ಣನ್ನು ಸಂಪ್ರದಾಯದ ಸಂಕೋಲೆಯಲ್ಲಿ ಬಂಧಿಸಬಾರದು. ಕಾಲಕ್ಕೆ ತಕ್ಕಂತೆ ಬದಲಾಗಲೇಬೇಕು, ಜೀವನ ನಿಂತ ನೀರಾಗಬಾರದು. ಹೆಣ್ಣು ಹೆರುವ ಯಂತ್ರವಲ್ಲ ಎಂಬುದನ್ನು ಒತ್ತಿ ಹೇಳುತ್ತಾರೆ. ಕರ್ತವ್ಯ, ಜವಾಬ್ದಾರಿ, ಪ್ರೀತಿಯೊಂದಿಗೆ ಹೆಣ್ಣು ತನ್ನ ಆರೋಗ್ಯವನ್ನು ಕಡೆಗಾಣಿಸಬಾರದು ಎನ್ನುವುದನ್ನು ಮರೆಯುವುದಿಲ್ಲ, ಹೊಸತಾಗಿ ಮದುವೆಯಾದವರು, ಮಕ್ಕಳನ್ನು ಹೆತ್ತು, ಬೆಳೆಸಲು ಹೊರಟವರು, ಗಂಡ, ಹೆಂಡತಿ ಹೀಗೆ ಎಲ್ಲರೂ ಓದಬಹುದಾದ ಉತ್ತಮ ಬರಹಗಳು ಈ ಸಂಗ್ರಹದಲ್ಲಿವೆ.

ಸ್ವಧರ್ಮ ಶ್ರೇಷ್ಠ

• ಕೆ.ಶಿವಪ್ರಸಾದ್

ಚೆನ್ನಾಗಿ ನಡೆಸಲ್ಪಟ್ಟ ಪರಧರ್ಮಕ್ಕಿಂತಲೂ ಒಳ್ಳೆಯದಲ್ಲದಿದ್ದರೂ ಸ್ವಧರ್ಮ ಶ್ರೇಷ್ಠ ಎಂದು ಕೃಷ್ಣ ಹೇಳುತ್ತಾನೆ. ಭಯದಿಂದ ಮಾಡುವ ಪರಧರ್ಮಕ್ಕಿಂತ ಸ್ವಧರ್ಮದಿಂದ ಮಾಡುವುದರಲ್ಲಿ ಸಾಯುವುದೇಲೇಸು ಎಂದು ಕೃಷ್ಣ ಹೇಳುತ್ತಾನೆ. (3.35) ಶ್ಲೋಕವು ನಮ್ಮ ಮನದಲ್ಲಿ ಸ್ಪಷ್ಟತೆಗಿಂತ ಹೆಚ್ಚು ಸಂದೇಹಗಳನ್ನೇ ಉಂಟುಮಾಡುತ್ತದೆ. ಒಂದು ಅರ್ಥದಲ್ಲಿ ಈ ಶ್ಲೋಕವು ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಗೆ ಒದಗಿದ ಸನ್ನಿವೇಶಕ್ಕೆ ತಕ್ಕದಾಗಿಯೇ ಇದೆ. ಅಲ್ಲಿಯವರೆಗೆ ಅರ್ಜುನನಿಗೆ ಯೋಧ ಧರ್ಮವಿತ್ತು ಮುಂದಿನ ಗಳಿಗೆಯಲ್ಲಿ ಅವನು ಸಂತನಾಗ ಬಯಸುತ್ತಾನೆ. ಈ ಬದಲಾವಣೆಗೆ ಅವಕಾಶಗಳು ತುಂಬಾ ಮಂದವಾಗಿವೆ ಇದನ್ನೇ ಕೃಷ್ಣ ಈ ಶ್ಲೋಕದಲ್ಲಿ ಸೂಚಿಸುತ್ತಾನೆ. ಧರ್ಮವು ಒಂದೇ ಆದರೂ ಐದು ಜನ ಕುರುಡರು ಒಂದೇ ಆನೆಯನ್ನು ಸ್ಪರ್ಶದಿಂದ ಬೇರೆ ಬೇರೆ ಹೇಳುವಂತೆ ನಾವು ಅದನ್ನು ಬೇರೆ ಬೇರೆ ರೀತಿಯಲ್ಲಿ ಗ್ರಹಿಸುತ್ತೇವೆ. ಒಬ್ಬನು ದಂತವನ್ನು ಮುಟ್ಟಿ ಅದು ಆನೆ ಎಂದು ಹೇಳಿದರೆ ಅದು ಅವನ ಸ್ವಧರ್ಮವಾಗುತ್ತದೆ. ಅವನು ದಂತವನ್ನು ಆನೆಯದೆಂದು ಗ್ರಹಿಸಿಕೊಂಡರೆ ಅವನು ಅದರಲ್ಲಿಯೇ ಮುಂದುವರಿಯ ಬೇಕೆ ಹೊರತು ಇನ್ನೊಬ್ಬ ಕಾಲನ್ನು ಅಥವಾ ಬಾಲವನ್ನು ಆನೆಯೆಂದು ಗ್ರಹಿಸಿದ್ದನ್ನು ಒಪ್ಪಬಾರದು. ಮುಂದಿನ ಪ್ರಶ್ನೆ ಎಂದರೆ ಯಾರ ಗ್ರಹಿಕೆ ಸರಿಯಾಗಿದೆ ಎಂಬುದು. ತಮ್ಮ ತಮ್ಮ ರೀತಿಯಲ್ಲಿ ಅವರೆಲ್ಲರೂ ಸರಿಯೇ ಇದ್ದಾರೆ ಆದ್ದರಿಂದ ಒಳ್ಳೆಯದಿರದಿದ್ದರೂ ಸ್ವಧರ್ಮ ಪಾಲಿಸ ಬೇಕೆಂದು ಕೃಷ್ಣ ಹೇಳಿದಾಗ ಅವನು ಹೋಲಿಕೆಯನ್ನು ಪ್ರೋತ್ಸಾಹಿಸುವದಿಲ್ಲ.

ನಿತ್ಯ ಜೀವನದಲ್ಲಿ ಭಗವದ್ಗೀತೆ
ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಧರ್ಮವು ನಮ್ಮ ಮನೆಯೊಳಗಿನ ವಿದ್ಯುತ್ ಉಪಕರಣ ಗಳನ್ನು ಅವಲಂಬಿಸಿ ವಿದ್ಯುತ್ ಬೇರೆ ರೀತಿಯಲ್ಲಿ ವ್ಯಕ್ತವಾಗುವ ಹಾಗೆ ಇದೆ. ಪ್ರತಿ ಉಪಕರಣಕ್ಕೂ ತನ್ನದೇ ಆದ ಕಾರ್ಯ ವೈಖರಿ ಇರುತ್ತದೆ. ಫ್ಯಾನು ಟಿವಿಯಾಗಲು ಸಾಧ್ಯವಿಲ್ಲ. ಹತ್ತಿಕ್ಕುವಿಕೆಯು ನಮ್ಮನ್ನು ಎಲ್ಲಿಗೂ ಒಯ್ಯಲು ಸಾಧ್ಯವಿಲ್ಲ ಎಂದು ಕೃಷ್ಣ ಈ ಮೊದಲೇ ತಿಳಿಸಿರುತ್ತಾನೆ (3.33) ಮತ್ತೊಬ್ಬರನ್ನು ಅನುಸರಿಸುವದೆಂದರೆ ನಮ್ಮದನ್ನು ಹತ್ತಿಕ್ಕಿದಂತೆ. ಹತ್ತಿಕ್ಕುವಿಕೆಯು ಪ್ರತ್ಯೇಕಿಸುತ್ತದೆ. ಆದರೆ ಸತ್ಯವೆಂದರೆ ಕುರುಡರು ಮತ್ತು ಆನೆಯ ಉದಾಹರಣೆಯಲ್ಲಿಯ ಆನೆಯ ಬಗ್ಗೆ ಪ್ರತಿಯೊಬ್ಬರ ಅಭಿಪ್ರಾಯದ ಸಂಗ್ರಹವಾಗಿದೆ.

ದುರಂತದತ್ತ ಸಾಗುತ್ತಿದ್ದೇವೆಯೆ?

ಪ್ಲೇಟಿನಲ್ಲಿ ಕೈ ತೊಳೆಯಬೇಡಿ ಎಂಬ ಬೋರ್ಡಿನ ಜೊತೆಗೆ ಊಟ ಮಾಡುವಾಗ ರೀಲ್ಸ್ ನೋಡಬೇಡಿ ಎಂಬ ಬರಹವೂ ಇಂದಿನ ಅಗತ್ಯ!

• ಶಶಿಧರ್ ತಲ್ಲೂರಂಗಡಿ

ಸಹೋದ್ಯೋಗಿಯೊಂದಿಗೆ ಮಧ್ಯಾಹ್ನ ಊಟಕ್ಕೆಂದು ಹೋಗಿದ್ದೆ. ಒಂದು ಸೀಟು ಖಾಲಿ ಇತ್ತು. ಪಕ್ಕದಲ್ಲೊಬ್ಬ ಮಿತ್ರನಿಗೆ ಅಲ್ಲಿ ಕುಳಿತುಕೊಳ್ಳುವಂತೆ ಹೇಳಿದೆ. ಪಕ್ಕದ ಸೀಟಿನಲ್ಲಿದ್ದ ಒಬ್ಬ ಯುವಕ ಇನ್ನೇನು ಊಟ ಮುಗಿಸಬಹುದು, ನಾನಲ್ಲಿ ಕುಳಿತುಕೊಳ್ಳಬಹುದೆಂಬ ಯೋಜನೆ ನನ್ನದಾಗಿತ್ತು.

ಬಹುಶಃ ಮೊಬೈಲ್ ಒಂದಿಲ್ಲದಿದ್ದರೆ ಆ ಹುಡುಗ ಊಟ ಮುಗಿಸಿ ನಾನಲ್ಲಿ ಕುಳಿತು ಊಟ ಮಾಡಬಹುದಿತ್ತೋ ಏನೋ! ಅದ್ಯಾವುದೋ ರೀಲ್ಸ್ ಇನ್ನಾವುದೋ ಮೆಸ್ಸೇಜ್ ಗೆ ರಿಪ್ಲೈ ಮಧ್ಯೆ ಬಂದ ಕಾಲ್ ಪಾಪ ತಾನು ಕುಳಿತದ್ದು ಊಟಕ್ಕೆಂಬುವುದನ್ನೂ ಮರೆತುಬಿಟ್ಟಿದ್ದ ಯುವಕ ಮೊಬೈಲ್‌ನಲ್ಲಿ ಮುಳುಗಿದ್ದ. ಹಲವು ನಿಮಿಷಗಳಾದರೂ ಎದ್ದೇಳಲೇ ಇಲ್ಲ! ಬೇರೆಡೆಯಲ್ಲಿ ಜಾಗ ಸಿಕ್ಕಿ ನನ್ನ ಊಟ ಮುಗಿದು ನನ್ನ ಸಹೋದ್ಯೋಗಿ ಊಟ ಮುಗಿಸಿ ಬಂದರೂ ಆ ಯುವಕ ಮಾತ್ರ ಊಟ ಮಾಡುತ್ತಲೇ ಇದ್ದ. ಇನ್ನೊಬ್ಬಾತ ಮೊಬೈಲ್‌ನಲ್ಲಿ ಅದಾವುದೋ ವೀಡಿಯೋ ನೋಡುತ್ತಾ ಎಡಗೈಯಲ್ಲಿ ಊಟ ಮಾಡುತ್ತಿದ್ದ. ಇನ್ನು ಮೊಬೈಲ್‌ನೊಳಗೆ ಮುಳುಗಿದ್ದ ಗಿರಾಕಿಗೆ, ಎದುರಿದ್ದ ಆಹಾರ ತಣ್ಣಗಾದರೂ, ಬೇಗನೆ ಊಟ ಮುಗಿಸುವ ಮನಸ್ಸೇ ಇಲ್ಲ; ಆಹಾರ ಪೂರ್ತಿ ತಣ್ಣಗಾದ ನಂತರ ತಿನ್ನುವ ಕರ್ಮ ಆತನದ್ದು!

ಹೊಸ ಫಲಕ ಬೇಕು!

ಪ್ಲೇಟಿನಲ್ಲಿ ಕೈ ತೊಳೆಯಬೇಡಿ ಎಂಬ ಬೋರ್ಡಿನ ಜೊತೆಗೆ ಊಟ ಮಾಡುವಾಗ ರೀಲ್ಸ್ ನೋಡಬೇಡಿ ಎಂಬ ಬರಹದ ಅಗತ್ಯವೂ ಪ್ರಸ್ತುತ ಎಂದೆನಿಸಿತು.

ದಿನವೊಂದಕ್ಕೆ ಐವತ್ತಕ್ಕೂ ಹೆಚ್ಚಿನ ರೋಗಿಗಳನ್ನು ಪರಿಶೀಲಿಸುವ ವೈದ್ಯರೊಬ್ಬರ ಬಳಿ ಮಾತಾಡುವಾಗ ಈ ಮೊಬೈಲ್‌ನ ಸಾಮಾಜಿಕ ಜಾಲತಾಣ ಬಹುಪಾಲು ಸಮಯ ನುಂಗಿ ಬಿಡ್ತಾ ಇತ್ತು. ಮತ್ತೆ ಮತ್ತೆ ಚಿತ್ತ ಯಾವುದೋ ರೀಲ್ಸ್ ನೆಡೆಗೋ ಇನ್ನಾವುದೋ ಪೋಸ್ಟ್‌ನೆಡೆಗೂ ಸೆಳೆಯುತ್ತಿತ್ತು. ಕೊನೆಗೆ ಅವರೊಂದು ಉಪಾಯ ಮಾಡಿದರು. 'ಮೊಬೈಲ್‌ನಿಂದ ಫೇಸ್ಬುಕ್, ಇನ್ಸ್ಟಾಗ್ರಾಂ ತೆಗೆದು ಬಿಟ್ಟೆ. ದಿನಕ್ಕೊಮ್ಮೆ ಲ್ಯಾಪ್ ಟಾಪ್‌ನಲ್ಲಿ ಸಾಮಾಜಿಕ ಜಾಲತಾಣದತ್ತ ಗಮನ ಹರಿಸೋದಷ್ಟೇ ಮಾಡಿದೆ. ಈಗ ಸ್ವಲ್ಪ ಪರವಾಗಿಲ್ಲ' ಎಂದರು. ಆ ವೈದ್ಯರ ಮಾತು ನನ್ನ ಮನಸ್ಸಿಗೆ ನಾಟಿತು. ನಾನೂ ಅಂದೇ ಮೊಬೈಲ್‌ನಿಂದ ಸಾಮಾಜಿಕ ಜಾಲತಾಣಕ್ಕೆ ಸಂಬಂಧಿಸಿದ ಎಲ್ಲ ಅಪ್ಲಿಕೇಶನ್‌ಗಳನ್ನೂ ತೆಗೆದು ಹಾಕಿಬಿಟ್ಟೆ. ಲ್ಯಾಪ್‌ಟಾಪ್‌ನಲ್ಲಿ ದಿನಕ್ಕೊಮ್ಮೆ ಮಾತ್ರ ಫೇಸ್ಬುಕ್ ಎಂಬ ನಿರ್ಧಾರಕ್ಕೆ ಬಂದೆ. ಅನಂತರ ಹೊಸದೊಂದು ಲೋಕಕ್ಕೆ ಬಂದ ಅನುಭವ.

ಈಗಿನ ಯುವ ಪೀಳಿಗೆಗೆ ಇದೊಂದು ಗೀಳಾಗಿ ಬಿಟ್ಟಿದೆ. ನಮ್ಮ ನಮ್ಮ ಸೆಲ್‌ನೊಳಗೆ ಬಂಧಿಗಳಾಗಿ ಹೊರ ಬರಲಾಗದೆ ಒದ್ದಾಡುತ್ತಿದ್ದೇವೆ. ಒಂದು ಕಾಲಕ್ಕೆ ಪ್ರಪಂಚವೇ ಅಂಗೈಲಿದೆ ಎಂಬ ಹೆಮ್ಮೆ ಮೊಬೈಲ್ ಬಗ್ಗೆ ಇತ್ತು. ಆದರೆ ಈಗ, ನಮ್ಮ ಪ್ರಪಂಚವೇ ಅದಾಗಿಬಿಟ್ಟಿದೆ! ಇದಕ್ಕಿಂತ ಹೀನ ಸ್ಥಿತಿ ಬೇರಾವುದು ಹೇಳಿ! ನಮ್ಮನ್ನು ಒಮ್ಮೆಯಾದರೂ ಅವಲೋಕನ ಮಾಡಿಕೊಳ್ಳದೆ ಇದ್ದರೆ, ಸತ್ಯವನ್ನು ಅರಿಯದಿದ್ದರೆ, ಮೊಬೈಲ್ ಎಂಬ ಮಹಾಮಾರಿಯ ಮೋಹದಿಂದ ಹೊರಬಾರದೆ ಇದ್ದರೆ, ನಮ್ಮ ಸಮಾಜದ ಭವಿಷ್ಯ ಖಂಡಿತಾ ಘೋರವಾದ್ದು. ನಾವು ಊಟ ಮಾಡುವಾಗಲೂ ಮೊಬೈಲ್ ನೋಡುವುದು ಬದಿಗಿಡಿ, ನಮ್ಮ ಮಕ್ಕಳು ಮೊಬೈಲ್ ನೋಡದಿದ್ದರೆ ಊಟವನ್ನೇ ಮಾಡುವುದಿಲ್ಲ ಎಂಬ ಪರಿಸ್ಥಿತಿಗೆ ನಾವೀಗ ಬಂದು ತಲುಪಿದ್ದೇವೆ. ತಕ್ಷಣಕ್ಕೆ ಎಚ್ಚೆತ್ತುಕೊಳ್ಳಲೇಬೇಕಾದ ಅನಿವಾರ್ಯತೆ ನಮ್ಮೆಲ್ಲರದ್ದೂ ಕೂಡಾ. ನಿಜ ತಾನೆ?

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಮಾಘ ಮಾಸ, ಅಷ್ಟಮೀ ತಿಥಿ (ಬೆಳಗ್ಗೆ 7.32ರವರೆಗೆ), ಕೃಷ್ಣ ಪಕ್ಷ, ಅನುರಾಧಾ ನಕ್ಷತ್ರ, ವ್ಯಾಘಾತ ಯೋಗ, ರಾಹುಕಾಲ ಬೆಳಗ್ಗೆ 11.05ರಿಂದ ಮಧ್ಯಾಹ್ನ 12.33ರ ವರೆಗೆ, ಅಭಿಜಿತ್ ಮುಹೂರ್ತ ಮಧ್ಯಾಹ್ನ 12.10ರಿಂದ 12.57ರವರೆಗೆ

ಮನೆಮದ್ದು

ಮಕ್ಕಳಲ್ಲಿ ಕಾಣಬರುವ ಜಠರದ ಅವ್ಯವಸ್ಥೆ ಹಾಗೂ ಯಕೃತ್ತಿನ ಬಾಧೆಯಂಥ ತೊಂದರೆಗಳಿಗೆ ತುಳಸಿ ಕಷಾಯವು ರಾಮಬಾಣ. ಮಕ್ಕಳಿಗೆ ಪಪ್ಪಾಯಿ ಹಣ್ಣನ್ನು ತಿನ್ನಿಸುವುದರಿಂದ ಅವರ ಯಕೃತ್ತಿನ ಮತ್ತು ಪ್ಲೀಹದ ವ್ಯಾಧಿಗಳು ತಹಬಂದಿಗೆ ಬರುತ್ತವೆ.

ಸೌಂದರ್ಯ ಸೂತ್ರ

ಮುಖದ ಸೊಬಗನ್ನು ಹೆಚ್ಚಿಸಬೇಕಿರುವ ಹಲ್ಲುಗಳು ಹಳದಿಯಾಗಿವೆ ಎಂದು ಆತಂಕ ವಾಗಿದೆಯೇ? ಇದಕ್ಕೊಂದು ಪರಿಹಾರವಿದೆ. ಅಡುಗೆ ಸೋಡಾ ಅಥವಾ ಪುಡಿ ಉಪ್ಪನ್ನು ಹಲ್ಲುಗಳಿಗೆ ಆಗಾಗ ಉಜ್ಜಿ ತಿಕ್ಕುವುದರಿಂದ ಈ ಸಮಸ್ಯೆ ನಿವಾರಣೆಯಾಗಿ ಹಲ್ಲುಗಳು ಮುತ್ತಿನ ಮಣಿಗಳಂತೆ ಹೊಳೆಯುವವು. ಬ್ರಷ್ ಮಾಡುವಾಗ ಪೇಸ್ಟ್ ಜತೆ ಉಪ್ಪನ್ನು ಸೇರಿಸಿಕೊಳ್ಳುವುದರಿಂದಲೂ ಪ್ರಯೋಜನಗಳಿವೆ.

ದಿನ ಭವಿಷ್ಯ

ಮೇಷ: ದುಡಿಮೆಯೇ ದುಡ್ಡಿನ ತಾಯಿ ಎಂಬ ಮಾತನ್ನು ಮರೆಯದಿರಿ. ಸೋಮಾರಿತನದಿಂದ ಆ ಕ್ಷಣಕ್ಕೆ ಸುಖ ಸಿಕ್ಕರೂ, ಅದರ ದೂರಗಾಮಿ ಪರಿಣಾಮ ಸಂಕಟವನ್ನೇ ಹೊತ್ತು ತರುತ್ತದೆ. ಜಾಗೃತರಾಗಿರಿ.

ವೃಷಭ: ಈ ದಿನ ಬಂಧು-ಮಿತ್ರರ ಆಗಮನದಿಂದಾಗಿ ಮನದಲ್ಲಿ ಸಂತಸ ಉಕ್ಕಲಿದೆ. ಜತೆಗೆ ಉತ್ತರ ದಿಕ್ಕಿನಿಂದ ಶುಭಸುದ್ದಿಯೊಂದು ಬಂದು, ಕುಟುಂಬದ ಸದಸ್ಯರಲ್ಲಿ ನೆಮ್ಮದಿ-ಸಮಾಧಾನವನ್ನು ತರಲಿದೆ.

ಮಿಥುನ: ಚಾಡಿಮಾತು ಅಥವಾ ಗಾಳಿಸುದ್ದಿ ಕೇಳಲು ಹಿತಕರವಾಗಿರುತ್ತದೆಯಾದರೂ, ಅದು ನಿಮ್ಮ ವ್ಯಕ್ತಿತ್ವದಲ್ಲಿ ನಕಾರಾತ್ಮಕ ಛಾಯೆಯನ್ನು ಮೂಡಿಸುತ್ತದೆ ಎಂಬುದನ್ನು ಮರೆಯದಿರಿ. ಸಭ್ಯರ ಸ್ನೇಹ ಮಾಡಿ.

ಕಟಕ: ಕಣ್ಣಿನ ಆರೋಗ್ಯದ ಕಡೆಗೆ ಗಮನ ಕೊಡಿ. ಮನೆಯಿಂದ ಹೊರಗೆ ಊಟ ಮಾಡುವಾಗ ಜಾಗ್ರತೆ ವಹಿಸಿ. ಆರೋಗ್ಯವೇ ಭಾಗ್ಯ ಎಂಬ ಮಂತ್ರವನ್ನು ಮರೆಯದಿರಿ. ಗಣೇಶನನ್ನು ಆರಾಧಿಸಿ. ಸಾಧ್ಯವಾದರೆ ಗಣೇಶನಿಗೆ ಕಡಲೆಕಾಳು ನೈವೇದ್ಯ ಸಮರ್ಪಿಸಿ, 21 ನಮಸ್ಕಾರ ಮಾಡಿದರೆ ಒಳಿತಾಗುವುದು.

ಸಿಂಹ: ಕಾರ್ಯನಿಮಿತ್ತ ದೂರದ ಊರಿಗೆ ಪ್ರಯಾಣ ಮಾಡಬೇಕಾಗಿ ಬರಬಹುದು ಮತ್ತು ಇದು ಆರ್ಥಿಕ ನೆಲೆಗಟ್ಟಿನಲ್ಲಿ ನಿಮಗೆ ಪ್ರಯೋಜನಕಾರಿಯಾಗಿ ಪರಿಣಮಿಸುವ ಸಾಧ್ಯತೆಯಿದೆ. ಗೆಳೆಯರನ್ನು ಸತ್ಕರಿಸಿ. ಅಹಂಕಾರ ಬಿಟ್ಟು, ಎಲ್ಲರೊಂದಿಗೂ ಸ್ನೇಹಪರವಾಗಿ ಇರಿ.

ಕನ್ಯಾ: ಬಹಳ ಕಾಲದಿಂದ ತಪ್ಪಿಹೋಗಿದ್ದ ಸ್ನೇಹ-ಸಂಬಂಧಗಳು ಇಂದು ಮರುಜೋಡಣೆಯಾಗಲಿವೆ. ಬಿಗುಮಾನವನ್ನು ಮುಂದುವರಿಸಿದರೆ ನಿಮಗೇ ನಷ್ಟ. ವಿಶಾಲ ಹೃದಯ ನಿಮ್ಮದಾಗಲಿ. ಗುರುವಿನ ಅನುಗ್ರಹ ಸದಾ ನಿಮ್ಮಮೇಲಿದೆ.

ತುಲಾ: ಹಣ್ಣು ಮತ್ತು ತರಕಾರಿ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವವರಿಗೆ ಈ ದಿನ ಅದೃಷ್ಟದಾಯಕ. ನಿಮ್ಮ ಮಳಿಗೆಯಲ್ಲಿ ನಿಮಗೆ ಅರಿವಿಲ್ಲದಂತೆ ಸಕಾರಾತ್ಮಕ ಸ್ಪಂದನಗಳು ಮೂಡಿ ಖುಷಿಗೊಳಿಸಲಿವೆ. ಲಕ್ಷ್ಮೀ ದೇವಿಯನ್ನು ಆರಾಧಿಸಿ.

ವೃಶ್ಚಿಕ: ಇಂದು ಉಡುಗೊರೆಗಳನ್ನು ಸ್ವೀಕರಿಸುವ ದಿನ, ಮನೆಯಲ್ಲಿ ಸಿಹಿಭಕ್ಷ್ಯಗಳನ್ನು ಮಾಡಿ ಉಣ್ಣುವಂಥ ದಿನ. ಅದೇಕೆ ಎಂಬುದು ಸಂಜೆಯ ವೇಳೆಗೆ ನಿಮಗೇ ಗೊತ್ತಾಗಲಿದೆ. ಮುಂಗಡ ಶುಭಾಶಯಗಳು. ನಾಗದೇವರಿಗೆ ಹಾಲು ಹಾಗೂ ಎಳನೀರು ಅಭಿಷೇಕ ಮಾಡಿ. ಒಳಿತಾಗುವುದು.

ಧನು: ವೃತ್ತಿಜೀವನದಲ್ಲಿ ಬದಲಾವಣೆಗೆ ಮುಂದಾಗಲು ಇದು ಸಕಾಲವಲ್ಲ. ಕಾರ್ಯದೊತ್ತಡ ಎಲ್ಲ ಕಡೆಯೂ ಇರುವಂಥದ್ದೇ. ಹೊಂದಿಕೊಂಡು ಹೋದಲ್ಲಿ ಮುಂದೆ ಉಜ್ವಲ ಭವಿಷ್ಯವಿದೆ. ಹೀಗಾಗಿ ದುಡುಕದಿರಿ. ಗುರುವಿನ ಅನುಗ್ರಹಕ್ಕಾಗಿ ಹತ್ತಿರ ಇರುವ ರಾಘವೇಂದ್ರ ಸ್ವಾಮಿಗಳ ದರ್ಶನ ಮಾಡಿ.

ಮಕರ: ವಾಹನಗಳಲ್ಲಿ ಪಯಣಿಸುವಾಗ ಅಥವಾ ರಸ್ತೆಯನ್ನು ದಾಟುವಾಗ ಸ್ವಲ್ಪ ಎಚ್ಚರಿಕೆಯಿಂದಿರಿ. ನಿಮ್ಮ ಮೈಗೆ ಒಗ್ಗದ ಆಹಾರಕ್ರಮವನ್ನು ಯತ್ನಿಸಿ ನೋಡುವ ಸಾಹಸಕ್ಕೆ ಕೈಹಾಕದಿರಿ.

ಕುಂಭ: ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಬೇಕಾಗಿ ಬರಬಹುದು. ಆಪ್ತರು ಎಷ್ಟೇ ಆಗ್ರಹಿಸಿದರೂ, ಮನವೊಲಿಸಿದರೂ ಸಾಲದ ಜಾಮೀನು ಪತ್ರಗಳಿಗೆ ರುಜು ಹಾಕಲು ಹೋಗಬೇಡಿ.

ಮೀನ: ಸಂಚುಕೋರರು ಅದೆಷ್ಟೇ ತಂತ್ರಗಳನ್ನು ಹೆಣೆದರೂ ನಿಮಗೆ ಬಾಧಕವಿಲ್ಲ. ನಿಮ್ಮ ಒಳ್ಳೆಯ ತನವೇ ನಿಮ್ಮನ್ನು ಕಾಪಾಡುತ್ತದೆ. ಸತ್ಯಮಾರ್ಗ ಮತ್ತು ಪ್ರಾಮಾಣಿಕತೆಯಿಂದ ವಿಮುಖರಾಗದಿರಿ.

● ಕೆ.ಬಿ.ಸಂತೋಷ್ ಗುರೂಜಿ

ಮಧುರ ಸ್ಮೃತಿ

ಪ್ರಣಯರಾಜನನ್ನು ಹರಸಿದ ರಸಿಕರ ರಾಜ .. ಡಾ.ರಾಜ್‌ಕುಮಾರ್‌ರನ್ನು 'ರಸಿಕರ ರಾಜ' ಎಂದೂ, ಶ್ರೀನಾಥ್‌ರನ್ನು 'ಪ್ರಣಯರಾಜ' ಎಂದೂ ಕರೆದಿದ್ದು ನಮ್ಮ ಚಿತ್ರಪ್ರೇಮಿಗಳು. 'ಲಗ್ನಪತ್ರಿಕೆ', 'ಬಂಗಾರದ ಮನುಷ್ಯ' ಮುಂತಾದ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ಈ ಜೋಡಿ, ಕೆಲ ವರ್ಷಗಳ 'ಗ್ಯಾಪ್' ನಂತರ 'ಸಮಯದ ಗೊಂಬೆ', 'ಯಾರಿವನು', 'ಶ್ರಾವಣ ಬಂತು' ಚಿತ್ರಗಳಲ್ಲೂ ಜತೆಯಾಗಿ ಅಭಿನಯಿಸಿ ಅಭಿಮಾನಿಗಳನ್ನು ರಂಜಿಸಿದ್ದಿದೆ. ಶ್ರೀನಾಥ್ ಹಾಗೂ ಗೀತಾ ಅವರ ಮದುವೆ ನಡೆದಿದ್ದು 1972ರ ನವೆಂಬರ್ 10ರಂದು. ಈ ಸಂತಸದ ಸಮಾರಂಭದಲ್ಲಿ ಡಾ.ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ ದಂಪತಿ ಪಾಲ್ಗೊಂಡು ನವದಂಪತಿಗೆ ಶುಭ ಹಾರೈಸಿದಾಗಿನ ಚಿತ್ರವಿದು.

ಸಮರ್ಥ ರಾಮದಾಸರ ಸಮರ್ಥ ಶಿಷ್ಯ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಮಹಾರಾಷ್ಟ್ರದ ಸಂತಶ್ರೇಷ್ಠರ ಪೈಕಿ ಎದ್ದು ಕಾಣುವ ಹೆಸರು ಸಮರ್ಥ ರಾಮದಾಸರದು. ಅಖಂಡ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿ ಛತ್ರಪತಿ ಶಿವಾಜಿಯನ್ನು ಮಹಾರಾಜನನ್ನಾಗಿ ಮಾಡಿದ 'ಸಮರ್ಥರು' ಭಕ್ತಿ ಪಂಥದಲ್ಲಿ ಕ್ರಾಂತಿಯನ್ನೇ ಮಾಡಿ 'ದಾಸಬೋಧ' ಎಂಬ ಗ್ರಂಥವನ್ನು ರಚಿಸಿದ ಧೀಮಂತ. ರಾಜಗುರುವಾಗಿದ್ದ ಅವರಿಗೆ ರಾಜ ವೈಭೋಗವೇ ಕೈಗೆಟುಕುವಂತಿದ್ದರೂ, ಅವನ್ನೆಲ್ಲಾ ನಿರಾಕರಿಸಿ ಅತ್ಯಂತ ಸರಳ ಜೀವನ ನಡೆಸಿದ ಮಹಾನ್ ಜೀವವದು.

ಹಿಂದೂ ಸಾಮ್ರಾಜ್ಯದ ಸಾಮ್ರಾಟ ಎನಿಸಿಕೊಂಡಿದ್ದರೂ 'ಕ್ಷತ್ರಿಯವೀರ' ಛತ್ರಪತಿ ಶಿವಾಜಿಯಲ್ಲಿ ಆಧ್ಯಾತ್ಮಿಕ ಒಲವು ಪ್ರಬಲವಾಗಿತ್ತು. ರಾಜ್ಯಾಧಿಕಾರ, ಅರಮನೆ, ಸಂಪತ್ತು ಇವುಗಳೆಲ್ಲದರ ನಡುವೆಯಿದ್ದರೂ, ಶಿವಾಜಿಯ ಮನಸ್ಸು ವೈರಾಗ್ಯದತ್ತ ಓಡುತ್ತಿತ್ತು. ಹೀಗೆ ಅಧ್ಯಾತ್ಮದತ್ತ ತುಡಿಯುತ್ತಿದ್ದುದರಿಂಲೇ ಶಿವಾಜಿಗೆ ಸಮರ್ಥ ರಾಮದಾಸರಂಥ

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಮಹಾ ಗುರು ಸಿಕ್ಕಿದರು ಎನ್ನಬೇಕು. ಆತನ ಮನಸ್ಸನ್ನು ಅರಿತಿದ್ದ ಅವರು, ''ಶಿವಾಜಿ ಚಿಂತಿಸಬೇಡ. ನಿನ್ನ ಕಷ್ಟದ ಸಮಯದಲ್ಲಿ ನನ್ನನ್ನು ನೆನಪಿಸಿಕೊಂಡರೆ, ಎಲ್ಲಿದ್ದರೂ ನಿನ್ನೆದುರಿಗೆ ಬಂದು ನಿಲ್ಲುವೆ'' ಎಂದಿದ್ದರು.

ಒಮ್ಮೆ ಹೀಗೆಯೇ ರಾಜ್ಯಭಾರದ ನಿರ್ವಹಣೆಯಲ್ಲಿದ್ದಾಗ ಶಿವಾಜಿಯಲ್ಲಿ ವೈರಾಗ್ಯ ಭಾವ ತೀವ್ರವಾಯಿತು. ಈ ಹಿಂದೆ ಮಾತು ಕೊಟ್ಟಂತೆ ಆತ ಗುರುಗಳನ್ನು ಮನದಲ್ಲಿ ನೆನೆಯುತ್ತಿದ್ದಂತೆ, 'ಭವತಿ ಭಿಕ್ಷಾಂದೇಹಿ' ಎನ್ನುತ್ತಾ ಸಮರ್ಥ ರಾಮದಾಸರು ಶಿವಾಜಿಯ ಎದುರಿಗೆ ನಿಂತಿದ್ದರು. ಅವರನ್ನು ಕಂಡು ಅತೀವ ಸಂತಸಗೊಂಡ ಶಿವಾಜಿ, ಓಡಿಬಂದು ಅವರ ಪಾದದ ಬಳಿ ಪುಟ್ಟ ಮಗುವಿನಂತೆ ಕುಳಿತುಬಿಟ್ಟ. ಶಿಷ್ಯನನ್ನು ಮೇಲಕ್ಕೆಬ್ಬಿಸಿದ ರಾಮದಾಸರು, ''ಮಗೂ, ಹೀಗೇಕೆ ದುಃಖಿಸುತ್ತಿರುವೆ? ಏನಾಯಿತು?'' ಎಂದು ಕೇಳಿದರು. ಆಗ ಶಿವಾಜಿ, ''ಗುರುಗಳೇ, ನನಗೆ ಈ ರಾಜ್ಯಾಧಿಕಾರ, ವೈಭೋಗ, ಸಂಪತ್ತು, ಯುದ್ಧ, ಸಾವು-ನೋವು ಎಲ್ಲವೂ ಸಾಕಾಗಿವೆ. ಸನ್ಯಾಸಾಶ್ರಮ ಸ್ವೀಕರಿಸಿ ನಿಮ್ಮ ಜತೆಗೆ ಬರುವೆ'' ಎಂದ.

ಈ ಮಾತಿಗೆ ಸಮರ್ಥ ರಾಮದಾಸರು ಯಾವ ಭಾವವನ್ನೂ ವ್ಯಕ್ತಪಡಿಸದೆ, ''ಸರಿ ಹಾಗಾದರೆ, ನೀನು ಸನ್ಯಾಸ ಸ್ವೀಕರಿಸು, ನಿನ್ನ ರಾಜ್ಯಾಧಿಕಾರವನ್ನು ನನಗೆ ಕೊಡು, ನಾನು ನಡೆಸಿಕೊಂಡು ಹೋಗುವೆ'' ಎಂದರು. ಗುರುಗಳ ಮಾತು ಕೇಳಿ ಶಿವಾಜಿಗೆ ತನ್ನ ಮನದ ಭಾರವೆಲ್ಲಾ ಇಳಿದಂತೆ ಅನಿಸಿ, ಕೂಡಲೇ ಮಂತ್ರಿಗಳನ್ನು ಕರೆಸಿದ. ರಾಜ್ಯಾಧಿಕಾರದ ದಾಖಲೆಗಳೆಲ್ಲವನ್ನೂ ಸಮರ್ಥ ರಾಮದಾಸರ ಹೆಸರಿಗೆ ಬರೆಸಿ, ಆ ಪತ್ರವನ್ನು ಅವರ ಜೋಳಿಗೆಗೆ ಹಾಕಿಬಿಟ್ಟ.

ಶಿವಾಜಿಯನ್ನು ಆಶೀರ್ವದಿಸಿದ ಗುರುಗಳು ಕೆಲಕ್ಷಣದ ನಂತರ, ತಮ್ಮ ಜೋಳಿಗೆಯಲ್ಲಿದ್ದ ರಾಜ್ಯಾಧಿಕಾರದ ಪತ್ರಗಳನ್ನು ಕೈಯಲ್ಲಿ ಹಿಡಿದು, ''ಶಿವಾಜಿ, ಈ ರಾಜ್ಯದ ಅಧಿಕಾರವನ್ನು ನಾನು ಸಂಪೂರ್ಣವಾಗಿ ಸ್ವೀಕರಿಸಿರುವೆ, ನೀನು ಚಿಂತಿಸುವ ಅಗತ್ಯವಿಲ್ಲ. ಆದರೆ ನಿನ್ನ ಗುರುವಾಗಿ ಸದ್ಯಕ್ಕೆ ನಿನಗೊಂದು ಆದೇಶ ಕೊಡುವೆ. ನನ್ನ ಈ ರಾಜ್ಯವನ್ನು ಮತ್ತು ಅದರ ಸಂಪತ್ತನ್ನು ನೀನು ಸಮರ್ಪಕವಾಗಿ ನಿಭಾಯಿಸಬೇಕು'' ಎಂದು ಹೇಳಿ ಅವನ ಕೈಗೆ ದಾಖಲೆ ಪತ್ರಗಳನ್ನು ನೀಡಿದರು. ಶುರುವಿನಿಂದಲೂ ಗುರುಗಳ ಒಂದೇ ಒಂದು ಮಾತನ್ನೂ ಶಿವಾಜಿ ಧಿಕ್ಕರಿಸಿರಲಿಲ್ಲ. ಈಗಲೂ ಅದಕ್ಕೇ ಬದ್ಧನಾಗಿದ್ದ ಅವನು, 'ಇದು ಗುರುಗಳ ಆದೇಶ, ಅದರನ್ವಯ ನಾನು ರಾಜ್ಯಾಧಿಕಾರವನ್ನು ನಡೆಸಬೇಕು. ಇನ್ನು ಮುಂದೆ ನನಗೆ ಕರ್ಮಗಳನ್ನು ಮಾಡುವ ಅಧಿಕಾರವಿದೆಯೇ ಹೊರತು, ಅದರ ಫಲದಲ್ಲಿ ಅಲ್ಲ. ಗುರುವಾಜ್ಞೆಯನ್ನು ನಾನು ಪಾಲಿಸಬೇಕು, ಅಷ್ಟೇ' ಎಂಬ ಭಾವದಿಂದ ಆ ಪತ್ರಗಳನ್ನು ಸ್ವೀಕರಿಸಿದ.

ಸಮರ್ಥ ರಾಮದಾಸರು ಶಿವಾಜಿ ಮಹಾರಾಜನ ಜತೆಗಿದ್ದು, ಅವನ ಎಲ್ಲಾ ಸಮಸ್ಯೆಗಳಿಗೂ ಪರಿಹಾರಮಾರ್ಗ ತೋರಿಸಿ ಬಗೆಹರಿಸುತ್ತಿದ್ದರು. ಹಾಗೆ, ಸತ್ಯ ಮತ್ತು ಧರ್ಮದ ಮಾರ್ಗದಲ್ಲಿ ರಾಜ್ಯವು ನಡೆಯುವಂತಾಗಲು ಅವರೇ ಶಿವಾಜಿಗೆ ಮಾರ್ಗದರ್ಶಕರಾಗಿದ್ದು ಪ್ರೇರೇಪಣೆ ನೀಡಿದ್ದರು. ಸದ್ವಿಚಾರ ಸಂಗ್ರಹದಲ್ಲಿ ಸಿಗುವ ಗುರು-ಶಿಷ್ಯರ ಈ ಸಂಬಂಧವು, ಒಬ್ಬ ಒಳ್ಳೆಯ ಗುರುವಿದ್ದಾಗ ನಾವು ಹೇಗೆ ಭವಸಾಗರವನ್ನು ಆತ್ಮವಿಶ್ವಾಸದಿಂದ ದಾಟಲು ಸಾಧ್ಯವಾಗುತ್ತದೆ ಎಂಬುದನ್ನು ನಿರೂಪಿಸುತ್ತದೆ.

ವಿವಿಧ ವಿನೋದಾವಳಿ...

ಪಾಪಿ ಸಮುದ್ರ ಹೊಕ್ಕರೂ ಮೊಣಕಾಲುದ್ದ ನೀರು!

ಯಗಟಿ ರಘು ನಾಡಿಗ್

ಅವಸರಯ್ಯನ ಮಗ ಅತಂತ್ರರಾಯ ಹಳ್ಳಿಯಲ್ಲಿದ್ದ ತನ್ನ ಮಾವನ ಮನೆಗೆ ಅಪರೂಪಕ್ಕೆ ಹೊರಟಿದ್ದ. ಎಡಗಾಲು ಮುಂದೆ ಮಾಡಿ ಬಸ್ಸಿಗೆ ಹತ್ತಿದ. 'ಬೇರೆ ಕಡೆ ಹೇಗೋ ಏನೋ ಗೊತ್ತಿಲ್ಲ, ಆದರೆ ಈ ಬಸ್ಸು ಮಾತ್ರ ಖಂಡಿತವಾಗಿ ಸ್ತ್ರೀಲಿಂಗವೇ ಸರಿ ಎಂಬ ನಿರ್ಧಾರಕ್ಕೆ' ಈ ಅಳಿಯದೇವರು ಬಂದರು. ಏಕೆಂದರೆ, ನವಮಾಸ ತುಂಬಿದ ಹೆಣ್ಣು ಜೀವದಂತೆ ಬಸ್ಸು ತೂಗುಯ್ಯಾಲೆ ಮಾಡಿಕೊಂಡು ಸಾಗುತ್ತಿತ್ತು. ತುಂಬಾ ನಿರಾಳವಾಗಿ, ಜೀವನದ ಜವಾಬ್ದಾರಿಯನ್ನೆಲ್ಲಾ ಮುಗಿಸಿ ಕೈತೊಳೆದುಕೊಂಡ ಹಿರಿಯ ಜೀವವೊಂದರ 'ವಂಶವಾಹಿನಿ'ಯೋ ಅಥವಾ ಬಸವನ ಹುಳುವಿನ ಕ್ರೋಮೋಸೋಮೋ ಎಂಜಿನ್‌ನಲ್ಲಿ ಸೇರಿರಬಹುದೇ ಎಂಬ ಸಂದೇಹ ಬರುವಷ್ಟು 'ವೇಗವಾಗಿ'(!) ಬಸ್ಸು ತೆವಳುತ್ತಾ ಸಾಗುತ್ತಿತ್ತು.

ಅಳಿಯದೇವರು ಹತ್ತಿದ್ದ ಆ ಬಸ್ಸು ಆತನ 'ಕಾಲ್ಗುಣ'ದಿಂದಲೋ ಅಥವಾ ಡ್ರೈವರ್‌ನ 'ಕೈಗುಣ'ದಿಂದಲೋ ದಾರಿಯಲ್ಲೇ ಮರಿ ಹಾಕಿತು. 'ಅಮಾವಾಸ್ಯೆಯ ಕತ್ತಲು, ಜಿಟಿಜಿಟಿ ಮಳೆ ಬೇರೇ, ಬಸ್ಸು ರಿಪೇರಿಯಾಗುವುದೇ ದುಸ್ತರ' ಎಂಬ ಚಿಂತನೆಯನ್ನು ಅಳೀಮಯ್ಯನ 7ನೇ ಇಂದ್ರಿಯ ಹೊರಸೂಸಿದ್ದರಿಂದ, ಜೀವನದಲ್ಲೇ ಮೊದಲಬಾರಿಗೆ ಆತ ಮಿದುಳನ್ನು ಹೆಚ್ಚುವರಿಯಾಗಿ ಉಪಯೋಗಿಸಿ, ಬಸ್ಸಿನಿಂದಿಳಿದು, ದಾರಿಯಲ್ಲಿ ಬರುತ್ತಿದ್ದ ಎತ್ತಿನಗಾಡಿಯನ್ನು ಹತ್ತಿಕೂತ. ಆ ಎತ್ತಿನ ಗಾಡಿಯ ಚಕ್ರಗಳು ಕೂಡ ನಿಧಾನವಾಗಿ, ಆದರೆ ಬಸ್ಸು ಓಡುತ್ತಿದ್ದುದಕ್ಕಿಂತ ವೇಗವಾಗಿ ಮುಂದುರುಳುತ್ತಿದ್ದವು. 'ಮಾವನ ಮನೆಗೆ ಹೋದಮೇಲೆ ಘಮಗದಸ್ತಾದ ಕಡಲೇ ಕಾಳು-ಬದನೇಕಾಯಿ ಹುಳಿ, ಮಿಡಿ ಮಾವಿನ ಕಾಯಿಯ ಉಪ್ಪಿನಕಾಯಿ, ಹುಚ್ಚೆಳ್ಳು ಚಟ್ನೀ ಪುಡಿ, ಕೆನೆ ಮೊಸರು ತಟ್ಟೆಗೆ ಬಿದ್ದೇಬೀಳುತ್ತೆ, ಊಟದ ನಂತರ ಸೊಗಸಾಗಿ ಕಳಿತಿರುವ ನಂಜನಗೂಡು ರಸಬಾಳೆ ಹಣ್ಣು ಸಿಕ್ಕೇ ಸಿಗುತ್ತೆ.

ಅಲ್ಲಿಯವರೆಗೂ ನಾನು ತಡಕೊಂಡ್ರೆ ಆಯ್ತು' ಎಂದು ಮತ್ತೆಮತ್ತೆ ಸ್ವಗತದಲ್ಲಿ ಸಮಾಧಾನ ಹೇಳಿಕೊಳ್ಳುತ್ತಿದ್ದ ಅಳೀಮಯ್ಯನಿಗೆ ಒಟ್ನಲ್ಲಿ ಮಾವನ ಮನೆಗೆ ಹೋಗಿ ಬಿದ್ದರೆ ಸಾಕೆನಿಸಿತ್ತು.

ಹೇಗೋ ಮಾಡಿ ಅಂತೂ ಇಂತೂ ಮಾವನ ಮನೆಯನ್ನು ತಲುಪುವ ಹೊತ್ತಿಗೆ ರಾತ್ರಿ ಹನ್ನೆರಡು ಗಂಟೆಯಾಗಿತ್ತು. ಹಳ್ಳಿಯಲ್ಲಿ ಸಾಮಾನ್ಯವಾಗಿ ಜನರು ಮಲಗುವುದು ತಡವಾಗುವುದರಿಂದ ಮಾವನ ಮನೆಯ ಮುಂಬಾಗಿಲು ತೆರೆದೇ ಇತ್ತು. ತಾನು ಬಂದದ್ದು ಮಾವನ ಮನೆಯವರಿಗೆ ಗೊತ್ತಾಗಲಿ ಎಂದು ಅಳೀಮಯ್ಯ ಒಮ್ಮೆ 'ಹುಸಿಕೆಮ್ಮು' ಕೆಮ್ಮಿದ. ಊಹೂಂ... ಯಾರೂ ಆಚೆಗೆ ಬರಲಿಲ್ಲ! ಒಮ್ಮೆ ದೀರ್ಘವಾಗಿ ಕ್ಯಾಕರಿಸಿದ. ಅದು ಕೇಳಿದ್ದೇ ತಡ, ಬಂಗಾರದ ಅವಲಕ್ಕಿ ಸರ, ಮಾವಿನಕಾಯಿ ಸರಕ್ಕೆ ಕುತ್ತಿಗೆಯನ್ನು ನೇತುಹಾಕಿಕೊಂಡಿದ್ದ (!), ಕಾಸಗಲ ಕುಂಕುಮದ ಸರಳಮ್ಮನವರು ವಜ್ರ ಖಚಿತವಾದ ಚಿನ್ನದ ಬಳೆಗಳನ್ನು ಹೊಂದಿದ್ದ ಕೈಗಳಿಂದ ಹಿತ್ತಾಳೆ ಕೊಳದಪ್ಪಲೆಯಲ್ಲಿ ಕಡಲೇ ಕಾಳು-ಬದನೇಕಾಯಿ ಹುಳಿಯ ಅನ್ನವನ್ನು ಕಲಸುತ್ತಾ ಹೊರಗೆ ಬಂದರು.

ಸರಳಮ್ಮನವರು ಅತಂತ್ರರಾಯನ ಏಕಮಾತ್ರ ಹೆಂಡತಿಯ ಏಕಮಾತ್ರ ತಾಯಿ, ಅರ್ಥಾತ್ ಅತಂತ್ರರಾಯನ ಅತ್ತೆ. ಅರ್ಧರಾತ್ರಿಯಲ್ಲಿ ಅಲ್ಲಾಡಿಸಿಕೊಂಡು ಆಗಮಿಸಿದ ಅಳೀಮಯ್ಯ ಅತಂತ್ರರಾಯನನ್ನು ಅವಲೋಕಿಸುತ್ತಲೇ ಅತ್ತೆ ಸರಳಮ್ಮನ ಮುಖವು ಹಿತ್ತಾಳೆ ಕೊಳದಪ್ಪಲೆಗಿಂತ ಅಗಲವಾಯಿತು. ''ಓಹೋ ಹೋ... ಬನ್ನಿ ಬನ್ನಿ ಅಳಿಯಂದ್ರೇ, ಚೆನ್ನಾಗಿದ್ದೀರಾ? ಅಯ್ಯೋ ಏನ್ ಹೇಳ್ತೀರಿ, ಅನ್ನ-ಹುಳಿ ತುಂಬಾ ಉಳಿದಿತ್ತು... ಈಗ್ ತಾನೇ ನಮ್ ಮನೆ 'ಟಾಮಿ'ಗೆ ಹುಳಿಯನ್ನ ಕಲಸಿ ಹಾಕೋಣಾಂತಿದ್ದೆ... ಅಷ್ಟರಲ್ಲಿ ನೀವೇ ಬಂದ್ಬಿಟ್ರಿ... ಏಳಿ ಊಟಾ ಮಾಡೋವ್ರಂತೇ...'' ಎಂದು ಶುದ್ಧ ಸಾವೇರಿ ರಾಗದಲ್ಲಿ ಆಲಾಪನೆ ಮಾಡಿದರು.

'ದಶಮಗ್ರಹ' ಎಂದೇ ಹೆಸರಾಗಿರುವ ಅಳಿಯನ ಸ್ಥಾನಮಾನವು ಯಃಕಶ್ಚಿತ್ ಒಂದು ನಾಯಿಯೊಂದಿಗೆ ಗುರುತಿಸಿಕೊಳ್ಳುವಂತೆ ಆಯಿತಲ್ಲಾ ಎಂದು 'ತಾಯಿ' ಸರಣಿಯ ಚಲನಚಿತ್ರ ನಿರ್ಮಾಪಕ 'ಅಬ್ಬಾಯಿ ನಾಯ್ಡು' ಶೈಲಿಯಲ್ಲಿ ನೊಂದುಕೊಂಡ ಅತಂತ್ರರಾಯ, 'ಮನೆಯ ನಾಯಿಗೆ ಹಾಕಲೆಂದು ಇಟ್ಟಿದ್ದ ಅನ್ನವನ್ನು ನಾನು ತಿನ್ನಬೇಕೇ?' ಎಂದು ತನ್ನನ್ನೇ ಒಮ್ಮೆ ಕೇಳಿಕೊಂಡ. ಆದರೆ ವಿಧಿಯಿರಲಿಲ್ಲ, ಆಗಷ್ಟೇ ಹುಟ್ಟಿದ ಇಲಿಮರಿಯ ಬಾಲ ಸೋಕಿದರೂ ಬೀಳುವಷ್ಟು ನಿತ್ರಾಣನಾಗಿದ್ದ ಆತ. ಹಾಗಂತ, ''ಆಯ್ತು ಊಟ ಹಾಕಿ'' ಅಂತ ಅತ್ತೆಯವರಲ್ಲಿ ಹೇಳೋಕೆ ಬಿಗುಮಾನ, ಅವಮಾನ..! ಆದ್ದರಿಂದ, 'ಅವಮಾನದಿಂದ ಸಾಯುವುದಕ್ಕಿಂತ, ಹಸಿವಿನಿಂದ ಸಾಯುವುದೇ ಮೇಲು' ಎಂಬ 'ಸದೃಢ' ನಿರ್ಧಾರಕ್ಕೆ ಬಂದ 'ದುರ್ಬಲ' ಅತಂತ್ರರಾಯ, ಮುಖದಲ್ಲಿ ಬಲವಂತದ ಹುಸಿನಗೆಯನ್ನು ಚೆಲ್ಲುತ್ತಾ, ''ಅಯ್ಯೋ... ನನ್ನದಾಗ್ಲೇ ಊಟ ಆಗಿದೆ ಅತ್ತೇ... ಸುಮ್ನೇ ನಿಮಗ್ಯಾಕೆ ತೊಂದ್ರೆ...?'' ಅಂತ ರಾಗವೆಳೆದ.

''ಅಯ್ಯೋ, ನೀವೊಳ್ಳೆ ಚೆನ್ನಾಗಿ ಹೇಳಿದ್ರೀ... ಊರಿನಿಂದ ಹೊರಡುವಾಗ ತಿಂದದ್ದು, ಅದೆಲ್ಲಿ ಉಳಿದಿರುತ್ತೆ? ಇಷ್ಟೊತ್ತಿಗೆ ಚೆನ್ನಾಗಿ ಜೀರ್ಣವಾಗಿ ಬಿಟ್ಟಿರುತ್ತೆ. ಏಳೀಪ್ಪಾ ಊಟಕ್ಕೆ..'' ಅಂತ ಆಲಾಪನೆಯಿಂದ ಪಲ್ಲವಿಗೆ ಬಂದರು ಸರಳಮ್ಮ..!!

''ಅಯ್ಯೋ ಅತ್ತೇ... ನಾಯಿಗೆ ಅಂತ ಕಡಲೇ ಕಾಳು-ಬದನೇಕಾಯಿ ಹುಳಿಯನ್ನ ಕಲಸ್ತಿದ್ದೀರಿ, ಪಾಪ ಅದಕ್ಕೆ ಹಾಕಿ'' ಅಂದ ಅತಂತ್ರರಾಯ.

''ಅಯ್ಯೋ ಸಂಕೋಚ ಪಟ್ಕೋಬೇಡಿ, ಊಟಕ್ಕೆ ಏಳೀಪ್ಪಾ'' ಅಂತ ಸರಳಮ್ಮನ ಅನುಪಲ್ಲವಿ. ಈ ಮಾತಿಗೆ ಅತಂತ್ರರಾಯ, ''ನಾವಾದ್ರೆ ಬಾಯಿಬಿಟ್ಟು 'ಹಸಿವಾಗಿದೆ' ಅಂತ ಕೇಳ್ತೀವಿ. ಪಾಪ ಆ ನಾಯಿ ಮೂಕಪ್ರಾಣಿ... ಹಸಿವಾದ್ರೆ ಅದು ಹೇಗೆ ತಾನೇ ಕೇಳುತ್ತೆ? ನಾಯಿಗೆ ತುಂಬಾ ಹಸಿವಾಗಿರುತ್ತೆ, ಆ ಹುಳಿಯನ್ನಾನ ಅದಕ್ಕೇ ಹಾಕಿ ಅತ್ತೇ..'' ಅಂದ ತ್ಯಾಗರಾಜನ ಪೋಸ್‌ನಲ್ಲಿ. ''ಅಯ್ಯೋ ರಾಮ, ಒಂದು ಪಕ್ಷ ನಾಯಿಗೆ ಹಾಕ್ಬೇಕು ಅಂದ್ರೆ, ಬಿಸಿಬಿಸಿಯಾಗಿ ಅಡುಗೆ ಮಾಡಿ ಹಾಕಿದ್ರಾಯ್ತು... ನೀವೀಗ ಈ ಕಲಸಿರೋ ಹುಳಿಯನ್ನ ತಿಂದು ಮಲಕ್ಕೋ ಬಾರದೇ..?'' ಅಂತ ಪ್ರೀತಿಪೂರ್ವಕ ಹುಸಿ ಕೋಪದಲ್ಲಿ ಚಿಟ್ಟೆಸ್ವರವನ್ನು ಹಾಡಿದರು ಅತಂತ್ರರಾಯನ ಅತ್ತೆಮ್ಮ... ಸರಳಮ್ಮ..!!

'ಅಯ್ಯೋ ನನ್ನ ನಾಯಿಪಾಡೇ..' ಎಂದು ಗೊಣಗಿಕೊಳ್ಳುತ್ತಾ ಅತಂತ್ರರಾಯ ಕೈಕಾಲು ತೊಳೆದುಕೊಳ್ಳಲು ಬಚ್ಚಲಮನೆ ಕಡೆಗೆ ತೂರಾಡುತ್ತಾ ಹೆಜ್ಜೆ ಹಾಕತೊಡಗಿದ!

ಪದಬಂಧ



ಎಡದಿಂದ ಬಲಕ್ಕೆ
1. ವರಿ ಬೇಡ, ಇದು ಉತ್ಪಾದನೆ (4)
3. ಎಣಿಸುವ ಎಂದರ್ಥ (3)
7. ಚರಿತ್ರೆಗೆ ಸಂಬಂಧಿಸಿದ ಎಂದರ್ಥ (4)
8. ವಾತಾವರಣದಲ್ಲಿರುವ ಗಾಳಿ (4)
10. ಅರಳುವಿಕೆ ಎಂದರ್ಥ (3)
12. ಇದು ಕಷ್ಟವಲ್ಲದ್ದು (3)
14. ವದನ, ಮುಖ (3)
16. ಮತ್ತೊಂದು ಕೈ ಕಟ್ಟಿಕೊಂಡಿರುವ ಮೊಸಳೆ (3)
18. ಆತನ ಕುಲ ಯಾವುದು (4)
19. ಕೆಂಪು ಕಣಗಿಲೆ (4)
20. ಸಾಕ್ಷಿ ಅಥವಾ ರುಜುವಾತು (3)
21. ಮಹಾವಿಷ್ಣುವಿನ ಹಾಸಿಗೆಯಾದ ಸರ್ಪರಾಜ (4)

ಮೇಲಿನಿಂದ ಕೆಳಕ್ಕೆ
2. ಶ್ರೇಷ್ಠವಾದ ಕವಿ (4)
4. ವನದಲ್ಲಿ ಬರೆದ ಪದ್ಯವೇ? (3)
5. ಪರೀಕ್ಷಿಸು ಅಥವಾ ಪ್ರಶ್ನಿಸು (4)
6. ವಿವಿಧ ಸ್ಥಳಗಳಿಗೆ ಸಂಚಾರ (3)
9. ಗ್ರೀಸ್ ದೇಶದವನು ಎಂದರ್ಥ (3)
11. ಚಾಂದ್ರಮಾನ ವರ್ಷದ ಎಂಟನೆಯ ತಿಂಗಳು (3)
13. ಹೆಂಗಸು ಎನ್ನುವ ಇನ್ನೊಂದು ಪದ (3)
15. ಒಂಬತ್ತು ಬಗೆಯ ರತ್ನಗಳು (4)
16. ನಮ್ಮನ್ನು ಪ್ರೇರೇಪಿಸುವ ಚಿತ್ತ (3)
17. ತಲೆಕೆಳಗಾಗಿ ಬಂದಿರುವುದು ಮತ್ತೊಂದು ಸೂರ್ಯ (4)
18. ಒಂದು ಬಗೆಯ ಸಿಡಿಮದ್ದು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿನಿಂದ ಕೆಳಕ್ಕೆ: [illegible]

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ

ವ್ಯಂಗ್ಯಚಿತ್ರ ಕೃಪೆ: ಮಂಜುಲ್



ನೀವು ಮಾಂಸಾಹಾರಿಯೋ ಅಥವಾ ಸಸ್ಯಾಹಾರಿಯೋ, ಬೇಗ ಹೇಳ್ರೀ... ಸಸ್ಯಾಹಾರಿ ಆಗಿದ್ರೆ ಹಸಿರುಟೋಪಿ. ಇಲ್ಲಾಂದ್ರೇ...

ಇಲ್ಲೊಂಚೂರು ಕೇಳ್ರೀ...

- ಬಟ್ಟೆಯ ಮೇಲೆ ಬೂಸ್ಟು ಮೆತ್ತಿಕೊಂಡರೆ ಚಿಂತಿಸಬೇಡಿ. ಸಾಬೂನಿಗೆ ಸೀಮೆಸುಣ್ಣದ ಚೂರ್ಣ ಬೆರೆಸಿ, ಆ ಮಿಶ್ರಣದ ಕಣಕವನ್ನು ಬಟ್ಟೆಯ ಮೇಲೆ ಪ್ರಯೋಗಿಸಿ ಬಿಸಿಲಿನಲ್ಲಿ ಒಣಗಿಸಿಬಿಟ್ಟರೆ ಬೂಸ್ಟು ಮಂಗಮಾಯ. ಬೂಸ್ಟಿನ ನಿವಾರಣೆಗೆ ಮತ್ತೊಂದು ಉಪಾಯವೂ ಇದೆ. ಸ್ವಲ್ಪ ನಿಂಬೆರಸ, ಒಂದು ಚಹಾ ಚಮಚದಷ್ಟು ಗಂಜಿಯ ಪಿಷ್ಟ ಹಾಗೂ 2 ಊಟದ ಚಮಚದಷ್ಟು ಉಪ್ಪನ್ನು ಸೇರಿಸಿ ಚೆನ್ನಾಗಿ ಕಲಸಿಟ್ಟುಕೊಳ್ಳಿ. ಈ ಮಿಶ್ರಣವನ್ನು ಬೂಸ್ಟು ಲೇಪಿತ ಬಟ್ಟೆಯ ಮೇಲೆ ಪ್ರಯೋಗಿಸಿ, ಅರ್ಧಗಂಟೆಯವರೆಗೆ ಗಾಳಿಯಲ್ಲಿ ಒಣಗಿಸಿ, ನಂತರ ನೀರಿನಿಂದ ಚೆನ್ನಾಗಿ ಒಗೆದರೆ ಬೂಸ್ಟು ಕಣ್ಮರೆಯಾಗುವುದು.
- ಬೆಲೆಬಾಳುವ ಬಟ್ಟೆಗಳಿಗೆ ಕೆಲವೊಮ್ಮೆ ಬೂಟ್ ಪಾಲಿಶ್ ಮೆತ್ತಿಕೊಂಡು ಕೆಲವರು ಮುಜುಗರ ಅನುಭವಿಸುವುದುಂಟು. ಇಂಥ ವೇಳೆ ಬಟ್ಟೆಯ ಅಂಥ ಭಾಗಕ್ಕೆ ಮೊದಲಿಗೆ ಸ್ಪಿರಿಟ್ ಅನ್ನು ಪ್ರಯೋಗಿಸಬೇಕು. ನಂತರದಲ್ಲಿ ಸಾಬೂನು ಬೆರೆಸಿ ಕುದಿಸಿದ ನೀರಿನಿಂದ ತೊಳೆಯಬೇಕು. ಅಥವಾ ಟರ್ಪೆಂಟೈನ್ / ಆಲ್ಕೊಹಾಲ್ ಪ್ರಯೋಗಿಸಿ, ಬಿಸಿನೀರಿನಿಂದ ತೊಳೆಯಬೇಕು. ಹೀಗೆ ಮಾಡಿದಲ್ಲಿ ಬೂಟ್ ಪಾಲಿಶ್‌ನ ಕಲೆ ನಿವಾರಣೆಯಾಗುವುದು.

ವಿಶ್ವಯೋಗ

ಯೋಗ ಮಾಡಿದರೆ, ರೋಗ ದೂರ

ಡಾ. ಪತಂಜಲಿ ಆಚಾರ್ಯ

ಯೋಗಾಸನಗಳ ಅಭ್ಯಾಸವು ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ಬೆಳೆದುಬಂದಿರುವ ಪರಿಪಾಠ. ಋಷಿ-ಮುನಿಗಳು, ತಪಸ್ವಿಗಳು ಮಾತ್ರವಲ್ಲದೆ ವಿವಿಧ ಕ್ಷೇತ್ರಗಳ ಸಾಧಕರು ಕೂಡ ಯೋಗಾಭ್ಯಾಸದ ಪ್ರಯೋಜನವನ್ನು ಸ್ವತಃ ಸವಿದು ಇತರರಿಗೂ ಮನವರಿಕೆ ಮಾಡಿಕೊಟ್ಟಿದ್ದುಂಟು. ಪಾಶ್ಚಾತ್ಯ ವ್ಯಾಯಾಮ ಪದ್ಧತಿಗಳ ಸ್ವರೂಪವೇ ಬೇರೆ-ಅಂಗಸೌಷ್ಠವ, ಸೌಂದರ್ಯದ ಕಡೆಗೇ ಹೆಚ್ಚಿನ ಒತ್ತುನೀಡಿ ಅದಕ್ಕನುಗುಣವಾದ ದೇಹದಂಡನೆಯನ್ನು ಬಿಂಬಿಸಿದ ವ್ಯಾಯಾಮ ಪದ್ಧತಿ ಅದು. ಇಂಥ ಅಂಗಸಾಧನೆಗಳಿಂದ ಮಾಂಸಖಂಡಗಳ ಬೆಳವಣಿಗೆಯಷ್ಟೇ ಸಾಧ್ಯ. ಆದರೆ ಯೋಗಾಸನಗಳು ಹಾಗಲ್ಲ; ಇವು ವ್ಯಕ್ತಿಯೊಬ್ಬನ ದೈಹಿಕ-ಮಾನಸಿಕ-ಆಧ್ಯಾತ್ಮಿಕ ಬೆಳವಣಿಗೆಗೂ ಕಸುವು ತುಂಬುತ್ತವೆ. ಅಂಥ ಒಂದೊಂದೇ ಆಸನಗಳನ್ನು ಪರಿಚಯ ಮಾಡಿಕೊಳ್ಳುತ್ತಾ ಹೋಗೋಣ. ಇಲ್ಲಿ ನೀಡಲಾಗಿರುವುದು ಪೂರಕ ಮಾಹಿತಿಯಷ್ಟೇ; ಯೋಗಾಭ್ಯಾಸವನ್ನು ಅನುದಿನದ ಆಚರಣೆಯಾಗಿಸಿಕೊಳ್ಳುವವರು ಗುರುಮುಖೇನ ಅದನ್ನು ಕಲಿತು ಅಳವಡಿಸಿಕೊಳ್ಳಬೇಕಾದುದು ಅಪೇಕ್ಷಣೀಯ.

ಶೀರ್ಷಾಸನ

ಈ ಆಸನವನ್ನು 'ಯೋಗಾಸನಗಳ ರಾಜ' ಎಂದೇ ಕರೆಯಲಾಗುತ್ತದೆ. ಅಪ್ರಾಪ್ತ ವಯಸ್ಸಿನಲ್ಲಿ ಕೂದಲು ಬೆಳ್ಳಗಾಗುವ, ಕೂದಲು ಉದುರುವ ಸಮಸ್ಯೆಯು ಈ ಆಸನದ ಆಚರಣೆಯಿಂದ ತಹಬಂದಿಗೆ ಬರುವುದು. ಅಧಿಕ ರಕ್ತದೊತ್ತಡ ಹಾಗೂ ಕ್ಷೀಣ ರಕ್ತ ದೊತ್ತಡದ ಸಮಸ್ಯೆ ಇರುವವರು ಈ ಆಸನ ವನ್ನು ಮಾಡಬಾರದು. 50ರ ಹರೆಯಕ್ಕೂ ಮುಂಚೆ ಈ ಆಸನವನ್ನು ಮಾಡಿದ ಅಭ್ಯಾಸ ವಿದ್ದರೆ, ತರುವಾಯದಲ್ಲೂ ಇದನ್ನು ಮುಂದು ವರಿಸಿಕೊಂಡು ಹೋಗಬಹುದು. ಇಲ್ಲವಾ ದಲ್ಲಿ, 50ರ ಹರೆಯದ ನಂತರ ಈ ಆಸನದ ಅಭ್ಯಾಸವನ್ನು ಹೊಸದಾಗಿ ಶುರುಮಾಡ ಬಾರದು ಎಂಬುದು ನಿಮ್ಮ ಗಮನಕ್ಕೆ.

ಅಭ್ಯಾಸಕ್ರಮ: ನಾಲ್ಕಾರು ಪದರಗಳಲ್ಲಿ ಮಡಚಿದ ಬಟ್ಟೆ ಅಥವಾ ಜಮಖಾನವನ್ನು ಅಥವಾ ಒಂದು ದಿಂಬನ್ನು ನೆಲದ ಮೇಲೆ ಇರಿಸಿಕೊಳ್ಳಿ. ನಂತರ ನೆಲದ ಮೇಲೆ ಮೊಣಕಾಲೂರಿ ಕುಳಿತುಕೊಳ್ಳಿ. ತರುವಾಯ ಮುಂದಕ್ಕೆ ಬಾಗಿ ಎರಡೂ ಕೈಗಳ ಬೆರಳುಗಳನ್ನು ಪರಸ್ಪರ ಹೆಣೆದುಕೊಂಡು ಮುಂಗೈಯನ್ನು ಬಟ್ಟೆಯ ಮೇಲಿರಿಸಿಕೊಳ್ಳಿ. ಮಡಚಿದ ಬಟ್ಟೆಯ ಮೇಲೆ, ಕೈಬೆರಳುಗಳ ಎಡೆಯಲ್ಲಿ ಶಿರವನ್ನು ಇರಿಸಿಕೊಳ್ಳಿ. ಈಗ ಕಾಲು ಮತ್ತು ಸೊಂಟವನ್ನು ನಿಧಾನವಾಗಿ ಮೇಲಕ್ಕೆ ಎತ್ತುತ್ತಾ ತಲೆಕೆಳಗಾಗಿ ನಿಲ್ಲುವ ಭಂಗಿಯನ್ನು ತಲುಪಬೇಕು. ಈ ಕ್ರಮವು ಅಭ್ಯಾಸವಾಗುವವರೆಗೂ ಇನ್ನೊಬ್ಬರ ಸಹಾಯವನ್ನು ಪಡೆದುಕೊಳ್ಳಬೇಕು ಅಥವಾ ಒಂದೊಮ್ಮೆ ಅಂಥವರು ಸಿಗದಿದ್ದರೆ ಗೋಡೆಯ ಮೂಲೆಯಲ್ಲಿ ಬಟ್ಟೆಯನ್ನು ಹಾಕಿಕೊಂಡು ಈ ಕ್ರಮವನ್ನು ಅನುಸರಿಸುತ್ತಾ ಹೋಗಬೇಕು. ತಲೆಕೆಳಗಾಗಿರುವ ಸ್ಥಿತಿಯಲ್ಲಿ ಶುರುವಿನಲ್ಲಿ 30 ಸೆಕೆಂಡುಗಳಿಂದ 1 ನಿಮಿಷದವರೆಗೂ ಇರಬೇಕು. ಆಸನವು ಅಭ್ಯಾಸವಾಗುತ್ತಾ ಹೋದಂತೆ, 5ರಿಂದ 10 ನಿಮಿಷಗಳವರೆಗೆ ಈ ಆಸನದ ಭಂಗಿಯಲ್ಲಿ ಇರಬಹುದು.

ಪ್ರಯೋಜನಗಳು: ಶೀರ್ಷಾಸನದ ಅಭ್ಯಾಸದಿಂದಾಗಿ ಕರುಳು ಮತ್ತು ಜಠರದ ಕಾಯಿಲೆಗಳು ಇಲ್ಲವಾಗುವುವು. ಚೆನ್ನಾಗಿ ಹಸಿವಾಗುವುದು. ಕಣ್ಣು, ಕಿವಿ, ನಾಲಗೆ ಮತ್ತು ಗಂಟಲು ಸಂಬಂಧಿತ ದೋಷಗಳು, ಹೊಟ್ಟೆನೋವು ಮತ್ತು ಮಲಬದ್ಧತೆಯ ಸಮಸ್ಯೆಗಳು ಕಡಿಮೆಯಾಗುವುವು, ರಕ್ತಪರಿಚಲನೆ ಪ್ರಾಣಶಕ್ತಿ ಮತ್ತು ಹೃದಯ ಸಂಬಂಧಿತ ಬಾಧೆಗಳ ನಿವಾರಣೆಯಾಗುವುವು. ಜ್ಞಾಪಕ ಶಕ್ತಿ ಮತ್ತು ಮನಸ್ಸು ಏಕಾಗ್ರತೆ ಹೆಚ್ಚುವುವು, ಚರ್ಮವು ಅಕಾಲಿಕವಾಗಿ ಸುಕ್ಕುಗಟ್ಟುವುದಿಲ್ಲ.

ಸಮಾಚಾರ ಸಣ್ಣದಲ್ಲ

ಕನ್ನಡಿಗ ಬಿ.ಸಿ. ರಮೇಶ್ ಕಬಡ್ಡಿ ತಂಡದ ಆಯ್ಕೆಗಾರ

ದೆಹಲಿ: ಭಾರತೀಯ ಅಮೆಚೂರ್ ಕಬಡ್ಡಿ ಫೆಡರೇಶನ್ (ಎಕೆಎಫ್ಐ) ಮೂವರು ಹಿರಿಯ ಕಬಡ್ಡಿ ಪಟುಗಳನ್ನು ಭಾರತ ಪುರುಷರ ತಂಡದ ಆಯ್ಕೆಗಾರರನ್ನಾಗಿ ನೇಮಿಸಿದೆ. ಈ ಸಮಿತಿಯಲ್ಲಿ ಕನ್ನಡಿಗ, ಅರ್ಜುನ

ಪ್ರಶಸ್ತಿ ವಿಜೇತ ಬಿ.ಸಿ.ರಮೇಶ್‌ಗೆ ಸ್ಥಾನ ನೀಡಲಾಗಿದೆ. ಮುಂಬರುವ ಅಂತಾರಾಷ್ಟ್ರೀಯ ಟೂರ್ನಿಗಳಿಗೆ ಈ ಸಮಿತಿ ಭಾರತ ತಂಡವನ್ನು ಆಯ್ಕೆ ಮಾಡಲಿದೆ. ಬಲ್ವಾನ್ ಸಿಂಗ್ ಹಾಗೂ ಜೈವೀರ್ ಶರ್ಮಾ ಕೂಡ ಆಯ್ಕೆ ಸಮಿತಿಯ ಸದಸ್ಯರಾಗಿದ್ದಾರೆ. ಪ್ರೊ ಕಬಡ್ಡಿ ಲೀಗ್ ಬೆಂಗಳೂರು ಬುಲ್ಸ್ ಫ್ರಾಂಚೈಸಿ ಬಿ.ಸಿ. ರಮೇಶ್‌ಗೆ ಮಹತ್ವದ ಹುದ್ದೆ ನೀಡಿದೆ. ಇತ್ತೀಚೆಗೆ ಅವರನ್ನು ತಂಡದ ಕೋಚ್ ಆಗಿ ನೇಮಕ ಮಾಡಿದೆ. ಮುಂದಿನ ಆವೃತ್ತಿಯಿಂದ ಅವರು ಕೋಚಿಂಗ್ ನಡೆಸಲಿದ್ದಾರೆ. ರಮೇಶ್ ಕೋಚಿಂಗ್‌ನಲ್ಲಿ 2019ರಲ್ಲಿ ಬೆಂಗಾಲ್ ವಾರಿಯರ್ಸ್ ಚಾಂಪಿಯನ್ ಆಗಿತ್ತು. ಅರ್ಜುನ ಪ್ರಶಸ್ತಿ ಪುರಸ್ಕೃತ, ಭಾರತದ ಮಾಜಿ ಕಬಡ್ಡಿ ಆಟಗಾರರಾಗಿರುವ ಬಿ.ಸಿ. ರಮೇಶ್ ಕುಮಾರ್ ಪ್ರೊ ಕಬಡ್ಡಿ ಲೀಗ್‌ನ ಯಶಸ್ವಿ ಕೋಚ್‌ಗಳಲ್ಲಿ ಒಬ್ಬರೆನಿಸಿದ್ದಾರೆ. 2018ರಲ್ಲಿ ಬೆಂಗಳೂರು ಬುಲ್ಸ್ ತಂಡಕ್ಕೆ ಸಹಾಯಕ ಕೋಚ್ ಆಗಿದ್ದ ರಮೇಶ್ ಕುಮಾರ್, ತಂಡ ಚಾಂಪಿಯನ್ ಆಗಿ ಹೊರ ಹೊಮ್ಮುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ನಗರದಲ್ಲಿ ಇಂದು ಆರ್‌ಸಿಬಿ V/S ಮುಂಬೈ

ಬೆಂಗಳೂರು: ವಡೋದರಲ್ಲಿ ನಡೆದ ಮೂರನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್‌ನ (ಡಬ್ಲ್ಯೂಪಿಎಲ್) ಒಂದನೇ ಹಂತದ ಪಂದ್ಯಾವಳಿಗಳು ಮುಕ್ತಾಯ ಕಂಡಿದ್ದು, ಎರಡನೇ ಹಂತದ ಪಂದ್ಯಗಳು

ಉದ್ಯಾನ ನಗರಿಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂದು ನಡೆಯಲಿದೆ. ಗುರುವಾರ ಟೂರ್ನಿಗೆ ಬಿಡುವಿನ ದಿನವಾಗಿತ್ತು. ಬೆಂಗಳೂರಿನಲ್ಲಿ ಆತಿಥೇಯ ಆರ್‌ಸಿಬಿ ಹಾಗೂ ಮಾಜಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡಗಳು ಸೆಣಸಲಿವೆ. ಬೆಂಗಳೂರಿನಲ್ಲಿ ಒಟ್ಟು 8 ಪಂದ್ಯಗಳು ನಿಗದಿಯಾಗಿದ್ದು ಆರ್‌ಸಿಬಿ 4ಪಂದ್ಯದಲ್ಲಿ ಕಣಕ್ಕಿಳಿಯಲಿದೆ. ಈಗಾಗಲೇ ಆಡಿರುವ 2 ಪಂದ್ಯಗಳಲ್ಲಿ ಆರ್‌ಸಿಬಿ ಗೆಲುವು ದಾಖಲಿಸಿ ಕೂಟದ ಅಜೇಯ ತಂಡವಾಗಿ ಸದ್ಯ ಅಂಕಪಟ್ಟಿಯ ಅಗ್ರಸ್ಥಾನದಲ್ಲಿದೆ. ಇದೀಗ ತವರಿನಲ್ಲಿಯೂ ಇದೇ ಲಯವನ್ನು ಮುಂದುವರಿ ಸುವ ಆತ್ಮವಿಶ್ವಾಸದಲ್ಲಿದೆ. ಬೆಂಗಳೂರಿನ ಪಂದ್ಯಗಳ ಬಳಿಕ ಮೂರನೇ ಹಂತದ ಪಂದ್ಯಗಳು ಲಕ್ನೋದಲ್ಲಿ ನಡೆಯಲಿದೆ. ಆ ಬಳಿಕ ನಾಕೌಟ್ ಪಂದ್ಯಗಳು ಮುಂಬೈನಲ್ಲಿ ನಿಗಧಿಯಾಗಿವೆ.

ಗಿಲ್ ಶತಕ, ಶಮಿಗೆ 5 ವಿಕೆಟ್ | ಬಾಂಗ್ಲಾವನ್ನು ಬಗ್ಗು ಬಡಿದ ಭಾರತ

ಭಾರತದ ಶುಭಾರಂಭ

ದುಬೈ: ಶುಭ್‌ಮನ್ ಗಿಲ್ ಅವರ ಭರ್ಜರಿ ಶತಕ ಹಾಗೂ ಮಹಮ್ಮದ್ ಶಮಿ ಅವರ ಮಾರಕ ಬೌಲಿಂಗ್‌ನ ನೆರವಿನಿಂದ ಗುರುವಾರ ಇಲ್ಲಿ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಭಾರತವು ಬಾಂಗ್ಲಾದೇಶದ ವಿರುದ್ಧ 6 ವಿಕೆಟ್‌ಗಳಿಂದ ಜಯ ಸಾಧಿಸಿ, ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶದ ಆರಂಭ ಉತ್ತಮವಾಗಿರಲಿಲ್ಲ. ಭಾರತೀಯ ವೇಗಿಗಳಾದ ಮೊಹಮ್ಮದ್ ಶಮಿ ಹಾಗೂ ಹರ್ಷಿತ್ ರಾಣಾ ಆರಂಭದಲ್ಲೇ ಬಾಂಗ್ಲಾಕ್ಕೆ ಹೊಡೆತ ನೀಡಿದರು. ಆರಂಭಿಕ ಆಟಗಾರ ಸೌಮ್ಯ ಸರ್ಕಾರ್ ಹಾಗೂ ಬಾಂಗ್ಲಾ ತಂಡದ ನಾಯಕ ನಜ್ಮುಲ್ ಹುಸೇನ್ ಅವರನ್ನೂ ಶೂನ್ಯಕ್ಕೆ ಔಟ್ ಮಾಡಿದರು. ಬಳಿಕ ದಾಳಿಗಿಳಿದ ಅಕ್ಷರ್ ಪಟೇಲ್ ಡಬಲ್ ಆಘಾತ ನೀಡಿದರು. ತನ್ಜೀದ್ ಹಸನ್ (25) ಹಾಗೂ ಮುಶ್ಫಿಕರ್ ರಹೀಮ್ (0) ಹೆಚ್ಚು ಹೊತ್ತು ಕ್ರೀಸಿನಲ್ಲಿ ನಿಲ್ಲಲಿಲ್ಲ. 8.3 ಓವರ್‌ಗಳಲ್ಲಿ 35 ರನ್ ಗಳಿಸುವಷ್ಟರಲ್ಲಿ ಬಾಂಗ್ಲಾದೇಶವು ಪ್ರಮುಖ ಐದು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ಮಧ್ಯೆ ರೋಹಿತ್ ಶರ್ಮಾ ಜಾಕರ್ ಅವರ ಸುಲಭ ಕ್ಯಾಚ್ ಕೈಚೆಲ್ಲಿದ ಪರಿಣಾಮವಾಗಿ ಸ್ಪಿನ್ನರ್ ಅಕ್ಷರ್ ಪಟೇಲ್‌ಗೆ ಹ್ಯಾಟ್ರಿಕ್ ವಿಕೆಟ್ ಗಳಿಸುವ ಅವಕಾಶ ನಷ್ಟವಾಯಿತು. ಇದರ ಸ್ಪಷ್ಟ ಲಾಭ ಪಡೆದ ಆಟಗಾರರು ಆರನೇ ವಿಕೆಟ್‌ಗೆ 154 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ಜಾಕರ್ 114 ಎಸೆತಗಳಲ್ಲಿ 68 ರನ್ ಮತ್ತು ಹೃದೋಯ್ 118 ಎಸೆತಗಳಲ್ಲಿ 100 ರನ್ ಗಳಿಸಿದರು. ಇನ್ನುಳಿ ದಂತೆ ರಿಷಾದ್ ಹುಸೈನ್ 18 ಹಾಗೂ ತಸ್ಕಿನ್ ಅಹ್ಮದ್ 3 ರನ್ ಗಳಿಸಿ ದರು. ಬಾಂಗ್ಲಾದೇಶ 49.4 ಓವರ್‌ಗಳಲ್ಲಿ 228 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಪರ ಶಮಿ 53 ರನ್ ನೀಡಿ 5 ವಿಕೆಟ್ ಪಡೆದರು. ಹರ್ಷಿತ್ ರಾಣಾ ಮೂರು, ಅಕ್ಷರ್ ಪಟೇಲ್ 2 ವಿಕೆಟ್ ಪಡೆದರು.

ತೆಂಡೂಲ್ಕರ್ ದಾಖಲೆ ಮುರಿದ ರೋಹಿತ್

ಭಾರತ ತಂಡದ ನಾಯಕ ರೋಹಿತ್ ಶರ್ಮಾ ದಾಖಲೆಯೊಂದನ್ನು ಬರೆದಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ 11000 ರನ್‌ಗಳನ್ನು ಅವರು ಪೂರ್ಣಗೊಳಿಸಿದ್ದಾರೆ. ಆ ಮೂಲಕ ಸಚಿನ್ ತೆಂಡೂಲ್ಕರ್ ಅವರ ದಾಖಲೆಯೊಂದನ್ನು ಮುರಿದು, ಏಕದಿನ ಕ್ರಿಕೆಟ್‌ನಲ್ಲಿ ವೇಗವಾಗಿ 11000 ರನ್‌ಗಳನ್ನು ಪೂರ್ಣಗೊಳಿಸಿದ ಎರಡನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಈ ಮೊತ್ತವನ್ನು ಪೂರ್ಣಗೊಳಿಸಲು ರೋಹಿತ್ ಶರ್ಮಾ ಒಟ್ಟು 261 ಇನಿಂಗ್ಸ್‌ಗಳನ್ನು ತೆಗೆದುಕೊಂಡಿದ್ದಾರೆ.

ಟೀಂ ಇಂಡಿಯಾ ಉತ್ತಮ ಆರಂಭವನ್ನು ಪಡೆಯಿತು. ನಾಯಕ ರೋಹಿತ್ ಶರ್ಮಾ 36 ಬಾಲ್‌ಗಳಲ್ಲಿ 41 ರನ್ ಗಳಿಸಿದರು. ಆ ಬಳಿಕ ಬಂದ ವಿರಾಟ್ ಕೊಹ್ಲಿ 38 ಬಾಲ್‌ಗಳಿಂದ 22 ರನ್ ಪಡೆದರು. ಶ್ರೇಯಸ್ ಅಯ್ಯರ್ 17 ಬಾಲ್‌ಗಳಿಂದ 15 ರನ್ ಹಾಗೂ ಅಕ್ಷರ್ ಪಟೇಲ್ 12 ಬಾಲ್‌ಗಳಿಂದ 8 ರನ್ ಪಡೆಯಲಷ್ಟೇ ಶಕ್ತರಾದರು. ಆದರೆ ಆರಂಭಿಕ ಆಟಗಾರನಾಗಿ ಕಣಕ್ಕಿಳಿದಿದ್ದ ಶುಭ್‌ಮನ್ ಗಿಲ್ ಬಾಂಗ್ಲಾದ ಎಲ್ಲಾ ಬೌಲರ್‌ಗಳನ್ನು ದಂಡಿಸಿ 128 ಬಾಲ್‌ಗಳಲ್ಲಿ ಆಕರ್ಷಕ ಶತಕ (100 ಅಜೇಯ) ಸಿಡಿಸಿ ಭಾರತದ ಸುಲಭ ಗೆಲುವಿಗೆ ಕಾರಣರಾದರು. ಕೆಎಲ್ ರಾಹುಲ್ 47 ಬಾಲ್‌ಗಳಲ್ಲಿ 41 ರನ್ ಗಳಿಸಿ ಗಿಲ್‌ಗೆ ಉತ್ತಮ ಜತೆಯಾಟ ನೀಡಿದರು. ಟೀಂ ಇಂಡಿಯಾ 46.3 ಓವರ್‌ಗಳಲ್ಲಿ ಕೇವಲ 4 ವಿಕೆಟ್ ನಷ್ಟಕ್ಕೆ 231 ರನ್ ಗಳಿಸಿ ಸುಲಭ ಗೆಲುವನ್ನು ತನ್ನದನ್ನಾಗಿಸಿತು.

ರಣಜಿ ಕ್ರಿಕೆಟ್ ಸೆಮಿಫೈನಲ್ | ಮುನ್ನಡೆಯ ನಿರೀಕ್ಷೆಯಲ್ಲಿ ಗುಜರಾತ್

ಫೈನಲ್ ಸನಿಹಕ್ಕೆ ವಿದರ್ಭ

ನಾಗ್ಪುರ: ಇಲ್ಲಿ ನಡೆಯುತ್ತಿರುವ ರಣಜಿ ಕ್ರಿಕೆಟ್ ಪಂದ್ಯಾವಳಿಯ ಸೆಮಿಫೈನಲ್‌ನಲ್ಲಿ ವಿದರ್ಭ ತಂಡದ ವಿರುದ್ಧ ಮುಂಬೈ ತಂಡವು ತನ್ನ ಹೋರಾಟವನ್ನು ಮುಂದುವರಿಸುತ್ತಿ ದ್ದರೂ, ಗುರುವಾರದ ದಿನದಾಂತ್ಯಕ್ಕೆ ಎರಡನೇ ಇನ್ನಿಂಗ್ಸ್‌ನಲ್ಲಿ ಕೇವಲ 83 ರನ್ ಆಗುವಷ್ಟರಲ್ಲಿ ಮಹತ್ವದ 3 ವಿಕೆಟ್‌ಗಳನ್ನು ಕಳೆದುಕೊಂಡಿದೆ. ಕೊನೆಯ ದಿನ ಪಂದ್ಯವನ್ನು ಗೆಲ್ಲಬೇಕಾದರೆ ಮುಂಬೈ ತಂಡಕ್ಕೆ 323 ರನ್‌ಗಳ ಅಗತ್ಯವಿದೆ.

ಗುರುವಾರ ಬೆಳಿಗ್ಗೆ 4 ವಿಕೆಟ್ ನಷ್ಟಕ್ಕೆ 147 ರನ್‌ಗಳಿಂದ ಆಟವನ್ನು ಮುಂದುವರಿಸಿದ ವಿದರ್ಭ ತಂಡವು ಯಶ್ ರಾಥೋಡ್‌ರವರ 151 ರನ್‌ಗಳ ಅಮೋಘ ಆಟದ ಹೊರತಾಗಿಯೂ 292 ರನ್‌ಗಳಿಗೆ ಆಲೌಟ್ ಆಯಿತು. ವಿದರ್ಭದ ನಾಯಕ ಅಕ್ಷಯ್ ವಾಡ್ಕರ್ ಅತ್ಯಾಕರ್ಷಕ ಅರ್ಧ ಶತಕ (52 ರನ್) ಗಳಿಸುವಲ್ಲಿ ಸಫಲರಾದರು.

ಮೊದಲ ಇನ್ನಿಂಗ್ಸ್‌ನ 113 ರನ್‌ಗಳ ಮುನ್ನಡೆಯ ಜೊತೆಗೆ ವಿದರ್ಭ ತಂಡವು ಮುಂಬೈಗೆ ಪಂದ್ಯ ಗೆಲ್ಲಲು ಒಟ್ಟಾರೆ 405 ರನ್‌ಗಳ ಗುರಿ ನೀಡಿತು. ಆದರೆ ಮುಂಬೈ ಮತ್ತೆ ಸೆಕೆಂಡ್ ಇನ್ನಿಂಗ್ಸ್‌ನಲ್ಲಿಯೂ ಉತ್ತಮ ಆರಂಭ ಪಡೆಯುವಲ್ಲಿ ವಿಫಲವಾಯಿತು. ಆರಂಭಿಕ ಆಟಗಾರ ಆಯುಷ್ 18 ರನ್

ಗಳಿಸಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ಸಿದ್ಧೇಶ್ ಲಾಡ್ ಬರೀ 2 ರನ್ ಗಳಿಸಿ ವಿದರ್ಭದ ಬೌಲರ್ ಹರ್ಷ ದುಬೆಗೆ ತನ್ನ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ಸ್ಟಾರ್ ಆಟಗಾರ ಅಜಿಂಕ್ಯಾ ರಹನೆಗೂ ಮುಂಬೈ ಕುಸಿತವನ್ನು ತಡೆಯಲು ಸಾಧ್ಯವಾಗಲಿಲ್ಲ. ಕೇವಲ 12 ರನ್ ಗಳಿಸಿದ ರಹಾನೆ, ಪಾರ್ಥ್ ರೆಖಾಡೆಯ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯೂ ತೀರ್ಪಿಗೆ ಬಲಿಯಾಗಿ ಪೆವಿಲಿಯನ್ ಸಾಗಿದರು. ಗುರುವಾರದ ದಿನದಾಂತ್ಯಕ್ಕೆ ಮುಂಬೈ ಪರ ಆಕಾಶ್ ಆನಂದ್ 27 ರನ್ ಗಳಿಸಿ ಮತ್ತು ಶಿವಮ್ ದುಬೆ 12 ರನ್ ಗಳಿಸಿ ಅಜೇಯರಾಗಿದ್ದಾರೆ. ಕೊನೆಯ ದಿನವಾದ ಶುಕ್ರವಾರ ಮುಂಬೈ ತಂಡ ಇನ್ನೂ 323 ರನ್‌ಗಳನ್ನು ಗಳಿಸಬೇಕಿದೆ.

ಗುಜರಾತ್‌ಗೆ ಮುನ್ನಡೆಯ ನಿರೀಕ್ಷೆ: ಅಹಮ್ಮದಾಬಾದ್‌ನಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸೆಮಿಫೈನಲ್‌ನ ಮತ್ತೊಂದು ಪಂದ್ಯದಲ್ಲಿ ಕೇರಳ ತಂಡ ಪ್ರಥಮ ಇನ್ನಿಂಗ್ಸ್‌ನಲ್ಲಿ ಗಳಿಸಿದ 457 ರನ್‌ಗಳಿಗೆ ಉತ್ತರವಾಗಿ ಬ್ಯಾಟಿಂಗ್ ಮುಂದುವರಿಸಿದ ಗುಜರಾತ್ ತಂಡವು ಗುರುವಾರದ ದಿನದಾಂತ್ಯಕ್ಕೆ 7 ವಿಕೆಟ್ ನಷ್ಟಕ್ಕೆ 429 ರನ್‌ಗಳನ್ನು ಗಳಿಸಿ ಕೇವಲ 28 ರನ್‌ಗಳ ಹಿನ್ನಡೆಯಲ್ಲಿದೆ.

ಗುರುವಾರ ಬೆಳಿಗ್ಗೆ ಒಂದು ವಿಕೆಟ್ ನಷ್ಟಕ್ಕೆ 222 ರನ್‌ಗಳಿಂದ ಗುಜರಾತ್ ತಂಡವು ತನ್ನ ಆಟ ಮುಂದುವರಿಸಿತು. ಮನನ್ ಹಿಂಗ್ರಾಜಿಯಾ 33 ರನ್ ಗಳಿಸಿದ್ದಾಗ ಜಲಜ್ ಸಕ್ಸೇನಾಗೆ ವಿಕೆಟ್ ಒಪ್ಪಿಸಿದರು. ಆ ನಂತರ ಶತಕ ಬಾರಿಸಿ ತಂಡವನ್ನು ಆಧರಿಸಿದ್ದ ಪ್ರಿಯಾಂಕ್ ಪಾಂಚಾಲ್ 148 ರನ್ ಗಳಿಸಿದ್ದಾಗ ತನ್ನ ವಿಕೆಟ್ ಕಳೆದುಕೊಂಡರು. ಬಳಿಕ ಕ್ರೀಸ್‌ಗೆ ಬಂದ ಗುಜರಾತ್ ತಂಡದ ಕೀಪರ್ ಊರ್ವಿಲ್ ಪಟೇಲ್ 25 ರನ್ ಗಳಿಸಿದ್ದಾಗ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ತೆರಳಿದರು. ಹೇಮಂಗ್ ಪಟೇಲ್-ಜಯ್‌ಮೀತ್ ಪಟೇಲ್ ಜೋಡಿ ಗುಜರಾತ್ ತಂಡವು ಸುಸ್ಥಿತಿಗೆ ತಲುಪುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದರು. ಜಯ್‌ಮೀತ್ ಪಟೇಲ್ 74 ಗಳಿಸಿ ಹಾಗೂ ಸಿದ್ಧಾರ್ಥ್ ದೇಸಾಯಿ 24 ರನ್ ಗಳಿಸಿ ಶುಕ್ರವಾರಕ್ಕೆ ತಮ್ಮ ವಿಕೆಟ್ ಕಾಯ್ದುಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ ಆಫ್ಘನ್‌ರ ಸೆಣಸು

ಕರಾಚಿ: ಚಾಂಪಿಯನ್ಸ್ ಟ್ರೋಫಿಯ ಮೂರನೇ ಪಂದ್ಯಕ್ಕೆ ಅಫ್ಘಾನಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ತಂಡ ಸಜ್ಜಾಗಿದೆ. ಇಂದು ಇತ್ತಂಡಗಳು ಕರಾಚಿ ಮೈದಾನದಲ್ಲಿ ಕಾದಾಟ ನಡೆಸಲಿದೆ. 'ಬಿ' ಗುಂಪಿನ ಮೊದಲ ಪಂದ್ಯ ಇದಾಗಿದ್ದು, ದಕ್ಷಿಣ ಆಫ್ರಿಕಾ ತಂಡವು



ಚೊಚ್ಚಲ ಆವೃತ್ತಿಯಲ್ಲಿ ಚಾಂಪಿಯನ್ ಆಗಿತ್ತು. ಅಫ್ಘಾನಿಸ್ತಾನಕ್ಕೆ ಇದು ಮೊದಲ ಟೂರ್ನಿಯಾದರೂ ತಂಡದ ಪ್ರದರ್ಶನವನ್ನು ಹಗುರವಾಗಿ ಕಾಣುವಂತಿಲ್ಲ. ಈಗಾಗಲೇ ಏಕದಿನ ಮತ್ತು ಟಿ20 ವಿಶ್ವಕಪ್‌ನಲ್ಲಿ ಬಲಿಷ್ಠ ಆಸ್ಟ್ರೇಲಿಯಾ, ಇಂಗ್ಲೆಂಡ್ ತಂಡಕ್ಕೆ ಸೋಲಿನ ರುಚಿ ತೋರಿಸಿ ತಾನೆಷ್ಟು ಬಲಿಷ್ಠ ಎನ್ನುವುದನ್ನು ಅಫಘಾನಿಸ್ತಾನವು ತೋರಿಸಿಕೊಟ್ಟಿದೆ.

ಎಷ್ಟೇ ಬಲಿಷ್ಠ ತಂಡವನ್ನು ಬೇಕಿದ್ದರೂ ಸೋಲಿಸುವ ಸಾಮರ್ಥ್ಯ ಅಫ್ಘಾನ್ ತಂಡಕ್ಕಿದೆ. 2024ರ ಟಿ20 ವಿಶ್ವಕಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಅಫ್ಘಾನಿಸ್ತಾನ ತಂಡವು ಚಾಂಪಿಯನ್ಸ್ ಟ್ರೋಫಿಯಲ್ಲೂ ಚಮತ್ಕಾರ ಮಾಡುವ ಕಾತರದಲ್ಲಿದೆ. ತಂಡದಲ್ಲಿ ಅನುಭವಿ ಆಟಗಾರರಾದ ನಬಿ, ರಶೀದ್‌ರಂತದ ವಿಶ್ವಶ್ರೇಷ್ಠ ಆಲ್‌ರೌಂಡರ್‌ಗಳು ಇದ್ದಾರೆ. ಯಾರನ್ನು ಬೇಕಿದ್ದರೂ ಕಾಡಬಲ್ಲ ಯುವ ಸ್ಪಿನ್ನರ್‌ಗಳ ಪಡೆಯೂ ಅಫ್ಘಾನಿಸ್ತಾನ ತಂಡದಲ್ಲಿದೆ.

ದಕ್ಷಿಣ ಆಫ್ರಿಕಾ ಅತ್ಯಂತ ಸಮತೋಲಿತ ತಂಡವಾಗಿದ್ದು, ಕಳೆದ ವರ್ಷ ಟಿ20 ವಿಶ್ವಕಪ್ ಫೈನಲ್‌ಗೇರಿದ್ದ ತಂಡದ ಆಟಗಾರರೇ ತಂಡದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದ್ದಾರೆ. ಯಾವುದೇ ಕ್ಷಣದಲ್ಲಿ ಅಬ್ಬರಿಸಬಲ್ಲ ಕ್ಲಾಸೆನ್, ಡೇವಿಡ್ ಮಿಲ್ಲರ್ ತಂಡದ ಆಧಾರಸ್ತಂಭ ಎನಿಸಿಕೊಂಡಿದ್ದಾರೆ, ಅವರ ಜತೆ ನಾಯಕ ತೆಂಬಾ ಬವುಮಾ, ಮಾರ್ಕ್‌ರಮ್ ಕೂಡ ಫಾರ್ಮ್‌ಗೆ ಬಂದರೆ ಇಂದಿನ ಪಂದ್ಯದಲ್ಲಿ ದ. ಆಫ್ರಿಕಾದ ಗೆಲುವು ಸುಲಭವಾದೀತು.

ಫಖರ್ ಹೊರಕ್ಕೆ ಪಾಕ್‌ಗೆ ಆಘಾತ

ಕರಾಚಿ: ಹಾಲಿ ಚಾಂಪಿಯನ್ ಪಾಕಿಸ್ತಾನ ತಂಡ ಪ್ರಸಕ್ತ ಸಾಗುತ್ತಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡಿದ ಮೊದಲ ಪಂದ್ಯದಲ್ಲೇ ಸೋಲು ಕಂಡ ಚಿಂತೆಯಲ್ಲಿರುವಾಗಲೇ, ತಂಡಕ್ಕೆ ದೊಡ್ಡ ಆಘಾತವೊಂದು ಎದುರಾಗಿದೆ. ತಂಡದ ಅನುಭವಿ ಬ್ಯಾಟರ್



ಫಖರ್ ಜಮಾನ್ ಗಾಯದ ಪರಿಣಾಮವಾಗಿ ಸಂಪೂರ್ಣವಾಗಿ ಟೂರ್ನಿಯಿಂದಲೇ ಹೊರಬಿದ್ದಾರೆ. ಅವರ ಅಲಭ್ಯತೆಯನ್ನು ಪಾಕ್ ಕ್ರಿಕೆಟ್ ಮಂಡಳಿ ಗುರುವಾರ ಖಚಿತಪಡಿಸಿದ್ದು, ಬದಲಿ ಆಟಗಾರನಾಗಿ ಇಮಾಮ್-ಉಲ್-ಹಕ್ ಆಟಗಾರನಾಗಿ ಆಯ್ಕೆಯಾಗಿದ್ದಾರೆ. ಬುಧವಾರ ನಡೆದ ನ್ಯೂಜಿಲ್ಯಾಂಡ್ ವಿರುದ್ಧದ ಪಂದ್ಯದಲ್ಲಿ ಫಖರ್ ಜಮಾನ್ ಬೌಂಡರಿ ಲೈನ್‌ನಲ್ಲಿ ಫೀಲ್ಡಿಂಗ್ ನಡೆಸುವಾಗ ದಿಢೀರನೆ ಸೊಂಟದ ನೋವಿಗೆ ಒಳಗಾಗಿದ್ದರೂ, ನೋವಿನ ಮಧ್ಯೆಯೂ ಬ್ಯಾಟಿಂಗ್ ನಡೆಸಿದ್ದರು. ಆದರೆ ಆರಂಭಿಕನಾಗಿ ಆಡುವ ಬದಲು ನಾಲ್ಕನೇ ಕ್ರಮಾಂಕದಲ್ಲಿ ಆಡಿದ್ದರು. ಬ್ಯಾಟಿಂಗ್ ವೇಳೆಯೂ ಹಲವು ಬಾರಿ ನೋವಿನಿಂದ ನರಳಿದ್ದರು. ಅವರ ಗಾಯ ಗಂಭೀರ ಸ್ವರೂಪದಿಂದ ಕೂಡಿರುವ ಕಾರಣ ವೈದ್ಯರು ಅವರಿಗೆ ವಿಶ್ರಾಂತಿ ಸೂಚಿಸಿದ್ದು, ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಅಮೆರಿಕ ಕ್ರಿಕೆಟ್ ತಂಡದಿಂದ ವಿಶ್ವದಾಖಲೆ

ಮಸ್ಕತ್: ಏಕದಿನ ಕ್ರಿಕೆಟ್‌ನಲ್ಲಿ ಅಮೆರಿಕ ತಂಡವು ಹೊಸ ಇತಿಹಾಸ ನಿರ್ಮಿಸಿ, ಟೀಮ್ ಇಂಡಿಯಾ ಹೆಸರಿನಲ್ಲಿದ್ದ 40 ವರ್ಷಗಳ ಹಳೆಯ ವಿಶ್ವ ದಾಖಲೆಯನ್ನು ಮುರಿದಿದೆ. ಇಂತಹದೊಂದು ವಿಶ್ವ ದಾಖಲೆ ನಿರ್ಮಾಣವಾಗಿದ್ದು ಐಸಿಸಿ ವಿಶ್ವಕಪ್ ಲೀಗ್-2 ಪಂದ್ಯದಲ್ಲಿ.

ಇಲ್ಲಿನ ಅಲ್ ಅಮಿರಾತ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಅಮೆರಿಕ ಮತ್ತು ಒಮಾನ್ ತಂಡಗಳು ಮುಖಾಮುಖಿಯಾಗಿದ್ದವು. ಟಾಸ್ ಗೆದ್ದ ಒಮಾನ್ ತಂಡ ಬೌಲಿಂಗ್ ಆಯ್ದುಕೊಂಡಿತು. ಅದರಂತೆ ಮೊದಲು ಬ್ಯಾಟ್ ಮಾಡಿದ ಅಮೆರಿಕ ತಂಡದ ಪರ ಮಿಲಿಂದ್ ಕುಮಾರ್ 47 ರನ್ ಬಾರಿಸಿದರೂ, 35.3 ಓವರ್‌ಗಳಲ್ಲಿ ಕೇವಲ 122 ರನ್ ಗಳಿಸಿ ಆಲೌಟ್ ಆಯಿತು.

122 ರನ್‌ಗಳ ಸುಲಭ ಗುರಿ ಬೆನ್ನತ್ತಿದ ಒಮಾನ್ ತಂಡವು ನೋಸ್ತುಷ್ ಕೆಂಜಿಗೆ ಅವರ ಸ್ಪಿನ್ ಮೋಡಿಗೆ ತತ್ತರಿಸಿದೆ. 7.3 ಓವರ್‌ಗಳನ್ನು ಎಸೆದ ನೋಸ್ತುಷ್ ಕೇವಲ 11 ರನ್ ನೀಡಿ 5 ವಿಕೆಟ್ ಪಡೆದಿದ್ದಾರೆ. ಒಮಾನ್ ತಂಡವು 25.3 ಓವರ್‌ಗಳಲ್ಲಿ ಕೇವಲ 65 ರನ್ ಗಳಿಸಿ ಸರ್ವಪತನ ಕಂಡಿತು, ಆ ಮೂಲಕ ಅಮೆರಿಕ ತಂಡ 57 ರನ್‌ಗಳ ಭರ್ಜರಿ ಜಯ ಸಾಧಿಸಿತು.

ಈ ಗೆಲುವಿನೊಂದಿಗೆ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ಅತೀ ಕಡಿಮೆ ರನ್ ಗಳಿಸಿ ಗೆದ್ದ ತಂಡವೆಂಬ ವಿಶ್ವ ದಾಖಲೆ ಅಮೆರಿಕ ತಂಡದ ಪಾಲಾಯಿತು. ಅದಕ್ಕೂ ಮುನ್ನ ಈ ದಾಖಲೆ ಭಾರತ ತಂಡದ ಹೆಸರಿನಲ್ಲಿತ್ತು. ಟೀಮ್ ಇಂಡಿಯಾ 1985ರಲ್ಲಿ ಅತ್ಯಲ್ಪ ಮೊತ್ತಗಳಿಸಿ ವಿಜಯ ಸಾಧಿಸುವಲ್ಲಿ ಯಶಸ್ವಿಯಾಗಿತ್ತು. ರೋಥ್‌ಮನ್ ಫೋರ್-ನೇಷನ್ ಕಪ್ ಪಂದ್ಯದಲ್ಲಿ ಮೊದಲು

ಬ್ಯಾಟ್ ಮಾಡಿದ ಟೀಮ್ ಇಂಡಿಯಾ 125 ರನ್ ಮಾತ್ರ ಕಲೆಹಾಕಿತ್ತು. ಈ ಗುರಿಯನ್ನು ಬೆನ್ನತ್ತಿದ ಪಾಕಿಸ್ತಾನ್ ತಂಡವನ್ನು ಕೇವಲ 87 ರನ್‌ಗಳಿಗೆ ಆಲೌಟ್ ಮಾಡುವಲ್ಲಿ ಭಾರತೀಯ ಬೌಲರ್‌ಗಳು ಯಶಸ್ವಿಯಾಗಿ, ಟೀಮ್ ಇಂಡಿಯಾ 38 ರನ್‌ಗಳ ಜಯ ಸಾಧಿಸಿತ್ತು. ಆ ಗೆಲುವಿನೊಂದಿಗೆ ಏಕದಿನ ಕ್ರಿಕೆಟ್‌ನಲ್ಲಿ ಅತ್ಯಲ್ಪ ರನ್ ಗಳಿಸಿ ಗೆದ್ದ ತಂಡವೆಂಬ ವಿಶ್ವ ದಾಖಲೆಯನ್ನು ಟೀಮ್ ಇಂಡಿಯಾ ತನ್ನದಾಗಿಸಿಕೊಂಡಿತ್ತು. ಆದರೀಗ ಅಮೆರಿಕ ತಂಡವು 122 ರನ್ ಗಳಿಸಿ ಗೆಲುವು ದಾಖಲಿಸುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ಅತೀ ಕಡಿಮೆ ರನ್ ಗಳಿಸಿ 50ಕ್ಕಿಂತ ಅಧಿಕ ರನ್‌ಗಳಿಂದ ಗೆದ್ದ ವಿಶ್ವದ ಏಕೈಕ ತಂಡ ಎಂಬ ದಾಖಲೆ ಕೂಡಾ ಅಮೆರಿಕ ಕ್ರಿಕೆಟ್ ತಂಡದ ಪಾಲಾಗಿದೆ.

ತೆರೆಗೆ ಬಂದ ಸಿಹಿಸುದ್ದಿ ನಿರ್ದೇಶಕರಿಗೆ ಕಹಿಸುದ್ದಿ

ವಿಭಿನ್ನ ಕಂಟೆಂಟ್ ಹೊತ್ತ ನಿಮಗೊಂದು ಸಿಹಿ ಸುದ್ದಿ ಈ ವಾರ ತೆರೆಗೆ ಬಂದಿದೆ. ಆದರೆ ಸಿನಿಮಾ ನಿರ್ದೇಶಿಸಿದ್ದ ಸುಧೀಂದ್ರ ನಾಡಿಗ್ ಅವರಿಗೆ ಈಗ ಕಹಿ ಅನುಭವವಾಗಿದೆ. ಸುಧೀಂದ್ರ ನಾಡಿಗರ್ ಅವರ ನಿರ್ದೇಶನದಲ್ಲಿ ಈ ಚಿತ್ರ 2020ರಲ್ಲಿ ಸೆಟ್ಟೇರಿತ್ತು. ಕೋವಿಡ್ ಕಾರಣದಿಂದಾಗಿ ಚಿತ್ರೀಕರಣವೂ ತಡವಾಗಿತ್ತು. ಅಂತು ಈಗ ನಿಮಗೊಂದು ಸಿಹಿ ಸುದ್ದಿ ತೆರೆಗೆ ಬಂದಿದೆ. ಆದರೆ ಬಿಡುಗಡೆಯ ಹೊತ್ತಲ್ಲಿ, ನಿರ್ದೇಶಕರ ಹೆಸರಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ ರಘುಭಟ್ ಈ ಸಿನಿಮಾದ ಕಥೆ ಬರೆಯುವಲ್ಲಿ ಸಾಥ್ ನೀಡಿದ್ದರು. ಆದರೆ ಟೀಸರ್‌ನಲ್ಲಿ ನಿರ್ದೇಶಕ ಸುಧೀಂದ್ರ ನಾಡಿಗ್ ಅವರ ಹೆಸರೇ ಇರಲಿಲ್ಲ. ಇದಕ್ಕೆ ಆಕ್ಷೇಪಣೆ ವ್ಯಕ್ತವಾದಾಗ ರಘುಭಟ್ ಹಾಗೂ ಸುಧೀಂದ್ರ ಎನ್ ಜಂಟಿಯಾಗಿ ನಿರ್ದೇಶಿಸಿರುವ ಚಿತ್ರವಿದು ಎಂದು ಸೆನ್ಸಾರ್ ಪ್ರಮಾಣ ಪತ್ರದಲ್ಲಿದೆ. ಇದರಿಂದ ಬೇಸರಗೊಂಡಿರುವ ನಿರ್ದೇಶಕ ಸುಧೀಂದ್ರ ನಾಡಿಗ್ ಕರ್ನಾಟಕ ಫಿಲ್ಮ್ ಚೇಂಬರ್ ಹಾಗೂ ನಿರ್ದೇಶಕರ ಸಂಘಕ್ಕೆ ದೂರು ನೀಡಿದ್ದಾರೆ.

ಐದು ವರ್ಷದ ಹಿಂದೆ ನಿಮಗೊಂದು ಸಿಹಿ ಸುದ್ದಿ ಸಿನಿಮಾ ಆರಂಭವಾಯಿತು. ಕರೋನಾದಿಂದಾಗಿ ಚಿತ್ರೀಕರಣ ತಡವಾಯಿತು. ಈಗ ಚಿತ್ರ ತೆರೆಗೆ ಬಂದಿದೆ. ನನ್ನ ನಿರ್ದೇಶನದಲ್ಲಿ ಸಿನಿಮಾ ಸೆಟ್ಟೇರಿತ್ತು, ಈ ಚಿತ್ರದಲ್ಲಿ ನಟಿಸಿದ್ದ ನಟ ರಘುಭಟ್ ಹಾಗೂ ನಾನು ಜಂಟಿಯಾಗಿ ಚಿತ್ರಕಥೆ ಬರೆದೆವು. ಈಗ ನಿರ್ದೇಶಕಲ್ಲಿ ನನ್ನ ಹೆಸರಿನ ಜತೆಗೆ ರಘುಭಟ್ ಹೆಸರಿದೆ. ಆದರೆ ಈ ಚಿತ್ರವನ್ನು ನಾನೊಬ್ಬನೇ ನಿರ್ದೇಶನ ಮಾಡಿದ್ದೇನೆ, ನಿರ್ದೇಶಕರು ಎಂದು ನನ್ನ ಹೆಸರೇ ಇರಬೇಕು. ಈ ಕುರಿತು ಫಿಲ್ಮ್ ಚೇಂಬರ್‌ಗೂ ದೂರು ನಿಡಿದ್ದೇನೆ.

-ಸುಧೀಂದ್ರ ನಾಡಿಗ್ ನಿರ್ದೇಶಕ

ಹೊಸ ಚಿತ್ರದಲ್ಲಿ ಚಿಕ್ಕಣ್ಣ



ಕಳೆದ ವರ್ಷದ ಸೂಪರ್ ಹಿಟ್ ಸಿನಿಮಾಗಳ ಪೈಕಿ ಉಪಾಧ್ಯಕ್ಷ ಚಿತ್ರವೂ ಒಂದು. ಚಿಕ್ಕಣ್ಣ ನಾಯಕನಟರಾಗಿ ನಟಿಸಿದ್ದ ಈ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಕಮಾಲ್ ಮಾಡಿತ್ತು. ಸದ್ಯ ಲಕ್ಷ್ಮಿಪುತ್ರನಾಗಿರುವ ಚಿಕ್ಕಣ್ಣ, ಈಗ ಮತ್ತೊಂದು ಚಿತ್ರದಲ್ಲಿ ನಟಿಸಲು ರೆಡಿಯಾಗಿದ್ದಾರೆ. ಇದು ಕಾಮಿಡಿ ಕಥೆಯ ಸಿನಿಮಾವಾಗಿದ್ದು, ಈವರೆಗೂ ಮಾಡಿರದ ಪಾತ್ರವೊಂದಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಮತ್ತೊಮ್ಮೆ ಚಿತ್ರದುದ್ದಕ್ಕೂ ಕಾಮಿಡಿ ಕಮಾಲ್ ಮಾಡಲಿದ್ದಾರೆ. ವಿನೋದ್ ಪ್ರಭಾಕರ್ ನಟನೆಯ ಫೈಟರ್ ಚಿತ್ರವನ್ನು ನಿರ್ಮಿಸಿದ್ದ ಸೋಮಶೇಖರ್ ಕಟ್ಟಿಗೇನಹಳ್ಳಿ, ಚಿಕ್ಕಣ್ಣ ಅಭಿನಯದ ಹೊಸ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಆಕಾಶ್ ಎಂಟರ್‌ಪ್ರೈಸಸ್ ಬ್ಯಾನರ್‌ನಲ್ಲಿ ಅದ್ದೂರಿ ವೆಚ್ಚದಲ್ಲಿ ಈ ಸಿನಿಮಾ ನಿರ್ಮಾಣವಾಗಲಿದೆ. ಚಿತ್ರದ ಸ್ಕ್ರಿಪ್ಟ್ ಕೆಲಸಗಳು ಪೂರ್ಣಗೊಂಡಿದ್ದು, ಸದ್ಯದಲ್ಲೇ ಸಿನಿಮಾ ಸೆಟ್ಟೇರಲಿದೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿರಲಿದೆ.

ಬೆಳ್ಳಿತೆರೆಯಲ್ಲಿ ಮಂಜುನಾಥನ ದರ್ಶನ



ನಿರ್ದೇಶಕ ಗುರುಪ್ರಸಾದ್ ಅಗಲುವ ಮುಂಚೆ, ಎದ್ದೇಳು ಮಂಜುನಾಥ 2 ಚಿತ್ರವನ್ನು ನಿರ್ದೇಶಿಸಿ, ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದರು. ಈ ಸಿನಿಮಾ ರಾಜ್ಯಾದ್ಯಂತ ತೆರೆಕಂಡಿದೆ. ಎದ್ದೇಳು ಮಂಜುನಾಥ ಸಿನಿಮಾದ ಮೂಲಕವೇ ಗುರುಪ್ರಸಾದ್ ದೊಡ್ಡ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದರು. ಆ ಯಶಸ್ಸಿನ ಖುಷಿಯಲ್ಲಿ ಅದೇ ಹೆಸರಿನ ಎರಡನೇ ಭಾಗವನ್ನು ನಿರ್ದೇಶನ ಮಾಡಿದ್ದರು. ಎದ್ದೇಳು ಮಂಜುನಾಥ ಈಗಾಗಲೇ ಹಾಡು ಮತ್ತು ಟೀಸರ್‌ಗಳ ಮೂಲಕ ಸಿನಿಪ್ರಿಯರ ಗಮನಸೆಳೆಯುತ್ತಿದೆ. ಕಾಮಿಡಿಯ ಜತೆಗೆ ಸಂದೇಶವೂ ಅಡಕವಾಗಿದೆ. ಗುರುಪ್ರಸಾದ್‌ಗೆ ಜತೆಯಾಗಿ ರಚಿತಾ ಮಹಾಲಕ್ಷ್ಮಿ ನಟಿಸಿದ್ದಾರೆ. ಗುರುಪ್ರಸಾದ್‌ರ ರಂಗನಾಯಕ ಚಿತ್ರಕ್ಕೂ ಇವರೇ ನಾಯಕಿಯಾಗಿ ಕಾಣಿಸಿಕೊಂಡಿದ್ದರು. ಶರತ್ ಲೋಹಿತಾಶ್ವ, ಚೈತ್ರಾ ಆಚಾರ್, ವಿಘ್ನೇಶ್ ಕಟ್ಟಿ ಮುಂತಾದವರು ಉಳಿದ ತಾರಾಗಣದಲ್ಲಿದ್ದಾರೆ. ಮೈಸೂರು ರಮೇಶ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಅಶೋಕ್ ಸಾಮ್ರಾಟ್ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಪ್ರತ್ಯರ್ಥಕ್ಕೆ ಬಘೀರನ ಬಲ

ಇನ್ವೆಸ್ಟಿಗೇಶನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಪ್ರತ್ಯರ್ಥ ತೆರೆಗೆ ಸಿದ್ಧವಾಗಿದೆ. ಈ ಚಿತ್ರದ ಟ್ರೇಲರ್ ಅನ್ನು ನಟ ಶ್ರೀಮುರಳಿ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಅರ್ಜುನ್ ಕಾಮತ್ ನಿರ್ದೇಶಿಸಿರುವ ಈ ಚಿತ್ರ ಇದೇ 28ರಂದು ತೆರೆಗೆ ಬರಲಿದೆ. ರಾಮ್, ಅಕ್ಷಯ್ ಕಾರ್ಕಳ ನಾಯಕರಾಗಿ ಕಾಣಿಸಿಕೊಂಡಿದ್ದು, ಶೃತಿ ಚಂದ್ರಶೇಖರ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಸುಮನ್ ತಲ್ವಾರ್, ನವೀನ್ ಡಿ ಪಡೀಲ್, ರಮೇಶ್ ಭಟ್, ದೀಪಕ್ ರೈ ಮುಂತಾದವರು ತಾರಾಬಳಗದಲ್ಲಿದ್ದಾರೆ.

ನನಗೆ ಸಿನಿಮಾ ಕ್ಷೇತ್ರ ಹೊಸತಾದರೂ ಸಿನಿಮಾ ಬಗ್ಗೆ ಅಪಾರ ಪ್ರೀತಿ ಇದೆ. ಹಾಗಾಗಿಯೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದೇನೆ ಎಂದು ನಿರ್ಮಾಪಕ ಜಯ್.ಆರ್.ಪ್ರಭು ತಿಳಿಸಿದರು. ಚಿತ್ರದಲ್ಲಿ ಎರಡು ಹಾಡುಗಳಿದ್ದು, ಸುನಾದ್ ಸಂಗೀತ ಸಂಯೋಜಿಸಿದ್ದಾರೆ. ವಾಸುಕಿ ವೈಭವ್ ಹಾಗು ರಜತ್ ಹೆಗಡೆ ದನಿಯಲ್ಲಿ ಹಾಡುಗಳು ಮಧುರವಾಗಿ ಮೂಡಿಬಂದಿವೆ. ವಿನುತ್ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಇದೊಂದು ಇನ್ವೆಸ್ಟಿಗೇಶನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಪ್ರತಿಯೊಂದಕ್ಕೂ ಅರ್ಥ ಇರುವುದನ್ನು ಪ್ರತ್ಯರ್ಥ ಎನ್ನಲಾಗುತ್ತದೆ. ಹಾಗಾಗಿ ಇದು ಹಳೆಯ ಟೈಟಲ್ ಆದರೂ ಕೂಡ, ನಮ್ಮ ಸಿನಿಮಾಗೆ ಇದೇ ಶೀರ್ಷಿಕೆ ಸೂಕ್ತ ಎನಿಸಿತು. ಈಗಿನ ಯುವಜನತೆಗೆ ಯಾವ ತರಹದ ಕಥೆ ಬೇಕು ಎಂದು ತಿಳಿದುಕೊಂಡು, ಒಂದು ವರ್ಷ ಸಮಯ ತೆಗೆದುಕೊಂಡು ಕಥೆ ಹಣೆದಿದ್ದೇವೆ.

-ಅರ್ಜುನ್ ಕಾಮತ್ ನಿರ್ದೇಶಕ

ಡ್ಯೂಡ್ ಪಾರ್ಟಿ ಸಾಂಗ್

ನಟ ತೇಜ್ ನಟಿಸಿ, ನಿರ್ದೇಶಿಸುತ್ತಿರುವ ಡ್ಯೂಡ್ ಚಿತ್ರದ ಹಾಡು ಬಿಡುಗಡೆಯಾಗಿದೆ. ನಟಿ ಮೇಘನಾ ರಾಜ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಪಾರ್ಟಿ ಸಾಂಗ್ ಇದಾಗಿದ್ದು, ತೇಜ್ ಸಾಹಿತ್ಯದ ಈ ಹಾಡಿಗೆ ಎಮಿಲ್ ಸಂಗೀತ ಸಂಯೋಜಿಸಿದ್ದಾರೆ. ಗಾಯಕಿ ರಮ್ಯಾ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ಡ್ಯೂಡ್ ಮಹಿಳಾ ಫುಟ್ಬಾಲ್ ತಂಡದ ಯಶೋಗಾಥೆಯಾಗಿದ್ದು, ಸ್ಪೂರ್ತಿದಾಯಕ ಕಥೆಯನ್ನು ಹೊತ್ತು ಬಂದಿದೆ. ಪನೋರೋಮಿಕ್ ಸ್ಟುಡಿಯೊ ಬ್ಯಾನರ್‌ನಲ್ಲಿ ತೇಜ್ ಅವರೇ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ರಾಘವೇಂದ್ರ ರಾಜಕುಮಾರ್, ಸುಂದರ್ ರಾಜ್, ರಂಗಾಯಣ ರಘು, ಸಾನ್ಯಾ, ಸ್ಪರ್ಶ ರೇಖಾ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ. ಈಗಾಗಲೇ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದ್ದು, ಕ್ಲೈಮ್ಯಾಕ್ಸ್ ಭಾಗದ ಶೂಟಿಂಗ್ ಬಾಕಿಯಿದೆ.

ಡ್ಯೂಡ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡ, ತೆಲುಗು, ತಮಿಳು, ಮಲೆಯಾಳಂ, ತಮಿಳು ಹಾಗೂ ಹಿಂದಿ ಭಾಷೆಯಲ್ಲಿ ಬಿಡುಗಡೆಯಾಗಲಿದೆ.

ಇದುವರೆಗೂ ನಾನು ಎಂಟು ಸಿನಿಮಾಗಳಲ್ಲಿ ನಟಿಸಿದ್ದೇನೆ. ಕೆಲವು ಸಿನಿಮಾಗಳನ್ನು ನಿರ್ದೇಶಿಸಿದ್ದೇನೆ. ಅದರಲ್ಲಿ ಡ್ಯೂಡ್ ಚಿತ್ರ ಸ್ಪೆಷಲ್ ಆಗಿದೆ. ಹುಡುಗಿಯರಿಗೆ ಸ್ಫೂರ್ತಿ ತುಂಬು ಕಥೆ ಇಲ್ಲಿದ್ದು, ಎಲ್ಲರೂ ಕುಳಿತು ನೋಡಬಹುದಾದ ಕೌಟುಂಬಿಕ ಕಥೆ ಅಡಕವಾಗಿದೆ. ಇದು ನನ್ನ ಕನಸಿನ ಸಿನಿಮಾ, ಹನ್ನೆರಡು ಜನ ಮಹಿಳಾ ಆಟಗಾರರು ಸವಾಲು ಸ್ವೀಕರಿಸಿ ಹೇಗೆ ಸಾಧನೆ ಮಾಡುತ್ತಾರೆ ಎಂಬುದೇ ಸಿನಿಮಾದ ಕಥಾಹಂದರ.

-ತೇಜ್ ನಿರ್ದೇಶಕ